ಗುರುವಾರ, ಜನವರಿ 12, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಹೊಸ ಸಿನಿಮಾ
ಮುಂಬೈನಲ್ಲಿ 'ಕುತ್ತೆ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟಿ ತಬು





ರಾಜ್ಯ ಕಂಡ–ಅಪ್ರತಿಮ ಧೀಮಂತ ನಾಯಕ, ಬಡವರ ಬಂಧು, ಹಿಂದುಳಿದ ವರ್ಗಗಳ ನಾಯಕ, ಮಾಜಿ ಕೇಂದ್ರ ಸಚಿವರು ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ

ಡಾ|| ಎಂ. ವೀರಪ್ಪ ಮೊಯಿಲಿರವರಿಗೆ

ಜನ್ಮದಿನದ ಶುಭಾಶಯಗಳು

12ನೇ ಜನವರಿ

ಶ್ರೀಯುತರು ಇನ್ನೂ ನೂರ್ಕಾಲ ಬಾಳಲಿ, ದೇವರು ಅವರಿಗೆ ಆಯುಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ, ಮುಂದಿನ ದಿನಗಳಲ್ಲಿ ಮತ್ತಷ್ಟು ಅಧಿಕಾರ ದೊರೆಯಲಿ, ಜನರ ಸೇವೆ ಮಾಡಲಿ ಎಂದು ತಾಯಿ ಭುವನೇಶ್ವರಿ ದೇವಿಯಲ್ಲಿ ಪ್ರಾರ್ಥಿಸಿ, ಶುಭಾಶಯ ಕೋರುತ್ತೇವೆ.

ಜನಪ್ರಿಯ, ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯಿಲಿಯವರ ರಾಜ್ಯ ಅಭಿವೃದ್ಧಿಯ ಹಲವು ಸಾಧನೆಗಳು

ಶಾಶ್ವತ ನೀರಾವರಿ ಯೋಜನೆಗಳು:

- ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ ಹಾಗೂ ರಾಜ್ಯದ ಎಂಟು ಜಿಲ್ಲೆಗಳಿಗೆ ಜೀವಜಲವಾಗಿರುವ **'ಎತ್ತಿನಹೊಳೆ ಶಾಶ್ವತ ಕುಡಿಯುವ ನೀರಿನ ಯೋಜನೆ'** ಈ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲಿದೆ.
- **ಎಚ್.ಎನ್.ವ್ಯಾಲಿ ಯೋಜನೆ:** ಶಾಶ್ವತ ನೀರಾವರಿ ಯೋಜನೆಗಾಗಿ ಹೆಬ್ಬಾಳ – ನಾಗವಾರ ವ್ಯಾಲಿಯಲ್ಲಿ ತ್ಯಾಜ್ಯ ನೀರನ್ನು ಎರಡು ಹಂತದಲ್ಲಿ ಸಂಸ್ಕರಿಸಿ, ಪೈಪ್‌ಲೈನ್ ಮೂಲಕ ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ 65 ಕ್ಕೂ ಹೆಚ್ಚು ಕೆರೆಗಳಿಗೆ ನೀರು ಹರಿಸಲಾಗುವುದು. ಈ ಯೋಜನೆಗಾಗಿ 947.88 ಕೋಟಿ ರೂ. ವೆಚ್ಚ ಮಾಡಲಾಗುತ್ತದೆ.
- ಬಿಡಬ್ಲ್ಯೂಎಸ್‌ಎಸ್‌ಬಿಯ 4ನೇ ಹಂತದ ಕುಡಿಯುವ ನೀರಿನ ಯೋಜನೆ.
- ಹೊಸಕೋಟೆಯ ಸಮೇತನಹಳ್ಳಿ ಏತ ನೀರಾವರಿ ಯೋಜನೆ, ಅನುಗೊಂಡನಹಳ್ಳಿ ಹೋಬಳಿಯಲ್ಲಿ ಯೋಜನೆ ಅನುಷ್ಠಾನಕ್ಕೆ 100 ಕೋಟಿ ರೂ.ಗಳ ವೆಚ್ಚವಾಗಲಿದೆ.

ರಾಜ್ಯ ಮಟ್ಟದಲ್ಲಿ ಅಭಿವೃದ್ಧಿ:

- ಹೊಸಕೋಟೆಯ ಕಂಬಳೀಪುರದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ–'ರಾಜೀವ್‌ಗಾಂಧಿ ಇನ್ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ ಟೆಕ್ನಾಲಜಿ' (ಆರ್.ಜಿ.ಐ.ಪಿ.ಟಿ) ಎಂಬ ಶೈಕ್ಷಣಿಕ ಸಂಸ್ಥೆಯನ್ನು 1650 ಕೋಟಿ ರೂ.ಗಳ ಬೃಹತ್ ಯೋಜನೆ ಸ್ಥಾಪಿಸಿದೆ.
- ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಟೆಕ್ನಾಲಜಿ ಸಂಸ್ಥೆಯನ್ನು ರೂ.250 ಕೋಟಿ ವೆಚ್ಚದಲ್ಲಿ ಸ್ಥಾಪನೆ.
- ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ 2011 ರಿಂದ 2018ರವರೆಗೆ ನಾಲ್ಕು ಉದ್ಯೋಗಮೇಳಗಳನ್ನು ನಡೆಸಲಾಯಿತು.
- ರಾಷ್ಟ್ರೀಯ ಹೆದ್ದಾರಿ 207ರಲ್ಲಿ ಹೊಸೂರು–ದಾಬಸ್‌ಪೇಟೆ ವಿಭಾಗದ ರಸ್ತೆ ಅಭಿವೃದ್ಧಿ.
- ರಾಷ್ಟ್ರೀಯ ಹೆದ್ದಾರಿ 234ರ ಶಿರಾ–ಮಧುಗಿರಿ ವಿಭಾಗದ ರಸ್ತೆ ಅಗಲೀಕರಣ.
- ರಾಜ್ಯಹೆದ್ದಾರಿ–96 ದೇವನಹಳ್ಳಿ–ವಿಜಯಪುರ–ಎಚ್.ಕ್ರಾಸ್–ವೇಮಗಲ್–ಕೋಲಾರ–ಕೆ.ಜಿ.ಎಫ್ –ಕೆಂಪಾಪುರ ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಣೆ.
- ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ, ಯಲಹಂಕ, ಚಿಕ್ಕಬಳ್ಳಾಪುರ, ಗೌರಿಬಿದನೂರು, ನೆಲಮಂಗಲ ಮತ್ತು ದೊಡ್ಡಬಳ್ಳಾಪುರದಲ್ಲಿ ಸುಮಾರು 800 ಕೋಟಿ ರೂ.ಗಳಿಗೂ ಅಧಿಕ ಯೋಜನೆಯನ್ನು ಅನುಷ್ಠಾನ ಮಾಡಿದೆ.
- ಯಲಹಂಕ–ಧರ್ಮಾವರಂ ರೈಲ್ವೆ ಮಾರ್ಗ.
- ಯಲಹಂಕ–ಪೆನುಕೊಂಡ ರೈಲ್ವೆ ಯೋಜನೆ.
- ದೇವನಹಳ್ಳಿ– ಚಿಕ್ಕಬಳ್ಳಾಪುರ ರೈಲ್ವೆ ಮಾರ್ಗದಲ್ಲಿ ಸಬ್‌ವೇ ನಿರ್ಮಾಣ.
- ದೇವನಹಳ್ಳಿ–ಚಿಕ್ಕಬಳ್ಳಾಪುರ ರೈಲ್ವೆ ಮಾರ್ಗದ ಎಲ್.ಸಿ. ನಂ.20ಕಿ.ಮೀ. ಸಬ್‌ವೇ ನಿರ್ಮಾಣ.
- ಯಲಹಂಕದ ಅಳ್ಳಾಲಸಂದ್ರದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣ.
- ಯಲಹಂಕ–ರಾಜಾನುಕುಂಟೆ 600–700 ಕಿ.ಮೀ. ಎಲ್.ಸಿ.ಗೇಟ್21ರಲ್ಲಿ ಮೇಲ್ಸೇತುವೆ.
- ಚಿಕ್ಕಬಳ್ಳಾಪುರ ಹಾಗೂ ಕೋಲಾರ ನಡುವಿನ ರೈಲ್ವೆ ಮಾರ್ಗ ಬ್ರಾಡ್‌ಗೇಜ್ ಲೈನ್‌ಗೆ ಮೇಲ್ದರ್ಜೆ ಮತ್ತು ರೈಲ್ವೆ ನಿಲ್ದಾಣ.
- 1972ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ದೇವರಾಜ ಅರಸು ನೇತೃತ್ವದ ಸರಕಾರ, 1961ರ ಭೂಸುಧಾರಣಾ ಕಾಯ್ದೆಗೆ ಕ್ರಾಂತಿಕಾರಿ ತಿದ್ದುಪಡಿ ತಂದು, 1974ರ ಮಾರ್ಚ್ 1ರಿಂದ ಹೊಸ ಭೂಸುಧಾರಣಾ ಮಸೂದೆಯ ಜಾರಿಗೆ ಚಾಲನೆ.
- ಅಕ್ರಮ ಸಕ್ರಮ ಕಾನೂನಿನ ಮೂಲಕ ಸುಮಾರು 35ಲಕ್ಷ ಭೂರಹಿತರಿಗೆ ಭೂವಿತರಣೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ:

- ಮುಖ್ಯಮಂತ್ರಿಯಾಗಿ 1993ರಲ್ಲಿ ದೇವನಹಳ್ಳಿಯಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭೂಮಿ ತೆರವಿರಿಸಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಂಜೂರು ಮಾಡಲಾಯಿತು.
- ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರನ್ನು ನಾಮಕರಣ ಮಾಡಲು ಕೇಂದ್ರ ಸಚಿವ ಸಂಪುಟದ ಅಂಗೀಕಾರ ಪಡೆಯುವಲ್ಲಿ ಡಾ. ಎಂ. ವೀರಪ್ಪ ಮೊಯಿಲಿಯವರು ಯಶಸ್ವಿಯಾದರು.
- ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಪರಿವರ್ತನೆ.
- 1990–92ರ ಅವಧಿಯಲ್ಲಿ ಶಿಕ್ಷಣ ಇಲಾಖೆಯ ಸಾರಥ್ಯವನ್ನು ವಹಿಸಿಕೊಂಡು ಶಿಕ್ಷಕರ ಹುದ್ದೆಗಳ ನೇಮಕಾತಿಯಲ್ಲಿನ ವಿಳಂಬವನ್ನು ನಿವಾರಿಸಲು 'ಅರ್ಹತೆ ಮತ್ತು ಮೀಸಲಾತಿ' ಆಧಾರಿತ ಅಭ್ಯರ್ಥಿಗಳ ಸಂದರ್ಶನದ ವ್ಯವಸ್ಥೆಯ ರೂಪಣೆಯು ಶಿಕ್ಷಣ ಕ್ಷೇತ್ರದ ಕ್ರಾಂತಿಕಾರಕ ಸಾಧನೆಯಾಯಿತು. ಈ ಪದ್ಧತಿಯಲ್ಲಿ ಸುಮಾರು 8ಲಕ್ಷ ಶಿಕ್ಷಕರ ನೇಮಕಾತಿ.
- ಪೀಣ್ಯ ಕೈಗಾರಿಕಾ ಪ್ರದೇಶವನ್ನು 1450 ಎಕರೆಯಲ್ಲಿ ಬೆಳವಣಿಗೆ, ದೊಡ್ಡಬಳ್ಳಾಪುರ, ದಾಬಸ್‌ಪೇಟೆ, ಹೊಸಕೋಟೆ ಕೈಗಾರಿಕಾ ಪ್ರದೇಶ ಅಭಿವೃದ್ಧಿ.
- ಮಂಗಳೂರು ರಿಫೈನರಿ ಪೆಟ್ರೋಕೆಮಿಕಲ್ಸ್ ಲಿ. (ಎಂ.ಆರ್.ಪಿ.ಎಲ್),
- ಜಿಂದಾಲ್ ವಿಜಯನಗರ ಸ್ಟೀಲ್ ಕಂಪನಿ ಲಿಮಿಟೆಡ್
- ಅಂತಾರಾಷ್ಟ್ರೀಯ ಟೆಕ್ನಾಲಜಿ ಪಾರ್ಕ್, ವೈಟ್‌ಫೀಲ್ಡ್, ಬೆಂಗಳೂರು
- ಎಲೆಕ್ಟ್ರಾನಿಕ್ ಸಿಟಿ, ಆನೇಕಲ್
- ರಾಮನಗರ ಜಿಲ್ಲೆಯ ಬಿಡದಿಯಲ್ಲಿ Toyota ಕಂಪನಿಯ ಮೂಲಕ ಕಾರು ನಿರ್ಮಾಣದ ಯೋಜನೆಗೆ ಚಾಲನೆ.
- ಬೃಹತ್ ಕೈಗಾರಿಕಾ ವಲಯವಾದ ದೇವನಹಳ್ಳಿಯಲ್ಲಿ ಏರೋಸ್ಪೇಸ್, ವಿಮಾನದ ಬಿಡಿ ಭಾಗಗಳು, ಹಾರ್ಡ್‌ವೇರ್, ಸಾಫ್ಟ್‌ವೇರ್ ಕಂಪನಿಗಳ ದೊಡ್ಡ ಸಮುಚ್ಚಯಗಳ ನಿರ್ಮಾಣ
- ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಾಗ ಕೃಷ್ಣ ಜಲಭಾಗ್ಯ ನಿಗಮ ಸ್ಥಾಪನೆ,
- ಕನ್ನಡ ಸಂಸ್ಕೃತಿಗೆ ಸಚಿವಾಲಯ, ಹಂಪಿ ಪ್ರಾಧಿಕಾರ, ಜಿಲ್ಲಾ ಉತ್ಸವಗಳ ಪ್ರಾರಂಭ, ಜಿಲ್ಲಾ ಕ್ರೀಡಾಂಗಣಗಳ ಸ್ಥಾಪನೆ,
- ಚಿನ್ನಪ್ಪರೆಡ್ಡಿ ಹಿಂದುಳಿದ ಆಯೋಗದ ಮೂಲಕ ಶಾಸ್ತ್ರೀಯವಾಗಿ ಸಾಮಾಜಿಕ, ರಾಜಕೀಯ ಮೀಸಲಾತಿ,
- ಅಲ್ಪಸಂಖ್ಯಾತರಿಗೆ ಶಿಕ್ಷಣ ಮತ್ತು ಸಾರ್ವಜನಿಕ ಸೇವೆಯಲ್ಲಿ ಶೇಕಡ 4ರಷ್ಟು ಮೀಸಲಾತಿಯನ್ನು ನೀಡಲಾಯಿತು.
- 1977ರಲ್ಲಿ ಕರ್ನಾಟಕ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಸ್ಥಾಪನೆ.
- ಕೇಂದ್ರ ಸರಕಾರದಿಂದ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ,
- ಕನ್ನಡ ಪುಸ್ತಕ ಪ್ರಾಧಿಕಾರ ಸ್ಥಾಪನೆ
- ಹೊಸದಾಗಿ ಕೊಡವ, ತುಳು ಮತ್ತು ಕೊಂಕಣಿ ಅಕಾಡೆಮಿಗಳ ಸ್ಥಾಪನೆ
- **ಒಂದು ರಾಷ್ಟ್ರ ಒಂದು ಗ್ರಿಡ್**: ಎಂಬ ಘೋಷಣೆಯ ಮೂಲಕ ಕೇಂದ್ರ ವಿದ್ಯುತ್ ಸಚಿವನಾಗಿದ್ದಾಗ ಮಾಡಿದ ಕಾರ್ಯದಿಂದ ಕರ್ನಾಟಕ ಸೇರಿದಂತೆ ದಕ್ಷಿಣ ರಾಜ್ಯಗಳಲ್ಲಿ ವಿದ್ಯುತ್ ಸಮಸ್ಯೆಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರ ಕಂಡುಕೊಂಡರು. ವಿದ್ಯುತ್ ಸಂಪರ್ಕ– 2,000 ಕೋಟಿ ರೂ. ಮಂಜೂರು ಮಾಡಿ ಸೋಲಾಪುರದಿಂದ ರಾಯಚೂರು ವಿದ್ಯುತ್ ಲೈನಿನ ಸಂಪರ್ಕ.
- ಗುಲ್ಬರ್ಗ ಮತ್ತು ಧಾರವಾಡದಲ್ಲಿ ಶಾಶ್ವತ ಹೈಕೋರ್ಟ್‌ಪೀಠ ಸ್ಥಾಪನೆ.
- ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯಲ್ಲಿ ತುರ್ತು ಘಟಕವನ್ನು ಪ್ರಾರಂಭಿಸಿದ್ದಲ್ಲದೆ 150 ಹಾಸಿಗೆಯಿಂದ ಈ ಜಿಲ್ಲಾಸ್ಪತ್ರೆಯನ್ನು 600 ಹಾಸಿಗೆಗೆ ಮೇಲ್ದರ್ಜೆಗೇರಿಸಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಗೆ ವೈದ್ಯಕೀಯ ಕಾಲೇಜ್ ದೊರಕಿದೆ.
- ದೊಡ್ಡಬಳ್ಳಾಪುರದಲ್ಲಿ 100 ಕೋಟಿ ವೆಚ್ಚದಲ್ಲಿ ಇಎಸ್‌ಐ ಆಸ್ಪತ್ರೆ ಸ್ಥಾಪನೆ.
- ದೊಡ್ಡಬಳ್ಳಾಪುರದಲ್ಲಿ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ.
- ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಕಛೇರಿ ಕಟ್ಟಡ ನಿರ್ಮಾಣ.
- ದೇವನಹಳ್ಳಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಕಛೇರಿ ನಿರ್ಮಾಣ.
- ಯಲಹಂಕ ಮತ್ತು ದೇವನಹಳ್ಳಿಯಲ್ಲಿ ಮಿನಿ ವಿಧಾನಸೌಧ ನಿರ್ಮಾಣ
- ಕೇಂದ್ರ ಕಂಪನಿ ವ್ಯವಹಾರಗಳ ಸಚಿವನಾಗಿದ್ದಾಗ ಪ್ರಾರಂಭಿಸಿದ ಕಂಪನಿಗಳ ಸಾಮಾಜಿಕ ಬದ್ಧತೆ (ಸಿ.ಎಸ್.ಆರ್.) 2% of the Profit of Corporate world.

ಆಲಮಟ್ಟಿ ಅಣೆಕಟ್ಟು:

- 1963ರಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಗಳಿಂದ ಶಂಕುಸ್ಥಾಪನೆಯಾದ ನಂತರ 1992ರವರೆಗೂ ಆಲಮಟ್ಟಿ ಆಣೆಕಟ್ಟಿನ ಕಾಮಗಾರಿ ಆರಂಭವಾಗಿರಲಿಲ್ಲ. ಈ ಬಗ್ಗೆ ಯೋಜನಾ ಆಯೋಗ, ಪರಿಸರ ಸಚಿವಾಲಯ ಹಾಗೂ 'ಗೇಟ್‌ಕಮಿಟಿ'ಯಿಂದ ಅಣೆಕಟ್ಟಿನ ಎತ್ತರವನ್ನು 524 ಮೀಟರ್‌ಗಳಿಗೇರಿಸಲು ಅನುಮತಿಯನ್ನು ಪಡೆದರು. ಅಣೆಕಟ್ಟನ್ನು 524 ಮೀಟರ್‌ಗೇರಿಸಲು ಸಾಕಷ್ಟು ನಿಧಿಯನ್ನು ಒದಗಿಸಿದೆವು. ಅದೇ ಪ್ರಕಾರ 1992–1995ರ ಅವಧಿಯಲ್ಲಿ 519 ಮೀಟರ್‌ಗೆ ಏರಿಸಿ 524 ವರೆಗೆ ಏರಿಸುವ ಗೇಟ್‌ಗಳನ್ನು ಕೂಡಾ ಸಿದ್ಧಪಡಿಸಿದರು.
- **ಬಾಗೂರು ನವಿಲೆ ಸುರಂಗ:** ಬಾಗೂರು ನವಿಲೆ ಸುರಂಗವನ್ನು 1979ರ ನವೆಂಬರ್‌ನಲ್ಲಿ ಆರಂಭಿಸಿ 10 ವರ್ಷಗಳ ಅವಧಿಯಲ್ಲಿ 1990ರ ಮಾರ್ಚ್‌ನಲ್ಲಿ ಪೂರ್ಣಗೊಳಿಸಲಾಯಿತಾದರೂ 5.57 ಕಿ.ಮೀ.ಗಳ ಕಾಲುವೆ ಸಂಪರ್ಕ ಪ್ರದೇಶ ಇನ್ನೂ ಪೂರ್ಣಗೊಳ್ಳದೆ ಸಮಸ್ಯೆ ಹಾಗೆಯೇ ಉಳಿದುಕೊಂಡಿತ್ತು. 1979ರಿಂದ 1993ರ ವರೆಗಿನ 14 ವರ್ಷಗಳ ಕಾಲ ತಡೆಹಿಡಿಯಲ್ಪಟ್ಟ ಈ ಯೋಜನೆ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಕೇವಲ ಮೂರು ತಿಂಗಳಲ್ಲಿ ಸಂಪೂರ್ಣವಾಯಿತು.
- ಘಟಪ್ರಭಾ ಯೋಜನೆ –
- ಕಡಬಗಟ್ಟ ಸುರಂಗ – ಮುಖ್ಯಮಂತ್ರಿ ಆದಕೂಡಲೇ ತೆರೆಯಲಾಯಿತು
- ಚಟ್ಟಮಗೆರೆ ಸುರಂಗ ತೆರೆದು ಕೆ.ಆರ್. ನಗರಕ್ಕೆ ನೀರು ಹರಿಸಲಾಯಿತು.
- ಹಾಸನ ಜಿಲ್ಲೆಯ ಯಗಚಿ ಯೋಜನೆ ಮಂಜೂರು ಮಾಡಲಾಯಿತು.
- ಕೂಡಲಸಂಗಮ ಕ್ಷೇತ್ರಕ್ಕೆ ಯಾತ್ರಾರ್ಥಿಗಳು ವರ್ಷಪೂರ್ತಿ ಭೇಟಿಕೊಡುವಂತೆ ಮಾಡಲು ಹಾಗೂ ಅವರಿಗೆ ಮಳೆಗಾಲದಲ್ಲಿ ರಕ್ಷಣೆಯನ್ನು ಒದಗಿಸಲು 'ಐಕ್ಯಮಂಟಪ'ವನ್ನು ಅಭಿವೃದ್ಧಿಪಡಿಸಲಾಯಿತು ಹಾಗೂ ಕೂಡಲಸಂಗಮ ಪ್ರಾಧಿಕಾರವನ್ನು ಸ್ಥಾಪನೆ ಮಾಡಲಾಯಿತು. ಬಸವೇಶ್ವರರು ಹುಟ್ಟಿದ ಮನೆಯ ಅಭಿವೃದ್ಧಿ.
- ಕರ್ನಾಟಕ–ಹೈದರಾಬಾದ್ ಅಭಿವೃದ್ಧಿ ಮಂಡಳಿಯ ರಚನೆ– ಕೇಂದ್ರದ ಕಾನೂನು ಸಚಿವರಾಗಿದ್ದಾಗ ಸಂವಿಧಾನದ 375–ಎ ಸ್ಥಾನಮಾನ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಗಡಿ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ– ಮುಂತಾದ ಯೋಜನೆಗಳನ್ನು ಹಮ್ಮಿಕೊಂಡರು.

ಶಿಕ್ಷಣ:

- ರಾಜ್ಯದ ಮುಖ್ಯಮಂತ್ರಿಯಾದ ಮೇಲೆ 1993 ರಿಂದ ರಾಜ್ಯದಲ್ಲಿ 'ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ' (ಸಿ.ಇ.ಟಿ.) ಪ್ರಾರಂಭಿಸಿದರು – ಬಡವ, ಮಧ್ಯಮವರ್ಗ ಮತ್ತು ಶ್ರೀಮಂತರಿಗೆ ಸಮಾನ ಪಾಲುನೀಡುವ ಸಾಮಾಜಿಕ ನ್ಯಾಯವನ್ನು ಸಂಪೂರ್ಣವಾಗಿ ಇದರಲ್ಲಿ ಅಳವಡಿಸಿಕೊಳ್ಳಲಾಯಿತು. ಕ್ಯಾಪಿಟೇಶನ್ ಶುಲ್ಕ ಪದ್ಧತಿಯ ರದ್ದು.

ಕೆಲವು ಪ್ರಾದೇಶಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದರು.

- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿ.ಟಿ.ಯು), ಬೆಳಗಾವಿ.
- ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ: (ಕರ್ನಾಟಕ ರಾಜ್ಯದಲ್ಲಿ ಆಧುನಿಕ ವೈದ್ಯಕೀಯ ಮತ್ತು ಭಾರತೀಯ ವೈದ್ಯಕೀಯ ಪರಂಪರೆಯ ಸೂಕ್ತ ಮತ್ತು ವ್ಯವಸ್ಥಿತ ಶಿಕ್ಷಣ, ಬೋಧನೆ ಮತ್ತು ಸಂಶೋಧನೆಯ ದೃಢ ಅನುಷ್ಠಾನಕ್ಕಾಗಿ ಕರ್ನಾಟಕ ಸರಕಾರವು 1994ರ ಅಕ್ಟೋಬರ್‌ನಲ್ಲಿ 'ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ'ವನ್ನು ಸ್ಥಾಪಿಸಿತು)
- ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
- ಗುಲ್ಬರ್ಗ ವಿಶ್ವವಿದ್ಯಾಲಯ,
- ಮಂಗಳೂರು ವಿಶ್ವವಿದ್ಯಾಲಯ
- ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ,
- **ಕರ್ನಾಟಕ ಮುಕ್ತವಿಶ್ವವಿದ್ಯಾಲಯ (ಕೆ.ಎಸ್.ಓ.ಯು)** – ಮೈಸೂರು ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ಇತ್ತು. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ರೀತಿಯಲ್ಲಿ ಕನ್ನಡದಲ್ಲಿಯೂ ಒಂದು ಮುಕ್ತ ವಿಶ್ವವಿದ್ಯಾಲಯ ಮಾಡುವ ಆಲೋಚನೆ ಬಂತು. ಅದಕ್ಕಾಗಿ ಕರ್ನಾಟಕ ಮುಕ್ತವಿಶ್ವವಿದ್ಯಾಲಯ (ಕೆ.ಎಸ್.ಓ.ಯು) ಮಾಡಿದರು.
- ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ
- ಬೀದರ್‌ನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ.

ಕೊಂಕಣ ರೈಲ್ವೆ – ರೈಲ್ವೆ ಇತಿಹಾಸದಲ್ಲಿ ಹೊಸ ಇತಿಹಾಸ:

- ವೀರೇಂದ್ರ ಪಾಟೀಲರ ಸಂಪುಟದಲ್ಲಿ ಯೋಜನಾ ಸಚಿವರಾಗಿ ಕರ್ನಾಟಕ ಭವನದಲ್ಲಿ ರೈಲ್ವೆ ಸಚಿವ ಜಾರ್ಜ್ ಫೆರ್ನಾಂಡಿಸ್ ಮತ್ತು ಕೇಂದ್ರ ಆರ್ಥಿಕಸಚಿವ ಮಧುದಂಡವತೆಯವರೊಂದಿಗೆ ಸಭೆ ಏರ್ಪಡಿಸಿ, ಕೇಂದ್ರ ಸರಕಾರ, ರೈಲ್ವೆ ಇಲಾಖೆ, ಕರ್ನಾಟಕ, ಮಹಾರಾಷ್ಟ್ರ, ಕೇರಳ ಮತ್ತು ಗೋವಾ ಸರಕಾರಗಳ ಪಾಲುದಾರಿಕೆಯಲ್ಲಿ ಕೊಂಕಣ ರೈಲ್ವೆ ನಿಗಮವನ್ನು ಸ್ಥಾಪಿಸಿದರು.
- ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಮಹಿಳೆಯರಿಗೆ 'ಹಿಂದೂ ಉತ್ತರಾಧಿಕಾರಿತ್ವ ಕಾಯಿದೆ 1956'ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವ ನಿಟ್ಟಿನಲ್ಲಿ ತಿದ್ದುಪಡಿ ಮಾಡಿದಾಗ (ಕರ್ನಾಟಕ ಆಕ್ಟ್ 23 ಆಫ್ 1994) ಅದು 'ಹಿಂದೂ ಉತ್ತರಾಧಿಕಾರಿತ್ವ (ಕರ್ನಾಟಕ ತಿದ್ದುಪಡಿ) ಕಾಯಿದೆ 1990' ಎಂದಾಯಿತು. 29–7–1994 ರಂದು ಅದು ರಾಷ್ಟ್ರಪತಿಯವರಿಂದ ಅಂಗೀಕೃತಗೊಂಡಿತು. ಈ ಕಾಯಿದೆಯನ್ವಯ ಸ್ಥಿರಾಸ್ತಿಯಲ್ಲಿ ಮಗನಿಗೆ ಸಮನಾದ ಪಾಲನ್ನು ಮಗಳು ಕೂಡ ಪಡೆಯುವಂತಾಯಿತು. ಸ್ಥಿರಾಸ್ತಿಯಲ್ಲಿ ಉತ್ತರಾಧಿಕಾರಿತ್ವದ ಹಕ್ಕು ಆಕೆಯು 'ಪುತ್ರ'ನಾಗಿದ್ದರೆ ಯಾವ ರೀತಿಯಲ್ಲಿ ದೊರೆಯಬಹುದಾಗಿತ್ತೊ ಅದೇ ರೀತಿಯಲ್ಲಿ 'ಪುತ್ರಿ'ಯಾಗಿಯೂ ಪಡೆಯುವ ಹಕ್ಕು ಪ್ರಾಪ್ತವಾಯಿತು. ಹಾಗೂ ಮಹಿಳೆಯರಿಗೆ ಹೆತ್ತವರ ಆಸ್ತಿಯಲ್ಲಿ ಶೇಕಡ 50ರಷ್ಟು ಮೀಸಲಾತಿ ಕೂಡ ನೀಡಲಾಯಿತು. ನಾನು ಕೇಂದ್ರದಲ್ಲಿ ಕಾನೂನು ಮಂತ್ರಿಯಾಗಿದ್ದಾಗ ಇದೇ ಪದ್ಧತಿಯನ್ನು ಇಡೀ ರಾಷ್ಟ್ರಮಟ್ಟದಲ್ಲಿ ಅನ್ವಯವಾಗುವಂತೆ ವಿಸ್ತರಿಸಲಾಯಿತು.

ಸಾಹಿತ್ಯ:

- ಅತ್ಯುನ್ನತ ಸಾಧನೆಗಳಿಗಾಗಿ ರಷ್ಯನ್ ಅಕಾಡೆಮಿ, ಹೈದರಾಬಾದಿನ ನ್ಯಾಷನಲ್ ಅಕಾಡೆಮಿ ಆಫ್ ಲಾ ಯುನಿವರ್ಸಿಟಿ, ಮಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ (ಒಟ್ಟೂ 4 ಡಾಕ್ಟರೇಟ್) ಪಡೆದಿದ್ದಾರೆ.
- ಡಾ. ಎಂ. ವೀರಪ್ಪ ಮೊಯಿಲಿ ಅವರು **'ಶ್ರೀ ರಾಮಾಯಣ ಮಹಾನ್ವೇಷಣಂ', 'ಸಿರಿಮುಡಿ ಪರಿಕ್ರಮಣ'** ಹಾಗೂ ಬಾಹುಬಲಿ ಜೀವನ ಚರಿತ್ರೆ ಹಾಗೂ ಆತನ ಸಂದೇಶಗಳನ್ನು ಒಳಗೊಂಡ **'ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ'** ಎಂಬ ಮೂರು ಮಹಾಕಾವ್ಯಗಳನ್ನು ರಚಿಸಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು:

- **'ಮೂರ್ತಿ ದೇವಿ'** ಪುರಸ್ಕಾರ :2009–(ಭಾರತೀಯ ಜ್ಞಾನಪೀಠ ಸಂಸ್ಥೆ,ನವದೆಹಲಿ)– 'ಶ್ರೀರಾಮಾಯಣ ಮಹಾನ್ವೇಷಣಂ'
- **'ಸರಸ್ವತಿಸಮ್ಮಾನ್'** ಪ್ರಶಸ್ತಿ: 2014– (ಕೆ.ಕೆ.ಬಿರ್ಲಾ ಫೌಂಡೇಶನ್, ನವದೆಹಲಿ)– 'ಶ್ರೀರಾಮಾಯಣ ಮಹಾನ್ವೇಷಣಂ'
- **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ– 2020'**: 'ಶ್ರೀ ಬಾಹುಬಲಿ ಅಹಿಂಸಾದಿಗ್ವಿಜಯಂ'
- ಸಂಸದ್‌ರತ್ನ ಪ್ರಶಸ್ತಿ – 2018– (ಸಂಸದ್‌ರತ್ನ ಅವಾರ್ಡ್ ಕಮಿಟಿ – Instituted by Prime Point Foundation, ಚೆನ್ನೈ).

ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿ:

- ಭಾರತದಲ್ಲಿದ್ದ ನಿರ್ವಹಣಾ ಸಾಮರ್ಥ್ಯವನ್ನು 2017ರ ವೇಳೆಗೆ 12.5 MMTPA ಯಿಂದ 45 MMTPA ಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. 2016–17ರ ವೇಳೆಗೆ ದೇಶದಾದ್ಯಂತ 31,757 ಕಿ.ಮೀ. ಉದ್ದದ ಪೈಪ್‌ಲೈನ್‌ಗಳಿರುವ ನೈಸರ್ಗಿಕ ಅನಿಲ ಗ್ರಿಡ್ ನಿರ್ಮಾಣವಾಗಬೇಕೆಂಬ ಗುರಿ ನಿಗದಿಗೊಳಿಸಲಾಗಿತ್ತು.
- 1680 ಕಿ.ಮೀ. ಉದ್ದದ TAPI ಪೈಪ್‌ಲೈನ್ ಯೋಜನೆ ಕಾರ್ಯವನ್ನೂ ನಡೆಸಲಾಗುತ್ತಿದೆ; ಇದರ ಮೂಲಕ 2018ರ ವೇಳೆಗೆ ತುರ್ಕ್‌ಮೆನಿಸ್ತಾನದಿಂದ 38 MMSCMD ನೈಸರ್ಗಿಕ ಅನಿಲ ಸರಬರಾಜುಗೊಳ್ಳಬೇಕು ಎಂಬ ಗುರಿಹೊಂದಲಾಗಿದೆ. ಇದಕ್ಕೆ ಪೂರಕವಾಗಿ, GAIL ಸಂಸ್ಥೆಯು 2012ರ ಮೇ ತಿಂಗಳಲ್ಲಿ ತುರ್ಕ್‌ಮೇನಿಸ್ತಾನ್‌ನೊಂದಿಗೆ ಮೂವತ್ತು ವರ್ಷಗಳ ಪೂರೈಕೆಗಾಗಿ 'ಅನಿಲ ಮಾರಾಟ ಖರೀದಿ ಒಪ್ಪಂದಕ್ಕೆ (GSPA)' ಸಹಿ ಕೂಡ ಹಾಕಿದೆ.
- ಇಡೀ ರಾಷ್ಟ್ರಕ್ಕೆ ನೀಲನಕ್ಷೆಯನ್ನು ತಯಾರಿಸಿ 2030ರ ಒಳಗಡೆ ಭಾರತದಲ್ಲಿ ತೈಲ ಮತ್ತು ಅನಿಲ ಉತ್ಪಾದನೆಯ ಸ್ವಾವಲಂಬನೆಯನ್ನು ಪಡೆಯುವ ಗುರಿಯನ್ನು ನಿಗಧಿಪಡಿಸಲಾಯಿತು.
- ವಿಜಯಪುರ ಜಿಲ್ಲೆಯ ಕೂಡಿಗಿಯಲ್ಲಿ ಸೂಪರ್ ಥರ್ಮಲ್ ವಿದ್ಯುತ್ ಸ್ಥಾವರ ಸ್ಥಾಪನೆ.
- ಕೊಚ್ಚಿನ್, ಓಡಿಸ್ಸಾದ ಪಾರಾದೀಪ್ ಮತ್ತು ರಾಜಸ್ಥಾನದ ಬಾರ್ಮರ್‌ನಲ್ಲಿ ಬೃಹತ್ ತೈಲಸಂಸ್ಕರಣ ಘಟಕದ ಸ್ಥಾಪನೆ.
- ಆಯಿಲ್ ಫೌಂಡೇಶನ್ ಮೂಲಕ ಓಡಿಸ್ಸಾದ ಸೂರ್ಯ ದೇವಸ್ಥಾನ (ಕೊನಾರ್ಕ್), ಮಧ್ಯಪ್ರದೇಶದ ಖಜರಾವೋ, ಆಂಧ್ರದ ವಾರಂಗಲ್ ಮತ್ತು ಚಿಕ್ಕಬಳ್ಳಾಪುರದ ಭೋಗನಂದೀಶ್ವರ ದೇಗುಲುಗಳ ಪುನರುತ್ಥಾನ ಯೋಜನೆಗೆ ಮಂಜೂರಾತಿ.
- ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಿಯಾಗಿ 3 ತಿಂಗಳ ಒಳಗಡೆ 25ಲಕ್ಷ ಕೋಟಿ. ರೂ.ಗಳ ಬಾಕಿನಿಂತ ಯೋಜನೆಗಳ ಮಂಜೂರಾತಿ.
- ಮೈಸೂರಿನ ಕೆ.ಆರ್.ಎಸ್‌ನಲ್ಲಿ ಬೃಂದಾವನ ಗಾರ್ಡನ್‌ನಲ್ಲಿ ಸಂಗೀತ ಕಾರಂಜಿಯ ಮಂಜೂರಾತಿ ಮತ್ತು ಚಾಲನೆ.
- ಡಾ. ಮನಮೋಹನ ಸಿಂಗ್ ಅವರು ಪ್ರಧಾನಮಂತ್ರಿಯಾಗಿದ್ದ ಸಮಯದಲ್ಲಿ 2005ರಲ್ಲಿ ಎರಡನೆಯ ಆಡಳಿತ ಸುಧಾರಣಾ ಆಯೋಗದ ಮೂಲಕ 15 ವರದಿಯನ್ನು ನೀಡಲಾಯಿತು.
- ಮೊಯಿಲಿಯವರ ಅಧ್ಯಕ್ಷತೆಯ ಓವರ್‌ಸೈಟ್ ಕಮಿಟಿ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ 80ಕ್ಕೂ ಹೆಚ್ಚಿನ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ 27% ಮೀಸಲಾತಿಯನ್ನು ನೀಡಲು ಅನುಮತಿಸಲಾಯಿತು.



ಪ್ರಕಟಣೆ

ಕೆ.ಎಂ.ನಾಗರಾಜ್
ಹಿರಿಯ ಕಾಂಗ್ರೆಸ್ ಮುಖಂಡರು

‘ಎಂವಿ ಗಂಗಾ ವಿಲಾಸ್’ಗೆ ಮೋದಿ ಹಸಿರು ನಿಶಾನೆ ನಾಳೆ

ನವದೆಹಲಿ (ಪಿಟಿಐ): ವಿಶ್ವದ ಅತ್ಯಂತ ಉದ್ದದ ನದಿ ವಿಹಾರದ ದೋಣಿ ‘ಎಂವಿ ಗಂಗಾ ವಿಲಾಸ್’ಗೆ ಪ್ರಧಾನಿ ನರೇಂದ್ರ ಮೋದಿ ಅವರು ಜ. 13ರಂದು ಹಸಿರು ನಿಶಾನೆ ತೋರಲಿದ್ದಾರೆ.

ಅಲ್ಲದೇ, ವಾರಾಣಸಿಯಲ್ಲಿ ಗಂಗಾ ನದಿ ತೀರದಲ್ಲಿ ನಿರ್ಮಿಸಲಾಗಿರುವ ‘ಟೆಂಟ್ ಸಿಟಿ’ಯನ್ನು ಸಹ ಅವರು ಉದ್ಘಾಟಿಸುವರು. ಈ ಕಾರ್ಯಕ್ರಮಗಳು ವರ್ಚುವಲ್ ವಿಧಾನದ ಮೂಲಕ ನಡೆಯಲಿವೆ ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ಪ್ರಕಟಣೆ ತಿಳಿಸಿದೆ.


ಇದೇ ವೇಳೆ, ₹ 1,000 ಕೋಟಿಗೂ ಅಧಿಕ ವೆಚ್ಚದ ವಿವಿಧ ಜಲಸಾರಿಗೆ ಯೋಜನೆಗಳಿಗೆ ಪ್ರಧಾನಿ ಅವರು ಶಿಲಾನ್ಯಾಸ ನೆರವೇರಿಸುವರು ಎಂದು ಪಿಎಂಒ ತಿಳಿಸಿದೆ.

ವಾರಾಣಸಿಯಿಂದ ತನ್ನ ಯಾತ್ರೆಯನ್ನು ಆರಂಭಿಸುವ ‘ಎಂವಿ ಗಂಗಾ ವಿಲಾಸ್’, ಬಾಂಗ್ಲಾದೇಶದ ಮೂಲಕ ಸಾಗಿ 51 ದಿನಗಳಲ್ಲಿ ಅಂದಾಜು 3,200 ಕಿ.ಮೀ. ಕ್ರಮಿಸಿ, ಅಸ್ಸಾಂನ ದಿಬ್ರೂಗಢ ತಲುಪಲಿದೆ.

ಮೂರು ಅಂತಸ್ತುಗಳ ಈ ಐಷಾರಾಮಿ ದೋಣಿಯ ಮೊದಲ ಯಾತ್ರೆಯಲ್ಲಿ ಸ್ವಿಟ್ಜರ್ಲೆಂಡ್‌ನ 32 ಪ್ರವಾಸಿಗರು ಪ್ರಯಾಣಿಸಲಿದ್ದಾರೆ.

‘ಶ್ರೀ ತ್ಯಾಗರಾಜ ಮಾ ಭಾಗ್ಯಮಾ’

• ಮಂಜುನಾಥ ಕೊಳ್ಳೇಗಾಲ



ಕರ್ಣಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಅತಿ ವಿಶಿಷ್ಟ ಸ್ಥಾನ ತ್ಯಾಗರಾಜರದು. ಅವರನ್ನು ಕೇವಲ ವಾಗ್ಗೇಯಕಾರರೆಂದರೆ ಆ ಚೇತನದ ಬಗೆಗೆ ಏನನ್ನೂ ಹೇಳಿದಂತಾಗದು.

ತಿರುವಾರೂರೆಂಬ ಹಳ್ಳಿಯಲ್ಲಿ ಸಂಪ್ರದಾಯಸ್ಥ ಮನೆತನದಲ್ಲಿ ಜನಿಸಿ, ವಂಶಪಾರಂಪರ್ಯವಾಗಿ ಮಡುಗಟ್ಟಿದ್ದ ಸಂಗೀತ ಸಾಹಿತ್ಯ ಶಾಸ್ತ್ರವಿದ್ವತ್ತುಗಳ ವಾತಾವರಣದಲ್ಲಿ ಬೆಳೆದ ತ್ಯಾಗರಾಜರಿಗೆ ಸಂಗೀತವಿದ್ಯೆ, ಸಾಹಿತ್ಯಾಭಿರುಚಿ, ಶಾಸ್ತ್ರಜ್ಞಾನಗಳು ಕೈಗೂಡಿದ್ದರಲ್ಲಿ ಅಚ್ಚರಿಯೇನಿಲ್ಲ. ತ್ಯಾಗರಾಜರು ಆಹ್ಲಾದಕರವಾದ, ಸಂಗೀತವನ್ನು ರಚಿಸಿದರು, ಸಂಶೋಧನೆಗಳನ್ನು ಮಾಡಿದರು, ಹೊಸ ರಾಗಗಳನ್ನು ಕಂಡುಹಿಡಿದರು, ಹೊಸಹೊಸ ಪ್ರಯೋಗಗಳನ್ನು ಮಾಡಿದರು, ಕರ್ಣಾಟಕ ಸಂಗೀತಕ್ಕೆ ದಾರಿಯನ್ನು ರೂಪಿಸಿದರು - ಇದು ಅವರ ಸಂಗೀತ ಪ್ರತಿಭೆಯ ಮಾತಾದರೆ, ಅದರ ಸಾಹಿತ್ಯಾಂಶವೂ ಸಂಗೀತಾಂಶಕ್ಕೆ ಹೊಯಿಗೈಯ್ಯಾಗಿ ನಿಲ್ಲುವಂಥದೇ - ‘ನೌಕಾಚರಿತ್ರೆ’ ಮೊದಲಾದ ಗೇಯನಾಟಕಗಳೂ ಸಾಹಿತ್ಯ ಸಂಗೀತಗಳ ಹದವಾದ ನೇಯ್ಗೆಯೇ. ಆದರೆ ತ್ಯಾಗರಾಜರ ವ್ಯಕ್ತಿತ್ವ ಈ ಪ್ರತಿಭೆಯನ್ನು ಮೀರಿದ್ದು. ಪುರಂದರದಾಸರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಸಾಗಿದ ತ್ಯಾಗರಾಜರದ್ದು ಸಂಗೀತರೂಪದ ದಾಸರಚನೆಗಳೇ. ಇತರ ದಾಸರಚನೆಗಳಂತಲ್ಲದೇ ತ್ಯಾಗರಾಜರ ರಚನೆಗಳ ಸಂಗೀತಾಂಶ, ಅವರ ಶಿಷ್ಯಪರಂಪರೆಯ ಶ್ರದ್ಧೆಯಿಂದಾಗಿ ಮುಕ್ಕಾಗದೇ ಉಳಿದು ಬಂದಿದೆಯಷ್ಟೇ.

ಅಣ್ಣಮಾಚಾರ್ಯ, ಪುರಂದರದಾಸ, ಭದ್ರಾಚಲ ರಾಮದಾಸರೇ ಮೊದಲಾದ ಪೂರ್ವಸೂರಿಗಳ ದಟ್ಟವಾದ ಪ್ರಭಾವ, ತಮ್ಮ ಪರಿಸರದಲ್ಲೇ ದಟ್ಟವಾಗಿದ್ದ ಸಂಗೀತ-ಸಾಹಿತ್ಯ-ಶಾಸ್ತ್ರಜ್ಞಾನ, ದೈವಪ್ರೀತಿ, ಪ್ರತಿಭೆ, ಅನುಭಾವಗಳ ಪರಿಪಾಕ, ಕವಿಹೃದಯದ ಶ್ರೀ ತ್ಯಾಗರಾಜರು. ಅವರ ಪ್ರತಿಭೆಯೇನಿದ್ದರೂ ಈ ಕವಿಹೃದಯದ ಕೈಯ ಸಲಕರಣೆಯಷ್ಟೇ.

ತ್ಯಾಗರಾಜರ ಆರಾಧನೆ

ರಾಮ, ತ್ಯಾಗರಾಜರ ಭಾವಜೀವನದ ಅವಿಭಾಜ್ಯ ಅಂಗ - ಕೃಷ್ಣನಂತೆ ಭಾಗವತದ ಹಂದರದಿಂದ ಬಂದು ಆಡಿ ಹೋಗುವ ದೈವಶಿಶುವಲ್ಲ ಈತ - ‘ಮಾನವೇಂದ್ರ’, ಆತ್ಮಬಂಧು; ತಾನಾತನ ಪರಿವಾರ - ‘ಸೀತಮ್ಮ ಮಾಯಮ್ಮ, ಶ್ರೀರಾಮುಡು ಮನ ತಂಡ್ರಿ’ - ಅಷ್ಟೇ ಅಲ್ಲ, ‘ವಾತಾತ್ಮಜ ಸೌಮಿತ್ರಿ ವೈನತೇಯ ರಿಪುಮರ್ದನ ಧಾತ ಭರತಾದುಲು ಸೋದರುಲು’. ಇಂತಹ ಭಕ್ತನ ಮೊರೆಯನ್ನು ರಾಮ ಆಲಿಸುವುದು ಏನಾಶ್ಚರ್ಯ? ಮನೆಗೇ ನಡೆದು ಬರುತ್ತಾನೆ, ‘ನನ್ನು ಪಾಲಿಂಪ ನಡಚಿ ವಚ್ಚಿತಿವೋ ನಾ ಪ್ರಾಣನಾಥಾ’ ಎಂದು ಭಕ್ತನಿತ್ತ ಹಾಲುಹಣ್ಣನ್ನು ಸ್ವೀಕರಿಸುತ್ತಾನೆ, ಆನಂದಭೈರವಿಯ ಜೋಗುಳವನ್ನಾಲಿಸುತ್ತಾ ನೀಲಾಂಬರಿಯ ಉಯ್ಯಾಲೆಯಲ್ಲಿ ತೂಗಿಸಿಕೊಳ್ಳುತ್ತಾನೆ, ಏನನ್ನೋ ಹೇಳುತ್ತಾನೆ, ತೋರುತ್ತಾನೆ, ನಗುನಗುತ್ತಾ ಮರೆಯಾಗುತ್ತಾನೆ, ಸತಾಯಿಸುತ್ತಾನೆ. ಆದರೆ ಕಟ್ಟಕಡೆಗೆ ಮೇಲೆತ್ತಿಯೇ ಎತ್ತುತ್ತಾನೆ, ಹಾಗೊಂದು ನಂಬಿಕೆಯಲ್ಲ, ಗಟ್ಟಿಯರಿವು ಭಕ್ತನಿಗಿದೆ - ಆದರೆ ತನ್ನಂತಹ ‘ದುಡುಕ’ನನ್ನೂ ಹೇಗೆ ಮೇಲೆತ್ತಿಬಿಡುತ್ತಾನೋ ಎಂಬ ಕುತೂಹಲ - ‘ಎಟುಲ ಬ್ರೋತುವೋ ತೆಲಿಯ ಏಕಾಂತ ರಾಮಯ್ಯ’ ಎಂದು ಬೆರಗಾಗುತ್ತಾರೆ ತ್ಯಾಗರಾಜರು. ‘ನಗುಮೋಮುಗನಲೇನಿ’ ಉಂಟಾದ ಅಗಲಿಕೆಯ ದುಃಖವನ್ನು ಪರಿಹರಿಸಲು ಕೊನೆಗೂ ಆ ನಗೆಮೊಗದರಸ ಸೀತಾ ಭರತ ಲಕ್ಷ್ಮಣ ಶತ್ರುಘ್ನ ಸಹಿತ ತನ್ನ ಭವ್ಯರೂಪದಲ್ಲಿ ದರ್ಶನವಿತ್ತಾಗ ‘ಕನುಗೊಂಟಿನಿ ಶ್ರೀರಾಮುನಿ ನೇಡು’ ಎಂದು ಕುಣಿದಾಡಿಬಿಡುತ್ತಾರೆ, ತ್ಯಾಗರಾಜರು.

ಇಂತಹ ‘ಸ್ವರರಾಗಸುಧಾರಸಯುತಭಕ್ತಿ’ಯ ಮಾಧುರ್ಯವನ್ನೀಂಟುತ್ತಾ ‘ರಾಮಭಕ್ತಿಸಾಮ್ರಾಜ್ಯ’ದಲ್ಲಿ ಓಲಾಡುವ ಭಕ್ತ ಕವಿಗೆ, ನಿರ್ಗುಣ ನಿರುಪಾಧಿಕ ನಿರ್ವೇದಕವಾದ ಅದ್ವೈತಸಿದ್ಧಿ ಹೇಗೆ ರುಚಿಸೀತು? ಅದನ್ನವರು ಬಾಯಿಬಿಟ್ಟೇ ನುಡಿಯುತ್ತಾರೆ - ‘ದ್ವೈತಮು ಸುಖಮಾ ಅದ್ವೈತಮು ಸುಖಮಾ?’ ಸ್ವತಃ ಅದ್ವೈತಿಗಳೂ ಶಾಸ್ತ್ರವೇತ್ತರೂ ಆದ ತ್ಯಾಗರಾಜರಿಗೆ ಅದ್ವೈತವೇ ಅಂತಿಮ ಸತ್ಯವೆಂಬ ಅರಿವಿಲ್ಲದಿಲ್ಲ; ಆದರೆ ಭಾವುಕ ಮನಸ್ಸು ಸರಿತಪ್ಪುಗಳ ಚರ್ಚೆಯನ್ನೊಲ್ಲದು. ಭಕ್ತಿರಸವನ್ನೀಂಟಿದ ಮನಸ್ಸಿಗೆ, ಗಮ್ಯಕ್ಕಿಂತಾ ಮಾರ್ಗವೇ ರಮ್ಯ. ಅದೇ ಸುಖ - ಆದ್ದರಿಂದಲೇ ದ್ವೈತವು ‘ಸರಿ’ಯೋ ಅದ್ವೈತವೋ ಎಂಬ ಪ್ರಶ್ನೆಯನ್ನು ತ್ಯಾಗರಾಜರು ಎತ್ತುವುದೇ ಇಲ್ಲ, ‘ಸುಖಮಾ’ ಎಂಬುದಷ್ಟೇ ಅವರ ಕವಿಹೃದಯದ ಪ್ರಶ್ನೆ.

ಶ್ರೀರಾಮನನ್ನು ನವರತ್ನಮಂಟಪದಲ್ಲಿಟ್ಟು ‘ನಾ ಭಾಗ್ಯಮಾ’ ಎಂದು ಪೂಜಿಸುವ ತ್ಯಾಗರಾಜರು ನಿಶ್ಚಯವಾಗಿ ನಮ್ಮ ಭಾಗ್ಯ. ಈ ಸಂತಮಹನೀಯರ ಪುಣ್ಯಾರಾಧನೆಯಂದು ನಾವವರನ್ನು ಪ್ರಾರ್ಥಿಸಬಹುದಾದದ್ದು ಇಷ್ಟು - ‘ಭಾವುಕಮಗು ಸಾತ್ತ್ವಿಕ ಭಕ್ತಿ ಭಿಕ್ಷಲೀಯವೇ.’


ಸುದ್ದಿ 2 ನಿಮಿಷ

‘ರಾಜ್ಯಪಾಲರನ್ನು ಕಾರ್ಯಕರ್ತರಂತೆ ನಡೆಸಿಕೊಳ್ಳುತ್ತಿರುವ ಬಿಜೆಪಿ’

ನವದೆಹಲಿ (ಪಿಟಿಐ): ‘ಬಿಜೆಪಿಯು ರಾಜ್ಯಪಾಲರನ್ನು ತನ್ನ ಕಾರ್ಯಕರ್ತರಂತೆ ನಡೆಸಿಕೊಳ್ಳುತ್ತಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಕಿಡಿಕಾರಿದ್ದಾರೆ.

ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಹಾಗೂ ರಾಜ್ಯಪಾಲ ಆರ್.ಎನ್.ರವಿ ನಡುವಣ ತಿಕ್ಕಾಟ ತೀವ್ರಗೊಂಡಿರುವ ಬೆನ್ನಲ್ಲೇ ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

‘ಬಿಜೆಪಿಯು ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳ ರಾಜ್ಯಪಾಲರನ್ನು ತನ್ನ ಕಾರ್ಯಕರ್ತರಂತೆ ನಡೆಸಿಕೊಳ್ಳುವ ಮೂಲಕ ಸಂವಿಧಾನಬದ್ಧವಾಗಿರುವ ರಾಜ್ಯಪಾಲರ ಕಚೇರಿಯನ್ನು ಅವಮಾನಿಸುತ್ತಿದೆ. ಇದು ಪ್ರಜಾಪ್ರಭುತ್ವದ ಮೇಲಿನ ದಾಳಿಯಾಗಿದೆ. ಇತ್ತೀಚೆಗೆ ಕೆಲ ರಾಜ್ಯಪಾಲರು ಒಕ್ಕೂಟ ವ್ಯವಸ್ಥೆಯನ್ನೇ ನಾಶಪಡಿಸಲು ಪ್ರಯತ್ನಿಸಿದ್ದಾರೆ’ ಎಂದು ಟ್ವೀಟ್ ಮಾಡಿದ್ದಾರೆ.



‘ರಾಜ್ಯಪಾಲರಾದವರು ಸಂವಿಧಾನದ ಚೌಕಟ್ಟಿನ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಅವರೂ ಕೂಡ ಶಾಸಕಾಂಗದ ಭಾಗವಾಗಿದ್ದು, ಅದಕ್ಕೆ ಅಗೌರವ ತೋರಬಾರದು’ ಎಂದು ಹೇಳಿದ್ದಾರೆ.

(ಚೆನ್ನೈ ವರದಿ): ‘ರಾಜ್ಯ ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಓದುವುದು ರಾಜ್ಯಪಾಲರ ಕರ್ತವ್ಯ’ ಎಂದು ತಮಿಳುನಾಡು ವಿಧಾನಸಭೆಯ ಸ್ಪೀಕರ್ ಎಂ.ಅಪ್ಪಾವು ಅವರು ಬುಧವಾರ ಸದನಕ್ಕೆ ತಿಳಿಸಿದ್ದಾರೆ.

ಬಿಡಾಡಿ ಗೂಳಿಗಳಿಗೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ನಿರ್ಧಾರ

ಅಹಮದಾಬಾದ್ (ಪಿಟಿಐ): ಗುಜರಾತ್‌ನಲ್ಲಿ ಬಿಡಾಡಿ ದನಗಳ ಹಾವಳಿಯಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, ಇದಕ್ಕೆ ಕಡಿವಾಣ ಹಾಕುವುದಕ್ಕಾಗಿ ರಾಜ್ಯದಲ್ಲಿ ಸುಮಾರು 50 ಸಾವಿರ ಗೂಳಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸಲು ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

‘ಶಸ್ತ್ರಚಿಕಿತ್ಸೆಯ ನಂತರ ಗೂಳಿಗಳ ಕಿವಿಗಳಿಗೆ ‘ಟ್ಯಾಗ್’ ಹಾಕಲಾಗುತ್ತದೆ. ಬಳಿಕ ಅವುಗಳನ್ನು ಗೋಶಾಲೆಗಳಿಗೆ ರವಾನಿಸಲಾಗುತ್ತದೆ’ ಎಂದು ಆರೋಗ್ಯ ಸಚಿವ ರಿಷಿಕೇಶ್ ಪಟೇಲ್ ಹೇಳಿದ್ದಾರೆ.

‘ಗೂಳಿಗಳು ಹೆಚ್ಚು ಆಕ್ರಮಣಕಾರಿಯಾಗಿರುತ್ತವೆ. ಅವುಗಳಿಂದಾಗಿಯೇ ಶೇ 60 ರಿಂದ 70ರಷ್ಟು ರಸ್ತೆ ಅಪಘಾತಗಳು ಸಂಭವಿಸುತ್ತಿರುವ ಮಾಹಿತಿ ಲಭಿಸಿದೆ. ಹೀಗಾಗಿಯೇ ನಗರ ಹಾಗೂ ಗ್ರಾಮೀಣ ಭಾಗದಲ್ಲಿನ ಸುಮಾರು 50 ಸಾವಿರ ಬಿಡಾಡಿ ಗೂಳಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸಲು ನಿರ್ಧರಿಸಲಾಗಿದೆ. ಪಶುವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರು ಮತ್ತು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ಸೇರಿದಂತೆ ತಜ್ಞರ ಸಲಹೆಯ ಆಧಾರದಲ್ಲಿ ಈ ಕಾರ್ಯ ಕೈಗೊಳ್ಳಲಾಗುತ್ತದೆ. ಇದಕ್ಕಾಗಿ ತಂಡಗಳನ್ನೂ ರಚಿಸಲಾಗುತ್ತದೆ’ ಎಂದೂ ಮಾಹಿತಿ ನೀಡಿದ್ದಾರೆ.

ಜೋಶಿಮಠ ವಾರ್ಷಿಕ 6.65 ಸೆ.ಮೀ. ಕುಸಿತ; ಹಾನಿಯಾದ ಮನೆಗಳ ಸಂಖ್ಯೆ 723ಕ್ಕೆ ಏರಿಕೆ

ಪರಿಹಾರ ಮೊತ್ತ ಹೆಚ್ಚಿಸಿ: ಸಂತ್ರಸ್ತರ ಧರಣಿ

ನವದೆಹಲಿ/ಡೆಹ್ರಾಡೂನ್/ ಜೋಶಿಮಠ(ಪಿಟಿಐ) : ಮುಳುಗುತ್ತಿರುವ ಪಟ್ಟಣ ಜೋಶಿಮಠದಲ್ಲಿ ನೂರಾರು ಕಟ್ಟಡಗಳಲ್ಲಿ ಭಾರಿ ಬಿರುಕುಗಳು ಹೆಚ್ಚುತ್ತಿವೆ. ಹಾನಿಯಾದ ಕಟ್ಟಡಗಳ ಸಂಖ್ಯೆ ಬುಧವಾರ 723ಕ್ಕೆ ಏರಿದೆ. 131 ಕುಟುಂಬಗಳನ್ನು ತಾತ್ಕಾಲಿಕ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಯಿತು.

ಈ ಪಟ್ಟಣವು ಭಾರತೀಯ ಸೇನೆಯ ಬಹುದೊಡ್ಡ ನೆಲೆಯಾಗಿದೆ. ಚೀನಾ ಜತೆಗಿನ ವಿವಾದಿತ ಗಡಿ ತಲುಪುವ ಕಾರ್ಯತಂತ್ರದ ಪ್ರಮುಖ ಮಾರ್ಗದಲ್ಲೂ ಭಾರಿ ಬಿರುಕುಗಳು ಕಾಣಿಸಿಕೊಂಡಿರುವುದು ವರದಿಯಾಗಿದೆ.

ಈ ನಡುವೆ ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಮತ್ತು ಒಂದೇ ಕಂತಿನಲ್ಲಿ ಪರಿಹಾರ ವಿತರಿಸಬೇಕು ಎಂದು ಒತ್ತಾಯಿಸಿ ಸಂತ್ರಸ್ತರು ಧರಣಿ ನಡೆಸುತ್ತಿದ್ದಾರೆ.

ಬಿರುಕಿನಿಂದ ಅಸ್ಥಿರವಾದ ‘ಮಲಾರಿ ಇನ್’ ಮತ್ತು ‘ಮೌಂಟ್ ವ್ಯೂ’ ಹೋಟೆಲ್‌ಗಳ ಕಟ್ಟಡಗಳ ತಕ್ಷಣದ ತೆರವಿಗೆ ರಾಜ್ಯಸರ್ಕಾರ ಸೋಮವಾರವೇ ಆದೇಶ ನೀಡಿತ್ತು. ಆದರೆ, ಹೋಟೆಲ್ ಮಾಲೀಕರು ಸೂಕ್ತ ಪರಿಹಾರ ನೀಡದೆ, ಕಟ್ಟಡ ಕೆಡವದಂತೆ ಪಟ್ಟು ಹಿಡಿದಿದ್ದಾರೆ. ಅಲ್ಲದೇ, ಬದರೀನಾಥ ಮಾರ್ಗದ ನಿವಾಸಿಗಳು ಪರಿಹಾರ ಮೊತ್ತ ಹೆಚ್ಚಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.



ಉತ್ತರಾಖಂಡದ ಜೋಶಿಮಠದ ನಿವಾಸಿಗಳು ಅಪಾಯದ ಅಂಚಿನಲ್ಲಿರುವ ಮನೆಗಳನ್ನು ಖಾಲಿ ಮಾಡಿ ಗೃಹೋಪಯೋಗಿ ವಸ್ತುಗಳನ್ನು ವಾಹನಗಳಲ್ಲಿ ತುಂಬಿಕೊಂಡು ಬುಧವಾರ ತೊರೆದರು – ಪಿಟಿಐ ಚಿತ್ರ

ಕಟ್ಟಡಗಳ ತೆರವು ಕಾರ್ಯಾಚರಣೆ ಆರಂಭಿಸುವ ಮೊದಲು ಮುಖ್ಯಮಂತ್ರಿಯವರ ಕಾರ್ಯದರ್ಶಿ ಮೀನಾಕ್ಷಿ ಸುಂದರಮ್ ಅವರು, ಪ್ರತಿಭಟನಕಾರರ ಜತೆ ಮತ್ತೊಮ್ಮೆ ಮಾತುಕತೆ ನಡೆಸಿದರು. ಕಟ್ಟಡಗಳ ತೆರವಿಗೆ ಸಹಕರಿಸುವಂತೆ ಸಂತ್ರಸ್ತರಿಗೆ ಮನವಿ ಮಾಡಿದರು.

ಬದರೀನಾಥ ಮಾರ್ಗದ ನಿವಾಸಿಗಳ ಬೇಡಿಕೆ ಈಡೇರಿಸುವುದು ಅಸಾಧ್ಯ. ಮಾರುಕಟ್ಟೆ ದರದ ಪ್ರಕಾರ ಪರಿಹಾರ ಕಲ್ಪಿಸಲು ಸರ್ಕಾರ ಬದ್ಧವಿದೆ. ಸ್ಥಳೀಯರ ಹಿತಾಸಕ್ತಿ ರಕ್ಷಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಸಂತ್ರ ಸ್ತ ಕುಟುಂಬಗಳಿಗೆ ಮಧ್ಯಂತರ ಪರಿಹಾರವಾಗಿ ₹1.5 ಲಕ್ಷ ನೀಡಲಾಗುವುದು. ಸ್ಥಳಾಂತರದ ಮುಂಚೆ ₹50 ಸಾವಿರ ಮತ್ತು ನಂತರ ವಿಪತ್ತು ಪರಿಹಾರವಾಗಿ ₹1 ಲಕ್ಷ ನೀಡಲಾಗುವುದು. ಬಾಡಿಗೆ ಮನೆಗಳಿಗೆ ತೆರಳುವವರಿಗೆ ಆರು ತಿಂಗಳವರೆಗೆ ಪ್ರತಿ ತಿಂಗಳು ₹4,000 ನೀಡಲಾಗುವುದು ಎಂದು ಅವರು ಹೇಳಿದರು.

‘ಪ್ರತಿಭಟನಕಾರರ ಜತೆ ಸಕಾರಾತ್ಮಕ ಮಾತುಕತೆ ನಡೆದಿದೆ. ಆದಷ್ಟು ಶೀಘ್ರ ಈ ಸಮಸ್ಯೆ ಬಗೆಹರಿಯಲಿದೆ. ಜೋಶಿಮಠದ ಎರಡು ಹೋಟೆಲ್ ಕಟ್ಟಡಗಳನ್ನು ಮಾತ್ರ ತೆರವುಗೊಳಿಸಲಾಗುತ್ತಿದೆ. ವಾಸ ಯೋಗ್ಯವಲ್ಲವೆಂದು ಗುರುತಿಸಿರುವ ಮನೆಗಳನ್ನು ಕೆಡವುತ್ತಿಲ್ಲ. ಅಪಾಯದ ವಲಯದಲ್ಲಿರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲು ಮಾತ್ರ ಆ ಮನೆಗಳನ್ನು ಕೆಂಪು ಬಣ್ಣದಲ್ಲಿ ಗುರುತಿಸಲಾಗಿದೆ’ ಎಂದು ಭೂಕುಸಿತ ಪೀಡಿತ ಪಟ್ಟಣದ ನೋಡಲ್ ಅಧಿಕಾರಿಯೂ ಆಗಿರುವ ಸುಂದರಮ್ ಸುದ್ದಿಗಾರರಿಗೆ ತಿಳಿಸಿದರು.

‘ಕೆಂಪು ವಲಯ’ದಲ್ಲಿ ಜೇಪಿ ವಿದ್ಯುತ್ ಸ್ಥಾವರ

ಜೇಪಿ ವಿದ್ಯುತ್ ಸ್ಥಾವರದ ವಸತಿ ಸಂಕೀರ್ಣದಲ್ಲಿ ಅತ್ಯಂತ ಅಪಾಯಕಾರಿ ಮಟ್ಟದಲ್ಲಿ ಬಿರುಕುಗಳು ಬುಧವಾರ ಕಾಣಿಸಿವೆ. ಅಲ್ಲದೇ ಬ್ಯಾಡ್ಮಿಂಟನ್ ಕೋರ್ಟ್ ಕೂಡ ಭಾರಿ ಬಿರುಕಿನಿಂದ ಇಬ್ಭಾಗವಾಗಿದೆ. ಸಂಕೀರ್ಣವನ್ನು ಅತೀ ಹೆಚ್ಚು ಅಪಾಯದ ‘ಕೆಂಪು ಪಟ್ಟಿ ವಲಯ’ವಾಗಿ ಘೋಷಿಸಲಾಗಿದೆ. ಸಂಕೀರ್ಣದ ಆವರಣ ಪ್ರವೇಶ ನಿರ್ಬಂಧಿಸಲಾಗಿದೆ. ವಸತಿ ಸಂಕೀರ್ಣ ಯಾವುದೇ ಕ್ಷಣದಲ್ಲಿ ಧರಾಶಾಹಿಯಾಗುವ ಸೂಚನೆಗಳಿವೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ಜೋಶಿಮಠದಲ್ಲಿ ವಾರ್ಷಿಕ 6.65 ಸೆ.ಮೀ ಭೂಕುಸಿತ: ಹಿಮಾಲಯ ಶ್ರೇಣಿಯ ಪಟ್ಟಣ ಜೋಶಿಮಠ ಎರಡು ವರ್ಷಗಳಿಂದ ವಾರ್ಷಿಕ 6.65 ಸೆ.ಮೀ ಪ್ರಮಾಣದಲ್ಲಿ ಕುಸಿಯುತ್ತಿರುವುದನ್ನು ಹೊಸ ಅಧ್ಯಯನ ತೆರೆದಿಟ್ಟಿದೆ.

2020 ಜುಲೈನಿಂದ 2022ರ ಮಾರ್ಚ್ ಅವಧಿಯ 18 ತಿಂಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಭೂಮಿ ಕುಸಿದಿರುವುದನ್ನು ಸಾಬೀತುಪಡಿಸುವ, ಉಪಗ್ರಹ ಸೆರೆ ಹಿಡಿದ ಚಿತ್ರಗಳನ್ನು ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳು ಮಂಗಳವಾರ ಬಿಡುಗಡೆ ಮಾಡಿದ್ದಾರೆ.

‘ಪರಿಷ್ಕೃತ ಪರಿಹಾರ ಒಪ್ಪಂದದ ನಂತರ ತೆರವು’

ಲಖನೌ (ರಾಯಿಟರ್ಸ್): ಅಸುರಕ್ಷಿತವೆಂದು ಪರಿಗಣಿಸಿರುವ ಜೋಶಿಮಠದ ಎರಡು ಹೋಟೆಲ್ ಕಟ್ಟಡಗಳ ತೆರವು ಕಾರ್ಯವನ್ನು ನಿವಾಸಿಗಳೊಂದಿಗೆ ಪರಿಷ್ಕೃತ ಪರಿಹಾರ ಒಪ್ಪಂದ ಮಾಡಿಕೊಂಡು ಪುನಃ ಆರಂಭಿಸಲಾಗುವುದು ಎಂದು ಜಿಲ್ಲಾಮಟ್ಟದ ಹಿರಿಯ ಅಧಿಕಾರಿ ಬುಧವಾರ ತಿಳಿಸಿದರು.

ಚೀನಾ ಗಡಿಗೆ ಸಮೀಪವಿರುವ ಈ ಪಟ್ಟಣದಲ್ಲಿ ನೂರಕ್ಕೂ ಹೆಚ್ಚು ಪ್ರತಿಭಟನಕಾರರು, ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿ, ವಾಲಿದ ಎರಡು ಹೋಟೆಲ್ ಕಟ್ಟಡಗಳ ತೆರವಿಗೆ ತಡೆಯೊಡ್ಡಿದ್ದರು. ಸ್ಥಳೀಯ ಆಡಳಿತವು ಮಧ್ಯಂತರ ಪರಿಹಾರ ಪ್ಯಾಕೇಜ್ ಅನುಮೋದಿಸಿದೆ ಎಂದು ಜಿಲ್ಲಾಮಟ್ಟದ ಅಧಿಕಾರಿ ಹಿಮಾಂಶು ಖುರಾನಾ ತಿಳಿಸಿದರು.

‘ಲಖಿಂಪುರ ಖೀರಿ ಪ್ರಕರಣ ವಿಚಾರಣೆಗೆ ಬೇಕು 5 ವರ್ಷ’

ನವದೆಹಲಿ: ನಾಲ್ವರು ರೈತರ ಸಾವಿಗೆ ಕಾರಣವಾದ 2021ರ ಲಖಿಂಪುರ ಖೀರಿ ಹಿಂಸಾಚಾರ ಪ್ರಕರಣದ ವಿಚಾರಣೆ ಪೂರ್ಣಗೊಳಿಸಲು ಐದು ವರ್ಷ ಬೇಕಾಗಲಿವೆ ಎಂದು ಸೆಷನ್ಸ್ ನ್ಯಾಯಾಧೀಶರು, ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ.

ಪ್ರಮುಖ ಆರೋಪಿ ಆಶೀಶ್ ಮಿಶ್ರಾ ಜಾಮೀನು ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿ. ರಾಮಸುಬ್ರಮಣಿಯನ್ ಅವರಿದ್ದ ಪೀಠವು, ಇತರ ಆರೋಪಿಗಳು ಇನ್ನೂ ಬಂಧನದಲ್ಲಿದ್ದಾರೆಯೇ ಎನ್ನುವ ಮಾಹಿತಿ ನೀಡಲು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿ, ವಿಚಾರಣೆಯನ್ನು ಜ.19ಕ್ಕೆ ನಿಗದಿಪಡಿಸಿತು.

ಪ್ರಕರಣದಲ್ಲಿ 208 ಪ್ರಾಸಿಕ್ಯೂಷನ್ ಸಾಕ್ಷಿಗಳು, 171 ದಾಖಲೆಗಳು ಮತ್ತು ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ 27 ವರದಿಗಳಿವೆ ಎಂದು ಸೆಷನ್ಸ್ ನ್ಯಾಯಾಧೀಶರು, ಪತ್ರಮುಖೇನ ನೀಡಿರುವ ಮಾಹಿತಿಯನ್ನು ಪೀಠ ಗಮನಿಸಿತು.

ಮಹಿಳೆ ಮೇಲೆ ಮೂತ್ರ ವಿಸರ್ಜನೆ: ಆರೋಪಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದ ಹಿರಿಯ ಮಹಿಳೆ ಮೇಲೆ ಮದ್ಯದ ಅಮಲಿನಲ್ಲಿ ಮೂತ್ರ ವಿಸರ್ಜನೆ ಮಾಡಿದ್ದ ಪ್ರಕರಣದ ಆರೋಪಿ ಶಂಕರ್ ಮಿಶ್ರಾಗೆ ಇಲ್ಲಿನ ನ್ಯಾಯಾಲಯವು ಬುಧವಾರ ಜಾಮೀನು ನಿರಾಕರಿಸಿದೆ.

ಜಾಮೀನು ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋಮಲ್ ಗರ್ಗ್ ಅವರು, ‘ಈ ಹಂತದಲ್ಲಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವುದು ಸೂಕ್ತವಲ್ಲ’ ಎಂದರು.

‘ನನ್ನ ಕಕ್ಷಿದಾರರ ವರ್ತನೆಯು ಲೈಂಗಿಕ ಬಯಕೆಯಿಂದ ಕೂಡಿರಲಿಲ್ಲ. ದೂರುದಾರರ ಗೌರವಕ್ಕೆ ಚ್ಯುತಿ ತರುವ ದುರುದ್ದೇಶವನ್ನೂ ಹೊಂದಿರಲಿಲ್ಲ. ಅವರು ಈಗಾಗಲೇ ಸಾಕಷ್ಟು ನೊಂದಿದ್ದಾರೆ. ಅವರನ್ನು ಕೆಲಸದಿಂದಲೂ ವಜಾಗೊಳಿಸಲಾಗಿದೆ. ಹೀಗಾಗಿ ಜಾಮೀನು ಮಂಜೂರು ಮಾಡಬೇಕು’ ಎಂದು ಮಿಶ್ರಾ ಪರ ವಕೀಲರು ಮನವಿ ಮಾಡಿದ್ದರು.

ದೂರುದಾರ ಮಹಿಳೆ ಪರ ವಕೀಲರು ಜಾಮೀನು ನೀಡದಂತೆ ಒತ್ತಾಯಿಸಿದ್ದರು. ‘ನನ್ನ ಕಕ್ಷಿದಾರರಿಗೆ ಪ್ರತಿನಿತ್ಯವೂ ಬೆದರಿಕೆಯ ಸಂದೇಶಗಳನ್ನು ರವಾನಿಸಲಾಗುತ್ತಿದೆ. ಮನೆಗೆ ನುಗ್ಗಿ ಬೆದರಿಕೆ ಹಾಕಲಾಗಿದೆ’ ಎಂದು ತಿಳಿಸಿದ್ದರು.

ದೆಹಲಿ ಪೊಲೀಸರೂ ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿದ್ದರು.

‘ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಆರೋಪಿಯನ್ನು ಪೊಲೀಸರ ವಶಕ್ಕೆ ನೀಡಲು ನಿರಾಕರಿಸಿದ್ದು, ಅದರ ವಿರುದ್ಧ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ. ಇನ್ನೂ ಹಲವು ಮಂದಿ ಪ್ರತ್ಯಕ್ಷದರ್ಶಿಗಳನ್ನು ವಿಚಾರಣೆಗೆ ಒಳಪಡಿಸಬೇಕಿದೆ’ ಎಂದು ಪೊಲೀಸರ ಪರ ವಕೀಲರು ನ್ಯಾಯಪೀಠಕ್ಕೆ ಹೇಳಿದ್ದರು.

ವಿಮಾನ ನಿಲ್ದಾಣದಲ್ಲಿ ಮೂತ್ರ ವಿಸರ್ಜನೆ: ವ್ಯಕ್ತಿ ಬಂಧನ

ನವದೆಹಲಿ (ಪಿಟಿಐ): ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌–3ರ ನಿರ್ಗಮನ ಪ್ರದೇಶದ ಗೇಟ್ ಬಳಿ ಮೂತ್ರವಿಸರ್ಜನೆ ಮಾಡಿದ ಆರೋಪ ಸಂಬಂಧ 39 ವರ್ಷದ ವ್ಯಕ್ತಿಯೊಬ್ಬರನ್ನು ಬಂಧಿಸಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಹಾರ ನಿವಾಸಿ ಜೌಹಾರ್ ಅಲಿ ಖಾನ್ ಆರೋಪಿ. ಗೇಟ್ ಸಂಖ್ಯೆ–6ರ ಸಮೀಪ ಮೂತ್ರ ವಿಸರ್ಜನೆ ಮಾಡಿದ ಬಗ್ಗೆ ಭಾನುವಾರ ಸಂಜೆ ಮಾಹಿತಿ ಬಂದಿತ್ತು. ಕೂಡಲೇ ಅವರನ್ನು ಬಂಧಿಸಲಾಯಿತು. ಖಾನ್ ಮದ್ಯದ ಅಮಲಿನಲ್ಲಿದ್ದು, ಕಿರಿಚಾಡುತ್ತ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದ ಎಂದಿದ್ದಾರೆ.

ನ್ಯಾಯಾಂಗ ಅಧಿಕಾರ ವ್ಯಾಪ್ತಿ ತತ್ವ ಪಾಲಿಸುವ ನಿರೀಕ್ಷೆ ಇದೆ: ಬಿರ್ಲಾ

ಜೈಪುರ (ಪಿಟಿಐ): ‘ಸಂವಿಧಾನದಲ್ಲಿ ತಿಳಿಸಿದಂತೆ ಅಧಿಕಾರದ ಪ್ರತ್ಯೇಕತೆಯ ತತ್ವಗಳನ್ನು ನ್ಯಾಯಾಂಗ ಪಾಲಿಸುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ’ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದರು.

ಇಲ್ಲಿ ಬುಧವಾರ ನಡೆದ 83ನೇ ಅಖಿಲ ಭಾರತ ಸ್ಪೀಕರ್‌ಗಳ ಸಮ್ಮೇಳನದಲ್ಲಿ (ಎಐಪಿಒಸಿ) ಮಾತನಾಡಿದ ಅವರು, ‘ದೇಶದ ಶಾಸಕಾಂಗಗಳು ನ್ಯಾಯಾಂಗದ ಅಧಿಕಾರವನ್ನು ಸದಾ ಗೌರವಿಸಿವೆ. ನ್ಯಾಯಾಂಗವು ಕೂಡ ಸಂವಿಧಾನಬದ್ಧ ಅಧಿಕಾರಗಳ ಪ್ರತ್ಯೇಕತೆ ಮತ್ತು ಸಮತೋಲನದ ತತ್ವ ಪಾಲಿಸುವ ವಿಶ್ವಾಸವಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಾಮರಸ್ಯದ ಸಂಬಂಧ ಅಗತ್ಯ. ಪ್ರಜಾಪ್ರಭುತ್ವದ ಮೂರೂ ಅಂಗಗಳು ಪರಸ್ಪರ ಕಾಳಜಿ, ನಂಬಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಜನರ ದೃಷ್ಟಿಯಲ್ಲಿ ಶಾಸಕಾಂಗ ಸ್ವರೂಪದ ಪರಿಣಾಮಕಾರಿ ಸುಧಾರಣೆಯ ಅವಶ್ಯಕತೆಯೂ ಇದೆ ಎಂದು ಹೇಳಿದರು.

‘ಸಂಸತ್ತಿನ ಸಾರ್ವಭೌಮತ್ವ ರಾಜಿಗೆ ಅನುಮತಿಸಲ್ಲ’: ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನಗಳನ್ನು ರೂಪಿಸುವ ಸಂಸತ್ತೇ ಸಾರ್ವಭೌಮ. ಸಂಸತ್ತಿನ ಸಾರ್ವಭೌಮತ್ವ ದುರ್ಬಲಗೊಳಿಸಲು ಅಥವಾ ರಾಜೀಮಾಡಿಕೊಳ್ಳಲು ನ್ಯಾಯಾಂಗ ಅಥವಾ ಕಾರ್ಯಾಂಗಕ್ಕೆ ಅನುಮತಿಸುವುದಿಲ್ಲ’ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಮತ್ತೊಮ್ಮೆ ನ್ಯಾಯಾಂಗದ ಮೇಲೆ ಕಿಡಿಕಾರಿದ್ದಾರೆ.

ಸ್ಪೀಕರ್‌ಗಳ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಸಂಸತ್ತಿನ ಸಾರ್ವಭೌಮತ್ವ ಮತ್ತು ಸ್ವಾಯತ್ತತೆಯು ಪ್ರಜಾಪ್ರಭುತ್ವದ ಉಳಿವಿಗಾಗಿ ಅಗತ್ಯ. ಶಾಸನ ರಚನೆಯಲ್ಲಿ ನ್ಯಾಯಾಂಗವು ಮಧ್ಯಪ್ರವೇಶಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗದ (ಎನ್‌ಜೆಎಸಿ) ಕಾಯ್ದೆ ರದ್ದತಿ, ‘ಸಂಸತ್ತು ಸಂವಿಧಾನ ತಿದ್ದುಪಡಿ ಮಾಡಬಹುದು. ಆದರೆ ಅದರ ಮೂಲ ರಚನೆಯಲ್ಲ’ ಎಂದು ಸುಪ್ರೀಂ ಕೋರ್ಟ್ 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣದಲ್ಲಿ ನೀಡಿದ ತೀರ್ಪನ್ನು ಧನಕರ್ ಪ್ರಶ್ನಿಸಿದರು.

ಅಮೆರಿಕ: ವಿಮಾನ ಸಂಚಾರ ಅಸ್ತವ್ಯಸ್ತ

ವೈಮಾನಿಕ ಆಡಳಿತ ವ್ಯವಸ್ಥೆಯಲ್ಲಿ ತಾಂತ್ರಿಕ ಸಮಸ್ಯೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ವ್ಯವಸ್ಥೆಯಲ್ಲಿ ಬುಧವಾರ ಭಾರಿ ಪ್ರಮಾಣದ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ದೇಶದೊಳಗೆ ವಿಮಾನ ಸೇವೆ ಅಸ್ತವ್ಯಸ್ತಗೊಂಡಿತು.

ನೂರಾರು ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದರೆ, ಹಲವು ವಿಮಾನಗಳ ಹಾರಾಟವನ್ನು ವಿಳಂಬಗೊಳಿಸಲಾಯಿತು.

‘ದೇಶದಾದ್ಯಂತ ವಿಮಾನ ನಿಲ್ದಾಣಗಳಲ್ಲಿ ಏರ್‌ಮಿಷನ್ ಸಿಸ್ಟಮ್‌ನ ಸಮಸ್ಯೆಗಳಿಂದಾಗಿ ಪೈಲಟ್ ಮತ್ತು ಇತರ ಸಿಬ್ಬಂದಿಗೆ ಮಾಹಿತಿ ನೀಡುವುದಕ್ಕೆ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಯಿತು. ಇದರಿಂದಾಗಿ ಹಲವು ವಿಮಾನಗಳ ಹಾರಾಟ ರದ್ದುಪಡಿಸಲಾಯಿತು. ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಲು ಯತ್ನಿಸಲಾಗುತ್ತಿದೆ’ ಎಂದು ಎಫ್‌ಎಎ ಪ್ರಕಟಣೆ ತಿಳಿಸಿದೆ.

ಸೈಬರ್ ದಾಳಿ ಅಲ್ಲ: ‘ಸೈಬರ್ ದಾಳಿಯ ಯಾವುದೇ ಪುರಾವೆಗಳಿಲ್ಲ, ಆದರೆ ಕಾರಣಗಳ ಬಗ್ಗೆ ಸಂಪೂರ್ಣ ತನಿಖೆ ನಡೆಸಲು ಅಧ್ಯಕ್ಷ ಜೋ ಬೈಡನ್ ಅವರು ಸಾರಿಗೆ ಇಲಾಖೆಗೆ ನಿರ್ದೇಶನ ನೀಡಿದ್ದಾರೆ’ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್-ಪಿಯರ್ ಟ್ವೀಟ್ ಮಾಡಿದ್ದಾರೆ.



ಲಾಸ್ ಏಂಜಲೀಸ್ ವಿಮಾನನಿಲ್ದಾಣದಲ್ಲಿ ತಮ್ಮ ವಿಮಾನಕ್ಕಾಗಿ ಕಾಯುತ್ತಾ ಕುಳಿತಿದ್ದ ಪ್ರಯಾಣಿಕರು – ಎಎಫ್‌ಪಿ ಚಿತ್ರ

ಅಮೆರಿಕದಲ್ಲಿ 5,400ಕ್ಕೂ ಹೆಚ್ಚು ವಿಮಾನಗಳ ಸಂಚಾರ ವಿಳಂಬವಾಗಿದ್ದು, 550 ವಿಮಾನ ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ವಿಮಾನಗಳ ಸಂಚಾರ ಮೇಲ್ವಿಚಾರಣಾ ಸಂಸ್ಥೆ ‘ಫ್ಲೈಟ್‌ಅವೇರ್’ ತಿಳಿಸಿದೆ.

‘ಭಾರತ್ ಜೋಡೊ ಯಾತ್ರೆ’ ಸಮಾರೋಪಕ್ಕೆ 21 ಪಕ್ಷಗಳಿಗೆ ಆಹ್ವಾನ ನೀಡಿದ ಕಾಂಗ್ರೆಸ್

ಸಮಾನ ಮನಸ್ಕ ನಾಯಕರಿಗೆ ಖರ್ಗೆ ಪತ್ರ

ನವದೆಹಲಿ: ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಜ. 30ರಂದು ನಡೆಯಲಿರುವ ‘ಭಾರತ್ ಜೋಡೊ’ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ತೃಣಮೂಲ ಕಾಂಗ್ರೆಸ್, ಸಮಾಜವಾದಿ, ಡಿಎಂಕೆ, ಸಿಪಿಎಂ, ಸಿಪಿಐ, ಶಿವಸೇನಾ ಹಾಗೂ ಬಿಎಸ್‌ಪಿ ಸೇರಿದಂತೆ 21 ಸಮಾನ ಮನಸ್ಕ ಪಕ್ಷಗಳ ನಾಯಕರನ್ನು ಕಾಂಗ್ರೆಸ್ ಆಹ್ವಾನಿಸಿದೆ. ಆದರೆ ಎಎಪಿ, ಜೆಡಿಎಸ್, ಬಿಆರ್‌ಎಸ್, ಬಿಜೆಡಿ ಮತ್ತು ಅಕಾಲಿ ದಳ ಪಕ್ಷಗಳಿಗೆ ಆಹ್ವಾನ ನೀಡಿಲ್ಲ.

ಆರ್‌ಜೆಡಿಯಿಂದ ಲಾಲು ಪ್ರಸಾದ್, ತೇಜಸ್ವಿ ಯಾದವ್, ನ್ಯಾಷನಲ್ ಕಾನ್ಫರೆನ್ಸ್‌ನಿಂದ ಫಾರೂಕ್ ಅಬ್ದುಲ್ಲಾ ಮತ್ತು ಒಮರ್ ಅಬ್ದುಲ್ಲಾ ಇಬ್ಬರನ್ನೂ ಆಹ್ವಾನಿಸಲಾಗಿದೆ. ಆಹ್ವಾನಿತರ ಪಟ್ಟಿಯಲ್ಲಿ ಹಿರಿಯ ನಾಯಕ ಶರದ್ ಯಾದವ್ ಅವರು ಕೂಡ ಇದ್ದಾರೆ.

21 ಸಮಾನ ಮನಸ್ಕ ಪಕ್ಷಗಳ ಅಧ್ಯಕ್ಷರಿಗೆ ಪತ್ರ ಬರೆದಿರುವ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಯಾತ್ರೆಯ ಆರಂಭದಿಂದಲೂ ಕಾಂಗ್ರೆಸ್ ಸಮಾನ ಮನಸ್ಕ ಪಕ್ಷಗಳ ಭಾಗವಹಿಸುವಿಕೆಯನ್ನು ಕೋರಿದೆ.



ರಾಹುಲ್ ಗಾಂಧಿ ಅವರು ಪಂಜಾಬ್‌ನ ಫತೇಹ್‌ಗಢ ಸಾಹಿಬ್‌ನಲ್ಲಿ ಸಾವಿರಾರು ಬೆಂಬಲಿಗರೊಂದಿಗೆ ಹೆಜ್ಜೆ ಹಾಕಿದರು –ಪಿಟಿಐ ಚಿತ್ರ

ಪಕ್ಷದ ಮುಖಂಡ ರಾಹುಲ್ ಗಾಂಧಿಯವರ ಆಹ್ವಾನದ ಮೇರೆಗೆ ಹಲವು ರಾಜಕೀಯ ಪಕ್ಷಗಳ ಮುಖಂಡರು ವಿವಿಧ ಹಂತಗಳಲ್ಲಿ ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ. ಸಮಾರೋಪದಲ್ಲಿ ಪಾಲ್ಗೊಳ್ಳುವ ನಾಯಕರ ಉಪಸ್ಥಿತಿಯು ಯಾತ್ರೆಯ ಉದ್ದೇಶವಾಗಿರುವ ಸತ್ಯ, ಅಹಿಂಸೆ ಮತ್ತು ಕರುಣೆಯ ಸಂದೇಶವನ್ನು ಬಲಪಡಿಸುತ್ತದೆ’ ಎಂದು ಹೇಳಿದ್ದಾರೆ.

2022ರ ಸೆ.7ರಂದು ಕನ್ಯಾಕುಮಾರಿಯಿಂದ ಆರಂಭವಾದ ಭಾರತ್ ಜೋಡೊ ಯಾತ್ರೆಯು ಜ. 30ರಂದು ಶ್ರೀನಗರದಲ್ಲಿ ಮುಕ್ತಾಯಗೊಳ್ಳಲಿದೆ.

‘ದೇಶ ಸೋದರತ್ವ, ಏಕತೆ ಪರವಾಗಿದೆ’

ಫತೇಹ್‌ಗಢ ಸಾಹಿಬ್ (ಪಂಜಾಬ್) (ಪಿಟಿಐ): ಬಿಜೆಪಿ ದೇಶದಲ್ಲಿ ಭಯ ಮತ್ತು ದ್ವೇಷವನ್ನು ಹರಡುತ್ತಿದೆ. ಆದರೆ ಭಾರತವು ಸಹೋದರತ್ವ, ಏಕತೆ ಮತ್ತು ಗೌರವದ ಪರವಾಗಿದೆ. ಹಾಗಾಗಿಯೇ ‘ಭಾರತ್ ಜೋಡೊ ಯಾತ್ರೆ’ ಯಶಸ್ವಿಯಾಗಿ ಸಾಗುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಹೇಳಿದರು.

ಪಂಜಾಬಿನಿಂದ ಯಾತ್ರೆ ಆರಂಭಿಸುವ ಮೊದಲು ಅವರು ಇಲ್ಲಿನ ಗುರುದ್ವಾರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಅವರು ಟರ್ಬನ್ ಧರಿಸಿದ್ದರು. ನಂತರ ರೌಜಾ ಷರೀಫ್ ದರ್ಗಾಕ್ಕೆ ಭೇಟಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಬಡ್ಡಿ ರಹಿತ ಸಾಲ: ₹395 ಕೋಟಿ ಬಿಡುಗಡೆ

ಹೈದರಾಬಾದ್: ಆಂಧ್ರಪ್ರದೇಶ ಸರ್ಕಾರವು ಸಣ್ಣ ವ್ಯಾಪಾರಿಗಳು ಹಾಗೂ ಕುಶಲಕರ್ಮಿಗಳಿಗೆ ಬ್ಯಾಂಕ್ ಮೂಲಕ ಬಡ್ಡಿ ರಹಿತ ಸಾಲ ನೀಡಲು ‘ಜಗನಣ್ಣ ಥೋಡು’ ಎಂಬ ಯೋಜನೆ ಜಾರಿಗೊಳಿಸಿದ್ದು, ಇದಕ್ಕಾಗಿ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ಬುಧವಾರ ₹395 ಕೋಟಿ ಮೊತ್ತ ಬಿಡುಗಡೆ ಮಾಡಿದ್ದಾರೆ.

ಮಹಾರಾಷ್ಟ್ರದ ಹಲವೆಡೆ ಇ.ಡಿ ಶೋಧ

ನವದೆಹಲಿ (ಪಿಟಿಐ): ಎನ್‌ಸಿಪಿ ಶಾಸಕ ಹಸನ್ ಮುಶ್ರಿಫ್ ಮತ್ತಿತರರ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ಭಾಗವಾಗಿ ಮಹಾರಾಷ್ಟ್ರದ ಹಲವೆಡೆ ಜಾರಿ ನಿರ್ದೇಶನಾಲಯ ಬುಧವಾರ ಶೋಧ ಕಾರ್ಯಾಚರಣೆ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಶ್ರಿಫ್ ಗೆ ಸಂಬಂಧಿಸಿದ ರಾಜ್ಯದ ಕೆಲವು ಸಕ್ಕರೆ ಕಾರ್ಖಾನೆಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಬೆಳಿಗ್ಗೆ 6.30ರಿಂದ ಮುಂಬೈ, ಪುಣೆ ಮತ್ತು ಕೊಲ್ಹಾಪುರ ಮತ್ತಿತರ ಕಡೆಗಳಲ್ಲಿ ಅಧಿಕಾರಿಗಳು ಶೋಧ ನಡೆಸಿದರು ಎಂದು ತಿಳಿಸಿದರು. ಈ ಮಧ್ಯೆ ಮುಶ್ರಿಫ್ ಅವರು, ಜಾರಿ ನಿರ್ದೇಶನಾಲಯದ ಕಾರ್ಯಾಚರಣೆಗೆ ಅಡ್ಡಿಪಡಿಸದಂತೆ ತಮ್ಮ ಬೆಂಬಲಿಗರಿಗೆ ಮನವಿ ಮಾಡಿ ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಸಂದೇಶವನ್ನು ಹಂಚಿಕೊಂಡಿದ್ದಾರೆ.

ಆತ್ಮಾಹುತಿ ಬಾಂಬ್ ಸ್ಫೋಟದಲ್ಲಿ 20ಕ್ಕೂ ಅಧಿಕ ಸಾವು

ಕಾಬೂಲ್ (ಎಎಫ್‌ಪಿ): ಇಲ್ಲಿನ ವಿದೇಶಾಂಗ ಸಚಿವಾಲಯ ಕಚೇರಿ ಬಳಿ ಬುಧವಾರ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, 20ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ.

‘ಸಚಿವಾಲಯ ಕಟ್ಟಡದ ಹೊರಗೆ ರಸ್ತೆಯಲ್ಲಿ ಜನ ಮಲಗಿರುವ ದೃಶ್ಯಗಳು ಕಂಡುಬರುತ್ತಿದ್ದು, ಇದರಲ್ಲಿ ಎಷ್ಟು ಜನ ಜೀವಂತವಾಗಿದ್ದಾರೆ ಎಂದು ತಿಳಿದಿಲ್ಲ. ಬಾಂಬರ್ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದನ್ನು ನಾನು ನೋಡಿದ್ದೇನೆ’ ಎಂದು ಎಎಫ್‌ಪಿ ಸುದ್ದಿಸಂಸ್ಥೆಯ ಚಾಲಕ ಜಮ್ಶೆಡ್ ಕರಿಮಿ ಹೇಳಿದ್ದಾರೆ.

ಉಕ್ರೇನ್ ಸೊಲೆದಾರ್ ಪಟ್ಟಣ ಸುತ್ತುವರಿದ ರಷ್ಯಾ

ಮಾಸ್ಕೊ (ರಾಯಿಟರ್ಸ್): ರಷ್ಯಾದ ಯುದ್ಧ ವಿಮಾನಗಳು ಪೂರ್ವ ಉಕ್ರೇನ್‌ನ ಸೊಲೆದಾರ್ ಪಟ್ಟಣವನ್ನು ಸುತ್ತುವರಿದಿರುವುದಾಗಿ ರಷ್ಯಾದ ರಕ್ಷಣಾ ಸಚಿವಾಲಯ ಬುಧವಾರ ತಿಳಿಸಿದೆ. ರಷ್ಯಾದ ಯುದ್ಧ ವಿಮಾನಗಳು ಉಕ್ರೇನ್‌ನ ಈ ಪಟ್ಟಣದ ಮೇಲೆ ದಾಳಿ ನಡೆಸಿ, ಹಾನಿ ಮಾಡಿದೆ ಎಂದು ರಷ್ಯಾದ ಏಜೆನ್ಸಿಗಳು ವರದಿ ಮಾಡಿವೆ.

ಉಕ್ರೇನ್‌ನ ಸಣ್ಣ ಪಟ್ಟಣಗಳಲ್ಲಿ ಒಂದಾದ ಸೊಲೆದಾರ್ ಅನ್ನು ವಶಪಡಿಸಿಕೊಳ್ಳಲು ರಷ್ಯಾದ ಸೇನೆ ಹೋರಾಡುತ್ತಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ಆದರೆ ಸೊಲೆದಾರ್‌ನ ವಿಜಯವನ್ನು ಘೋಷಿಸಲು ಆತುರ ಪಡಬೇಡಿ ಎಂದು ಕ್ರೆಮ್ಲಿನ್ ಬುಧವಾರ ತನ್ನ ರಕ್ಷಣಾ ಪಡೆಗಳಿಗೆ ಸೂಚಿಸಿದೆ. ‘ಈ ಸಂಬಂಧ ಯಾವುದೇ ಆತುರ ಮಾಡಬೇಡಿ. ಅಧಿಕೃತ ಹೇಳಿಕೆಯನ್ನು ನಿರೀಕ್ಷಿಸಿ’ ಎಂದು ಕ್ರೆಮ್ಲಿನ್‌ನ ವಕ್ತಾರ ಡಮಿಟ್ರಿ ಪೆಸ್ಕೊವ್ ತಿಳಿಸಿದ್ದಾರೆ. ರಷ್ಯಾದ ಈ ಹೇಳಿಕೆ ‘ಸುಳ್ಳು’ ಎಂದು ಉಕ್ರೇನ್ ಸುದ್ದಿವಾಹಿನಿಯೊಂದು ವರದಿ ಮಾಡಿದೆ.

ಗುರುವಾರ, ಜನವರಿ 12, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ವಾಗತ
ನವದೆಹಲಿಯಲ್ಲಿ ಬುಧವಾರ ಎನ್‌ಸಿಸಿ ಕೆಡೆಟ್‌ಗಳಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರು

ಬಜೆಟ್‌ನಲ್ಲಿ ವಿದ್ಯುತ್ ಚಿತಾಗಾರ ವ್ಯವಸ್ಥೆ ಹೆಚ್ಚಿಸಲು ಕ್ರಮ: ಬಸವರಾಜ ಬೊಮ್ಮಾಯಿ ಭರವಸೆ

ಸ್ಮಶಾನ ಕಾರ್ಮಿಕರಿಗೆ ಸೇವಾ ಭದ್ರತೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸ್ಮಶಾನ ಭೂಮಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು 'ಸತ್ಯ ಹರಿಶ್ಚಂದ್ರ ಬಳಗ' ಎಂದು ಗುರುತಿಸಿ, ಪೌರ ಕಾರ್ಮಿಕರ ಸ್ಥಾನಮಾನ ನೀಡಲಾಗುವುದು. ಸೇವಾ ಭದ್ರತೆ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರೇಸ್‌ಕೋರ್ಸ್ ರಸ್ತೆಯ ತಮ್ಮ ನಿವಾಸದಲ್ಲಿ ಬುಧವಾರ ಸ್ಮಶಾನ ಕಾರ್ಮಿಕರ ಜತೆ ಉಪಾಹಾರ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ಬಿಬಿಎಂಪಿ ವ್ಯಾಪ್ತಿಯ 130 ಸ್ಮಶಾನ ಕಾರ್ಮಿಕರಿಗೆ ಈಗಾಗಲೇ ಪೌರ ಕಾರ್ಮಿಕರ ಸ್ಥಾನಮಾನ ನೀಡಿ, ಮಾಸಿಕ ₹ 14,400 ವೇತನ ನೀಡಲಾಗುತ್ತಿದೆ. ರಾಜ್ಯದ ಇತರೆ ಜಿಲ್ಲೆಗಳಲ್ಲಿರುವ ಸುಮಾರು 300 ಕಾರ್ಮಿಕರಿಗೂ ಸೌಲಭ್ಯ ನೀಡಲಾಗುವುದು ಎಂದು ಭರವಸೆ ನೀಡಿದರು.

'ಒಂದು ಕಾರ್ಯಕ್ರಮಕ್ಕೆ ಹೋದಾಗ ಸ್ಮಶಾನ ಕಾರ್ಮಿಕರೊಬ್ಬರ ಪರಿಸ್ಥಿತಿ ತಿಳಿದುಕೊಂಡೆ. ಏನಾದರೂ ಮಾಡಬೇಕು ಎಂದು ಅಂದೇ ನಿರ್ಧರಿಸಿದೆ. ಇದುವರೆಗೂ ಯಾವ ಸರ್ಕಾರಗಳೂ ಅವರನ್ನು ಗಮನಿಸಿಲ್ಲ. ಜನಪರ ಸರ್ಕಾರ ಇದ್ದಾಗ ಮಾತ್ರ ಈ ರೀತಿಯ ಆಲೋಚನೆ ಮಾಡಲು ಸಾಧ್ಯ ಎಂದರು.



ಬೆಂಗಳೂರಿನ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಸ್ಮಶಾನ ಕಾರ್ಮಿಕರ ಜತೆ ಉಪಾಹಾರ ಸೇವಿಸಿದರು. ಕೋಟ ಶ್ರೀನಿವಾಸ ಪೂಜಾರಿ, ಸ್ಮಶಾನ ಕಾರ್ಮಿಕರಾದ ಎ.ಸೌರಿರಾಜು, ಪದ್ಮಮ್ಮ ಸಚಿವ ಗೋವಿಂದ ಕಾರಜೋಳ ಇದ್ದಾರೆ – ಪ್ರಜಾವಾಣಿ ಚಿತ್ರ

ವಿದ್ಯುತ್ ಚಿತಾಗಾರಕ್ಕೆ ಆದ್ಯತೆ: ಕೋವಿಡ್ ಸಮಯದಲ್ಲಿ ಚಿತಾಗಾರಗಳ ಮುಂದೆ ಸರದಿ ಸಾಲು ಕಂಡು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬೆಂಗಳೂರಿಗೆ ವಿದ್ಯುತ್ ಚಿತಾಗಾರ ಹೆಚ್ಚಳಕ್ಕೆ ಸೂಚಿಸಿದ್ದರು. ಈ ವರ್ಷದ ಬಜೆಟ್‌ನಲ್ಲಿ ಚಿತಾಗಾರ ವ್ಯವಸ್ಥೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಆಶ್ವಾಸನೆ ನೀಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಉಪಸ್ಥಿತರಿದ್ದರು.

ಪೂಜಾ ಸ್ಥಳದಲ್ಲಿ ಹರಿಶ್ಚಂದ್ರನ ಪ್ರತಿಮೆ

ಸ್ಮಶಾನ ಕಾರ್ಮಿಕರು ನೀಡಿದ ಕೋಲು ಹಿಡಿದು ನಿಂತ ಭಂಗಿಯ ಸತ್ಯ ಹರಿಶ್ಚಂದ್ರನ ಪ್ರತಿಮೆ ನೋಡಿ ಭಾವುಕರಾದ ಮುಖ್ಯಮಂತ್ರಿ, 'ನನಗೆ ಇದುವರೆಗೆ ಸಾಕಷ್ಟು ಪುತ್ಥಳಿಗಳು ಬಂದಿವೆ. ಹರಿಶ್ಚಂದ್ರ ಪುತ್ಥಳಿ ನೀಡಿರಲಿಲ್ಲ. ಮನಸಿಗೆ ಅತ್ಯಂತ ಹತ್ತಿರವಾದ ಸ್ಮರಣಿಕೆ. ಇದನ್ನು ಪ್ರತಿ ದಿನ ಪೂಜಿಸುವ ಸ್ಥಳದಲ್ಲಿ ಇಟ್ಟುಕೊಳ್ಳುತ್ತೇನೆ' ಎಂದರು.

ಬೇಡಿಕೆ ಈಡೇರಿಕೆಗೆ ಕೋರಿಕೆ

ವೇತನ ಹೆಚ್ಚಳ, ಸೇವಾ ಭದ್ರತೆ ಸೇರಿದಂತೆ ಸ್ಮಶಾನ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸಲು ಕೋರಿ ಪ್ರಬುದ್ಧ ಡಾ.ಬಿ.ಆರ್.ಅಂಬೇಡ್ಕರ್ ರುದ್ರಭೂಮಿ ಮತ್ತು ವಿದ್ಯುತ್ ಚಿತಾಗಾರ ನೌಕರರ ಸಂಘದ ಮುಖಂಡರು ಮುಖ್ಯಮಂತ್ರಿಗೆ ಮನವಿ ಮಾಡಿದರು. ನಿವೃತ್ತಿ ನಂತರ ತಮ್ಮ ಕುಟುಂಬದ ಸದಸ್ಯರಿಗೇ ಉದ್ಯೋಗ ನೀಡಬೇಕು. ಸ್ವಂತ ಮನೆ ಕಟ್ಟಿಕೊಡಬೇಕು. ಆರೋಗ್ಯ ಸೌಲಭ್ಯ ಒದಗಿಸಬೇಕು. ಮಕ್ಕಳ ವಿದ್ಯಾಭ್ಯಾಸ, ಮದುವೆಗೆ ಸಹಾಯ ಸೇರಿದಂತೆ ಪೌರ ಕಾರ್ಮಿಕರಿಗೆ ನೀಡುವ ಎಲ್ಲ ಸವಲತ್ತು ಒದಗಿಸಬೇಕು ಎಂದು ಬೇಡಿಕೆ ಸಲ್ಲಿಸಿದರು.

ಸುದ್ದಿ 2 ನಿಮಿಷ

ಆಸ್ತಿ ಮುಟ್ಟುಗೋಲು ಅಸಾಧ್ಯ: ರೆಡ್ಡಿ

ಗಂಗಾವತಿ (ಕೊಪ್ಪಳ ಜಿಲ್ಲೆ): 'ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಹೊಸ ಪಕ್ಷ ಸ್ಥಾಪಿಸಿ 16 ದಿನ ಆಗುವಷ್ಟರಲ್ಲಿ ಸಿಬಿಐ ಆಸ್ತಿ ಮುಟ್ಟುಗೋಲಿಗೆ ಮುಂದಾಗಿದೆ. ಯಾರಿಂದಲೂ ಮುಟ್ಟುಗೋಲು ಹಾಕಲು ಆಗದು' ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು.



ನಗರದಲ್ಲಿ ಬುಧವಾರ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬಂಧನದ ವೇಳೆ ಸಿಬಿಐ ಅಧಿಕಾರಿಗಳು ನನ್ನಿಂದ ₹ 1,200 ಕೋಟಿ ಜಪ್ತಿ ಮಾಡಿ, ಪ್ರಕರಣ ದಾಖಲಿಸಿದ್ದರು. ಜಪ್ತಿಯಾದ ಆಸ್ತಿ ಮೌಲ್ಯ ₹ 4 ಸಾವಿರ ಕೋಟಿ ಆಗಿದೆ. ಹೀಗಾಗಿ ಚುನಾವಣೆ ಖರ್ಚಿಗೆ ಯಾವುದೇ ಸಮಸ್ಯೆ ಆಗದು' ಎಂದರು.

'ಯಾರನ್ನೂ ಹೆದರಿಸಿ ಹಣ ಹೊಡೆದಿಲ್ಲ. ಸ್ವಂತ ಶ್ರಮದಿಂದ ಆಸ್ತಿ ಗಳಿಸಿದ್ದೇನೆ. ಜೈಲಿನಲ್ಲಿ ಕಿರಿದಾದ ಕೊಠಡಿಯಲ್ಲಿ 4 ವರ್ಷ ಕಳೆದಿದ್ದೇನೆ. ಯಾರಿಗೂ ಹೆದರುವುದಿಲ್ಲ. ಅಕ್ರಮ ಆಸ್ತಿ ಪ್ರಕರಣದ ಆರೋಪದಿಂದ ಮುಕ್ತನಾಗುವೆ. ನಂತರವೇ ಉಸಿರು ಬಿಡುವೆ' ಎಂದರು.

ಇನ್ನೂ ಕೆಲವರು ಜೆಡಿಎಸ್ ಬಿಡುತ್ತಾರೆ: ಎಸ್.ಆರ್.ಶ್ರೀನಿವಾಸ್

ತುಮಕೂರು: 'ನನ್ನ ಜತೆಗೆ ಜೆಡಿಎಸ್‌ನ ಇನ್ನೂ ಮೂರ್‍ನಾಲ್ಕು ಶಾಸಕರು ಪಕ್ಷ ಬಿಡಲಿದ್ದಾರೆ. ಅದು ಮುಂದಿನ ದಿನಗಳಲ್ಲಿ ನಿರ್ಧಾರವಾಗಲಿದೆ. ಯಾರೆಲ್ಲ ಪಕ್ಷ ತೊರೆಯುತ್ತಾರೆ ಎಂಬುದು ಸಮಯ ಬಂದಾಗ ಗೊತ್ತಾಗುತ್ತದೆ' ಎಂದು ಗುಬ್ಬಿಯ ಜೆಡಿಎಸ್ ಶಾಸಕ ಎಸ್.ಆರ್.ಶ್ರೀನಿವಾಸ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಲವರು ಪಕ್ಷ ಬಿಡುವ ಬಗ್ಗೆ ನನ್ನ ಜತೆಗೆ ಮಾತುಕತೆ ನಡೆಸಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಸಹ ಪಕ್ಷ ತೊರೆಯಲು ಸಿದ್ಧರಾಗಿದ್ದರು. ಕೊನೆಗೆ ಜೆಡಿಎಸ್‌ನಲ್ಲಿಯೇ ಉಳಿದುಕೊಂಡರು. ಹಾಗಾಗಿ ಈಗಲೇ ಏನನ್ನೂ ಹೇಳಲಾಗದು. ಆದರೆ ನಾನು ಮಾತ್ರ ಜೆಡಿಎಸ್‌ಗೆ ಮತ್ತೆ ಹೋಗುವ ಪ್ರಶ್ನೆಯೇ ಇಲ್ಲ' ಎಂದು ಖಚಿತಪಡಿಸಿದರು.

'ಜೆಡಿಎಸ್ ಚಿಹ್ನೆ ಮೇಲೆ ಆಯ್ಕೆಯಾಗಿದ್ದ ನನ್ನನ್ನು ಪಕ್ಷದಿಂದ ಹೊರಗೆ ಹಾಕಿದ್ದಾರೆ. ಹಾಗಾಗಿ ಮತ್ತೆ ಆ ಪಕ್ಷಕ್ಕೆ ಮರಳುವುದಿಲ್ಲ. ಕಾಂಗ್ರೆಸ್ ಸೇರುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ. ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ದೇಶದ ಪ್ರಜೆಯಾಗಿ ಸೌಜನ್ಯಕ್ಕಾಗಿ ಪಾಲ್ಗೊಂಡಿದ್ದೆ. ಗೌರವಯುತವಾಗಿ ನಡೆಸಿಕೊಳ್ಳುವ ಪಕ್ಷ ಸೇರುತ್ತೇನೆ. ಇಲ್ಲವಾದರೆ ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮೆಟ್ರೊ ದುರಂತ: ತಾಯಿ, ಮಗು ಅಂತ್ಯಕ್ರಿಯೆ

ದಾವಣಗೆರೆ: ಬೆಂಗಳೂರಿನ ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ನಿರ್ಮಿಸಲು ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದು ಮೃತಪಟ್ಟಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಲೋಹಿತ್ ಕುಮಾರ್ ಸುಲಾಖೆ ಅವರ ಪತ್ನಿ ತೇಜಸ್ವಿನಿ ಮತ್ತು ಪುತ್ರ ವಿಹಾನ್ ಅವರ ಅಂತ್ಯಕ್ರಿಯೆ ನಗರದಲ್ಲಿ ಬುಧವಾರ ನೆರವೇರಿತು.

ತೇಜಸ್ವಿನಿ ಅಂತ್ಯಕ್ರಿಯೆ ಇಲ್ಲಿನ ವೈಕುಂಠ ಧಾಮದಲ್ಲಿ ಹಾಗೂ ವಿಹಾನ್ ಅಂತಿಮ ಸಂಸ್ಕಾರ ಇಲ್ಲಿನ ಶಾಮನೂರು ರಸ್ತೆಯಲ್ಲಿನ ರುದ್ರಭೂಮಿಯಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವಿಧಿ ವಿಧಾನದಂತೆ ಪ್ರತ್ಯೇಕವಾಗಿ ನಡೆಯಿತು.

ಮೃತ ದೇಹಗಳನ್ನು ಬೆಳಗಿನ ಜಾವ ದಾವಣಗೆರೆಯ ಬಸವೇಶ್ವರ ನಗರದಲ್ಲಿನ ಮನೆಗೆ ತರಲಾಯಿತು. ಅಂತ್ಯ ಸಂಸ್ಕಾರದ ವೇಳೆ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ಮೂವರು ಮಕ್ಕಳಿಗೆ ವಿಷಕೊಟ್ಟು ತಾಯಿ ಆತ್ಮಹತ್ಯೆ

ರಾಂಪುರ: ಬಾಗಲಕೋಟೆ ತಾಲ್ಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಬುಧವಾರ ಮಹಿಳೆಯೊಬ್ಬರು ವಿಷ ಕುಡಿದು, ಮೂವರು ಮಕ್ಕಳಿಗೂ ವಿಷ ಕುಡಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ರೇಖಾ ಅರ್ಜುನ್ ಬಗಲಿ (30), ಮಕ್ಕಳಾದ ಸನ್ನಿಧಿ (7), ಶ್ರೀನಿಧಿ (5) ಸಮೃದ್ಧಿ (2) ಮೃತರು.

'ತಂಪು ಪಾನೀಯದಲ್ಲಿ ವಿಷ ಬೆರೆಸಿ ಮಕ್ಕಳಿಗೆ ಕುಡಿಸಿದ ರೇಖಾ, ತಾವೂ ಕುಡಿದಿದ್ದಾರೆ. ರೇಖಾ, ಸನ್ನಿಧಿ, ಸಮೃದ್ಧಿ ಮನೆಯಲ್ಲಿಯೇ ಮೃತರಾಗಿದ್ದರೆ, ಶ್ರೀನಿಧಿ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಳಾಗಿದ್ದಾಳೆ' ಎಂದು ಗ್ರಾಮೀಣ ಪೊಲೀಸ್ ಠಾಣೆ ಪಿಎಸ್‌ಐ ಜನಾರ್ದನ 'ಪ್ರಜಾವಾಣಿ' ತಿಳಿಸಿದ್ದಾರೆ.

ಬಹಳ ಹೊತ್ತಿನಿಂದ ಮನೆಯ ಬಾಗಿಲು ತೆರೆಯದ್ದರಿಂದ ಪಕ್ಕದ ಮನೆಯವರು ಕಿಟಕಿ ಮೂಲಕ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಮನೆ ಬಾಗಿಲು ಮುರಿದು ಒಳಗೆ ಹೋದಾಗ ಶ್ರೀನಿಧಿ ಮಾತ್ರ ಬದುಕಿದ್ದಳು. ಪತಿ ಅರ್ಜುನ್ ಕಬ್ಬು ಕಟಾವು ಕೆಲಸಕ್ಕೆ ಹೋಗುತ್ತಿದ್ದಾರೆ. ಪತಿಗೆ ಬುತ್ತಿ ಕಟ್ಟಿಕೊಟ್ಟು ಕಳುಹಿಸಿದ ಮೇಲೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಾಯಿಗೆ ಹುಲಿಯಂತೆ ಬಣ್ಣ ಬಳಿದಿರುವುದು

ಬೆಳೆ ರಕ್ಷಣೆಗೆ ತಂತ್ರ: ನಾಯಿಗೆ ಹುಲಿ ವೇಷ!

ಚಾಮರಾಜನಗರ: ಕೋತಿಗಳ ಉಪಟಳದಿಂದ ಬೆಳೆಗಳನ್ನು ರಕ್ಷಿಸಲು ತಾಲ್ಲೂಕಿನ ಅಜ್ಜೀಪುರದ ರೈತ ಮಂಜು ವಿನೂತನ ಉಪಾಯವನ್ನು ಕಂಡುಕೊಂಡಿದ್ದಾರೆ. ಸಾಕು ನಾಯಿಗೆ ಹುಲಿಯ ಬಣ್ಣ ಬಳಿದು ಕೋತಿಗಳನ್ನು ಹೆದರಿಸಿ ಓಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅವರ ವಿಲಕ್ಷಣ ಉಪಾಯದಿಂದ ಎಲ್ಲರಲ್ಲೂ ಬೆರಗು ಹುಟ್ಟಿಸಿದ್ದಾರೆ. ಹುಲಿಯ ವೇಷ ಧರಿಸಿರುವ ನಾಯಿಯ ಚಿತ್ರ ಹಾಗೂ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ತಾಲ್ಲೂಕಿನ ಅಜ್ಜೀಪುರದ ಹೊರವಲಯದಲ್ಲಿರುವ ತೋಟಗಳಿಗೆ ಕೋತಿಗಳ ಉಪಟಳ ವಿಪರೀತವಾಗಿದ್ದು, ಅವುಗಳನ್ನು ಕಾಯುವುದೇ ದೊಡ್ಡ ಸವಾಲಿನ ಕೆಲಸವಾಗಿತ್ತು. ಕೋತಿಗಳನ್ನು ಓಡಿಸಲು ಮಂಜು ಕಂಡುಕೊಂಡ ಉಪಾಯ ಫಲ ನೀಡುತ್ತಿದೆ. ಜಮೀನಿನಲ್ಲಿ ಬೆಳೆದಿದ್ದ ಬೆಳೆ, ತೆಂಗಿನ ಕಾಯಿಗಳನ್ನು ಹಾಳು ಮಾಡುತ್ತಿದ್ದ ಕೋತಿಗಳು ಈಗ ನಾಯಿ ನೋಡಿ ಹೆದರಿ ದೂರ ಸರಿದಿವೆ. ಬೆಳೆ ರೈತನ ಕೈ ಸೇರುತ್ತಿದೆ. ಕಾಡಿನ ಸಮೀಪದ ಜಮೀನುಗಳಲ್ಲಿ ನಾಯಿ ಓಡಾಡುತ್ತಿದ್ದು, ಹುಲಿ ವೇಷದ ನಾಯಿ ಕಂಡು ಬೆಚ್ಚಿ ಬಿದ್ದವರಿದ್ದಾರೆ. ನಿಜಾಂಶ ಗೊತ್ತಾದ ಬಳಿಕ ನಿಟ್ಟುಸಿರು ಬಿಟ್ಟಿದ್ದಾರೆ.

ಹೆದ್ದಾರಿಯಿಂದ 500 ಮೀ. ಆಚೆ ಹೊಸ ಮದ್ಯದಂಗಡಿ

ಮದ್ಯ: ವಯಸ್ಸಿನ ಮಿತಿ 18ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡುವಂತಿಲ್ಲ ಎಂಬ ನಿರ್ಬಂಧವನ್ನು ಸಡಿಲಿಸಿ ವಯಸ್ಸಿನ ಮಿತಿಯನ್ನು 18 ವರ್ಷಗಳಿಗೆ ಇಳಿಕೆ ಮಾಡಲು ಕರ್ನಾಟಕ ಅಬಕಾರಿ ಪರವಾನಗಿಗಳು (ಸಾಮಾನ್ಯ ಷರತ್ತುಗಳು) ನಿಯಮಗಳು–1967ಕ್ಕೆ ತಿದ್ದುಪಡಿ ತರಲಾಗುತ್ತಿದೆ.

ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರಲು ಇಲಾಖೆಯು ಸಿದ್ಧಪಡಿಸಿರುವ ಕರಡು ಪ್ರತಿಯನ್ನು ಸೋಮವಾರ (ಜನವರಿ 9) ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಕರ್ನಾಟಕ ಅಬಕಾರಿ ಪರವಾನಗಿಗಳು (ಸಾಮಾನ್ಯ ಷರತ್ತುಗಳು) ನಿಯಮಗಳು–1967ರ ಸೆಕ್ಷನ್ 10 (1) (ಇ) ಅಡಿಯಲ್ಲಿ ಮದ್ಯ ಖರೀದಿದಾರನ ವಯಸ್ಸಿಗೆ ವಿಧಿಸಿದ್ದ ನಿರ್ಬಂಧವನ್ನು ಸಡಿಲಿಸುವ ಉಲ್ಲೇಖ ತಿದ್ದುಪಡಿ ಕರಡಿನಲ್ಲಿದೆ.

'21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡುವಂತಿಲ್ಲ' ಎಂದು ಸೆಕ್ಷನ್ 10 (1) (ಇ)ನಲ್ಲಿ ಹೇಳಲಾಗಿತ್ತು. ಅದನ್ನು ಬದಲಿಸಿ, '18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡುವಂತಿಲ್ಲ' ಎಂಬುದನ್ನು ಸೇರಿಸುವ ಪ್ರಸ್ತಾವ ಇದೆ.

ಹೆದ್ದಾರಿಯಿಂದ 500 ಮೀ. ಅಂತರ: ರಾಜ್ಯದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು 5,000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳ ಅಂಚಿನಿಂದ 500 ಮೀಟರ್‌ವರೆಗಿನ ಪ್ರದೇಶದಲ್ಲಿ ಹೊಸ ಮದ್ಯದಂಗಡಿ ತೆರೆಯುವುದನ್ನು ನಿರ್ಬಂಧಿಸಿರುವುದನ್ನು ಅಬಕಾರಿ ನಿಯಮಗಳ ವ್ಯಾಪ್ತಿಗೆ ತರಲಾಗುತ್ತಿದೆ.

ಹೆದ್ದಾರಿಗಳ ಅಂಚಿನಿಂದ 500 ಮೀಟರ್‌ವರೆಗೆ ಮದ್ಯದಂಗಡಿಗಳನ್ನು ನಿಷೇಧಿಸಿ ಸುಪ್ರೀಂ ಕೋರ್ಟ್ 2016ರಲ್ಲಿ ತೀರ್ಪು ನೀಡಿತ್ತು. ನಗರ ಸ್ಥಳೀಯ ಸಂಸ್ಥೆಗಳು ಮತ್ತು 5,000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ನಿರ್ಬಂಧಿತ ಪ್ರದೇಶದ ಮಿತಿಯನ್ನು 220 ಮೀಟರ್‌ಗೆ ಪರಿಷ್ಕರಿಸಿ 2017ರಲ್ಲಿ ಸುಪ್ರೀಂ ಕೋರ್ಟ್ ಮತ್ತೊಂದು ಆದೇಶ ಹೊರಡಿಸಿತ್ತು.

ಹೆದ್ದಾರಿ ಪಕ್ಕದ ಮದ್ಯದಂಗಡಿಗಳಿಗೆ ಸಂಬಂಧಿಸಿದಂತೆ 2017 ರಿಂದಲೂ ಸುತ್ತೋಲೆ ಮೂಲಕ ಜಾರಿಯಲ್ಲಿದ್ದ ನಿರ್ಬಂಧವನ್ನು ನಿಯಮಗಳಲ್ಲಿ ಸೇರಿಸಲಾಗುತ್ತಿದೆ. ಇದಕ್ಕಾಗಿ ಕರ್ನಾಟಕ ಅಬಕಾರಿ (ಸನ್ನದುಗಳಿಗೆ ಸಾಮಾನ್ಯ ಷರತ್ತುಗಳು) ನಿಯಮ–1967ರ ಸೆಕ್ಷನ್ 5ಕ್ಕೆ ತಿದ್ದುಪಡಿ ತರಲಾಗುತ್ತಿದೆ.

'20,000 ಅಥವಾ ಅದಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹೆದ್ದಾರಿಯ ಅಂಚಿನಿಂದ 220 ಮೀಟರ್ ನಂತರದಲ್ಲಿ ಮದ್ಯದಂಗಡಿಗಳಿಗೆ ಪರವಾನಗಿ ನೀಡಬಹುದು. ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ 2011ರ ಜನಗಣತಿ ಪ್ರಕಾರ 5,000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳ ವ್ಯಾಪ್ತಿಗೆ 500 ಮೀಟರ್ ನಿರ್ಬಂಧ ಅನ್ವಯವಾಗುವುದಿಲ್ಲ' ಎಂದು ಉದ್ದೇಶಿತ ತಿದ್ದುಪಡಿಯಲ್ಲಿ ಉಲ್ಲೇಖಿಸಲಾಗಿದೆ.

ಕೇಂದ್ರ ಅಥವಾ ರಾಜ್ಯ ಸರ್ಕಾರಿ ಕಚೇರಿಗಳಿಂದ 100 ಮೀಟರ್ ಅಂತರದಲ್ಲಿ ಮದ್ಯದಂಗಡಿ ಪರವಾನಗಿ ನೀಡುವಂತಿಲ್ಲ ಎಂಬ ನಿಯಮವನ್ನು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಿಎಲ್–4 (ಕ್ಲಬ್) ಸಿಎಲ್–6ಎ (ತಾರಾ ಹೋಟೆಲ್) ಮತ್ತು ಸಿಎಲ್–7 ಗಳಿಗೆ (ಪ್ರವಾಸಿ ಹೋಟೆಲ್ ಸನ್ನದು) ಸೀಮಿತವಾಗಿ ಕೈಬಿಡುವ ಪ್ರಸ್ತಾವ ತಿದ್ದುಪಡಿಯಲ್ಲಿದೆ.

ಚುನಾವಣೆಗೆ ಶ್ರೀನಿವಾಸಗೌಡ ₹17 ಕೋಟಿ ಸಾಲ

ಕೋಲಾರ: 'ಕಳೆದ ಚುನಾವಣೆಯಲ್ಲಿ ₹ 17 ಕೋಟಿ ಸಾಲ ಮಾಡಿದ್ದು, ಇನ್ನೂ ತೀರಿಸಿಲ್ಲ. ಈ ಬಾರಿ ಸಿದ್ದರಾಮಯ್ಯ ಸ್ಪರ್ಧಿಸುತ್ತಾರೆ. ಅವರನ್ನು ನಿಲ್ಲಿಸಿ ಗೆಲ್ಲಿಸಿದರೆ ನನ್ನನ್ನು ಎಂಎಲ್‌ಸಿ ಮಾಡಿ ಮಂತ್ರಿ ಮಾಡುತ್ತಾರೆ...'

ಕೋಲಾರ ಕ್ಷೇತ್ರದ ಶಾಸಕ ಕೆ. ಶ್ರೀನಿವಾಸಗೌಡ, ಬೆಂಬಲಿಗರೊಬ್ಬರ ಜೊತೆ ದೂರವಾಣಿಯಲ್ಲಿ ನಡೆಸಿದ್ದಾರೆ ಎನ್ನಲಾದ ಸಂಭಾಷಣೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕ್ಷೇತ್ರ ಬಿಟ್ಟುಕೊಟ್ಟ ಉದ್ದೇಶವನ್ನೂ ಅವರು ವಿವರಿಸಿದ್ದಾರೆ.

ವೇಮಗಲ್‌ನ ಚನ್ನೇಗೌಡ ಎಂಬ ಬೆಂಬಲಿಗರೊಬ್ಬರು, ಶ್ರೀನಿವಾಸಗೌಡ ಅವರೇ ಸ್ಪರ್ಧಿಸಬೇಕೆಂದು ಮನವಿ ಮಾಡಿಕೊಂಡಾಗ ಈ ರೀತಿ ಮಾತನಾಡಿದ್ದಾರೆ.

ಖರ್ಚಿಗೆ ಸಾಲ ಮಾಡಿದ್ದು ನಿಜ: ಕಾರ್ಯಕರ್ತನ ಜೊತೆಗಿನ ಸಂಭಾಷಣೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಶ್ರೀನಿವಾಸಗೌಡ, 'ಕಳೆದ ಚುನಾವಣೆಯಲ್ಲಿ ಖರ್ಚಿಗೆ ಸಾಲ ಮಾಡಿದ್ದಾಗಿ ಹೇಳಿರುವುದು ನಿಜ. ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿ ಗೆದ್ದರೆ ಜಿಲ್ಲೆಗೆ ಹಲವಾರು ರೀತಿ ಅವಕಾಶ ಸಿಗಲಿವೆ ಹಾಗೂ ಅಭಿವೃದ್ಧಿ ಕೆಲಸ ನಡೆಯಲಿವೆ ಎಂಬರ್ಥದಲ್ಲಿ ಹೇಳಿದ್ದೇನೆ. ಮಂತ್ರಿ ವಿಚಾರ ಮಾತನಾಡಿಲ್ಲ. ಕಾರ್ಯಕರ್ತರ ಜೊತೆ ತಮಾಷೆಗೆ ಕೆಲವೊಂದು ವಿಚಾರ ಮಾತನಾಡುತ್ತೇವೆ' ಎಂದರು.

'ನಾನು ನಾಲ್ಕು ಬಾರಿ ಶಾಸಕನಾಗಿದ್ದೇನೆ. ಒಮ್ಮೆ ಮಂತ್ರಿಯೂ ಆಗಿದ್ದೇನೆ. ನಾನ್ಯಾಕೇ ಮತ್ತೆ ಎಂಎಲ್‌ಸಿ ಸ್ಥಾನಕ್ಕೆ ಬೇಡಿಕೆ ಇಡಲಿ' ಎಂದು ಅವರು ಪ್ರಶ್ನಿಸಿದರು. 2018ರಲ್ಲಿ ಅವರು ಜೆಡಿಸ್‌ನಿಂದ ಸ್ಪರ್ಧಿಸಿ ಶಾಸಕರಾಗಿದ್ದ ಅವರು ಈಗ ಕಾಂಗ್ರೆಸ್ ಜೊತೆ ಗುರುತಿಸಿ ಕೊಂಡಿದ್ದಾರೆ.

ರಾಜ್ಯದ 233 ತಾಲ್ಲೂಕುಗಳ ಪೈಕಿ 211 ತಾಲ್ಲೂಕುಗಳಲ್ಲಿ ತೀವ್ರ ಏರಿಕೆ

ಸಮೃದ್ಧ ಮಳೆಗೆ ಅಂತರ್ಜಲ ಮಟ್ಟ ವೃದ್ಧಿ

• ವಿಠಲ್ ಶಾಸ್ತ್ರಿ

ಕಲಬುರಗಿ: ರಾಜ್ಯದಲ್ಲಿ ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ ಮತ್ತು ಪ್ರವಾಹದಿಂದ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಆದರೂ ಅಂತರ್ಜಲ ಮಟ್ಟವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ.

ಅಂತರ್ಜಲ ನಿರ್ದೇಶನಾಲಯ ಮತ್ತು ಕರ್ನಾಟಕ ಅಂತರ್ಜಲ ಪ್ರಾಧಿಕಾರದ ಅಂಕಿಅಂಶಗಳ ಪ್ರಕಾರ, 2022ರ ಮೇ–ನವೆಂಬರ್ ತಿಂಗಳ ಅವಧಿಯಲ್ಲಿ ರಾಜ್ಯದ 233 ಪೈಕಿ 211 ತಾಲ್ಲೂಕುಗಳ ಅಂತರ್ಜಲ ಮಟ್ಟದಲ್ಲಿ ಭಾರಿ ಏರಿಕೆಯಾಗಿದೆ.

'ಕೆರೆ ತುಂಬಿಸುವ ಯೋಜನೆಗಳು ಸಹ ಅಂತರ್ಜಲ ಮಟ್ಟ ವೃದ್ಧಿಗೆ ನೆರವಾಗಿವೆ' ಎನ್ನುತ್ತಾರೆ ಪ್ರಾಧಿಕಾರದ ಅಧಿಕಾರಿಗಳು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ದಾಖಲೆಯ 32.44 ಮೀಟರ್ ಏರಿಕೆ ಕಂಡಿದೆ. ಮೇ ತಿಂಗಳಲ್ಲಿ 50.38 ಮೀಟರ್ ಇದ್ದ ನೀರಿನ ಮಟ್ಟ ನವೆಂಬರ್ ವೇಳೆಗೆ 17.94 ಮೀಟರ್‌ಗೆ ತಲುಪಿದೆ.

ನೀರಿಲ್ಲದೆ ಸ್ಥಗಿತವಾಗಿದ್ದ 20 ಕೊಳವೆ ಬಾವಿಗಳು ಕಾರ್ಯ ನಿರ್ವಹಿಸುತ್ತಿವೆ. ಮಳೆಯಿಂದ ಕೆರೆಗಳಲ್ಲಿ ಸಾಕಷ್ಟು ನೀರು ನಿಂತಿದೆ. ಕೃಷಿ ಜಮೀನಿನಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಿದೆ.
ಮಲ್ಲಿಕಾರ್ಜುನ ಅವಂತಿ, ರೈತ, ಕೊಡ್ಲಿ ಗ್ರಾಮ

ಹೊಸಕೋಟೆ, ದೇವನಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಮಾಲೂರು, ಜಮಖಂಡಿ ಮತ್ತು ಬಾದಾಮಿ ಸೇರಿ 24 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕನಿಷ್ಠ 10 ಮೀಟರ್‌ಗಿಂತ ಹೆಚ್ಚು ಏರಿಕೆ ಆಗಿದೆ. ಪ್ರಸ್ತುತ, ರಾಜ್ಯದ 186 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ 10 ಮೀಟರ್‌ವರೆಗೆ ಇದೆ. ಮುಂಗಾರು ಆರಂಭಕ್ಕೂ ಮುನ್ನ 94 ತಾಲ್ಲೂಕುಗಳಲ್ಲಿ ಮಾತ್ರ ಇತ್ತು.

'ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿನ 1,300ಕ್ಕೂ ಹೆಚ್ಚು ವೀಕ್ಷಣಾ ಕೊಳವೆ ಬಾವಿಗಳು ಮೂಲಕ ಅಂತರ್ಜಲ ಮಟ್ಟ ಸಂಬಂಧ ಮುಂಗಾರು ಪೂರ್ವ ಮತ್ತು ನಂತರದ ದತ್ತಾಂಶ ಸಂಗ್ರಹಿಸಿದ್ದೇವೆ. ಪ್ರಸಕ್ತ ವರ್ಷದ ಅತಿವೃಷ್ಟಿ ಮತ್ತು ಪ್ರವಾಹದಿಂದ ನೀರಿನ ಮಟ್ಟದಲ್ಲಿ ಗಣನೀಯ ಏರಿಕೆಯಾಗಿದ್ದು ದೃಢಪಟ್ಟಿದೆ' ಎಂದು ಅಂತರ್ಜಲ ಇಲಾಖೆಯ ನಿರ್ದೇಶಕ ರಾಮಚಂದ್ರಯ್ಯ ತಿಳಿಸಿದರು.

ಬಳ್ಳಾರಿ, ವಿಜಯನಗರ, ದಾವಣಗೆರೆ, ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಗರಿಷ್ಠ 5 ಮೀಟರ್ ತಲುಪಿದೆ. 22 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟವು 3 ಮೀಟರ್‌ವರೆಗೆ ಅಲ್ಪ ಕುಸಿದಿದೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ 25.11 ಮೀಟರ್ ಮತ್ತು ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ 10 ಮೀಟರ್‌ಗಳಷ್ಟು ಅತಿ ಹೆಚ್ಚು ಕುಸಿದಿದೆ.

'ರಾಜ್ಯದಲ್ಲಿ ಎರಡು ವರ್ಷದಲ್ಲಿ ಸರಾಸರಿಗಿಂತ 3 ಪಟ್ಟು ಹೆಚ್ಚು ಮಳೆ ಆಗಿದೆ. ಸಸ್ಯವರ್ಗ ಸುಧಾರಿಸಿದರೆ ಸೂರ್ಯನ ಶಾಖ ಮತ್ತು ಗಾಳಿಯಿಂದ ನೀರು ಆವಿ ಆಗುವ ಪ್ರಮಾಣ ತಗ್ಗಿಸಬಹುದು' ಎಂದು ಜಲ ಭೂವಿಜ್ಞಾನಿ ಡಾ.ದೇವರಾಜ್ ರೆಡ್ಡಿ ಎನ್.ಜೆ ತಿಳಿಸಿದ್ದಾರೆ.

2017 ಮತ್ತು 2022ರ ಅವಧಿಯಲ್ಲಿ ಅಂತರ್ಜಲ ಮಟ್ಟದಲ್ಲಿ ಏರಿಕೆ ದಾಖಲಿಸಿದ ಪ್ರಮುಖ ತಾಲ್ಲೂಕುಗಳು(ಮೀಟರ್‌ಗಳಲ್ಲಿ)

ತಾಲ್ಲೂಕುಗಳು	2017	2022
ಹೊಸಕೋಟೆ	67.31	23.69
ಕೆಜಿಎಫ್	67.03	06.42
ಮಾಲೂರು	82.17	31.68
ಬಂಗಾರಪೇಟೆ	75.12	13.40
ಕೋಲಾರ	77.94	08.42
ಶ್ರೀನಿವಾಸಪುರ	69.30	20.68
ಆನೇಕಲ್	35.54	20.74
ಯಲಹಂಕ	40.77	16.15
ಶಿಡ್ಲಘಟ್ಟ	47.67	16.97
ಅರಸೀಕೆರೆ	33.26	05.38
ಬೆಂಗಳೂರು ದಕ್ಷಿಣ	20.69	09.80

25 ತಾಲ್ಲೂಕುಗಳಲ್ಲಿ 'ಮಿನಿ ಟೆಕ್ಸ್‌ಟೈಲ್ ಪಾರ್ಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಕಾರರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ರಾಜ್ಯದ 25 ತಾಲ್ಲೂಕುಗಳಲ್ಲಿ 'ಮಿನಿ ಟೆಕ್ಸ್‌ಟೈಲ್ ಪಾರ್ಕ್' ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯುತ್ ಮಗ್ಗ ನೇಕಾರರು ಮತ್ತು ಕಾರ್ಮಿಕರಿಗೆ ಡಿಬಿಟಿ ಮೂಲಕ ನೇಕಾರ್ ಸಮ್ಮಾನ್ ಯೋಜನೆಯ ಸಹಾಯಧನ ವರ್ಗಾವಣೆಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಹತ್ತಿಯ ಸಂಸ್ಕರಣೆಯಿಂದ ವಸ್ತ್ರ, ಸಿದ್ಧ ಉಡುಪು ತಯಾರಿಕೆ ಮತ್ತಿತರ ಹಂತಗಳನ್ನು ಒಳಗೊಂಡ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸುವ ಮೂಲಕ ನೇಕಾರರಿಗೆ ಅನುಕೂಲ ಮಾಡಿಕೊಡಬೇಕು. ಡಿಜಿಟಲ್ ವೇದಿಕೆಯ ಮೂಲಕ ಮಾರುಕಟ್ಟೆ ವಿಸ್ತರಿಸಬೇಕು. ಉತ್ಪನ್ನಗಳ ಗುಣಮಟ್ಟ ವೃದ್ಧಿಯಾದರೆ ರಫ್ತಿಗೂ ಅನುಕೂಲವಾಗುತ್ತದೆ. ಅಮೆಜಾನ್, ಫ್ಲಿಪ್‌ಕಾರ್ಟ್ ಮತ್ತಿತರ ಆನ್‌ಲೈನ್ ವ್ಯಾಪಾರಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಕೈಮಗ್ಗ ಮತ್ತು ಜವಳಿ ಇಲಾಖೆ ಸಹಕಾರ ನೀಡಲಿದೆ ಎಂದು ಮಾಹಿತಿ ನೀಡಿದರು.

ಜವಳಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಿದ್ದು ಸವದಿ, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಗುತ್ತಿಗನೂರು ವಿರೂಪಾಕ್ಷ ಗೌಡ, ಕಾವೇರಿ ಹ್ಯಾಂಡ್‌ಲೂಮ್ಸ್ ಅಧ್ಯಕ್ಷ ಬಿ.ಜೆ. ಗಣೇಶ್ ಉಪಸ್ಥಿತರಿದ್ದರು.

ಜಯದೇವ ಹೃದ್ರೋಗ ಸಂಸ್ಥೆ ಅಧ್ಯಯನ

ಮುನ್ನೆಚ್ಚರಿಕೆ ಡೋಸ್: 99ರಷ್ಟು ಮಂದಿಗೆ ಪ್ರತಿಕಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಬಗ್ಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಅಧ್ಯಯನ ನಡೆಸಿದ್ದು, ಮುನ್ನೆಚ್ಚರಿಕೆ ಡೋಸ್ ಪಡೆದ ಶೇ 99.4ರಷ್ಟು ಮಂದಿಯಲ್ಲಿ ಉತ್ತಮ ಪ್ರತಿಕಾಯ ಅಭಿವೃದ್ಧಿಯಾಗಿದೆ.

ಕೊರೊನಾ ವೈರಾಣುವಿನ ರೂಪಾಂತರಿ ಬಿಎಫ್ 7, ಎಕ್ಸ್ ಬಿಬಿ 1.5 ಜಗತ್ತಿನ ವಿವಿಧೆಡೆ ಪತ್ತೆಯಾಗಿರುವುದರಿಂದ ಸಂಸ್ಥೆ ಪ್ರತಿಕಾಯದ ಬಗ್ಗೆ ಅಧ್ಯಯನ ನಡೆಸಿದೆ. ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದ ಸಂಸ್ಥೆಯ 350 ಆರೋಗ್ಯ ಸಿಬ್ಬಂದಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರಲ್ಲಿ ಬಹುತೇಕ ಎಲ್ಲರಲ್ಲಿಯೂ ಪ್ರತಿಕಾಯ ವೃದ್ಧಿಯಾಗಿರುವುದು ಅಧ್ಯಯನದಿಂದ ದೃಢಪಟ್ಟಿದೆ. 'ಕಳೆದ ವರ್ಷ ಮುನ್ನೆಚ್ಚರಿಕೆ ಡೋಸ್ ಪಡೆದ ಸಂಸ್ಥೆಯ ವೈದ್ಯರು, ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿಯ ಮೇಲೆ ಅಧ್ಯಯನ ನಡೆಸಲಾಯಿತು. ರಕ್ತದಲ್ಲಿನ ಪ್ರತಿಕಾಯಗಳನ್ನು ಅಳೆಯಲು 'ಎಲಿಸಾ' ಮಾದರಿ ಅನುಸರಿಸಲಾಗಿತ್ತು. ಅಧ್ಯಯನಕ್ಕೆ ಒಳಪಟ್ಟ 19ರಿಂದ 60 ವರ್ಷದೊಳಗಿನ, 148 ಪುರುಷರಲ್ಲಿ ಶೇ 42ರಷ್ಟು ಹಾಗೂ 202 ಮಹಿಳೆಯರಲ್ಲಿ ಶೇ 58ರಷ್ಟು ಪ್ರತಿಕಾಯ ವೃದ್ಧಿಯಾಗಿದೆ' ಎಂದು ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.

4ನೇ ಡೋಸ್ ಅಗತ್ಯವಿಲ್ಲ: 'ವೃದ್ಧಿಯಾಗಿರುವ ಪ್ರತಿಕಾಯಗಳು ಒಂದು ವರ್ಷಗಳ ಕಾಲ ದೇಹದಲ್ಲಿ ಸಕ್ರಿಯವಾಗಿದೆ ಎನ್ನುವುದು ಸಂತೋಷದ ಸಂಗತಿ. ಜನರಲ್ಲಿ ಗೊಂದಲ ಸೃಷ್ಟಿಸಿರುವ ನಾಲ್ಕನೇ ಡೋಸ್ ಅಗತ್ಯವಿಲ್ಲ. ಆದರೆ, ಕಡ್ಡಾಯವಾಗಿ ಮುನ್ನೆಚ್ಚರಿಕೆ ಡೋಸ್ (ಮೂರನೇ ಡೋಸ್) ಪಡೆಯಬೇಕು' ಎಂದು ಹೇಳಿದ್ದಾರೆ.

'ಈ ಅಧ್ಯಯನದಿಂದ ಮುನ್ನೆಚ್ಚರಿಕೆ ಡೋಸ್ ಪಡೆದವರಲ್ಲಿ ಪ್ರತಿಕಾಯ ಎಷ್ಟು ಅವಧಿವರೆಗೆ ಉಳಿಯುತ್ತದೆ, ಈ ಎಷ್ಟು ಉಪ ಯುಕ್ತ ಎನ್ನುವ ಮಾಹಿತಿ ದೊರೆತಿದೆ. ಸೂಕ್ಷ್ಮ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ನವೀನ್, ಸಹ ಪ್ರಾಧ್ಯಾಪಕರಾದ ಡಾ. ನಂದಿನಿ, ಡಾ. ಕವಿತಾ ಹಾಗೂ ಪ್ರಫುಲ್ಲಾ ಕುಮಾರಿ ಅವರ ತಂಡ ಈ ಅಧ್ಯಯನ ನಡೆಸಿದ್ದಾರೆ' ಎಂದಿದ್ದಾರೆ.

26ನೇ ರಾಷ್ಟ್ರೀಯ ಯುವಜನೋತ್ಸವ ಇಂದಿನಿಂದ ಜ. 16ರವರೆಗೆ

ವಿದ್ಯಾನಗರಿಯಲ್ಲಿ ಮೊಳಗಲಿದೆ ಏಕತೆಯ ಗಾನ

• ಇ.ಎಸ್.ಸುಧೀಂದ್ರ ಪ್ರಸಾದ್

ಧಾರವಾಡ: ವೀರಸನ್ಯಾಸಿ ಸ್ವಾಮಿ ವಿವೇಕಾನಂದರ 160ನೇ ಜನ್ಮದಿನ ಆಚರಣೆಯ ಭಾಗವಾಗಿ ಆಯೋಜನೆಯಾಗಿರುವ 26ನೇ ರಾಷ್ಟ್ರೀಯ ಯುವಜನೋತ್ಸವಕ್ಕಾಗಿ ಇಡೀ ದೇಶವೇ ವಿದ್ಯಾನಗರಿಯತ್ತ ಮುಖ ಮಾಡಿದೆ.

ಜಮ್ಮು–ಕಾಶ್ಮೀರದಿಂದ ತಮಿಳುನಾಡಿನವರೆಗೆ, ಗುಜರಾತ್‌ನಿಂದ ಕೋಲ್ಕತ್ತವರೆಗೆ ದೇಶದ ಎಲ್ಲಾ ರಾಜ್ಯಗಳ ಯುವ ಪ್ರತಿನಿಧಿಗಳೂ ಹಲವು ನಿರೀಕ್ಷೆ, ಹೊಸ ಭರವಸೆಯೊಂದಿಗೆ ಬಂದಿಳಿದಿದ್ದಾರೆ. ಜ.12ರಿಂದ 16ರವರೆಗೆ ನಡೆಯಲಿರುವ ಯುವಜನೋತ್ಸವಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹುಬ್ಬಳ್ಳಿಯ ರೈಲ್ವೆ ಮೈದಾನದಲ್ಲಿ ಗುರುವಾರ ಸಂಜೆ ವಿಧ್ಯುಕ್ತ ಚಾಲನೆ ನೀಡಲಿದ್ದಾರೆ.

2012ರಲ್ಲಿ ಮಂಗಳೂರು ಹಾಗೂ ಇದೀಗ 2023ರಲ್ಲಿ ಧಾರವಾಡ ಆಯ್ಕೆ ಮೂಲಕ ರಾಜ್ಯ ಎರಡನೇ ಬಾರಿಗೆ ಯುವಜನೋತ್ಸವ ಆಯೋಜಿಸುವ ಅವಕಾಶ ಪಡೆದಿದೆ. ಪ್ರಧಾನಿ ಉದ್ಘಾಟಿಸುತ್ತಿರುವ ಮೊದಲ ಯುವಜನೋತ್ಸವ ಎಂಬ ಗರಿಮೆಯೂ ಈ ಉತ್ಸವಕ್ಕಿದೆ.

ನಗರದ ಐದು ಸಭಾಂಗಣಗಳು, ಏಳು ಕ್ರೀಡಾಂಗಣಗಳು ಸಜ್ಜಾಗಿವೆ. ಕರ್ನಾಟಕ ಕಾಲೇಜು ಮೈದಾನದಲ್ಲಿ ಸ್ಥಾಪಿಸಲಾಗಿರುವ ವೇದಿಕೆಯಲ್ಲಿ ನಿರುಪಮಾ ರಾಜೇಂದ್ರ, ವಿಜಯಪ್ರಕಾಶ್, ಥೈಕುಡುಮ್ ಬ್ರಿಡ್ಜ್ ಬ್ಯಾಂಡ್, ಮೆಮೆ ಖಾನ್ ಖ್ಯಾತನಾಮರ ಸಂಗೀತ ಸಂಜೆ ಕಾರ್ಯಕ್ರಮಕ್ಕೆ ಆಯೋಜನೆಗೊಂಡಿವೆ.

ಜ.15ರಂದು ಬೆಳಿಗ್ಗೆ ಯೋಗಥಾನ್ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಯೋಗಾಭ್ಯಾಸ ನಡೆಸಿ ಗಿನ್ನಿಸ್ ದಾಖಲೆ ಮಾಡಲೂ ಸಿದ್ಧತೆ ನಡೆದಿದೆ. ಕೇಂದ್ರ ಕ್ರೀಡೆ ಹಾಗೂ ಯುವಜನ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರದ ಕ್ರೀಡಾ ಇಲಾಖೆ ಸೇರಿ ಒಟ್ಟು ₹20 ಕೋಟಿ ಅನುದಾನ ಈ ಯುವಜನೋತ್ಸವಕ್ಕೆ ನೀಡಿವೆ. ಸ್ಥಳೀಯವಾಗಿಯೂ ದೇಣಿಗೆ ಸಂಗ್ರಹಿಸಲಾಗಿದೆ. ಧಾರವಾಡದಲ್ಲಿವಿವೇಕಾನಂದರ ಚಿತ್ರವೇ ಇಲ್ಲದ ಯುವಜನೋತ್ಸವದಲ್ಲಿ ರಾಜಕೀಯ ಮುಖಂಡರ ಫ್ಲೆಕ್ಸ್‌ಗಳು ರಾರಾಜಿಸುತ್ತಿವೆ. ಸಮಾರಂಭದ ಉದ್ಘಾಟನೆಗೆ ಪ್ರತಿ ಕಾಲೇಜಿನಿಂದ ತಲಾ 100 ವಿದ್ಯಾರ್ಥಿಗಳನ್ನು ಕಳುಹಿಸುವುದು ಕಡ್ಡಾಯಗೊಳಿಸಿರುವುದು, ಬುಧವಾರ ಸಂಜೆಯವರೆಗೂ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ನೀಡದಿರುವುದೂ ಚರ್ಚೆಗೆ ಗ್ರಾಸವಾಗಿದೆ.



ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರೀಯ ಯುವಜನೋತ್ಸವಕ್ಕೆ ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ಬುಧವಾರ ಹುಬ್ಬಳ್ಳಿ ರೈಲ್ವೆ ಮೈದಾನಕ್ಕೆ ಭದ್ರತೆ ಒದಗಿಸಲು ಆಗಮಿಸಿದ ಪೊಲೀಸ್ ಸಿಬ್ಬಂದಿ –ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಪ್ರಧಾನಿ ಗೌರವಕ್ಕೆ ರಾಜ್ಯದ ವಿಶೇಷಗಳು

ಹುಬ್ಬಳ್ಳಿ: ದೆಹಲಿಯಿಂದ ವಿಶೇಷ ವಿಮಾನದಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಗುರುವಾರ ಮಧ್ಯಾಹ್ನ 3.40ಕ್ಕೆ ಆಗಮಿಸಲಿರುವ ಪ್ರಧಾನಿ ಮೋದಿ, ಏಳು ಕಿ.ಮೀ. ದೂರದಲ್ಲಿರುವ ರೈಲ್ವೆ ಮೈದಾನಕ್ಕೆ ತೆರಳಲಿದ್ದಾರೆ. ಸಂಜೆ 4ಕ್ಕೆ ವೇದಿಕೆ ಕಾರ್ಯಕ್ರಮ ಆರಂಭವಾಗಿ ಸಂಜೆ 5.15ಕ್ಕೆ ಮುಕ್ತಾಯವಾಗಲಿದ್ದು, ಪ್ರಧಾನಿಯವರು ಅರ್ಧ ಗಂಟೆ ಭಾಷಣ ಮಾಡಲಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧಾರವಾಡ ಜಿಲ್ಲಾಡಳಿತ ನೀಡಲು ಸಿದ್ಧಪಡಿಸಿರುವ ಸ್ಮರಣಿಕೆ

ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಅನುರಾಗ್ ಠಾಕೂರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಡಾ. ನಾರಾಯಣಗೌಡ, ಶಂಕರ ಪಾಟೀಲ ಮುನೇನಕೊಪ್ಪ, ಮೇಯರ್ ಈರೇಶ ಅಂಚಟಗೇರಿ ಹಾಗೂ ಸ್ಥಳೀಯ ಶಾಸಕರು, ವಿಧಾನಪರಿಷತ್ ಸದಸ್ಯರು ಸೇರಿ ವೇದಿಕೆ ಮೇಲೆ 24 ಗಣ್ಯರಿಗೆ ಆಸನಗಳ ವ್ಯವಸ್ಥೆ ಮಾಡಲಾಗಿದೆ.

ಹಾವೇರಿಯ 'ಏಲಕ್ಕಿ ಹಾರ' ಮತ್ತು 'ಏಲಕ್ಕಿ ಪೇಟ' ಹಾಕಿ, ಕಸೂತಿ ಕಲೆಯ ಕೈಮಗ್ಗದ ಶಾಲು ಹೊದಿಸಿ, ಬೀದರ್‌ನ ಬಿದರಿ ಕಲೆಯ ಸ್ವಾಮಿ ವಿವೇಕಾನಂದರ ಮೂರ್ತಿ ಹಾಗೂ ತೇಗದ ಚೌಕಟ್ಟಿನಲ್ಲಿ ವಿನ್ಯಾಸಗೊಳಿಸಲಾದ ಧಾರವಾಡ ಜಿಲ್ಲೆಯ ಗರಗ ಹಾಗೂ ಬೆಂಗೇರಿಯಲ್ಲಿ ತಯಾರಾದ ರಾಷ್ಟ್ರಧ್ವಜವನ್ನು ಪ್ರಧಾನಿಗೆ ನೀಡಿ ಜಿಲ್ಲಾಡಳಿತ ಸನ್ಮಾನಿಸಲಿದೆ.

ಗುರುವಾರ, ಜನವರಿ 12, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 12 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ದೇಶಗಳ ನಡುವೆ ಕೊಳವೆಗಳ ಮೂಲಕ ನೈಸರ್ಗಿಕ ಅನಿಲ ಪೂರೈಸುವ ನೂತನ ಯೋಜನೆ 'ಟಾಪಿ' ಕುರಿತ ವಿವರ ಇಲ್ಲಿದೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,105 ▼	17,8964 ▼	₹57,700 (ಬೆಂಗಳೂರು) ▼	₹ 69,900 (ಬೆಂಗಳೂರು) ▲	81.61 ▲

ರುಪೇ, ಯುಪಿಐ ಉತ್ತೇಜನಕ್ಕೆ ₹ 2,600 ಕೋಟಿ

ನವದೆಹಲಿ (ಪಿಟಿಐ): ರುಪೇ ಡೆಬಿಟ್ ಕಾರ್ಡ್ ಬಳಕೆ ಹಾಗೂ ಸಣ್ಣ ಮೊತ್ತದ ಭೀಮ್‌-ಯುಪಿಐ ವಹಿವಾಟುಗಳನ್ನು ಉತ್ತೇಜಿಸಲು ಕೇಂದ್ರ ಸಚಿವ ಸಂಪುಟವು ₹ 2,600 ಕೋಟಿ ವಿನಿಯೋಗಿಸಲು ಬುಧವಾರ ಅನುಮೋದನೆ ನೀಡಿದೆ. ಈ ಮೊತ್ತವನ್ನು ಪ್ರಸಕ್ತ ಹಣಕಾಸು ವರ್ಷದಲ್ಲೇ ವಿನಿಯೋಗಿಸಲಾಗುತ್ತದೆ.

ರುಪೇ ಕಾರ್ಡ್ ಹಾಗೂ ಯುಪಿಐ ಬಳಕೆಯನ್ನು ಇ-ವಾಣಿಜ್ಯ ವೇದಿಕೆಗಳಲ್ಲಿ ಮತ್ತು ಮಳಿಗೆಗಳಲ್ಲಿ ಉತ್ತೇಜಿಸಲು ಬ್ಯಾಂಕ್‌ಗಳಿಗೆ ಹಣಕಾಸು ಸಹಾಯವನ್ನು ಈ ಯೋಜನೆಯ ಅಡಿಯಲ್ಲಿ ಒದಗಿಸ-ಲಾಗುತ್ತದೆ.

9 ನೇ ಪುಟ ನೋಡಿ

ಭಯೋತ್ಪಾದಕ ಕೃತ್ಯಗಳಿಗೆ ಸಂಚು: ಬಂಧಿತರ ಸಂಖ್ಯೆ 6ಕ್ಕೆ ಏರಿಕೆ

ಐಎಸ್ ನಂಟು: ಇಬ್ಬರನ್ನು ಬಂಧಿಸಿದ ಎನ್‌ಐಎ

ಪ್ರಜಾವಾಣಿ ವಾರ್ತೆ

ಮಂಗಳೂರು: ನಿಷೇಧಿತ ಉಗ್ರಗಾಮಿ ಸಂಘಟನೆ ಇಸ್ಲಾಮಿಕ್ ಸ್ಟೇಟ್ ಜೊತೆ ಸೇರಿ ಭಯೋತ್ಪಾದನಾ ಕೃತ್ಯ ನಡೆಸಲು ಸಂಚು ರೂಪಿಸಿದ ಮತ್ತಿಬ್ಬರು ಆರೋಪಿಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ. ಇದರೊಂದಿಗೆ, ಇಸ್ಲಾಮಿಕ್ ಸ್ಟೇಟ್ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಕರ್ನಾಟಕದ ಆರು ಮಂದಿ ಬಂಧನವಾದಂತಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ತಾಲ್ಲೂಕಿನ ತೊಕ್ಕೊಟ್ಟು ಪೆರ್ಮನ್ನೂರು ಹೀರಾ ಕಾಲೇಜು ಬಳಿಯ ನಿವಾಸಿ ಮಜೀನ್ ಅಬ್ದುಲ್ ರಹಮಾನ್ ಹಾಗೂ ದಾವಣಗೆರೆ ಜಿಲ್ಲೆ ಹೊನ್ನಾಳಿಯ ದೇವನಾಯಕನಹಳ್ಳಿಯ ನೂರಾನಿ ಮಸೀದಿ ಸಮೀಪದ ನಿವಾಸಿ ನದೀಮ್ ಅಹಮದ್ ಕೆ.ಎ. ಅವರನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಬುಧವಾರ ಮಧ್ಯಾಹ್ನ ಟ್ವೀಟ್ ಮಾಡಿದೆ.

ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ ಆರೋಪದ ಮೇಲೆ ನಗರದ ಮಾಝ್ ಮುನೀರ್ ಅಹಮದ್ ಹಾಗೂ ಶಿವಮೊಗ್ಗದ ಸಿದ್ದೇಶ್ವರ ನಗರದ ಸಯ್ಯದ್ ಯಾಸೀನ್‌ನನ್ನು ಶಿವಮೊಗ್ಗ ಜಿಲ್ಲೆಯ ಪೊಲೀಸರು ಬಂಧಿಸಿದ್ದರು. ಈ ಕುರಿತು ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ 2022ರ ಸೆಪ್ಟೆಂಬರ್ 19ರಂದು ದಾಖಲಾದ ಪ್ರಕರಣದ (ಈ ಪ್ರಕರಣ ಎನ್‌ಐಎಗೆ ಹಸ್ತಾಂತರವಾದ ಬಳಿಕ ನವೆಂಬರ್ 4ರಂದು ಪ್ರತ್ಯೇಕ ಮೊಕದ್ದಮೆ ದಾಖಲಾಗಿತ್ತು) ಮುಂದುವರಿದ ತನಿಖೆಯ ಭಾಗವಾಗಿ ಈ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಹೇಳಿದೆ.

'ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಪ್ರಕರಣದ ಪ್ರಮುಖ ಆರೋಪಿ ಮಾಝ್ ಮುನೀರ್ ಎಂಬಾತ ಮಜೀನ್ ಅಬ್ದುಲ್ ರಹಮಾನ್‌ನನ್ನು ಹಾಗೂ ಇನ್ನೊಬ್ಬ ಆರೋಪಿ ಸಯ್ಯದ್ ಯಾಸೀನ್ ಎಂಬಾತ ನದೀಮ್‌ನನ್ನು ಭಾರತದಲ್ಲಿ ಇಸ್ಲಾಮಿಕ್ ಸ್ಟೇಟ್‌ನ ಭಯೋತ್ಪಾದನಾ ಚಟುವಟಿಕೆಗಳನ್ನು ಮುಂದುವರಿಸಲು ತಮ್ಮ ತಂಡಕ್ಕೆ ಸೇರಿಸಿಕೊಂಡಿದ್ದರು. ಬಂಧಿತ ಆರೋಪಿಗಳಿಬ್ಬರೂ ಭಾರಿ ಭಯೋತ್ಪಾದನಾ ಚಟುವಟಿಕೆ ನಡೆಸುವ ಇಸ್ಲಾಮಿಕ್ ಸ್ಟೇಟ್‌ನ ಸಂಚಿನ ಭಾಗವಾಗಿ ಅನೇಕ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಯತ್ನಗಳಲ್ಲಿ ತೊಡಗಿಸಿಕೊಂಡಿದ್ದರು' ಎಂದು ಎನ್‌ಐಎ ಹೇಳಿದೆ.

ಮಾಝ್ ಮುನೀರ್ ಹಾಗೂ ಸಯ್ಯದ್ ಯಾಸೀನ್ ಜೊತೆ ಸಂಪರ್ಕ ಹೊಂದಿದ್ದ ಶಿವಮೊಗ್ಗದ ಟಿಪ್ಪು ಸುಲ್ತಾನ್ ನಗರದ ಹುಝೈರ್ ಫರ್ಹಾನ್ ಬೇಗ್ ಮತ್ತು ಉಡುಪಿ ಜಿಲ್ಲೆ ಬ್ರಹ್ಮಾವರದ ವಾರಂಬಳ್ಳಿಯ ಶಾಂತಿನಗರದ ರೇಷಾನ್ ತಾಜುದ್ದೀನ್ ಶೇಖ್‌ನನ್ನು ಎನ್‌ಐಎ ಅಧಿಕಾರಿಗಳ ತಂಡವು ಜನವರಿ 5ರಂದು ಬಂಧಿಸಿತ್ತು.

ತೀರ್ಥಹಳ್ಳಿ: ಶಾರೀಕ್ ಅಜ್ಜಿ ಮನೆಯಲ್ಲಿ ಇ.ಡಿ ಶೋಧ

ತೀರ್ಥಹಳ್ಳಿ: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಶಾರೀಕ್ ಅವರ ಅಜ್ಜಿ ಮನೆಯಲ್ಲಿ ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ಕಾರ್ಯ ನಡೆಸಿದರು.

ಶಾರೀಕ್ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ, ಆರ್ಥಿಕ ವಹಿವಾಟಿನ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಭಯೋತ್ಪಾದಕ ಚಟುವಟಿಕೆಗಳಿಗೆ ಬಳಕೆ ಮಾಡಲು ಬಂಧಿತ ಶಾರೀಕ್ ಹಾಗೂ ಸಹಚರರು ಕ್ರಿಪ್ಟೊ ಕರೆನ್ಸಿ ಮೂಲಕ ವಹಿವಾಟು ನಡೆಸಿರುವುದು ವಿಚಾರಣೆ ವೇಳೆ ಬಹಿರಂಗಗೊಂಡಿದ್ದರಿಂದ ಇ.ಡಿ ಪರಿಶೀಲನೆ ನಡೆಸಿದೆ ಎಂದು ತಿಳಿದುಬಂದಿದೆ.

ಇಲ್ಲಿನ ಕಾಂಗ್ರೆಸ್ ಕಚೇರಿ ಹಾಗೂ ಅದರ ಮೇಲೆ ಇರುವ ಬಾಡಿಗೆ ಕಟ್ಟಡವು ಶಾರೀಕ್ ಕುಟುಂಬಕ್ಕೆ ಸಂಬಂಧಿಸಿರುವ ಕಾರಣ ಅಲ್ಲಿನ ಬಾಡಿಗೆದಾರರೊಂದಿ-ಗಿನ ಕರಾರು ಪತ್ರಗಳನ್ನೂ ಈ ವೇಳೆ ಇ.ಡಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಇದನ್ನು ಪೊಲೀಸರು ಖಚಿತಪ-ಡಿಸಿದ್ದಾರೆ.

ಕಟ್ಟಡದ ಬಾಡಿಗೆದಾರರಾದ ಕೆ.ಜಿ. ನವೀನ ಬಿನ್ ಕೆ.ಎಂ. ಗೋಪಾಲಕೃಷ್ಣ (ಮಾಜಿ ಶಾಸಕ ಕಿಮ್ಮನೆ ರತ್ನಾಕರ ಅವರ ಸಹೋದರನ ಪುತ್ರ) ಅವರು 2015ರ ಜೂನ್ ತಿಂಗಳಲ್ಲಿ ಅಸಿಮ್ ಅಬ್ದುಲ್ ಮಜೀದ್ ಬಿನ್ ದಿ ಅಬ್ದುಲ್ ಮಜೀದ್ (ಸ್ವತ್ತಿನ ಮಾಲೀಕ) ಅವರಿಂದ 8 ವರ್ಷಗಳ ಅವಧಿಗೆ ₹ 10 ಲಕ್ಷ ರೂಪಾಯಿ ಮುಂಗಡ ಹಾಗೂ ತಿಂಗಳಿಗೆ ₹ 1,000 ಬಾಡಿಗೆ ಒಪ್ಪಂದ ಮಾಡಿಕೊಂಡಿದ್ದಾರೆ.

5 ನೇ ಪುಟ ನೋಡಿ

'ನಾಟು ನಾಟು' ಗೀತೆಗೆ ಗೋಲ್ಡನ್ ಗ್ಲೋಬ್ ಗರಿ



ಗೋಲ್ಡನ್ ಗ್ಲೋಬ್ ಪ್ರಶಸ್ತಿಯೊಂದಿಗೆ ಎಂ.ಎಂ.ಕೀರವಾಣಿ ಸಂಭ್ರಮ –ಎಪಿ,ಪಿಟಿಐ ಚಿತ್ರ

ಲಾಸ್ ಏಂಜಲೀಸ್ (ಪಿಟಿಐ): ಎಸ್.ಎಸ್.ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ಚಲನಚಿತ್ರದಲ್ಲಿನ 'ನಾಟು ನಾಟು' ಗೀತೆಗೆ ಪ್ರತಿಷ್ಠಿತ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಒಲಿದಿದೆ.

ಎಂ.ಎಂ.ಕೀರವಾಣಿ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿದ್ದ ಈ ಹಾಡು ಅತ್ಯುತ್ತಮ ಮೂಲಗೀತೆ ವಿಭಾಗದಲ್ಲಿ ಪ್ರಶಸ್ತಿಗೆ ಪಾತ್ರವಾಗಿದೆ. ಈ ಹಾದಿಯಲ್ಲಿ ಟೇಲರ್ ಸ್ವಿಫ್ಟ್, ರಿಹಾನ್ನ ಮತ್ತು ಲೇಡಿ ಗಾಗಾ ಅವರ ಗೀತೆಗಳನ್ನು ಹಿಂದಿಕ್ಕಿದೆ.

8 ನೇ ಪುಟ ನೋಡಿ

ಬಿಎಂಟಿಸಿಗೆ ಪಾವತಿಯಾಗದ ಹಣ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಸ್ಥಾಪಿಸ-ಲಾಗಿರುವ ನಾಡಪ್ರಭು ಕೆಂಪೇಗೌಡರ 'ಪ್ರಗತಿಯ ಪ್ರತಿಮೆ' ಅನಾವರಣ ಕಾರ್ಯಕ್ರಮಕ್ಕೆ ಬಿಎಂಟಿಸಿ ಒದಗಿಸಿದ್ದ 2,399 ಬಸ್‌ಗಳಿಗೆ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈವರೆಗೂ ಹಣ ಪಾವತಿಯಾಗಿಲ್ಲ.

5

8 ಮಂದಿ ವಿರುದ್ಧ ಎಫ್‌ಐಆರ್, ಮೂವರ ಅಮಾನತು

ಮೂರು ಹಂತದಲ್ಲಿ ತನಿಖೆ, ವರದಿ ಕೇಳಿದ ಕೇಂದ್ರದ ನಗರಾಭಿವೃದ್ಧಿ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಣ್ಣೂರು ಕ್ರಾಸ್‌ನಲ್ಲಿ ಮೆಟ್ರೊ ಪಿಲ್ಲರ್ ನಿರ್ಮಿಸಲು ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಉರುಳಿ ತಾಯಿ-ಮಗು ಮೃತಪಟ್ಟ ಪ್ರಕರಣ ಸಂಬಂಧ ಗುತ್ತಿಗೆ ಕಂಪನಿ ಸೇರಿದಂತೆ ಎಂಟು ಮಂದಿ ಅಧಿಕಾರಿಗಳ ವಿರುದ್ಧ ಗೋವಿಂದಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಇವರೆಲ್ಲರಿಗೂ ಪೊಲೀಸರು ನೋಟಿಸ್ ನೀಡಿದ್ದಾರೆ.

'ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಹಾಗೂ ನಿರ್ದೇಶಕ ಚೈತನ್ಯ, ವಿಶೇಷ ಯೋಜನಾ ವ್ಯವಸ್ಥಾಪಕ ಮಾಥ್ಯೆ, ಯೋಜನಾ ನಿರ್ದೇಶಕ ವಿಕಾಸ್‌ಸಿಂಗ್, ಕಂಪನಿಯ ಕಿರಿಯ ಎಂಜಿನಿಯರ್ ಪ್ರಭಾಕರ್, ಮೇಲ್ವಿಚಾರಕ ಲಕ್ಷ್ಮಿಪತಿ ಹಾಗೂ ಬಿಎಂಆರ್‌ಸಿಎಲ್‌ನ ಡೆಪ್ಯೂಟಿ ಚೀಫ್ ಎಂಜಿನಿಯರ್ ವೆಂಕಟೇಶ ಶೆಟ್ಟಿ, ಕಾರ್ಯನಿರ್ವಾಹಕ ಎಂಜಿನಿಯರ್ ಮಹೇಶ್ ಬೆಂಡೆಕರಿ, ಸೆಕ್ಷನ್ ಎಂಜಿನಿಯರ್ ಜಾಫರ್ ಸಾದಿಕ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಸದ್ಯಕ್ಕೆ ಕೆಲವರ ಹೆಸರನ್ನು ಮಾತ್ರ ಎಫ್‌ಐಆರ್‌ಗೆ ಸೇರಿಸಲಾಗಿದೆ. ಹೆಣ್ಣೂರು ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 'ನಮ್ಮ ಮೆಟ್ರೊ' ಅಧಿಕಾರಿಗಳು ಹಾಗೂ ಗುತ್ತಿಗೆ ಕಂಪನಿ ಸಿಬ್ಬಂದಿ ಮಾಹಿತಿ ಸಂಗ್ರಹಿಸಲಾಗಿ-ದೆ. ಪೊಲೀಸ್ ತನಿಖೆಗೆ ನೆರವಾಗಲು ತಾಂತ್ರಿಕ ಪರಿಣಿತರ ನೇಮಕ ಮಾಡಿ-ಕೊಳ್ಳಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

ಮತ್ತೊಂದೆಡೆ ಬಿಎಂಆರ್‌ಸಿಎಲ್ ಪ್ರತ್ಯೇಕ ತಂಡ ರಚಿಸಿ, ತನಿಖೆ ಆರಂಭಿಸಿದ್ದು, ಕರ್ತವ್ಯ ಲೋಪದಡಿ ವೆಂಕಟೇಶ ಶೆಟ್ಟಿ, ಮಹೇಶ್ ಬೆಂಡೆಕರಿ, ಜಾಫರ್ ಸಾದಿಕ್ ಅವರನ್ನು ಅಮಾನತು ಮಾಡಿದೆ. ಖಾಸಗಿ ಸಂಸ್ಥೆಯೂ ಸೇರಿ ಒಟ್ಟು ಮೂರು ಹಂತದಲ್ಲಿ ತನಿಖೆ ನಡೆಸಲು ತೀರ್ಮಾನಿಸಲಾಗಿದೆ.

ಯಾವ ಹಂತದಲ್ಲಿ ಲೋಪವಾಗಿದೆ ಎಂಬುದನ್ನು ಪತ್ತೆಹಚ್ಚಿ ತಕ್ಷಣ ವರದಿ ಸಲ್ಲಿಸುವಂತೆ ನಿಗಮದ ಆಂತರಿಕಾ ತಾಂತ್ರಿಕಾ ತಂಡಕ್ಕೆ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಸೂಚಿಸಿದ್ದಾರೆ. ಬುಧವಾರ ಬೆಳಿಗ್ಗೆ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ತಂಡ ಉರುಳಿದ ಕಬ್ಬಿಣದ ಚೌಕಟ್ಟು, ಅದರ ಅಕ್ಕಪಕ್ಕದಲ್ಲಿ ಅಳವಡಿಸಿರುವ ಕಬ್ಬಿಣದ ಚೌಕಟ್ಟು ಪರಿಶೀಲಿಸಿತು. ಸ್ಥಳೀಯರಿಂದಲೂ ಮಾಹಿತಿ ಕಲೆ ಹಾಕಿತು.

'ಕೆಲಸದ ಗುತ್ತಿಗೆಯನ್ನು ಪಡೆದಿರುವ ಕಂಪನಿಗೆ ನೋಟಿಸ್ ನೀಡಲಾಗಿದೆ. ಸ್ಥಳ ಪರಿಶೀಲಿಸಲು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರೂ ಒಪ್ಪಿದ್ದು ಅವರೂ ಪ್ರತ್ಯೇಕ ವರದಿ ನೀಡಲಿದ್ದಾರೆ. ತನಿಖಾ ವರದಿ ಬಂದ ಮೇಲೆ ಎಲ್ಲ ತಪ್ಪಿತಸ್ಥರ ವಿರುದ್ಧವೂ ಶಿಸ್ತು ಕ್ರಮ ಆಗಲಿದೆ' ಎಂದು ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಘಟನೆ ಕುರಿತು ವರದಿ ಸಲ್ಲಿಸುವಂತೆ ಕೇಂದ್ರದ ನಗರಾಭಿವೃದ್ಧಿ ಇಲಾಖೆ ಬಿಎಂಆರ್‌ಸಿಎಲ್‌ಗೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

'ಬೇಕಿದ್ದರೆ ನಾನೇ ಹಣ ಕೊಡ್ತೀನಿ'

'ಅಷ್ಟು ದೊಡ್ಡ ಕಬ್ಬಿಣದ ಚೌಕಟ್ಟು ಅಳವಡಿಸಬೇಕಿದ್ದರೆ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲವೇಕೆ? ಗುತ್ತಿಗೆ ಕಂಪನಿಯವರು ಅಮಾಯಕರ ಜೀವ ತೆಗೆಯುತ್ತಿದ್ದಾರೆ. ಕಮಿಷನ್ ಆಸೆಗೆ ಕಳಪೆ ಕಾಮಗಾರಿ ನಡೆಸಲಾಗಿದೆ. ಪರಿಹಾರದ ಹಣ ಯಾರಿಗೆ ಬೇಕು? ಬೇಕಿದ್ದರೆ ನಾನೇ ₹ 40 ಲಕ್ಷ ವಾಪಸ್ ಕೊಡ್ತೀನಿ. ಇಬ್ಬರ ಜೀವವನ್ನೂ ಉಳಿಸಲಿ' ಎಂದು ತೇಜಸ್ವಿನಿ ಅವರ ತಂದೆ ಜಿ.ಮದನ್ ಮರಣೋತ್ತರ ಪರೀಕ್ಷೆ ನಡೆದ ಆಸ್ಪತ್ರೆ ಎದುರು ಆಕ್ರೋಶ ಹೊರಹಾಕಿದರು.



ಬೆಳಗಾವಿಯಲ್ಲಿ ಬುಧವಾರ ಕಾಂಗ್ರೆಸ್ 'ಪ್ರಜಾಧ್ವನಿ' ಯಾತ್ರೆಯಲ್ಲಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ರಣದೀಪ ಸಿಂಗ್ ಸುರ್ಜೇವಾಲಾ, ಎಂ.ಬಿ.ಪಾಟೀಲ ಅವರು ಸಾಂಕೇತಿಕವಾಗಿ ಕೊಳೆ ತೊಳೆದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಸಾಂಕೇತಿಕವಾಗಿ 'ಬಿಜೆಪಿ ಪಾಪದ ಕೊಳೆ' ತೊಳೆದ ನಾಯಕರು

ವೀರಸೌಧದಿಂದ ಕಾಂಗ್ರೆಸ್ 'ಪ್ರಜಾಧ್ವನಿ' ಯಾತ್ರೆ ಶುರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕಾಂಗ್ರೆಸ್ ರಸ್ತೆಯ-ಲ್ಲಿರುವ ವೀರಸೌಧದ ಆವರಣದಲ್ಲಿ ಬುಧವಾರ, ಕಾಂಗ್ರೆಸ್ 'ಪ್ರಜಾಧ್ವನಿ' ಯಾತ್ರೆಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

'ಬಿಜೆಪಿ ಪಾಪದ ಕೊಳೆ ತೊಳೆದೆವು' ಎನ್ನುತ್ತ ನಾಯಕರು ಪೊರಕೆ ಹಿಡಿದು ಸಾಂಕೇತಿಕವಾಗಿ ರಸ್ತೆಯ ಕಸ ಗುಡಿಸಿದರು. ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದಿದ್ದ ಅಧಿವೇಶನದ ವೇಳೆ ಇಲ್ಲಿ ತೋಡಿದ್ದ 'ಕಾಂಗ್ರೆಸ್ ಬಾವಿ'ಯಿಂದಲೇ ನೀರು ತಂದು ತೊಳೆದರು.

1924ರಲ್ಲಿ ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನದ ನಡೆದಿತ್ತು. ಗಾಂಧೀಜಿ ಅಧ್ಯಕ್ಷತೆ ವಹಿಸಿಕೊಂಡ ಏಕಮಾತ್ರ ಅಧಿವೇಶನವದು. ಅದರ ನೆನಪಿಗಾಗಿ ವೀರಸೌಧ ನಿರ್ಮಿಸಲಾಗಿದೆ. ಐತಿಹಾಸಿಕ ಮಹತ್ವ ಪಡೆದ ಈ ಸ್ಥಳದಿಂದಲೇ ಕೆಪಿಸಿಸಿ 'ಪ್ರಜಾಧ್ವನಿ' ಯಾತ್ರೆ ಆರಂಭಿಸಿತು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮುಂದಾಳತ್ವದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷ-ರಾದ ಸತೀಶ ಜಾರಕಿಹೊಳಿ, ಸಲೀಂ ಅಹಮದ್, ಹಿರಿಯ ಮುಖಂಡರಾದ ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಬಸವರಾಜ ರಾಯರಡ್ಡಿ, ಪಿ.ಟಿ. ಪರಮೇಶ್ವರ ನಾಯಕ, ಆರ್.ವಿ. ದೇಶಪಾಂಡೆ, ವಿನಯ ಕುಲಕರ್ಣಿ, ಡಿ.ಬಿ.ಇನಾಮದಾರ, ಶಾಸಕರಾದ ಲಕ್ಷ್ಮೀ ಹೆಬ್ಬಾಳಕರ, ಅಂಜಲಿ ನಿಂಬಾಳ್ಕರ್, ಚನ್ನರಾಜ ಹಟ್ಟಿಹೊಳಿ, ಮಹಾಂತೇಶ ಕೌಜಲಗಿ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ ಇತರರು ಬಸ್ ಏರಿದರು.

5 ನೇ ಪುಟ ನೋಡಿ

'200 ಯೂನಿಟ್ ವಿದ್ಯುತ್ ಉಚಿತ'

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

'ಅಡುಗೆ ಅನಿಲ ದರ ₹400ರಿಂದ ₹1,100 ಆಗಿದೆ. ರೈತರ ಆದಾಯ ಡಬಲ್ ಆಗಲಿಲ್ಲ, ರೈತರ ಸಾಲ ಮನ್ನಾ ಆಗಲಿಲ್ಲ, 10 ಗಂಟೆ ವಿದ್ಯುತ್ ನೀಡುವ ಭರವಸೆಯೂ ಈಡೇರಿಸಲಿಲ್ಲ. ಇವೆಲ್ಲ ಬಿಜೆಪಿ ಚುನಾವಣೆಗೂ ಮುನ್ನ ನೀಡಿದ ಸುಳ್ಳು ಭರವಸೆಗಳು' ಎಂದು ದೂರಿದರು.

'ಬುದ್ಧ ಮನೆ ಬಿಟ್ಟ, ಬಸವಣ್ಣ ಆಸ್ಥಾನ ಬಿಟ್ಟ , ಏಸು ಶಿಲುಬೆಗೇರಿದ, ಭೀಮಾಬಾಯಿ ಅವರು ಅಂಬೇಡ್ಕರ್ ಅವರಿಗೆ ಜನ್ಮಕೊಟ್ಟ ಘಳಿಗೆ, ಮಹಾತ್ಮ ಗಾಂಧಿ ಕಾಂಗ್ರೆಸ್ ನಾಯಕತ್ವ ವಹಿಸಿದ ಘಳಿಗೆ... ಇವೇ ನಮ್ಮ ಶುಭಘಳಿಗೆಗಳು. ಇಂಥ ಘಳಿಗೆಯಲ್ಲೇ ಯಾತ್ರೆ ಆರಂಭಿಸಿದ್ದೇವೆ' ಎಂದರು.

ಗಾಂಜಾ ಮಾರಾಟ, ಸೇವನೆ: ವೈದ್ಯರು, ವೈದ್ಯ ವಿದ್ಯಾರ್ಥಿಗಳು ಸೇರಿ 10 ಮಂದಿ ಸೆರೆ

ಮಂಗಳೂರು: ಗಾಂಜಾ ಮಾರಾಟ ಹಾಗೂ ಸೇವನೆ ಪ್ರಕರಣ ಸಂಬಂಧ ಪೊಲೀಸರು ನಗರದ ವೈದ್ಯಕೀಯ ಕಾಲೇಜುಗಳ ಇಬ್ಬರು ವೈದ್ಯರು, ಏಳು ವೈದ್ಯ ವಿದ್ಯಾರ್ಥಿಗಳು ಸೇರಿದಂತೆ 10 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ನಾಲ್ವರು ವೈದ್ಯ ವಿದ್ಯಾರ್ಥಿ-ನಿಯರು ಇದ್ದಾರೆ.

ಅನಿವಾಸಿ ಭಾರತೀಯ, ಬ್ರಿಟನ್‌ನ ಪ್ರಜೆ ನೀಲ್‌ಕಿಶೋರಿಲಾಲ್ ರಾಮ್‌ಜಿ ಷಾ (38), ನಗರದ ಪ್ರತಿಷ್ಠಿತ ವೈದ್ಯಕೀಯ ಕಾಲೇಜಿನ ವೈದ್ಯಕೀಯ ಅಧಿಕಾರಿಯಾಗಿರುವ ಕೇರಳದ ಡಾ.ಸಮೀರ್ (32), ಶಸ್ತ್ರಚಿಕಿತ್ಸಕ, ತಮಿಳುನಾಡಿನ ಡಾ.ಮಣಿಮಾರನ್ ಮುತ್ತು (28), ವೈದ್ಯ ವಿದ್ಯಾರ್ಥಿನಿ-ಯರಾದ ಕೇರಳದ ನದಿಯಾ ಸಿರಾಜ್ (24), ಮಹಾರಾಷ್ಟ್ರದ ಪುಣೆಯ ಇರಾ ಬಾಸಿನ್ (23), ಪಂಜಾಬಿನ ಚಂಡೀಗಢದ ರಿಯಾ ಚಡ್ಡಾ (22), ಆಂಧ್ರಪ್ರದೇಶದ ವರ್ಷಿಣಿ ಪ್ರಾಥಿ (26), ವೈದ್ಯ ವಿದ್ಯಾರ್ಥಿಗಳಾದ ಚಂಡೀಗಢದ ಭಾನು ದಹಿಯಾ (27), ದೆಹಲಿಯ ಕ್ಷಿತಿಜ್ ಗುಪ್ತ (25) ಹಾಗೂ ಬಂಟ್ವಾಳ ತಾಲ್ಲೂಕಿನ ಮಾರಿಪಳ್ಳದ ಮಹಮ್ಮದ್ ರವೂಫ್ ಅಲಿಯಾಸ್ ಗೌಸ್ (34) ಬಂಧಿತರು.



ಡಾ.ಮಣಿಮಾರನ್ ಮುತ್ತು



ಡಾ.ಸಮೀರ್

8 ನೇ ಪುಟ ನೋಡಿ

ನಾನು ಬಿಜೆಪಿ ಕಾರ್ಯಕರ್ತ: ಸ್ಯಾಂಟ್ರೊ ರವಿ ಹೇಳಿಕೆ



ಮೈಸೂರು: ಬೆಂಗಳೂರಿನ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ತನ್ನ ವಿರುದ್ಧ ಸ್ಯಾಂಟ್ರೊ ರವಿ ದಾಖಲಾಗಿದ್ದ ದೂರೊಂದರ ಸಂಬಂಧ ಹೇಳಿಕೆ ನೀಡುವಾಗ, ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ, 'ನಾನು ಬಿಜೆಪಿ ಕಾರ್ಯಕರ್ತ' ಎಂದು ಹೇಳಿಕೊಂಡಿದ್ದಾರೆ.

'ಸರ್ಕಾರಿ ನೌಕರರಿಗೆ ವರ್ಗಾವಣೆ ಮಾಡಿಸಿಕೊಡುವುದಾಗಿ ನಂಬಿಸಿ ಮೋಸ ಮಾಡಿದ್ದಾನೆ' ಎಂದು ಬೆಂಗಳೂರಿನ ಜಗದೀಶ್ ಎಂಬುವರು 2022ರ ಜ.21ರಂದು ದೂರು ನೀಡಿದ್ದರು. ಮರುದಿನವೇ ಪೊಲೀಸರಿಗೆ ಮೇಲಿನಂತೆ ಹೇಳಿಕೆಯನ್ನು ಸ್ಯಾಂಟ್ರೊ ರವಿ ನೀಡಿ ಸಹಿ ಹಾಕಿದ್ದರು. ದಾಖಲೆ ಪ್ರತಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಪತ್ರದಲ್ಲೇನಿದೆ?: 'ನಾನು ಸುಮಾರು 3-4 ವರ್ಷಗಳಿಂದ ಬಿಜೆಪಿ ಪಕ್ಷದ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ನನಗೆ ಬಿಜೆಪಿ ಸಂಸದರು, ಶಾಸಕರು ಮತ್ತು ರಾಜಕೀಯ ವ್ಯಕ್ತಿಗಳು ಪರಿಚಯ. ಸ್ನೇಹಿತರಾದ ಗಣೇಶ್ ಬಾಬು, ರವಿಕುಮಾರ್ ಮತ್ತು ಶ್ರೀವತ್ಸ ಎಂಬುವರ ಜೊತೆ ಹಣಕಾಸು ವ್ಯವಹಾರವಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿದ್ದೇನೆ' ಎಂದು ಹೇಳಿದ್ದಾರೆ.

ವರ್ಗಾವಣೆ ಮಾಹಿತಿ: 'ವರ್ಷದ ಹಿಂದೆ ಇನ್‌ಸ್ಪೆಕ್ಟರ್ ಜಿ.ಕೆ.ಸುಬ್ರಹ್ಮಣ್ಯ ಎಂಬುವರಿಗೆ ಚನ್ನರಾಯಪಟ್ಟಣ ಸರ್ಕಲ್ ಪೊಲೀಸ್ ಠಾಣೆಗೆ, ಹಲಗೂರು ಠಾಣೆಯಲ್ಲಿದ್ದ ಪಿಎಸ್‌ಐ ರವಿಕುಮಾರ್ ಅವರನ್ನು ಮಳವಳ್ಳಿಗೆ ವರ್ಗಾವಣೆ ಮಾಡಿಸಿಕೊಟ್ಟಿದ್ದೇನೆ.

8 ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆದಿಯೋಗಿ ಮೂರ್ತಿ ಪ್ರತಿಷ್ಠಾಪನೆಗೆ ಹೈಕೋರ್ಟ್ ತಡೆ

ಬೆಂಗಳೂರು: 'ಚಿಕ್ಕಬಳ್ಳಾಪುರ ತಾಲ್ಲೂಕಿನ ಆವಲಗುರ್ಕಿಯ ಹಸಿರುಪಟ್ಟಿ ವ್ಯಾಪ್ತಿಯಲ್ಲಿ ಈಶಾ ಯೋಗ ಕೇಂದ್ರವು ಆದಿಯೋಗಿ ಪ್ರತಿಮೆ ಸ್ಥಾಪನೆಯ ಕಾಮಗಾರಿ ಕೈಗೊಳ್ಳದಂತೆ ಮತ್ತು ಲೋಹದ ಮೂರ್ತಿ ಪ್ರತಿಷ್ಠಾಪಿಸದಂತೆ, ಹಬ್ಬದ ದಿನಗಳಲ್ಲಿ ಲಕ್ಷಗಟ್ಟಲೆ ಜನ ಜಮಾಯಿಸದಂತೆ ನಿರ್ಬಂಧಿಸಬೇಕು' ಎಂಬ ಪಿಐಎಲ್ ಮಧ್ಯಂತರ ಮನವಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್, ಈ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದೆ.

8 ನೇ ಪುಟ ನೋಡಿ

‘ಸ್ವರಕಾವೇರಿ ಸಂಗೀತ ಉತ್ಸವ’ ಫೆ. 23ರಿಂದ

ಬೆಂಗಳೂರು: ಭಾರತೀಯ ಸಾಮಗಾನ ಸಭಾದ 14ನೇ ವಾರ್ಷಿಕೋತ್ಸವದ ಅಂಗವಾಗಿ ಫೆ. 23ರಿಂದ 26ರವರೆಗೆ ‘ಸ್ವರಕಾವೇರಿ’ ಸಂಗೀತ ಉತ್ಸವ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ. ಫೆ. 26ರ ಕಾರ್ಯಕ್ರಮದಲ್ಲಿ ರಂಜನಿ ಮತ್ತು ಗಾಯತ್ರಿ ಸಹೋದರಿಯರಿಗೆ ‘ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ’ ನೀಡಲಾಗುವುದು ಎಂದು ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಎಚ್.ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮಸೇವಾ ಮಂಡಳಿಗೆ ರವೀಂದ್ರ ನೇಮಕ



ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ಅಧ್ಯಕ್ಷರಾಗಿ ನಿವೃತ್ತ ಐಎಎಸ್ ಅಧಿಕಾರಿ ಎ.ರವೀಂದ್ರ ನೇಮಕರಾಗಿದ್ದಾರೆ.

ಇತ್ತೀಚೆಗೆ ನಡೆದ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ಇವರು ಅವಿರೋಧವಾಗಿ ಆಯ್ಕೆಗೊಂಡಿದ್ದರು.

ಹಿಂದಿನ ಅಧ್ಯಕ್ಷ ಮಣಿ ನಾರಾಯಣಸ್ವಾಮಿ ಅವರು ವಯೋಸಹಜ ಕಾರಣಕ್ಕೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿಯಾಗಿದ್ದ ರವೀಂದ್ರ ಜ. 6ರಿಂದಲೇ ಅವರು ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಉತ್ತರ ಕರ್ನಾಟಕ ಉತ್ಸವದ ಲಾಂಛನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನಾವರಣಗೊಳಿಸಿದರು

ಉತ್ತರ ಕರ್ನಾಟಕ ಉತ್ಸವ 21ರಿಂದ

ಬೆಂಗಳೂರು: ಬೆಂಗಳೂರಿನಲ್ಲಿರುವ ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯು ಇದೇ 21 ಮತ್ತು 22ರಂದು ‘ಉತ್ತರ ಕರ್ನಾಟಕ ಉತ್ಸವ-2023’ ಆಯೋಜಿಸಿದೆ.

ಉತ್ಸವವು ಅರಮನೆ ಮೈದಾನದ ಶೀಶ್ ಮಹಲ್ ಪ್ಯಾಲೇಸ್ ಗೇಟ್ ನಂಬರ್- 7ನಲ್ಲಿ ನಡೆಯಲಿದೆ. ಉತ್ಸವದ ಲಾಂಛನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಬಿಡುಗಡೆ ಮಾಡಿದರು.

‘ಉತ್ತರ ಕರ್ನಾಟಕ ಭಾಗದವರು ವಿವಿಧ ಬಡಾವಣೆಗಳಲ್ಲಿ ಸಂಘಗಳನ್ನು ಸ್ಥಾಪಿಸಿದ್ದಾರೆ. ಇವು ಒಟ್ಟಾಗಿ ಮಹಾ ಸಂಸ್ಥೆ ಸ್ಥಾಪಿಸಿದ್ದು, ಸಂಘಟಿತರಾಗಿದ್ದಾರೆ’ ಎಂದು ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆ ಅಧ್ಯಕ್ಷ ಶಿವಕುಮಾರ ಮೇಟಿ ತಿಳಿಸಿದ್ದಾರೆ.

ಉತ್ತರ ಕರ್ನಾಟಕದ ಸಂಸ್ಕೃತಿ ಪರಂಪರೆ, ಉಡುಗೆ, ಆಹಾರ ಪದ್ಧತಿ ಅನಾವರಣಗೊಳಿಸಲಾಗುವುದು. ಉತ್ತರ ಕರ್ನಾಟಕ ಭಾಗದವರು ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ರಾಜ್ಯ ಸರ್ಕಾರ 3.24 ಗುಂಟೆ ಜಮೀನು ಮಂಜೂರು ಮಾಡಿದ್ದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಚಿವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಕರ್ನಾಟಕ ಪ್ರಜಾ ಮತ 2023 ವಿಧಾನಸಭೆ ಕ್ಷೇತ್ರ ಸ್ಥಿತಿ–ಗತಿ

• ವಿ.ಎಸ್. ಸುಬ್ರಹ್ಮಣ್ಯ

ರಾಜ್ಯದಲ್ಲಿ ವಿಧಾನಸಭೆ ಚುನಾವಣೆಯ ಕಾವು ಏರತೊಡಗಿದೆ. ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳಲ್ಲಿ ಯಾರೆಲ್ಲ ಆಕಾಂಕ್ಷಿಗಳಿದ್ದಾರೆ? ಆರಂಭಿಕ ಹಂತದಲ್ಲಿ ಕಣದ ಚಿತ್ರಣ ಹೇಗಿದೆ?

ಕಾಂಗ್ರೆಸ್, ಜೆಡಿಎಸ್‌ನಲ್ಲಿ ಆಕಾಂಕ್ಷಿಗಳ ಕೊರತೆ

ಬೆಂಗಳೂರು: ಕಾಂಗ್ರೆಸ್ ಹಿಡಿತದಿಂದ ಜೆಡಿಎಸ್ ತೆಕ್ಕೆಗೆ ಹೊರಳಿದ್ದ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಸಚಿವ ಕೆ. ಗೋಪಾಲಯ್ಯ ಅವರಿಂದಾಗಿ ಈಗ ಬಿಜೆಪಿ ಪ್ರಬಲ ಹಿಡಿತ ಸಾಧಿಸಿದೆ. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ಕೊರತೆ ದಟ್ಟವಾಗಿದ್ದರೆ, ಜೆಡಿಎಸ್‌ನಲ್ಲಿ ಟಿಕೆಟ್‌ಗೆ ಹಿಂದಿನಷ್ಟು ಪೈಪೋಟಿಯಿಲ್ಲ.

ಅಭಿವೃದ್ಧಿ ಹೊಂದಿದ ಪ್ರದೇಶಗಳು, ಕೊಳೆಗೇರಿಗಳು, ಇನ್ನೂ ಅಭಿವೃದ್ಧಿ ಹಂತದಲ್ಲಿರುವ ಪ್ರದೇಶಗಳ ಮಿಶ್ರಣದಂತಿರುವ ಕ್ಷೇತ್ರದಲ್ಲಿ ಚುನಾವಣಾ ಕಾವು ಏರತೊಡಗಿದೆ. ಒಕ್ಕಲಿಗ ಮತದಾರರು ನಿರ್ಣಾಯಕವಾಗಿರುವ ಕ್ಷೇತ್ರದಲ್ಲಿ ಜಾತಿ ವಿಚಾರ ಚುನಾವಣಾ ಫಲಿತಾಂಶದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಮೂಲಸೌಕರ್ಯ ಅಭಿವೃದ್ಧಿ ಮತ್ತು ಜನರ ಜತೆಗಿನ ಸಂಪರ್ಕವೂ ನಿರ್ಣಾಯಕ ಪಾತ್ರ ವಹಿಸಲಿವೆ.

2008ರ ವಿಧಾನಸಭಾ ಚುನಾವಣೆಯಲ್ಲಿ ಮಹಾಲಕ್ಷ್ಮಿ ಬಡಾವಣೆಯಲ್ಲಿ ಕಾಂಗ್ರೆಸ್‌ನ ನೆ.ಲ. ನರೇಂದ್ರಬಾಬು ಗೆಲುವು ಸಾಧಿಸಿದ್ದರು. ಅವರೀಗ ಬಿಜೆಪಿಯಲ್ಲಿದ್ದು, ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ನಂತರ 2013ರ ಚುನಾವಣೆಯಲ್ಲಿ ಜೆಡಿಎಸ್‌ನ ಕೆ. ಗೋಪಾಲಯ್ಯ ಜಯ ಗಳಿಸಿದ್ದರು. 2018 ರ ಚುನಾವಣೆಯಲ್ಲೂ ಫಲಿತಾಂಶ ಪುನರಾವರ್ತನೆಯಾಗಿತ್ತು. ಆದರೆ, ವರ್ಷದೊಳಗೆ ಗೋಪಾಲಯ್ಯ ಪಕ್ಷ ಬದಲಿಸಿ ಬಿಜೆಪಿ ಸೇರಿದ್ದರು. 2019 ರ ಆಗಸ್ಟ್‌ನಲ್ಲಿ ನಡೆದ ಉಪ ಚುನಾವಣೆಯಲ್ಲಿ ಭಾರಿ ಅಂತರದೊಂದಿಗೆ ಗೆಲುವು ಸಾಧಿಸಿದ್ದರು.


ಗೋಪಾಲಯ್ಯ ಬಿಜೆಪಿ ಅಭ್ಯರ್ಥಿಯಾಗಿ ಮತ್ತೆ ಕಣಕ್ಕಿಳಿಯಲು ಸಕಲ ತಯಾರಿ ನಡೆಸಿಕೊಂಡಿದ್ದಾರೆ. 2019ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಂ. ಶಿವರಾಜು ಮತ್ತು ಜೆಡಿಎಸ್ ಅಭ್ಯರ್ಥಿಯಾಗಿದ್ದ ಡಾ. ಗಿರೀಶ್ ಕೆ. ನಾಶಿ ಇಬ್ಬರೂ ಈ ಬಾರಿ ಕಣಕ್ಕಿಳಿಯುವ ಉಮೇದಿನಲ್ಲಿಲ್ಲ.

ಒಕ್ಕಲಿಗರ ಸಂಘದ ನಿರ್ದೇಶಕರೂ ಆಗಿರುವ ಮಲ್ಲೇಶ್ವರದ ವೇಗಸ್ ಆಸ್ಪತ್ರೆಯ ವೈದ್ಯ ಡಾ. ನಾರಾಯಣಸ್ವಾಮಿ ಒಬ್ಬರೇ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಜೆಡಿಎಸ್‌ನಿಂದ ಮುಖಂಡ ಸಿ. ರಾಜಣ್ಣ ಮತ್ತು ಬಿಬಿಎಂಪಿ ಮಾಜಿ ಉಪ ಮೇಯರ್ ಭದ್ರೇಗೌಡ ಆಕಾಂಕ್ಷಿಗಳಾಗಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಕಣಕ್ಕಿಳಿಯಲು ಶಾಂತಲಾ ದಾಮ್ಲೆ ತಯಾರಿ ನಡೆಸಿದ್ದಾರೆ.

ಮಹಾಲಕ್ಷ್ಮೀ ಲೇಔಟ್



ಕೆ. ಗೋಪಾಲಯ್ಯ



ಹಾಲಿ ಶಾಸಕ
ಕೆ. ಗೋಪಾಲಯ್ಯ (ಬಿಜೆಪಿ)

2019ರ ಉಪ ಚುನಾವಣೆ

ಗೆಲುವು– ಕೆ. ಗೋಪಾಲಯ್ಯ (ಬಿಜೆಪಿ);85,889 ಮತ
ಎಂ. ಶಿವರಾಜು, ಕಾಂಗ್ರೆಸ್;31,503
ಡಾ. ಗಿರೀಶ್ ಕೆ. ನಾಶಿ, ಜೆಡಿಎಸ್;23,516

ಹಾಲಿ ಮತದಾರರ ವಿವರ

1,42,462 ಪುರುಷರು | 1,34,543 ಮಹಿಳೆಯರು | 38 ತೃತೀಯ ಲಿಂಗಿಗಳು

2,77,043 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಜೆಡಿಎಸ್	88,218	66,127	28,095
ಬಿಜೆಪಿ	47,118	23,545	39,413
ಕಾಂಗ್ರೆಸ್	20,496	50,757	42,652

ಸಾಂಪ್ರದಾಯಿಕ ಎದುರಾಳಿಗಳೇ ಪ್ರಬಲ ಆಕಾಂಕ್ಷಿಗಳು

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ 2009ರ ಉಪ ಚುನಾವಣೆಯಿಂದ ಈಚೆಗೆ ಸಚಿವ ವಿ. ಸೋಮಣ್ಣ ಮತ್ತು ಶಾಸಕ ಎಂ. ಕೃಷ್ಣಪ್ಪ ಅವರ ಪುತ್ರ ಪ್ರಿಯಾಕೃಷ್ಣ ನಡುವಿನ ರಾಜಕೀಯ ಕದನದ ಅಖಾಡವಾಗಿ ಹೊರಹೊಮ್ಮಿದೆ. ಈ ಬಾರಿಯೂ ಸಾಂಪ್ರದಾಯಿಕ ಎದುರಾಳಿಗಳು ಮುಖಾಮುಖಿ ಆಗುವ ಸಾಧ್ಯತೆ ನಿಚ್ಚಳವಾಗಿರುವುದರಿಂದ ಬಿಜೆಪಿ, ಕಾಂಗ್ರೆಸ್‌ನಲ್ಲಿ ಇತರ ಆಕಾಂಕ್ಷಿಗಳೇ ಇಲ್ಲ.

2008ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದ ಸೋಮಣ್ಣ, ಕೆಲವೇ ತಿಂಗಳುಗಳಲ್ಲಿ ಬಿಜೆಪಿಗೆ ವಲಸೆ ಹೋಗಿದ್ದರು. 2009ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಪಕ್ಕದ ವಿಜಯನಗರ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಅವರ ಮಗ ಪ್ರಿಯಾಕೃಷ್ಣ ಅವರನ್ನೇ ಕಾಂಗ್ರೆಸ್ ಕಣಕ್ಕಿಳಿಸಿತ್ತು. ಅಲ್ಲಿಯವರೆಗೂ 'ಆಪ್ತ ಮಿತ್ರ'ರಾಗಿದ್ದ ಕೃಷ್ಣಪ್ಪ ಮತ್ತು ಸೋಮಣ್ಣ ಚುನಾವಣೆಯಲ್ಲಿ ರಾಜಕೀಯ ಜಿದ್ದಾಜಿದ್ದಿಗೆ ಇಳಿದಿದ್ದರು. ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದ ಸೋಮಣ್ಣ ಈ ಚುನಾವಣೆಯಲ್ಲಿ ಸೋಲು ಕಂಡಿದ್ದರು.

2013ರಲ್ಲಿ ಕ್ಷೇತ್ರ ಬದಲಿಸಿ ವಿಜಯನಗರದಲ್ಲಿ ಸ್ಪರ್ಧಿಸಿದ್ದ ಸೋಮಣ್ಣ ಅಲ್ಲಿಯೂ ಸೋಲು ಅನುಭವಿಸಿದ್ದರು. ಆಗ ಪ್ರಿಯಾಕೃಷ್ಣ ಗೋವಿಂದರಾಜನಗರ ಕ್ಷೇತ್ರದಲ್ಲಿ ಪುನರಾಯ್ಕೆ ಆಗಿದ್ದರು. 2018ರ ಚುನಾವಣೆಯಲ್ಲಿ ಪುನಃ ಗೋವಿಂದರಾಜನಗರಕ್ಕೆ ಬಂದು ಸ್ಪರ್ಧಿಸಿದ್ದ ಸೋಮಣ್ಣ, ಪ್ರಿಯಾಕೃಷ್ಣ ಅವರನ್ನು ಮಣಿಸಿದ್ದರು. 2023ರ ಚುನಾವಣೆಯಲ್ಲಿ ಮತ್ತೆ ಮುಖಾಮುಖಿ ಆಗಲು ಇಬ್ಬರೂ ಸಜ್ಜಾಗುತ್ತಿದ್ದಾರೆ. ಸೋಮಣ್ಣ ಕ್ಷೇತ್ರ ಬದಲಿಸುವ ವದಂತಿ ಪದೇ ಪದೇ ಹರಿದಾಡುತ್ತಿದೆ. ಆದರೆ, ಅವರು ಮೌನ ಮುರಿದಿಲ್ಲ.


ಬಿಬಿಎಂಪಿ ಮಾಜಿ ಸದಸ್ಯರೂ ಆಗಿರುವ ಜೆಡಿಎಸ್‌ನ ಬೆಂಗಳೂರು ಮಹಾನಗರ ಘಟಕದ ಅಧ್ಯಕ್ಷ ಆರ್. ಪ್ರಕಾಶ್ ಅವರಿಗೆ ಜೆಡಿಎಸ್ ಟಿಕೆಟ್ ಘೋಷಿಸಿದೆ. ಬಿಜೆಪಿಯಲ್ಲಿ ಸೋಮಣ್ಣ ಹೊರತಾಗಿ ಆಕಾಂಕ್ಷಿಗಳಿಲ್ಲ. ಕಾಂಗ್ರೆಸ್‌ನಲ್ಲಿ ಪ್ರಿಯಾಕೃಷ್ಣ ಒಬ್ಬರೇ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಮೂಲಸೌಕರ್ಯ ಅಭಿವೃದ್ಧಿ ಮತ್ತು ಜಾತಿ ಈ ಕ್ಷೇತ್ರದಲ್ಲಿ ಚುನಾವಣೆ ಮೇಲೆ ನಿರ್ಣಾಯಕವಾಗಿ ಪ್ರಭಾವ ಬೀರುವ ಅಂಶಗಳು. ಕೋವಿಡ್ ಸಂಕಷ್ಟದ ಅವಧಿಯಲ್ಲಿ ಜನರಿಗೆ ನೆರವಾದ ವಿಚಾರವೂ ಇಲ್ಲಿ ಈ ಬಾರಿ ಚುನಾವಣಾ ವಿಷಯವಾಗುವ ಸಾಧ್ಯತೆ ದಟ್ಟವಾಗಿದೆ. ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮೇಲೆ ಹಕ್ಕು ಸಾಧಿಸುವ ಪ್ರಯತ್ನ ಹಾಲಿ–ಮಾಜಿ ಶಾಸಕರಿಂದ ನಡೆಯುತ್ತಿದೆ. ಹಲವು ತಿಂಗಳ ಹಿಂದೆಯೇ ಈ ಕ್ಷೇತ್ರದಲ್ಲಿ ಚುನಾವಣಾ ಕಾವು ಆವರಿಸಿಕೊಂಡಿದ್ದು, ಪಕ್ಷಾಂತರ ಪರ್ವ ನಿರಂತರವಾಗಿ ನಡೆಯುತ್ತಿದೆ.

ಗೋವಿದರಾಜನಗರ



ವಿ. ಸೋಮಣ್ಣ



ಹಾಲಿ ಶಾಸಕ
ವಿ. ಸೋಮಣ್ಣ (ಬಿಜೆಪಿ)

ಹಾಲಿ ಮತದಾರರ ವಿವರ

1,45,574 ಪುರುಷರು | 1,35,483 ಮಹಿಳೆಯರು | 41 ತೃತೀಯ ಲಿಂಗಿಗಳು

2,81,098 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	79,135	30,194	28,935
ಕಾಂಗ್ರೆಸ್	67,760	72,654	53,297
ಜೆಡಿಎಸ್	7,090	20,662	19,155

ಕೃಷ್ಣಪ್ಪ ಎದುರು ಸ್ಪರ್ಧೆಗೆ ಹೊಸಬರ ಪೈಪೋಟಿ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕ ಎಂ. ಕೃಷ್ಣಪ್ಪ ಒಬ್ಬರೇ ಆಕಾಂಕ್ಷಿ. ಜೆಡಿಎಸ್‌ನಲ್ಲಿ ಪ್ರಬಲ ಆಕಾಂಕ್ಷಿಗಳೇ ಇಲ್ಲ. ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಹೊಸಬರ ಪೈಪೋಟಿ

– ಇದು ಹೆಚ್ಚು ಅಭಿವೃದ್ಧಿ ಹೊಂದಿರುವ ಪ್ರದೇಶಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳ ಮಿಶ್ರಣದಂತಿರುವ ವಿಜಯನಗರ ವಿಧಾನಸಭಾ ಕ್ಷೇತ್ರದ ಸದ್ಯದ ಸ್ಥಿತಿ.

2008ರಿಂದಲೂ ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ವಿಜಯನಗರ ವಿಧಾನಸಭಾ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ನಿರಂತರ ಪ್ರಯತ್ನ ನಡೆಸುತ್ತಲೇ ಇದೆ. ಆದರೆ, ಸತತ ಮೂರು ಬಾರಿ ಗೆಲುವು ಸಾಧಿಸಿರುವ ಕೃಷ್ಣಪ್ಪ ಮತ್ತೆ ಅಖಾಡಕ್ಕೆ ಇಳಿಯಲು ಸಿದ್ಧರಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ಅವರ ಹೊರತಾಗಿ ಆಕಾಂಕ್ಷಿಗಳಿಲ್ಲ. ಟಿಕೆಟ್ ಖಾತರಿಪಡಿಸಿಕೊಂಡಂತಿರುವ ಅವರು ಈಗಾಗಲೇ ಚುನಾವಣಾ ತಯಾರಿ ಆರಂಭಿಸಿದ್ದಾರೆ.

2018ರಲ್ಲಿ ತೀವ್ರ ಪೈಪೋಟಿ ಎದುರಿಸಿದ್ದ ಕೃಷ್ಣಪ್ಪ, ಈ ಬಾರಿ ಹಲವು ತಿಂಗಳ ಹಿಂದೆಯೇ ಮತದಾರರ ಸಂಪರ್ಕ ಕಾರ್ಯಕ್ರಮದಲ್ಲಿ ಸಕ್ರಿಯರಾಗಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಆಗಾಗ ಕ್ಷೇತ್ರಕ್ಕೆ ಕರೆತಂದು ಚುನಾವಣಾ ಕಾವು ಏರಿಸುತ್ತಿದ್ದಾರೆ.

ಬಿಜೆಪಿಯಲ್ಲಿ 2018ರ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದ ಎಚ್. ರವೀಂದ್ರ ಮತ್ತೆ ಸ್ಪರ್ಧೆಗೆ ಆಕಾಂಕ್ಷಿ. ಎರಡು ಬಾರಿ ಬಿಬಿಎಂಪಿ ಸದಸ್ಯರಾಗಿದ್ದ ಉಮೇಶ್ ಶೆಟ್ಟಿ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಅಶ್ವತ್ಥ ನಾರಾಯಣ ಗೌಡ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ವಿಜಯನಗರ ಕ್ಷೇತ್ರದಲ್ಲಿ ಈ ಬಾರಿ ಟಿಕೆಟ್‌ಗಾಗಿ ಹಿಂದೆಂದಿಗಿಂತ ಹೆಚ್ಚು ಪೈಪೋಟಿ ಇದೆ.


ಎಲ್ಲರೂ ಆಪ್ತರ ಮೂಲಕ ಬಿಜೆಪಿ ವರಿಷ್ಠರ ಮನವೊಲಿಕೆಯಲ್ಲಿ ನಿರತರಾಗಿದ್ದಾರೆ. ನೆರೆಯ ಗೋವಿಂದರಾಜನಗರ ಕ್ಷೇತ್ರದ ಶಾಸಕರೂ ಆಗಿರುವ ವಸತಿ ಸಚಿವ ವಿ. ಸೋಮಣ್ಣ ಬೆಂಬಲವೂ ಈ ಕ್ಷೇತ್ರದ ಅಭ್ಯರ್ಥಿ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ.

ಮೂಲಸೌಕರ್ಯ ಅಭಿವೃದ್ಧಿ, ಜಾತಿ ಮತ್ತು ಕೋವಿಡ್ ಸಂಕಷ್ಟದ ಅವಧಿಯಲ್ಲಿ ಜನರ ನೆರವಿಗೆ ನಿಂತ ವಿಚಾರಗಳು ಈ ಕ್ಷೇತ್ರದಲ್ಲೂ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ 'ಫಲ' ಪಡೆಯಲು ಶಾಸಕ ಕೃಷ್ಣಪ್ಪ ಮತ್ತು ಬಿಜೆಪಿ ನಡುವೆ ತೀವ್ರ ಪೈಪೋಟಿಯೂ ಆರಂಭವಾಗಿದೆ.

ವಿಜಯನಗರ



ಎಂ. ಕೃಷ್ಣಪ್ಪ



ಹಾಲಿ ಶಾಸಕ
ಎಂ. ಕೃಷ್ಣಪ್ಪ (ಕಾಂಗ್ರೆಸ್)

ಹಾಲಿ ಮತದಾರರ ವಿವರ

1,51,418 ಪುರುಷರು | 1,38,497 ಮಹಿಳೆಯರು | 167 ತೃತೀಯ ಲಿಂಗಿಗಳು

2,90,082 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	73,353	76,891	53,297
ಬಿಜೆಪಿ	70,578	44,249	28,935
ಜೆಡಿಎಸ್	8,174	4,253	19,155

ಹಣಕಾಸು ಸಾಕ್ಷರತೆ ಸಮಾವೇಶದಲ್ಲಿ ಕೇಂದ್ರ ಸಚಿವೆ ಸಾಧ್ವಿ ನಿರಂಜನ ಜ್ಯೋತಿ ಅಭಿಮತ

ಆರ್ಥಿಕ ಸಾಕ್ಷರತೆಯಿಂದ ಕುಟುಂಬ ಸದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರನ್ನು ಆರ್ಥಿಕ ಸಾಕ್ಷರರನ್ನಾಗಿ ಮಾಡಿದರೆ ಆ ಕುಟುಂಬವೂ ಆರ್ಥಿಕವಾಗಿ ಸದೃಢವಾಗಲಿದೆ. ಆದ್ದರಿಂದ ಕೇಂದ್ರ ಸರ್ಕಾರವು 'ಜನ್ ಧನ್' ಸೇರಿ ಹಲವು ಮಹಿಳಾ ಪರ ಕಾರ್ಯಕ್ರಮಗಳನ್ನು ರೂಪಿಸಿದೆ' ಎಂದು ಕೇಂದ್ರ ಸಚಿವೆ ಸಾಧ್ವಿ ನಿರಂಜನ ಜ್ಯೋತಿ ತಿಳಿಸಿದರು.

ನ್ಯಾಷನಲ್ ಅಕಾಡೆಮಿ ಆಫ್ ರುಡ್‌ಸೆಟ್ ಸಹಯೋಗದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ನಗರದಲ್ಲಿ ಬುಧವಾರ ಹಮ್ಮಿಕೊಂಡ ಸಕ್ಷಮ್ ರಾಷ್ಟ್ರಮಟ್ಟದ ಹಣಕಾಸು ಸಾಕ್ಷರತೆ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

'ಕೋವಿಡ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟದಿಂದ ಪಾರಾಗಲು 'ಜನ್ ಧನ್'ದಂತಹ ಯೋಜನೆಗಳು ಸಹಕಾರಿಯಾದವು. ಹಿಂದೆ ಗ್ರಾಮೀಣ ಭಾಗದ ಜನರು ಬ್ಯಾಂಕ್‌ಗಳ ಮುಂದೆ ದಿನವಿಡೀ ಕಾಯುವ ಸ್ಥಿತಿ ಇತ್ತು. ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪರಿಸ್ಥಿತಿ ಬದಲಾಗಿ, ಡಿಜಿಟಲೀಕರಣದ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸರಳೀಕರಣ ಮಾಡಲಾಯಿತು' ಎಂದು ಹೇಳಿದರು.

'ಹಣಕಾಸು ಸಾಕ್ಷರತೆ ಕೊರತೆಯಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆರ್ಥಿಕ ನಿರ್ಧಾರ ಕಷ್ಟಕರವಾಗಿತ್ತು. ಆದ್ದರಿಂದ ಎಲ್ಲ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರಿಗೆ ಹಣಕಾಸು ಸಾಕ್ಷರತೆ ತರಬೇತಿ ನೀಡಲಾಗುತ್ತಿದೆ. ಇದರಿಂದ ಹಣಕಾಸು ಸೇವೆ, ಬ್ಯಾಂಕ್ ವ್ಯವಹಾರ, ವಿಮೆ, ಪಿಂಚಣಿ, ಸಾಲದ ಮೇಲಿನ ಬಡ್ಡಿ ಸೇರಿ ವಿವಿಧ ಹಣಕಾಸು ಸಂಬಂಧಿ ಗೊಂದಲ ನಿವಾರಣೆ ಆಗಲಿದೆ' ಎಂದರು.

ರಾಜ್ಯ ಕೌಶಲ ಅಭಿವೃದ್ಧಿ ನಿಗಮದ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, 'ರಾಜ್ಯ ಸರ್ಕಾರ ಮಹಿಳಾ ಉದ್ಯಮಿಗಳ ಸಬಲೀಕರಣಕ್ಕೆ ಆದ್ಯತೆ ನೀಡಿದೆ. ಮಹಿಳೆಯರೂ ಹಲವು ಉದ್ಯೋಗಗಳಲ್ಲಿ ತೊಡಗಲು ಕೌಶಲ ತರಬೇತಿ ನೀಡಲಾಗುತ್ತಿದೆ' ಎಂದರು.

ಬ್ಯಾಂಕ್ ಆಫ್ ಬರೋಡಾದ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಕೆ.ಖುರಾನ, 'ಮಹಿಳೆಯರಿಗೆ ಆರ್ಥಿಕ ಸಾಕ್ಷರತೆ ಬಗ್ಗೆ ಬ್ಯಾಂಕ್‌ಗಳು ಅರಿವು ಮೂಡಿಸುತ್ತಿವೆ. ಸೈಬರ್ ವಂಚನೆ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸುವ ಕೆಲಸವೂ ಆಗಬೇಕು' ಎಂದು ಹೇಳಿದರು.



ಸಮಾವೇಶದಲ್ಲಿ ಸಾಧ್ವಿ ನಿರಂಜನ ಜ್ಯೋತಿ ಅವರು ಪ್ರದರ್ಶನಕ್ಕೆ ಇಟ್ಟಿದ್ದ ಹಣಕಾಸು ಸಾಕ್ಷರತೆ ಮಾದರಿಯ ಮೇಲೆ ದಾಳ ಉರುಳಿಸಿದರು. ಗ್ರಾಮೀಣಾಭಿವೃದ್ಧಿ ಇಲಾಖೆ ಜಂಟಿ ಕಾರ್ಯದರ್ಶಿ ನೀತಾ ಕೇಜ್ರಿವಾಲ್ ಹಾಗೂ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಇದ್ದಾರೆ. –ಪ್ರಜಾವಾಣಿ ಚಿತ್ರ



ಸೌಂದರ್ಯ ಸುಗ್ಗಿ... ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್ ಕಾಲೇಜು ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಸೌಂದರ್ಯ ಸುಗ್ಗಿ ಪರ್ವ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ರಂಜು ಪಿ.

'ಉಗ್ರರಿಗೆ ಪ್ರಮಾಣಪತ್ರ ನೀಡಲು ಯಾತ್ರೆ'

ಬೆಂಗಳೂರು: ಸುಳ್ಳಿಗೆ ಪುಷ್ಟಿ ನೀಡಲು ಹಾಗೂ ಭಯೋತ್ಪಾದಕರಿಗೆ ಪ್ರಮಾಣಪತ್ರ ನೀಡಲು ಕಾಂಗ್ರೆಸ್ ನಾಯಕರು ಬಸ್ ಯಾತ್ರೆ ಆರಂಭಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಟೀಕಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶೇಕಡ 40ರಷ್ಟು ಕಮಿಷನ್ ಆರೋಪ ಮಾಡುತ್ತಿರುವುದರ ಹಿಂದೆ ಬಿಜೆಪಿ ಸರ್ಕಾರದ ವರ್ಚಸ್ಸು ಕೆಡಿಸುವ ಷಡ್ಯಂತ್ರ ರೂಪಿಸಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರಿಗೆ ಆರೋಪಕ್ಕೆ ಪೂರಕವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಕ್ಕೂ ಆಗಿಲ್ಲ' ಎಂದು ಹೇಳಿದರು.

ಆರ್.ವಿ ವಿಶ್ವವಿದ್ಯಾಲಯ: ₹10 ಕೋಟಿ ವಿದ್ಯಾರ್ಥಿವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಆರ್.ವಿ. ವಿಶ್ವವಿದ್ಯಾಲಯ 2023–24ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನಕ್ಕಾಗಿ ₹10 ಕೋಟಿ ಮೀಸಲಿಟ್ಟಿದೆ.

ಪದವಿ ಹಾಗೂ ಸ್ನಾತಕೋತ್ತರ ವಿಭಾಗದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಈ ಹಣ ವಿನಿಯೋಗಿಸಲಾಗುತ್ತಿದೆ.

ಈ ವಿದ್ಯಾರ್ಥಿವೇತನ ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಎಂಜನಿಯರಿಂಗ್‌ನ ಬಿ.ಟೆಕ್, ಬಿ.ಎಸ್‌ಸಿ, ಸ್ಕೂಲ್ ಆಫ್ ಲಾನಲ್ಲಿ ಕಾನೂನು ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು, ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಆ್ಯಂಡ್ ಸೈನ್ಸ್ ಮತ್ತು ಸ್ಕೂಲ್ ಆಫ್ ಡಿಜೈನ್ ಆ್ಯಂಡ್ ಇನ್ನೋವೇಷನ್, ಸ್ಕೂಲ್ ಆಫ್ ಬ್ಯುಸಿನೆಸ್ ಮತ್ತು ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಬಿ.ಬಿ.ಎ., ಬಿ.ಕಾಂ, ಮತ್ತು ಬಿ.ಎ(ಎಕನಾಮಿಕ್ಸ್) ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನ ನೀಡಲಾಗುವುದು.

2023–24ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಗೆ https://admissions.rvu.edu.in ವೆಬ್‌ಸೈಟ್‌ಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

'ನಗರೀಕರಣದಿಂದ ಪರಿಸರ ನಾಶ'



ಆಸ್ಪತ್ರೆಯ ಸಿಬ್ಬಂದಿ ಗಿಡಗಳನ್ನು ನೆಟ್ಟು ಸಂಭ್ರಮಿಸಿದರು.

ಬೆಂಗಳೂರು: 'ಪರಿಸರದ ಮೇಲಿನ ನಿರಂತರ ಆಕ್ರಮಣ ಹಾಗೂ ನಗರೀಕರಣದಿಂದಾಗಿ ಇಂದು ಪ್ರಕೃತಿ ವಿನಾಶದತ್ತ ಸಾಗುತ್ತಿದೆ' ಎಂದು ಆಸ್ಟರ್ ಆರ್.ವಿ.ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರಶಾಂತ್ ಕಳವಳ ವ್ಯಕ್ತಪಡಿಸಿದರು.

ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡಿದ್ದ ಗಿಡ ನೆಡುವ ಅಭಿಯಾನದಲ್ಲಿ ಮಾತನಾಡಿದ ಅವರು, ಮುಂದಿನ ಪೀಳಿಗೆಗೆ ಆರೋಗ್ಯಯುತ ಪರಿಸರ ನಿರ್ಮಿಸಲು ನಗರ ಪ್ರದೇಶದಲ್ಲಿ ಗಿಡಗಳನ್ನು ಬೆಳೆಸಬೇಕು. ಪರಿಸರವನ್ನು ಸಂರಕ್ಷಿಸುವ ಕಾರ್ಯ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ ಆಗಬೇಕು. ಪರಿಸರದ ಮಹತ್ವ ಅರಿತು ಕಾರ್ಯೋನ್ಮುಖರಾಗಬೇಕು' ಎಂದು ಹೇಳಿದರು.

ಆಸ್ಪತ್ರೆಯ ಸಾಮಾಜಿಕ ಹೊಣೆಗಾರಿಕೆ ನಿಧಿ ವಿಭಾಗದ ಮುಖ್ಯಸ್ಥ ರೋಹನ್, 'ನಗರದಲ್ಲಿ ಮಾಲಿನ್ಯ ಹಾಗೂ ತಾಪಮಾನ ಹೆಚ್ಚಳವಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ಬೆಳೆಸಿದಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು' ಎಂದರು.

ಆಸ್ಪತ್ರೆಯ 50ಕ್ಕೂ ಅಧಿಕ ಸಿಬ್ಬಂದಿ ಬನ್ನೇರುಘಟ್ಟದ ಬಳಿ 150 ಗಿಡಗಳನ್ನು ನೆಟ್ಟರು.

'ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೆರವು'

ಎಫ್‌ಕೆಸಿಸಿಐಗೆ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್. ದೊರೆಸ್ವಾಮಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರದ ಜೊತೆ ಕೈಜೋಡಿಸುವಂತೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಪದಾಧಿಕಾರಿಗಳಿಗೆ ರಾಜ್ಯ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್. ದೊರೆಸ್ವಾಮಿ ಮನವಿ ಮಾಡಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲ್ ರೆಡ್ಡಿ ಮತ್ತು ಪದಾಧಿಕಾರಿಗಳು ಹಾಗೂ ಹಿಂದಿನ ಅಧ್ಯಕ್ಷರ ಜೊತೆ ಅವರು ಸಭೆ ನಡೆಸಿದರು.

'ರಾಜ್ಯದ 48 ಸಾವಿರಕ್ಕೂ ಹೆಚ್ಚು ಶಾಲೆಗಳ ಪೈಕಿ ಶೇ 60ರಷ್ಟು ಶಾಲೆಗಳು ಅತಿವೃಷ್ಟಿ ಹಾಗೂ ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿವೆ. ಈ ಶಾಲೆಗಳಿಗೆ ನೆರವಿನ ಅಗತ್ಯವಿದೆ. ಶಾಸಕರು, ಸಂಸದರು ಮತ್ತು ವಿಶ್ವವಿದ್ಯಾನಿಲಯಗಳು ಸುಮಾರು 1,500 ಸರ್ಕಾರಿ ಶಾಲೆಗಳನ್ನು ಅಭಿವೃಪಡಿಸಲು ದತ್ತು ಪಡೆದಿವೆ. ಇನ್ನಷ್ಟು ಶಾಲೆಗಳು ನೆರವಿನ ನಿರೀಕ್ಷೆಯಲ್ಲಿವೆ' ಎಂದರು.

'ಡಿಪ್ಲೊಮಾ ಮತ್ತು ಪದವಿಪೂರ್ವ, ಪದವಿ ವಿದ್ಯಾರ್ಥಿಗಳಿಗೆ ಉದ್ಯೋಗ ಕಂಡುಕೊಳ್ಳಲು ಪ್ಲೇಸ್‌ಮೆಂಟ್ ಪ್ಲಾಟ್‌ಫಾರ್ಮ್ ಸ್ಥಾಪಿಸಲು ವಿಶ್ವವಿದ್ಯಾನಿಲಯಗಳ ಜೊತೆ ಎಫ್‌ಕೆಸಿಸಿಐ ಕೈಜೋಡಿಸಬೇಕು ಆಗಬೇಕು' ಎಂದೂ ಅವರು ಹೇಳಿದರು.

ದೊರೆಸ್ವಾಮಿ ಅವರ ನಡೆಯನ್ನು ಶ್ಲಾಘಿಸಿದ ಗೋಪಾಲ್ ರೆಡ್ಡಿ, 'ಇದೊಂದು ಉತ್ತಮ ಕ್ರಮ. ನಾವು ಸಾಧ್ಯವಿರುವ ಎಲ್ಲ ಸಹಕಾರವನ್ನು ಸರ್ಕಾರಕ್ಕೆ ನೀಡುತ್ತೇವೆ' ಎಂದು ಭರವಸೆ ನೀಡಿದರು.

ಎಫ್‌ಕೆಸಿಸಿಐ ಉಪಾಧ್ಯಕ್ಷ ಎಂ.ಜಿ. ಬಾಲಕೃಷ್ಣ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷರಾದ ಕೆ.ಎಂ. ಶ್ರೀನಿವಾಸ ಮೂರ್ತಿ, ಕೆ. ಲಕ್ಷ್ಮಣ್, ಕೆ. ರಾಮಸ್ವಾಮಿ, ಬಿ.ಎಸ್.ಅರುಣ್ ಕುಮಾರ್, ಎಸ್. ಬಾಬು, ಜೆ.ಆರ್.ಬಂಗೇರ, ಕೆ.ಶಿವಷಣ್ಮುಗಂ, ಎಫ್‌ಕೆಸಿಸಿಐ ನಿರ್ದೇಶಕ ಬಿ.ಪಿ. ಶಶಿಧರ್ ಸಭೆಯಲ್ಲಿದ್ದರು.



ರಾಜ್ಯ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಅವರನ್ನು ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ ಸನ್ಮಾನಿಸಿದರು. ಎಫ್‌ಕೆಸಿಸಿಐನ ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಪದಾಧಿಕಾರಿಗಳು ಇದ್ದರು.

'ಸಿದ್ಧಲಿಂಗಯ್ಯ ಹೆಸರಿನಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕವಿ ಸಿದ್ಧಲಿಂಗಯ್ಯ ಅವರ ಹೆಸರಿನಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ, ಅವರ ಸಾಹಿತ್ಯ ಕೃತಿಗಳು ಹಾಗೂ ಭಾಷಣಗಳನ್ನು ಜನರಿಗೆ ತಲುಪಿಸಬೇಕು' ಎಂದು ಪತ್ರಕರ್ತ ಶಿವಾಜಿ ಗಣೇಶನ್ ಹೇಳಿದರು.

ನಾಡೋಜ ಡಾ.ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಕವಿ ಡಾ. ಸಿದ್ಧಲಿಂಗಯ್ಯ ಅವರ ಒಡನಾಟ ಮತ್ತು ಹೋರಾಟ' ವಿಷಯದ ಬಗ್ಗೆ ಹಮ್ಮಿಕೊಂಡ ತಿಂಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಈಗಲೂ ಪ್ರಗತಿಪರ ಸಭೆ, ಚಳವಳಿಗಳಿಗೆ ಅವರ ಹಾಡುಗಳು ಸ್ಫೂರ್ತಿಯಾಗಿವೆ. ಅವರು ಇದ್ದಿದ್ದರೆ ಮತ್ತಷ್ಟು ಒಳ್ಳೆಯ ಹಾಡುಗಳು ಹೊರಹೊಮ್ಮುತ್ತಿದ್ದವು. ವಿದ್ಯಾರ್ಥಿಯಾಗಿದ್ದಾಗ ಅವರು ಬರೆದಿದ್ದ ಹಾಡುಗಳಲ್ಲಿ ಆಕ್ರೋಶವಿತ್ತು. ಆಕಸ್ಮಿಕವಾಗಿ ಸಿನಿಮಾಗಳಿಗೂ ಗೀತೆಗಳನ್ನು ಬರೆದರು.



ಸಿದ್ಧಲಿಂಗಯ್ಯ

ವಿಧಾನ ಪರಿಷತ್ ಸದಸ್ಯರಾದ ಬಳಿಕ ಅವರು ಸಹಜವಾಗಿಯೇ ಮೃದುವಾದರು' ಎಂದು ಹೇಳಿದರು.

'ಅವರು ಬಿಜೆಪಿ ಕಡೆ ವಾಲುತ್ತಿದ್ದಾರೆ ಎಂಬ ಅಭಿಪ್ರಾಯ ಒಂದು ಹಂತದಲ್ಲಿ ಕೆಲವರಲ್ಲಿ ಮೂಡಿತ್ತು. ಈ ಬಗ್ಗೆ ಜಾಲತಾಣಗಳಲ್ಲಿ ಅವರನ್ನು ಟೀಕಿಸಲಾಯಿತು. ಅವರು ಈ ಬಗ್ಗೆ ಕೋಪ ಮಾಡಿಕೊಂಡಿರಲಿಲ್ಲ' ಎಂದು ಸ್ಮರಿಸಿಕೊಂಡರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಿದ್ಧಲಿಂಗಯ್ಯ ಅವರ ಮನೆಗೆ ಭೇಟಿ ನೀಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ಈ ಬಗ್ಗೆ ಕೇಳಿದಾಗ ಅವರು, 'ನೋಡು ಗುರುವೆ ನಾನೇನು ಅವರನ್ನು ಕರೆದಿರಲಿಲ್ಲ. ಅವರಾಗಿಯೇ ಬಂದಾಗ ಸಹಜವಾಗಿ ಸ್ವಾಗತಿಸಿ, ಚಹ ನೀಡಿ ಗೌರವಿಸಿದೆ. ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಪುಸ್ತಕ ನೀಡಿದ್ದೆ' ಎಂದು ತಿಳಿಸಿದರು.

300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ನೋಂದಣಿ

ರಕ್ತದ ಆಕರ ಕೋಶ ದಾನ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಮತ್ತು ಆಚಾರ್ಯ ತಾಂತ್ರಿಕ ಶಿಕ್ಷಣ ಸಂಸ್ಥೆ ಜಂಟಿಯಾಗಿ ಮಂಗಳವಾರ ಹಮ್ಮಿಕೊಂಡ ರಕ್ತದ ಆಕರ ಕೋಶ ದಾನಿಗಳ ನೋಂದಣಿ ಅಭಿಯಾನದಲ್ಲಿ 300ಕ್ಕೂ ಅಧಿಕ ವಿದ್ಯಾರ್ಥಿಗಳು ಹೆಸರು ನೋಂದಣಿ ಮಾಡಿದರು.

ರಕ್ತದ ಆಕರ ಕೋಶ ದಾನದ ಮಹತ್ವ ವಿವರಿಸಿದ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, 'ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಗೆ ರಕ್ತದ ಆಕರಕೋಶ ಸಹಾಯಕ. ದಾನಿಗಳಿಂದ ಪಡೆದ ರಕ್ತದ ಆಕರ ಕೋಶಗಳನ್ನು ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ರಕ್ತದ ಆಕರಕೋಶ ಅಗತ್ಯವಿರುವ ರೋಗಿಗಳಿಗೆ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವ ಸಾಧ್ಯತೆಗಳು ಶೇ 30ರಷ್ಟು ಮಾತ್ರ. ಉಳಿದವರು ಸಂಬಂಧಿಗಳಲ್ಲದ ದಾನಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ' ಎಂದು ತಿಳಿಸಿದರು.

'ದೇಶದಲ್ಲಿ ಪ್ರತಿವರ್ಷ ಲಕ್ಷಕ್ಕೂ ಅಧಿಕ ಮಂದಿ ರಕ್ತದ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಮಾಹಿತಿ ಕೊರತೆಯಿಂದಾಗಿ ಕೆಲವರು ರಕ್ತದ ಆಕರಕೋಶ ದಾನಕ್ಕೆ ಹಿಂದೇಟು ಹಾಕುತ್ತಾರೆ. ಭಾರತದಲ್ಲಿ ಯುವ ಜನರ ಸಂಖ್ಯೆ ಹೆಚ್ಚಿದ್ದು, ರಕ್ತದ ಆಕರಕೋಶ ದಾನದ ಬಗ್ಗೆ ಈ ವರ್ಗದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದು ನಮ್ಮ ಗುರಿಯಾಗಿದೆ' ಎಂದು ಹೇಳಿದರು.

ಆಚಾರ್ಯ ತಾಂತ್ರಿಕ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ರಜತ್ ಹೆಗ್ಡೆ ಎಂ.ಎಂ., 'ರಕ್ತದ ಆಕರ ಕೋಶದ ದಾನದಿಂದ ಇನ್ನೊಂದು ಜೀವ ಕಾಯಿಲೆಯಿಂದ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸಲಾಗುತ್ತಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ
- ವರ್ಷದಲ್ಲಿ ಲಕ್ಷಕ್ಕೂ ಅಧಿಕ ಮಂದಿ ರಕ್ತದ ಕ್ಯಾನ್ಸರ್‌ಗೆ ತುತ್ತು



ರಕ್ತದ ಆಕರ ಕೋಶ ದಾನಕ್ಕೆ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡರು.

ಟ್ವಿಟರ್ ಪ್ರಕರಣ: ಸಮಯ ಕೋರಿಕೆಗೆ ಕೋರ್ಟ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ತಂತ್ರಜ್ಞಾನ (ಐ.ಟಿ) ಕಾಯ್ದೆ-2000ದ ಕಲಂ 69ಎಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ತಡೆಹಿಡಿಯಬೇಕು' ಎಂಬ ನೋಟಿಸ್ ಪ್ರಶ್ನಿಸಿ 'ಟ್ವಿಟರ್' ಕಂಪನಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ವಿಚಾರಣೆಯಲ್ಲಿ ಕೇಂದ್ರದ ಪರ ವಕೀಲರು ಪದೇ ಪದೇ ಕಾಲಾವಕಾಶಕ್ಕೆ ಮನವಿ ಮಾಡುತ್ತಿರುವುದಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಕುರಿತಂತೆ 'ಟ್ವಿಟರ್' ಕಂಪನಿಯ ಬೆಂಗಳೂರಿನ ಪ್ರತಿನಿಧಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಕೇಂದ್ರ ಸರ್ಕಾರದ ವಕೀಲರು, 'ವಿಚಾರಣೆಯನ್ನು ಇದೇ 27 ಅಥವಾ ಫೆಬ್ರುವರಿ 3ಕ್ಕೆ ಮುಂದೂಡಬೇಕು' ಎಂದು ಕೋರಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಸುಪ್ರೀಂ ಕೋರ್ಟ್ ಈ ಅರ್ಜಿಯನ್ನು ತ್ವರಿತವಾಗಿ ವಿಚಾರಣೆ ನಡೆಸಿ ತೀರ್ಪು ನೀಡುವಂತೆ ನಿರ್ದೇಶನ ನೀಡಿದೆ. ನೀವು ಕೇಳಿದಂತೆ ಪದೇ ಪದೇ ಮುಂದೂಡಲಾಗದು' ಎಂದು ಹೇಳಿ ಇದೇ 18ಕ್ಕೆ ವಿಚಾರಣೆ ನಿಗದಿಪಡಿಸಿದೆ.

ಮಾರುತಿ ಸೇವಾನಗರದಲ್ಲಿ ಘಟನೆ • ಅಕ್ಕಪಕ್ಕದ ಮನೆಗಳಿಗೆ ಹಾನಿ • ಬಿಬಿಎಂಪಿ ನಿರ್ಲಕ್ಷ್ಯದ ಆರೋಪ

ಮರೆತ ಸುರಕ್ಷತೆ: ವಾಲಿದ ಮನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಬಳಿಯ ಮಾರುತಿ ಸೇವಾನಗರದಲ್ಲಿ ‘ಆ್ಯಂಬಿಯನ್ಸ್ ಡೌನ್‌ಟೌನ್’ ವಸತಿ ಸಮುಚ್ಚಯ ಸುರಕ್ಷತಾ ಕ್ರಮಗಳನ್ನು ಅನುಸರಿಸದೆ ತಳಪಾಯ ಅಗೆದಿರುವುದರಿಂದ ಪಕ್ಕದ ನಾಲ್ಕು ಮನೆಗಳು ಬಿರುಕುಬಿಟ್ಟು, ವಾಲಿವೆ.


‘ಅಪಾರ್ಟ್‌ಮೆಂಟ್ ನಿರ್ಮಾಣದಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳದ ಕಾರಣ ಪಕ್ಕದ ಕಟ್ಟಡಗಳು ಬಿರುಕು ಬಿಟ್ಟಿವೆ. ಆದ್ದರಿಂದ, ಈ ಕಟ್ಟಡದಿಂದ ಸ್ಥಳಾಂತರವಾಗಬೇಕು’ ಎಂದು ಬಿಬಿಎಂಪಿ ನಾಲ್ಕು ಮನೆಗಳ ಮಾಲೀಕರಿಗೆ ಡಿ.6ರಂದು ನೋಟಿಸ್ ನೀಡಿದೆ.

ಆದರೆ, ಅದಾದ ನಂತರವೂ ಅಪಾರ್ಟ್‌ಮೆಂಟ್‌ನವರು ಸಹಜವಾಗಿ ನಿರ್ಮಾಣ ಕಾರ್ಯವನ್ನು ಮುಂದುವರಿಸಿದ್ದು, ಕಟ್ಟಡಗಳು ಬಿರುಕು ಬಿಟ್ಟಿರುವ ಜೊತೆಗೆ ಒಂದು ಕಡೆ ವಾಲಿವೆ.

‘‘ಆ್ಯಂಬಿಯನ್ಸ್ ಡೌನ್‌ಟೌನ್’ ವಸತಿ ಸಮುಚ್ಚಯ ನಿರ್ಮಾಣಕ್ಕೆ ಸುರಕ್ಷತಾ ಕ್ರಮಗಳನ್ನು ಅನುಸರಿಸಿಲ್ಲ. ಈ ನಿರ್ಮಾಣ ಕಟ್ಟಡದ ತಳಪಾಯದಲ್ಲಿ ಮಣ್ಣಿನ ಅಗೆತದಿಂದ ಹಿಂಭಾಗ ಹಾಗೂ ಅಕ್ಕಪಕ್ಕದ ಕಟ್ಟಡಗಳ ಪಾಯದ ಮಟ್ಟಕ್ಕಿಂತ ತುಂಬಾ ಕೆಳಗಿದೆ. ನಿವೇಶನದ ಅಂಚಿನವರೆಗೆ ಅಗೆಯಲಾಗಿದೆ. ಪಕ್ಕದಲ್ಲಿರುವ ಕಟ್ಟಡಗಳು ಬಿರುಕು ಬಿಟ್ಟಿವೆ’ ಎಂದು ಬಿಬಿಎಂಪಿ ಮಾರುತಿ ಸೇವಾನಗರ ಉಪ–ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರೇ ನೀಡಿರುವ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

‘ಮನೆಗಳಲ್ಲಿರುವ ನಿವಾಸಿಗಳನ್ನು ಹೊರಹೋಗಿ ಎಂದು ಹೇಳಿರುವುದನ್ನು ಹೊರತುಪಡಿಸಿ ಯಾವುದೇ ಸುರಕ್ಷತಾ ಕ್ರಮಗಳನ್ನು ಅಪಾರ್ಟ್‌ಮೆಂಟ್ ನಿರ್ಮಿಸುವವರು ಕೈಗೊಂಡಿಲ್ಲ. ಮನೆಯಿಂದ ಹೊರಹಾಕಿದರು. ನಮಗೆ ಪರಿಹಾರ ನೀಡಲು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಎಷ್ಟು ಕೋರಿದರೂ ಸ್ಪಂದಿಸುತ್ತಿಲ್ಲ. ಈ ಬಗ್ಗೆ ಜ.6ರಂದು ಮುಖ್ಯ ಆಯುಕ್ತರಿಗೆ, ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕರಿಗೆ ಕೋರಿದ್ದರೂ ಕ್ರಮಜರುಗಿಸಿಲ್ಲ’ ಎಂದು ಮನೆ ಸ್ಥಳಾಂತರದ ನೋಟಿಸ್ ಪಡೆದ 10ನೇ ಸ್ವತ್ತಿನ ಮಾಲೀಕ ಪಿ.ರಾಜಶೇಖರ್ ದೂರಿದರು. ವಾಲಿರುವ ಮನೆಯಲ್ಲಿದ್ದ ರಾಧಾಬಾಯಿ, ಪರಶುರಾಮ್ ಅವರೂ ಬೇರೆಡೆ ವಾಸವಾಗಿದ್ದಾರೆ.

ನೋಟಿಸ್ ನೀಡಿ ಮನೆ ಖಾಲಿ ಮಾಡಿಸಿರುವ ಬಿಬಿಎಂಪಿ ಮಾರುತಿ-ಸೇವಾನಗರ ಉಪ–ವಿಭಾಗದ ಎಇಇ, ಇಇ ಅವರು ಕಟ್ಟಡ ವಾಲಿರುವ ಬಗ್ಗೆ ಪ್ರತಿಕ್ರಿಯೆ ನೀಡಲಿಲ್ಲ.





ಮಾರುತಿ ಸೇವಾನಗರದ ವಿಶ್ವೇಶ್ವರಯ್ಯ ಸ್ಟ್ರೀಟ್‌ನಲ್ಲಿರುವ ಮನೆಯ ತಳಪಾಯ ಸರಿದಿರುವುದು (ಎಡಚಿತ್ರ) ಸುರಕ್ಷತಾ ಮಟ್ಟಕ್ಕಿಂತಲೂ ಆಳಕ್ಕೆ ತಳಪಾಯ ಅಗೆದು ನಿರ್ಮಿಸಲಾಗುತ್ತಿರುವ ಅಪಾರ್ಟ್‌ಮೆಂಟ್

ದಿನೇ ದಿನೇ ವಾಲುತ್ತಿವೆ...

‘ಸುರಕ್ಷತಾ ಕ್ರಮ ಕೈಗೊಂಡಿಲ್ಲ ಎಂದು ಬಿಬಿಎಂಪಿ ನೀಡಿರುವ ನೋಟಿಸ್‌ನಲ್ಲಿ ತಿಳಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಮನೆಗಳ ಕಟ್ಟಡಗಳು ಸುಮಾರು 5.5 ಸೆಂ.ಮೀ ವಾಲಿವೆ. ದಿನೇದಿನೇ ವಾಲುತ್ತಿದ್ದು, ಯಾವುದೇ ಸಂದರ್ಭದಲ್ಲಿ ಬೀಳುವ ಆತಂಕವಿದೆ. ಮೊದಲು ಈ ಬಗ್ಗೆ ಕ್ರಮ ಕೈಗೊಳ್ಳಿ ಎಂದರೆ ಅಪಾರ್ಟ್‌ಮೆಂಟ್‌ನವರು ಹಾಗೂ ಬಿಬಿಎಂಪಿಯವರಿಬ್ಬರೂ ಕೇಳುತ್ತಿಲ್ಲ’ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಎಸ್. ಚನ್ನಾಲ್ ದೂರಿದರು.

ನೋಟಿಸ್ ನೀಡಲಾಗಿದೆ...

‘ಆ್ಯಂಬಿಯನ್ಸ್ ಡೌನ್‌ಟೌನ್’ ಅಪಾರ್ಟ್‌ಮೆಂಟ್‌ನವರಿಗೆ ತಡೆ ಗೋಡೆ ನಿರ್ಮಿಸಿ, ಪಕ್ಕದ ಕಟ್ಟಡಗಳಿಗೆ ಆಗಿರುವ ಹಾನಿಯನ್ನು ಸರಿಪಡಿಸಲು ಸೂಚಿಸಲಾಗಿದೆ. ಸೂಚನೆ ಪಾಲಿಸದಿದ್ದರೆ ಕಾನೂನು ಕ್ರಮದ ಎಚ್ಚರಿಕೆಯನ್ನೂ ನೀಡಿದ್ದೇವೆ. ಕಟ್ಟಡಗಳು ವಾಲಿರುವ ಬಗ್ಗೆ ಮಾಹಿತಿ ಇಲ್ಲ. ಸ್ಥಳೀಯ ಎಂಜಿನಿಯರ್, ನಗರ ಯೋಜನೆ ಅಧಿಕಾರಿಗಳಿಗೆ ಸೂಚನೆ ನೀಡಿ ಕ್ರಮಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ತಿಳಿಸಿದರು.

ಈಜಿಪುರ ಮೇಲ್ಸೇತುವೆಗೆ ಮತ್ತೆ ಟೆಂಡರ್

ಬೆಂಗಳೂರು: ಕೋರಮಂಗಲ ಹೊರವರ್ತುಲ ರಸ್ತೆಯ ಎಲಿವೇಟೆಡ್ ಕಾರಿಡಾರ್ ಯೋಜನೆಗೆ (ಈಜಿಪುರ ಮೇಲ್ಸೇತುವೆ) ಬಿಬಿಎಂಪಿ ಮತ್ತೆ ಟೆಂಡರ್ ಕರೆದಿದೆ.

ಹೈಕೋರ್ಟ್ ಆದೇಶವಿದ್ದರೂ ಎರಡನೇ ಬಾರಿಗೆ ಕರೆದಿದ್ದ ಟೆಂಡರ್‌ನ ತಾಂತ್ರಿಕ್ ಬಿಡ್ ತೆರೆಯದೆ ಅದನ್ನು ರದ್ದು ಮಾಡಲಾಗಿದೆ. ಇದೀಗ ಹೊಸದಾಗಿ ಟೆಂಡರ್ ಕರೆಯಲಾಗಿದ್ದು, ಜ.23ಕ್ಕೆ ಟೆಂಡರ್ ಸಲ್ಲಿಸಲು ಅಂತಿಮ ದಿನವಾಗಿದ್ದು, 15 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸಬೇಕೆಂಬ ಷರತ್ತು ವಿಧಿಸಲಾಗಿದೆ.

ಈಜಿಪುರ ಒಳವರ್ತುಲ ರಸ್ತೆ ಜಂಕ್ಷನ್, ಸೋನಿ ವರ್ಲ್ಡ್, ಕೇಂದ್ರೀಯ ಸದನ ಜಂಕ್ಷನ್ ಮೂಲಕ 100 ಅಡಿ ಒಳವರ್ತುಲ ರಸ್ತೆ, ಕೋರಮಂಗಲದವರೆಗಿನ ಬಾಕಿ ಇರುವ ಮೇಲ್ಸೇತುವೆ ಕೆಲಸವನ್ನು ಪೂರ್ಣಗೊಳಿಸಬೇಕಿದೆ. ₹143.80 ಕೋಟಿಯ ಟರ್ನ್‌ಕೀ ಯೋಜನೆಯಾಗಿದ್ದು, ಮೊತ್ತವನ್ನು ಹೆಚ್ಚಿಸಲಾಗುವುದಿಲ್ಲ ಎಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿಯಲ್ಲಿ ಡಿ.17ರಂದು ‘ಈಜಿಪುರ ಮೇಲ್ಸೇತುವೆ ಟೆಂಡರ್‌ಗೆ ತಡೆ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಈಜಿಪುರ ಮೇಲ್ಸೇತುವೆ 2.5 ಕಿ.ಮೀ. ಉದ್ದದ ಕಾರಿಡಾರ್ ಆಗಿದ್ದು, 2014ರಲ್ಲಿ ಇದರ ಯೋಜನೆ ರೂಪಿಸಲಾಗಿತ್ತು. 2017ರಲ್ಲಿ ₹157.66 ಕೋಟಿಗೆ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು.

2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಗುತ್ತಿಗೆದಾರರು ವಿಳಂಬ ಮಾಡಿದರು. ನಾಲ್ಕು ವರ್ಷ ಏಳು ತಿಂಗಳಾದರೂ ಶೇ 42ರಷ್ಟು ಮಾತ್ರ ಕಾಮಗಾರಿ ಮುಗಿದಿತ್ತು. ₹75.11 ಕೋಟಿ ಹಣವನ್ನೂ ಅವರಿಗೆ ಪಾವತಿ ಮಾಡಲಾಗಿತ್ತು. ಈಗ ಉಳಿದ ಕಾಮಗಾರಿಗೆ ₹143.80 ಕೋಟಿ ವೆಚ್ಚ ಮಾಡಲಾಗುತ್ತಿದೆ.

‘ಕಾಂಕ್ರೀಟ್ ಹಾಕಲು ವಿಳಂಬದಿಂದ ಅನಾಹುತ’

ಕಬ್ಬಿಣದ ಚೌಕಟ್ಟು ಬೀಳದಂತೆ ಮುನ್ನೆಚ್ಚರಿಕೆ ವಹಿಸಿರಲಿಲ್ಲ: ಸ್ಥಳೀಯರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಕಾಮಗಾರಿ ವೇಳೆ ಉರುಳಿದ ಕಬ್ಬಿಣದ ಚೌಕಟ್ಟು 16.5 ಮೀಟರ್ ಎತ್ತರವಿತ್ತು. ಅಂದಾಜು 40 ಟನ್ ತೂಕವಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಆರ್.ಪುರ–ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ 38.44 ಕಿ.ಮೀ ಕಾಮಗಾರಿ ನಡೆಯುತ್ತಿದೆ. ಹೈದರಾಬಾದ್‌ನ ಎನ್‌ಸಿಸಿ ಸಂಸ್ಥೆಯ ಮೂರು ಹಂತದಲ್ಲಿ ಕಾಮಗಾರಿ ಕೈಗೆತ್ತಿಗೊಂಡಿದೆ.

ಬೆನ್ನಿಗಾನಹಳ್ಳಿ–ಕೆಂಪಾಪುರ, ಕೆಂಪಾಪುರ–ಯಲಹಂಕ ಏರ್ ಫೋರ್ಸ್, ಐಎಎಫ್–ವಿಮಾನ ನಿಲ್ದಾಣದ ನಡುವೆ ₹ 9,583.54 ಕೋಟಿ ಮೊತ್ತದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಮುಕ್ತಾಯವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದರು. ಈ ಘಟನೆಯಿಂದ ಕಾಮಗಾರಿ ಮತ್ತಷ್ಟು ತಡವಾಗುವ ಸಾಧ್ಯತೆಯಿದೆ.

‘ಈ ಮಾರ್ಗದಲ್ಲಿ ಕಬ್ಬಿಣದ ಚೌಕಟ್ಟು ನಿಲ್ಲಿಸಿ ಹಲವು ದಿನ ಕಳೆದಿದ್ದರೂ ಅದಕ್ಕೆ ಕಾಂಕ್ರೀಟ್ ಹಾಕಿರಲಿಲ್ಲ. ಭಾರ ಹೆಚ್ಚಾಗಿ ವಾಲಿಕೊಂಡಿತ್ತು. ಇತರೆ ಚೌಕಟ್ಟುಗಳಿಗಿಂತ ಉರುಳಿ ಬಿದ್ದ ಚೌಕಟ್ಟು ತುಸು ಎತ್ತರವಾಗಿತ್ತು. ಕಬ್ಬಿಣ ವಾಲಿಕೊಂಡಿದ್ದರೂ ಅದನ್ನು ಬೀಳದಂತೆ ತಡೆಯುವುದಕ್ಕೆ ಮುನ್ನೆಚ್ಚರಿಕೆ ವಹಿಸಿರಲಿಲ್ಲ’ ಎಂದು ಸ್ಥಳೀಯರು ದೂರಿದ್ದಾರೆ.



ನಮ್ಮ ಮೆಟ್ರೊ ಕಾಮಗಾರಿಯ ಕಬ್ಬಿಣದ ಚೌಕಟ್ಟು ಉರುಳಿದ ಹೆಣ್ಣೂರು ಕ್ರಾಸ್‌ಗೆ ಬುಧವಾರ ಪೊಲೀಸರು ಹಾಗೂ ತಾಂತ್ರಿಕ ತಜ್ಞರು ಭೇಟಿ ನೀಡಿ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಜ. 14ರಿಂದ ರಿಯಲ್ ಎಸ್ಟೇಟ್ ಎಕ್ಸ್‌ಪೋ, ಸಮಾವೇಶ

ಬೆಂಗಳೂರು: ರಾಷ್ಟ್ರ ಮಟ್ಟದ ರಿಯಲ್ ಎಸ್ಟೇಟ್ ಎಕ್ಸ್ ಪೋ ಮತ್ತು ಸಮಾವೇಶ ಹೊಟೇಲ್ ಲಲಿತ್ ಅಶೋಕನಲ್ಲಿ ಜ. 14 ಮತ್ತು 15 ರಂದು ನಡೆಯಲಿದೆ.

‘ಜಿತೋ’ ಬೆಂಗಳೂರು ಉತ್ತರ ವಲಯದ ಆಶ್ರಯದಲ್ಲಿ ಈ ಸಮಾವೇಶ ನಡೆಯಲಿದ್ದು, ವೈಷ್ಣೋದೇವಿ ಗ್ರೂಪ್ ಆಫ್ ಅಸೋಸಿಯೇಷನ್ ಮತ್ತು ಆರ್.ಆರ್.ಬಿ.ಸಿ ಮತ್ತು ಸ್ವಾಮಿತ್ವ ಸಂಸ್ಥೆಗಳ ಸಹಯೋಗ ನೀಡಿವೆ. ಎಸ್.ಎನ್.ಎನ್ ರಾಜ್ ಗ್ರೂಪ್ ಡೆವಲಪರ್ಸ್ ಆ್ಯಂಡ್ ಪ್ರಮೋಟರ್ಸ್ ಮೊದಲ ಬಾರಿಗೆ ಈ ಸಮ್ಮೇಳನದಲ್ಲಿ ಭಾಗಿಯಾಗುತ್ತಿದೆ.

‘ಇಂದು ನಗರಗಳು ತ್ವರಿತವಾಗಿ ಬೆಳವಣಿಗೆಯಾಗುತ್ತಿದ್ದು, ವ್ಯವಹಾರದ ಅವಕಾಶಗಳು ಹೆಚ್ಚಾಗುತ್ತಿವೆ. ಆದರೆ, ಸೂಕ್ತ ಸಂಪರ್ಕ ವೇದಿಕೆಗಳಿಲ್ಲದ ಕಾರಣ ರಿಯಲ್ ಎಸ್ಟೇಟ್ ವ್ಯವಹಾರ ಹೆಚ್ಚಿನ ಪ್ರಗತಿ ಕಾಣುತ್ತಿಲ್ಲ. ಹೀಗಾಗಿ ರಿಯಲ್ ಎಸ್ಟೇಟ್ ಎಕ್ಸ್ ಪೋಗಾಗಿ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ಜಿತೋ ಬೆಂಗಳೂರು ಉತ್ತರ ವಲಯ ಅಧ್ಯಕ್ಷ ಇಂದರ್ ಚಂದ್ ಬೊಹ್ರಾ ತಿಳಿಸಿದ್ದಾರೆ.

ಜಿತೋ ಕೆಕೆಜಿ ವಲಯದ ಅಧ್ಯಕ್ಷ ಅಶೋಕ್ ಸಲೆಚಾ ಮಾತನಾಡಿ, ‘ಇದೇ ಮೊದಲ ಬಾರಿಗೆ ವಲಯವಾರು ಸಮಾವೇಶ ಆಯೋಜಿಸುತ್ತಿದ್ದು, ಬೆಂಗಳೂರು ದಕ್ಷಿಣ, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಹೊಸಪೇಟೆ, ಬಳ್ಳಾರಿ, ಬೆಳಗಾವಿ, ವಿಜಯಪುರ ವಲಯದದಲ್ಲಿಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಜೈನ ಸಮುದಾಯದವರು ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

1,344 ಪ್ರಾಣಿ, ಪಕ್ಷಿಗಳ ರಕ್ಷಣೆ



ಬೆಂಗಳೂರು: ಪರವಾನಗಿ ಪಡೆಯದ ಸಾಕು ಪ್ರಾಣಿಗಳ ಮಾರಾಟ ಅಂಗಡಿಗಳ ಮೇಲೆ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಪೊಲೀಸ್ ಇಲಾಖೆ, ಬಿಬಿಎಂಪಿ, ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಅಧಿಕಾರಿಗಳು ಹಾಗೂ ಪ್ರಾಣಿ ಕಲ್ಯಾಣ ಕಾರ್ಯಕರ್ತರು ಜಂಟಿ ಕಾರ್ಯಾಚರಣೆ ನಡೆಸಿ ಚಿಕಿತ್ಸೆ ಅಗತ್ಯವಿರುವ ಹಾಗೂ ಗಂಭೀರ ಸ್ಥಿತಿಯಲ್ಲಿರುವ ಪ್ರಾಣಿ ಹಾಗೂ ಪಕ್ಷಿಗಳನ್ನು ಬುಧವಾರ ರಕ್ಷಿಸಿದ್ದಾರೆ.

94 ಆಫ್ರಿಕನ್ ಗಿಳಿಗಳು, 302 ಲವ್ ಬರ್ಡ್ಸ್, 389 ಗುಬ್ಬಚ್ಚಿ, 1 ಟರ್ಕಿ, 21 ಕಾಕ್‌ಟೈಲ್, 3 ಕಾಜಾಣ, 196 ಪಾರಿವಾಳಗಳು, 108 ಮೊಲಗಳು, 11 ಬಾತುಕೋಳಿಗಳು, 103 ಕೋಳಿಗಳು, 34 ನಾಯಿಗಳು, 12 ಬೆಕ್ಕುಗಳು ಹಾಗೂ 19 ಇಲಿಗಳನ್ನು ರಕ್ಷಿಸಲಾಗಿದೆ.

16 ತಳಿಯ ಒಟ್ಟು 1,344 ಪ್ರಾಣಿ ಹಾಗೂ ಪಕ್ಷಿಗಳನ್ನು ರಕ್ಷಿಸಲಾಗಿದೆ. ಒಟ್ಟು ಏಳು ತಂಡಗಳು ಕಾರ್ಯಾಚರಣೆ ನಡೆಸಿ ಅಪಾಯಕಾರಿ ಸ್ಥಿತಿಯಲ್ಲಿದ್ದ ಪ್ರಾಣಿ, ಪಕ್ಷಿಗಳ ಪತ್ತೆ ಹಚ್ಚಲಾಗಿದೆ.

ಸ್ವಚ್ಛವಿಲ್ಲದ ಪಂಜರಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಪ್ರಾಣಿಗಳನ್ನು ಇಟ್ಟಿರುವುದು, ತಾಯಿ ನಾಯಿಯಿಂದ ಬೇರ್ಪಡಿಸಿದ ನಾಯಿ ಮರಿಗಳನ್ನು ಮಾರಾಟಕ್ಕೆ ಇಟ್ಟಿರುವುದು, ಆಹಾರ ಅಥವಾ ನೀರಿನ ಸೌಕರ್ಯವಿಲ್ಲದಿರುವುದು, ಗಾಯಗೊಂಡ ಪ್ರಾಣಿಗಳಿಗೆ ಸೂಕ್ತ ಚಿಕಿತ್ಸೆ ನೀಡದೆ ಇರುವುದು ಮಳಿಗೆಗಳಲ್ಲಿ ಕಂಡುಬಂದಿದೆ.

ಚಿತ್ರಾವಳಿ



ಶಾರದಾಂಬಾ ಉಚಿತ ಸುಗಮ ಸಂಗೀತ ಶಾಲೆಯ ವತಿಯಿಂದ ನಾಗಸಂದ್ರದ ನೆಲಗೆದರನಹಳ್ಳಿಯ ಸರ್ಕಾರಿ ಶಾಲೆ ಮಕ್ಕಳಿಗೆ 3 ತಿಂಗಳ ಉಚಿತ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮಕ್ಕಳಿಗೆ ಭಕ್ತಿ, ಭಾವ, ಜಾನಪದ, ಕನ್ನಡ, ವಚನ, ರಂಗಗೀತೆ ಮತ್ತು ಶ್ಲೋಕಗಳನ್ನು ಕಲಿಸಿ, ಆ ಮಕ್ಕಳಿಗೆ ಸಂಗೀತ ಶಾಲೆಯ ಸಂಸ್ಥಾಪಕಿ ವಿನೋದಾ ಪ್ರಮಾಣಪತ್ರ ವಿತರಿಸಿದರು



ನಾಟ್ಯನಿಕೇತನ ಸಂಸ್ಥೆ ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಹಮ್ಮಿಕೊಂಡ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ಕೀರ್ತನಾ ಸತೀಶ್ ಕುಮಾರ್ ಹಾಗೂ ಸ್ವಾತಿ ಎ. ಅವರು ಭರತನಾಟ್ಯ ಪ್ರಸ್ತುತಪಡಿಸಿದರು

ಸಾಹಿತಿ ಕಮಲಾ ಹಂಪನಾ ಪ್ರತಿಪಾದನೆ

‘ನಿರಂತರ ಕಲಿಕೆ ಸಾಧನೆಗೆ ಮೆರಗು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಷ್ಟೇ ಉನ್ನತ ಸಾಧನೆ ಮಾಡಿದರೂ ಕಲಿಕೆಯಲ್ಲಿ ಸದಾ ವಿದ್ಯಾರ್ಥಿಗಳಾಗಿದ್ದಾಗ ಮಾತ್ರ ಜ್ಞಾನ ಹಾಗೂ ಬದುಕಿನ ನಿರಂತರತೆ ಸಾಧ್ಯ’ ಎಂದು ಸಾಹಿತಿ ಕಮಲಾ ಹಂಪನಾ ಪ್ರತಿಪಾದಿಸಿದರು.

ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾಲೇಜಿನ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬದುಕಿನ ಕತ್ತಲು ಹೋಗಲಾಡಿಸುವ ಬೆಳಕು ವಿದ್ಯೆ. ಮನುಷ್ಯನನ್ನು ಉನ್ನತಮಟ್ಟಕ್ಕೆ ಒಯ್ಯುವ ಮಾರ್ಗ ಅದೊಂದೆ. ಉತ್ತಮ ಶಿಕ್ಷಕರೇ ಶಿಕ್ಷಣ ಸಂಸ್ಥೆಯ ಆಧಾರಸ್ತಂಭ. ಕರ್ಣ, ಏಕಲವ್ಯ ಸಹ ಸಮಾಜದ ಸ್ಥಿತ್ಯಂತರಗಳನ್ನು ದಾಟಿ ಗುರುವಿನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿದರು. ತಮಗೂ ಕುವೆಂಪು ಸೇರಿ ಉತ್ತಮ ಗುರುಗಳು ಸಿಕ್ಕಿದ್ದರಿಂದ ನಿರೀಕ್ಷಿತ ಜ್ಞಾನ ಸಂಪಾದನೆ, ಸಮಾಜದ ಋಣ ತೀರಿಸುವ ಶಕ್ತಿ ಗಳಿಸಲು ಸಾಧ್ಯವಾಯಿತು’ ಎಂದರು.

ಸಾಹಿತಿ ಹಂಪ ನಾಗರಾಜಯ್ಯ, ‘ಸಮಯವನ್ನು ಗೌರವಿಸುವ ವ್ಯಕ್ತಿ ವಿದ್ವತ್ ಸಂಪಾದಿಸುತ್ತಾನೆ. ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಾನೆ. ಗುರುಗಳನ್ನು ಗೌರವಿಸುವವನು ಅವರ ಮಾರ್ಗದಲ್ಲೇ ನಡೆದು ಗುರುವನ್ನು ಮೀರಿಸುವ ಸಾಧಕನಾಗುತ್ತಾನೆ’ ಎಂದು ಹೇಳಿದರು.

ಪ್ರಾಸ್ತಾವಿಕ ಭಾಷಣದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ‘ಕಾಲೇಜಿನಲ್ಲಿ ಪಠ್ಯದ ಜತೆಗೆಪೂರಕ ಪಠ್ಯ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗಿದೆ. ಕೈಗೆಟಕುವ ಶುಲ್ಕದಲ್ಲಿ ಶಿಕ್ಷಣ ನೀಡಲಾಗುತ್ತಿದೆ’ ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಟಿ.ಎಸ್.ಹಂಜಾರಪ್ಪ, ವಾಗ್ಮಿ ಇಂದೂಮತಿ ಸಾಲಿಮಠ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎನ್.ಪಿ.ಕಾರ್ತೀಕ್, ಪ್ರಾಂಶುಪಾಲ ಆರ್.ವಿ.ಮಂಜುನಾಥ್, ಧರ್ಮದರ್ಶಿ ಕೃಷ್ಣಸ್ವಾಮಿ, ಅನಂತರಾಮು, ನಟರಾಜ್, ಚಂದ್ರಶೇಖರ್ ಉಪಸ್ಥಿತರಿದ್ದರು.



‘ಸುವರ್ಣ ಸಂಭ್ರಮ’ ಕಾರ್ಯಕ್ರಮದಲ್ಲಿ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಕಮಲಾ ಹಂಪನಾ ಮತ್ತು ಹಂಪ ನಾಗರಾಜಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

15ಕ್ಕೆ ಟರ್ಮಿನಲ್‌-2 ಪ್ರಯಾಣಿಕರ ಸೇವೆಗೆ ಸಿದ್ಧ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌-2 ಸಂಕ್ರಾಂತಿಗೆ ಪ್ರಯಾಣಿಕರ ಸೇವೆಗೆ ಮುಕ್ತವಾಗುತ್ತಿದ್ದು, ಜ.15ರಿಂದ ಕಾರ್ಯಾರಂಭ ಮಾಡಲಿದೆ.

ಉದ್ಯಾನ ನಗರಿ ಖ್ಯಾತಿಯ ನಗರಕ್ಕೆ ಜಗಮಗಿಸುವ ದೀಪಗಳು, ಬಿದಿರ ಹಂದರ, ಕಲಾಕೃತಿಗಳು, ಗಿಡ-ಬಳ್ಳಿ, ಅಲಲ್ಲಿ ಕಿರು ಜಲಪಾತ, ಉದ್ಯಾನ ಹೊಂದಿರುವ ಟರ್ಮಿನಲ್‌–2ರಲ್ಲಿ ಜನವರಿ 15ರಂದು ವಿಮಾನಗಳ ಹಾರಾಟ ಆರಂಭವಾಗಲಿದೆ.

ಮೊದಲ ಹಂತವಾಗಿ ಜ.15ರಿಂದ ಕೇವಲ ನಿರ್ಗಮನಕ್ಕೆ ಅವಕಾಶ ನೀಡಿದೆ. ಸ್ಟಾರ್ ಏರ್‌ಲೈನ್ ಟಿಕೆಟ್ ಕಾಯ್ದಿರಿಸಿರುವ ಪ್ರಯಾಣಿಕರು ಮಾತ್ರ ಟರ್ಮಿನಲ್‌–2ನಿಂದ ಪ್ರಯಾಣಿಸುವರು. ಪೂರ್ಣ ಕಾಮಗಾರಿ ಬಳಿಕ ಉಳಿದ ವಿಮಾನಗಳಿಂದ ಆಗಮನ ಮತ್ತು ನಿರ್ಗಮನಕ್ಕೆ ಅವಕಾಶ ನೀಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ರಿಕೆಟ್ ಪಂದ್ಯ, ಚಲನಚಿತ್ರಗಳ ಪೈರಸಿ

ಪ್ರಜಾವಾಣಿ ವಾರ್ತೆ



ಶಿಶಾರಾಮ್

ಬೆಂಗಳೂರು: ಸ್ಟಾರ್ ಟಿ.ವಿ ಹಾಗೂ ಡಿಸ್ನಿ ಹಾಟ್‌ಸ್ಟಾರ್‌ನಲ್ಲಿ ಚಲನಚಿತ್ರಗಳು, ನೇರ ಪ್ರಸಾರದ ಐಪಿಎಲ್ ಪಂದ್ಯಗಳು, ಅಂತರರಾಷ್ಟ್ರೀಯ ಟಿ–20 ಕ್ರಿಕೆಟ್ ಪಂದ್ಯಗಳ ಪೈರಸಿಯಲ್ಲಿ ತೊಡಗಿದ್ದ ರಾಜಸ್ಥಾನದ ಶಿಶಾರಾಮ್ ಭದಿಯಾ (22) ಎಂಬ ಆರೋಪಿಯನ್ನು ಈಶಾನ್ಯ ವಿಭಾಗದ ಸೆನ್ ಪೊಲೀಸರು ಬಂಧಿಸಿದ್ದಾರೆ.

‘ಪಿಕ್‌ಶೋ ಅಪ್ಲಿಕೇಶನ್’ ಬಳಸಿ ಸ್ಟಾರ್ ಟಿ.ವಿಯ ಪ್ರಸಾರಗಳನ್ನು ಪೈರಸಿ ಮಾಡುತ್ತಿದ್ದ. ಸ್ಟಾರ್ ಟಿ.ವಿ ಪ್ರತಿನಿಧಿ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಪೈರಸಿ ಮಾಡಿದ ಚಲನಚಿತ್ರ ಹಾಗೂ ಕ್ರಿಕೆಟ್ ಪಂದ್ಯಗಳನ್ನು ವೆಬ್‌ಸೈಟ್ ಹಾಗೂ ಅಪ್ಲಿಕೇಶನ್‌ಗಳಿಗೆ ಅಪ್ಲೋಡ್ ಮಾಡಿ ಹಣ ಗಳಿಸುತ್ತಿದ್ದ. ಆರೋಪಿಯಿಂದ ಲ್ಯಾಪ್‌ಟಾಪ್, ಮೊಬೈಲ್ ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಮಹಿಳೆ ಸರ ಕಸಿದ ಆರೋಪಿ ಬಂಧನ

ಬೆಂಗಳೂರು: ಜೆ.ಪಿ.ನಗರದ 1ನೇ ಹಂತದ ರಾಮಮಂದಿರ ಬಳಿ ವಾಯುವಿಹಾರಕ್ಕೆ ತೆರಳಿದ್ದ ಸಾಯಿಸಿದ್ಧಿ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ನಿವಾಸಿ ನಿರಜಾ ಅವರ ಸರ ಕಸಿದು ಪರಾರಿಯಾಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಶಾಕಾಂಬರಿ ನಗರದ ನಿವಾಸಿ, ಮೂಲತಃ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಎಂ.ಪಿ. ವಿನಯ್ ಬಂಧಿತ. ‘ಈತನಿಂದ ₹ 2.15 ಲಕ್ಷ ಮೌಲ್ಯದ 43 ಗ್ರಾಂ ಚಿನ್ನದ ಸರ ಜಪ್ತಿ ಮಾಡಲಾಗಿದೆ. ಈತ ಮಂಡ್ಯದ ಚಿನ್ನಾಭರಣ ಅಂಗಡಿಗೆ ಸರ ಮಾರಿದ್ದ. ಅಲ್ಲಿಂದಲೇ ಆಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಕಳವು, ಮೂವರ ಬಂಧನ: ಬನಶಂಕರಿ 3ನೇ ಹಂತದ ಇಟ್ಟಮಡು ಮಂಜುನಾಥ್ ನಗರದ ಮಂಜುನಾಥ್ ಅವರ ಅಂಗಡಿಯಲ್ಲಿ ನಡೆದಿದ್ದ ಕಳವು ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ. ದೀಪಾಂಜಲಿ ನಗರದ ಎಂ.ಕಾರ್ತಿಕ್ (25), ತ್ಯಾಗರಾಜ ನಗರದ ರಾಘವೇಂದ್ರ ಕಾಲೊನಿಯ ಎ.ಭರತ್‌ಕುಮಾರ್ ಹಾಗೂ ಜೆ.ಪಿ. ನಗರದ ಎಂ.ಸತೀಶ್ ಕುಮಾರ್ ಬಂಧಿತರು. ಬಂಧಿತರಿಂದ ₹ 16,200 ನಗದು, ಬೈಕ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ರಾಷ್ಟ್ರೀಯ ಯುವ ದಿನ ಆಚರಣೆ: ಅತಿಥಿಗಳು: ಅರೇನಹಳ್ಳಿ ಧರ್ಮೇಂದ್ರ ಕುಮಾರ್, ಆಯೋಜನೆ: ಸ್ವಯಂ ಜಾಗೃತಿ ಸೇವಾ ಟ್ರಸ್ಟ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾನಸನಗರ, ನಾಗರಬಾವಿ, ಬೆಳಿಗ್ಗೆ 9.30

ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವ: ಬೆಳಿಗ್ಗೆ 11: ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6: ಸಂಗೀತೋತ್ಸವದ ಸಮಾರೋಪ ಸಮಾರಂಭ, ಭಾರತೀ ತ್ಯಾಗರಾಜ ಸಮ್ಮಾನ ಪ್ರಶಸ್ತಿ ಪ್ರದಾನ: ಅತಿಥಿಗಳು: ವಿ.ಆರ್. ಗೌರಿಶಂಕರ್, ಉಮಯಾಳ್‌ಪುರಂ ಕೆ. ಶಿವರಾಮನ್, ಪ್ರಶಸ್ತಿ ಪುರಸ್ಕೃತರು: ವಿ.ಎಸ್. ರಾಜಗೋಪಾಲ್, ಆರ್.ಕೆ. ಪದ್ಮನಾಭ, ಆರ್. ಎ. ರಮಾಮಣಿ, ಆಯೋಜನೆ: ತ್ಯಾಗಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರಮಠ, ಚಾಮರಾಜಪೇಟೆ

ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ಯುವ ದಿನಾಚರಣೆ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ವೀರೇಶಾನಂದ ಸರಸ್ವತಿ ಸ್ವಾಮೀಜಿ, ಲಿಂಗರಾಜ ಗಾಂಧಿ, ಸ್ಥಳ: ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 10

ರಾಷ್ಟ್ರೀಯ ದ್ರಾವಿಡ ಸಂಘದ ಉದ್ಘಾಟನೆ: ಸತೀಶ ಜಾರಕಿಹೊಳಿ, ಅತಿಥಿಗಳು: ಜೆ.ವಿ. ಪಾಟೀಲ್, ಕವಿರಾಜ್, ಅಧ್ಯಕ್ಷತೆ: ಅಗ್ನಿ ಶ್ರೀಧರ್, ಪ್ರಾಸ್ತಾವಿಕ: ಬಂಜಗೆರೆ ಜಯಪ್ರಕಾಶ್, ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಕನ್ನಡದ ಹಬ್ಬದ ಆಚರಣೆ: ಅತಿಥಿಗಳು: ಎಂ. ಜಯಪ್ಪ, ಅಧ್ಯಕ್ಷತೆ: ಜಿಯಾವುಲ್ಲಾ ಶರೀಫ್, ಆಯೋಜನೆ ಅಬ್ಬಾಸ್ ಖಾನ್ ಮಹಿಳಾ ಕಾಲೇಜು, ಒಟಿಸಿ ಕ್ರಾಸ್, ಕಬ್ಬನ್‌ಪೇಟ್, ಬೆಳಿಗ್ಗೆ 11

ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ: ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ಎನ್. ತಿಪ್ಪೇಸ್ವಾಮಿ, ಅಧ್ಯಕ್ಷತೆ: ನಿರಂಜನ ವಾನಳ್ಳಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 11

ವಾರ್ಷಿಕ ದಿನಾಚರಣೆ–2022–23: ಅತಿಥಿಗಳು: ಎನ್.ಎ. ಹ್ಯಾರಿಸ್, ಆರ್. ಸಂಪತ್ ಕುಮಾರ್, ಅಧ್ಯಕ್ಷತೆ: ಜೋಸೆಫ್ ಡಿಸೋಜ ಎಸ್.ಜೆ., ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್, ಇಂಡಿಯನ್ ಪ್ರೈಮರಿ ಸ್ಕೂಲ್, ವಿಠ್ಠಲ್ ಮಲ್ಯ ರಸ್ತೆ, ಸಂಜೆ 4

ಮಕ್ಕಳ ವಚನ ಮೇಳ ಸಮಾರೋಪ ಸಮಾರಂಭ: ನೇತೃತ್ವ: ಸಿದ್ಧಯ್ಯ ಗುರೂಜಿ, ಸಮಾರೋಪ ನುಡಿ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಅರವಿಂದ ಜತ್ತಿ, ಮೃತ್ಯುಂಜಯಸ್ವಾಮಿ, ಬಿ.ಪಿ. ಪ್ರಕಾಶ್, ಬಲವಂತರಾವ್ ಪಾಟೀಲ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

‘ದಾಟ್ಸ್ ಆಲ್ ಯುವರ್ ಆನರ್’ ನಾಟಕ ಪ್ರದರ್ಶನ: ನಿರ್ದೇಶನ: ಶಶಿರಾಜ್ ರಾವ್ ಕಾವೂರ್, ಆಯೋಜನೆ: ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರಂಗ ಶಂಕರ, ಸಂಜೆ 7.30

‘ಸಂಕುಚಿತಗೊಳ್ಳುತ್ತಿರುವ ಕನ್ನಡ ಬಳಕೆಯ ವಲಯಗಳು ಮತ್ತು ಕನ್ನಡದ ಭವಿಷ್ಯ’ ಕುರಿತು ಉಪನ್ಯಾಸ: ಉಪನ್ಯಾಸಕರು: ಎಂ.ಜಿ. ಚಂದ್ರಶೇಖರಯ್ಯ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಪ್ರಸ್ತಾವನೆ: ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಉಪಗ್ರಹ ಅವಶೇಷಗಳ ನಿರ್ವಹಣೆ: ಅಂತರರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ

‘ಬಾಹ್ಯಾಕಾಶ ಸೇನೆಯ ನಾಲ್ಕನೇ ಅಂಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಹ್ಯಾಕಾಶವು ಸೇನೆಯ ನಾಲ್ಕನೇ ಅಂಗವಾಗಿದೆ. ಅನ್ಯ ದೇಶಗಳ ಮಿಲಿಟರಿ ಉಪಗ್ರಹಗಳಿಂದ ನಡೆಯುವ ಬೇಹುಗಾರಿಕೆ, ಅಧಿಕ ಶಕ್ತಿಯ ಅಯಸ್ಕಾಂತೀಯ ಮತ್ತು ವಿದ್ಯುತ್ಕಾಂತೀಯ ದಾಳಿಗಳನ್ನು ತಡೆಯುವ ಮತ್ತು ರಾಡಾರ್ ಚಟುವಟಿಕಗಳ ಮೇಲೆ ಕಣ್ಗಾವಲಿಡುವ ಅಗತ್ಯವಿದೆ’ ಎಂದು ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಡಾ.ಜಿ.ಸತೀಶ್ ರೆಡ್ಡಿ ತಿಳಿಸಿದರು.

ಬಾಹ್ಯಾಕಾಶದಲ್ಲಿ ಉಪಗ್ರಹಗಳ ದಟ್ಟಣೆ ಮತ್ತು ಉಪಗ್ರಹ ಅವಶೇಷಗಳ ನಿರ್ವಹಣೆ ಕುರಿತ ಮೂರು ದಿನಗಳ ಅಂತರರಾಷ್ಟ್ರೀಯ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಬುಧವಾರ ಅವರು ಮಾತನಾಡಿ, ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಇದ್ದಂತೆ ಬಾಹ್ಯಾಕಾಶವೂ ಸೇನೆಯ ಪ್ರತ್ಯೇಕ ಅಂಗವಾಗಿ ರೂಪುಗೊಳ್ಳುತ್ತಿದೆ. ಇದರ ಮೂಲಕ ರಾಷ್ಟ್ರದ ನೆಲದ ಮತ್ತು ಸ್ವತ್ತುಗಳ ರಕ್ಷಣೆ ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

'ಬಾಹ್ಯಾಕಾಶದಲ್ಲಿ ನಿರ್ದಿಷ್ಟ ಉಪಗ್ರಹಗಳನ್ನು ಹೊಡೆದುರುಳಿಸುವ ತಂತ್ರಜ್ಞಾನವಿದೆ. ಈ ರೀತಿ ಆಕ್ರಮಣ ನಡೆಸಿದರೆ ದೇಶದೊಳಗಿನ ಎಲ್ಲ ಎಲೆಕ್ಟ್ರಾನಿಕ್ಸ್ ವ್ಯವಸ್ಥೆಗಳೂ ಅಸ್ತವ್ಯಸ್ತಗೊಳುತ್ತವೆ. ಆದ್ದರಿಂದ, ನಮ್ಮ ಉಪಗ್ರಹಗಳನ್ನು ನಾವು ರಕ್ಷಿಸಿಕೊಳ್ಳಲೇಬೇಕು. ಇದಕ್ಕೆ ಉಪಗ್ರಹ ನಿರೋಧಕ ವ್ಯವಸ್ಥೆ ಅಗತ್ಯವಿದ್ದು, ಭಾರತ ಅದನ್ನು ಹೊಂದಿದೆ. ಅಲ್ಲದೇ, ಯಾವುದೇ ದೇಶ ಅಯಸ್ಕಾಂತೀಯ, ವಿದ್ಯುತ್ಕಾಂತಿಯ ಮತ್ತು ಲೇಸರ್ ಕಿರಣಗಳ ಮೂಲಕ ದಾಳಿ ನಡೆಸಲು ಮುಂದಾದರೆ ಅದನ್ನು ತಕ್ಷಣವೇ ಪತ್ತೆ ಮಾಡಿ, ತಡೆಯಬೇಕಾಗುತ್ತದೆ' ಎಂದು ಸತೀಶ್ ರೆಡ್ಡಿ ತಿಳಿಸಿದರು.

ಅಲ್ಲದೇ, ಸೌರ ಮಾರುತ, ಭೂಮಿಯ ಮೇಲೆ ಕ್ಷುದ್ರಗ್ರಹಗಳ ಅಪ್ಪಳಿಸುವಿಕೆ, ಉಲ್ಕಾಪಾತಗಳನ್ನು ಮೊದಲೇ ಗ್ರಹಿಸಿ ಅವುಗಳನ್ನು ನಿಭಾಯಿಸುವ ಪ್ರಯತ್ನ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಜಂಟಿಯಾಗಿ ನಡೆಸಬೇಕು. ಸೌರ ಮಾರುತದಿಂದ ದೂರಸಂಪರ್ಕ ವ್ಯವಸ್ಥೆಯೇ ಹಾಳಾಗಿ ಹೋಗುತ್ತದೆ. ವಿಕಿರಣ ಪ್ರವಾಹದಿಂದ ಜಿಪಿಎಸ್ ವ್ಯವಸ್ಥೆಯೇ ಸ್ಥಗಿತಗೊಳ್ಳುತ್ತದೆ. ಆದ್ದರಿಂದ ಬಾಹ್ಯಾಕಾಶ ಹವಾಮಾನದ ಮೇಲೂ ನಿಗಾ ಇಡುವ ಕೆಲಸ ಜಂಟಿಯಾಗಿ ಆಗಬೇಕಿದೆ ಎಂದು ಅವರು ಹೇಳಿದರು.

‘ಬಾಹ್ಯಾಕಾಶದ ಉಡಾವಣಾ ಯೋಜನೆಗಳನ್ನೇ ಅವಶೇಷ ಶೂನ್ಯವಾಗಿ ಮಾರ್ಪಡಿಸಲು ಸಾಧ್ಯವೇ? ಈ ದಿಸೆಯಲ್ಲಿ ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಸಾಧ್ಯವೇ ಎಂಬ ಬಗ್ಗೆ ವಿಜ್ಞಾನಿಗಳು ಚಿಂತನೆ ನಡೆಸಬೇಕು. ಬಾಹ್ಯಾಕಾಶದಲ್ಲಿನ ಉಪಗ್ರಹಗಳು ಸೇರಿ ಎಲ್ಲ ಬಗೆಯ ಸ್ವತ್ತುಗಳನ್ನು ಪರಸ್ಪರ ರಕ್ಷಿಸಿಕೊಳ್ಳಲು ವಿವಿಧ ದೇಶಗಳ ಮಧ್ಯೆ ಪರಸ್ಪರ ಮಾಹಿತಿ ವಿನಿಮಯ ಅಗತ್ಯ’ ಎಂದು ರೆಡ್ಡಿ ಪ್ರತಿಪಾದಿಸಿದರು.

ಅವಶೇಷ ನಿರ್ವಹಣೆ ಲಾಭದಾಯಕ ವ್ಯಾಪಾರ

‘ಬಾಹ್ಯಾಕಾಶ ಅವಶೇಷಗಳು ಮತ್ತು ಉಪಗ್ರಹ ದಟ್ಟಣೆ ನಿರ್ವಹಣೆ ಲಾಭದಾಯಕ ವ್ಯಾಪಾರ– ವ್ಯವಹಾರದ ಅವಕಾಶವಾಗಿ ಮಾರ್ಪಟ್ಟಿದೆ. ಇದಕ್ಕೆ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಪ್ರಯತ್ನ ಜಗತ್ತಿನ ಎಲ್ಲೆಡೆ ನಡೆಯುತ್ತಿದ್ದು, ನಮ್ಮಲ್ಲೂ ಹಲವು ಖಾಸಗಿಯವರು ಕಾರ್ಯಪ್ರವೃತ್ತರಾಗಿದ್ದಾರೆ’ ಎಂದು ಇನ್‌ಸ್ಪೇಸ್ ಅಧ್ಯಕ್ಷ ಪವನ್ ಕುಮಾರ್ ಗೋಯೆಲ್ ಹೇಳಿದರು.

ಈ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳು, ಇಸ್ರೊ ಮತ್ತು ಸರ್ಕಾರ ಜಂಟಿಯಾಗಿ ಪ್ರಯತ್ನ ನಡೆಸಬೇಕು. ಬಾಹ್ಯಾಕಾಶ ಕ್ಷೇತ್ರದಲ್ಲಿರುವ ವಿಪುಲ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಮುಂಚೂಣಿಗೆ ಬರಬೇಕು. ಇದಕ್ಕಾಗಿ ಜಾಗತಿಕ ಸಹಭಾಗಿತ್ವಕ್ಕೂ ಮುಂದಾಗಬೇಕು ಎಂದು ಸಲಹೆ ನೀಡಿದರು. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರೂ ಮಾತನಾಡಿದರು.



ಬಾಹ್ಯಾಕಾಶದಲ್ಲಿ ಇತ್ತೀಚಿನ ದಿನಗಳಲ್ಲಿ ಇಂತಹ ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತಿವೆ. ಈ ನಿಟ್ಟಿನಲ್ಲಿ ಕಣ್ಗಾವಲಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ

ಡಾ.ಜಿ.ಸತೀಶ್ ರೆಡ್ಡಿ
ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ

ಕೊಡಿಗೇಹಳ್ಳಿ, ಕನ್ನಲ್ಲಿ ಕೆರೆಗಳು ಕಲುಷಿತ; ತ್ಯಾಜ್ಯ ನೀರಿನಿಂದ ದುರ್ವಾಸನೆ

ಹೋರಾಟದ ಪ್ರತಿಫಲ: ಕಲ್ಮಶ ತಡೆಗೆ ಎಸ್‌ಟಿಪಿ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಯಶವಂತಪುರ ವ್ಯಾಪ್ತಿಯ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸ್ಥಳೀಯರ ಆಗ್ರಹಕ್ಕೆ ಕೊನೆಗೂ ಮಣಿದಿರುವ ಜಲಮಂಡಳಿ ಹಾಗೂ ಬಿಬಿಎಂಪಿ ಕೊಡಿಗೇಹಳ್ಳಿ ಹಾಗೂ ಕನ್ನಲ್ಲಿ ಕೆರೆಗೆ ಕಲುಷಿತ ನೀರು ಹರಿಯದಂತೆ ತಡೆಯಲು ಎಸ್‌ಟಿಪಿ ಸ್ಥಾಪಿಸಲು ಮುಂದಾಗಿವೆ.

ಸರ್ ಎಂ. ವಿಶ್ವೇಶ್ವರಯ್ಯ ಬಿಡಿಎ ಬಡಾವಣೆಗೆ ಹೊಂದಿಕೊಂಡಂತಿರುವ ಕೊಡಿಗೇಹಳ್ಳಿ ಹಾಗೂ ಕನ್ನಲ್ಲಿ ಕೆರೆಗಳು ಬಿಬಿಎಂಪಿ ವ್ಯಾಪ್ತಿಯ ಸುಪರ್ದಿಯಲ್ಲಿವೆ. ಈ ಕೆರೆಗಳಿಗೆ ಹೇರೋಹಳ್ಳಿ, ಬ್ಯಾಡರಹಳ್ಳಿ, ದೊಡ್ಡಗೊಲ್ಲರಹಟ್ಟಿ, ಬಾಲಾಜಿ ಬಡಾವಣೆ, ಅಂಜನಾನಗರ ಮತ್ತು ಬಿಇಎಲ್ ಲೇಔಟ್‌ನಿಂದ ಕೊಳಚೆ ನೀರು ಹಾಗೂ ತ್ಯಾಜ್ಯ ಸೇರಿಕೊಳ್ಳುತ್ತಿದೆ. ಇದನ್ನು ತಡೆಯಬೇಕು ಎಂದು ಸ್ಥಳೀಯರು ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಜಲಮಂಡಳಿಗೆ ಹಲವು ಬಾರಿ ಮನವಿ ಮಾಡಿಕೊಳ್ಳಲಾಗಿತ್ತು.

ಕೊಡಿಗೇಹಳ್ಳಿ ಹಾಗೂ ಕನ್ನಲ್ಲಿ ಕೆರೆಗಳು ದುರ್ವಾಸನೆ ಬೀರುತ್ತಿದ್ದು, ಅಸುಪಾಸಿನ ನಿವಾಸಿಗಳಿಗೆ ತೊಂದರೆಯಾಗಿದೆ. ಕಲುಷಿತ ನೀರು ಕಪ್ಪು ಬಣ್ಣಕ್ಕೆ ತಿರುಗಿದ್ದು, ಸೊಳ್ಳೆ, ಕ್ರಿಮಿಕೀಟಗಳು ಹೆಚ್ಚಾಗಿವೆ. ಸುತ್ತಮುತ್ತಲಿನ ಬಾವಿ ಹಾಗೂ ಕೊಳವೆಬಾವಿಗಳ ನೀರೂ ಕಲುಷಿತಗೊಳ್ಳುತ್ತಿದೆ. ಕೊಮ್ಮಘಟ್ಟ, ರಾಮಸಂದ್ರ ಕೆರೆಗಳೂ ಕಲುಷಿತಗೊಳ್ಳುತ್ತಿದ್ದು, ಇಲ್ಲಿನ ರಾಸಾಯನಿಕ ಬೈರಮಂಗಲ ಕೆರೆ ಸೇರುತ್ತಿದೆ. ಕೂಡಲೇ ಕ್ರಮ ಕೈಗೊಳ್ಳಿ ಎಂದು ಬಿಬಿಎಂಪಿ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಜಲಮಂಡಳಿಗೆ ಪದೇ ಪದೇ ಪತ್ರ ಬರೆದು ಕೋರಿಕೊಳ್ಳಲಾಗಿತ್ತು. ಇದೀಗ ಅದಕ್ಕೆ ಸ್ಪಂದನೆ ಸಿಕ್ಕಿದ್ದು, ಜಲಮಂಡಳಿ 3 ದಶಲಕ್ಷ ಲೀಟರ್ ಸಂಸ್ಕರಣೆ ಸಾಮರ್ಥ್ಯದ ಎಸ್‌ಟಿಪಿಯನ್ನು ಅಳವಡಿಸಲು ಮುಂದಾಗಿದೆ.



ಕಲ್ಮಶ ತುಂಬಿಕೊಂಡಿರುವ ಕೊಡಿಗೇಹಳ್ಳಿ ಕೆರೆ

'ಜಲಮಂಡಳಿ ವಿಶ್ವೇಶ್ವರಯ್ಯ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯ, ಒಳಚರಂಡಿ ವ್ಯವಸ್ಥೆ ಮಾಡಿದೆ. ಕೊಡಿಗೇಹಳ್ಳಿ ಹಾಗೂ ಕನ್ನಲ್ಲಿ ಕೆರೆಗಳಿಗೆ ಹೆಚ್ಚಿನ ಕಲ್ಮಶ ಬರುತ್ತಿದ್ದು, ತಡೆಯುವಂತೆ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯರು ಕೋರಿದ್ದರು. ಹೀಗಾಗಿ, ಎಸ್‌ಟಿಪಿಯನ್ನು ನಿರ್ಮಿಸಲು ಜಲಮಂಡಳಿ ಮುಂದಾಗಿದೆ. ಒಂದೂವರೆ ಎಕರೆ ಪ್ರದೇಶದಲ್ಲಿ ಘಟಕವನ್ನು ನಿರ್ಮಿಸಿ, ಈ ಕೆರೆಗಳಿಗೆ ಸಂಸ್ಕರಿಸಿ ನೀರು ಮಾತ್ರ ಹರಿಯುವಂತೆ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ಜಲಮಂಡಳಿಯ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಕೆ.ಎನ್.ರಾಜೀವ್ ತಿಳಿಸಿದರು.

'ಕಾವೇರಿ 5ನೇ ಹಂತದ ಯೋಜನೆ ಅಡಿಯಲ್ಲಿ ಜೈಕಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ₹10 ಕೋಟಿ ವೆಚ್ಚದಲ್ಲಿ ಎಸ್‌ಟಿಪಿ ಸ್ಥಾಪಿಸಲಾಗುತ್ತದೆ. ಒಂದೂವರೆ ವರ್ಷದಲ್ಲಿ ಯೋಜನೆ ಪೂರ್ಣಗೊಳ್ಳಲಿದೆ' ಎಂದರು.

'ಕೊಡಿಗೇಹಳ್ಳಿ ಹಾಗೂ ಕನ್ನಲ್ಲಿ ಕೆರೆಗಳನ್ನು ಸದ್ಯಕ್ಕೆ ಬಿಬಿಎಂಪಿ ಅಭಿವೃದ್ಧಿಗೆ ತೆಗೆದುಕೊಂಡಿಲ್ಲ. ಆದರೂ ಕೊಳಚೆ ನೀರು ಹರಿಯುವುದನ್ನು ತಡೆಯಲು ಜಲಮಂಡಳಿ ಕೈಗೊಂಡಿರುವ ಕಾಮಗಾರಿಗೆ ಬೆಂಬಲವಾಗಿ ನಿಂತಿದೆ' ಎಂದು ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ಅವರು ಹೇಳಿದರು.

ಕನ್ನಲ್ಲಿ ಕೆರೆಗೆ ಕಟ್ಟಡ ನಿರ್ಮಾಣ ತ್ಯಾಜ್ಯ

ಕನ್ನಲ್ಲಿ ಕೆರೆಗೆ ಕಟ್ಟಡ ನಿರ್ಮಾಣದ ಅವಶೇಷ, ಘನತ್ಯಾಜ್ಯ, ಮಾಂಸ ತ್ಯಾಜ್ಯಗಳನ್ನು ಸುರಿಯಲಾಗುತ್ತಿದೆ ಎಂದು ಪರಿಸರ ಕಾರ್ಯಕರ್ತ ಗೌಡಯ್ಯ ಅವರು ಬಿಬಿಎಂಪಿ, ಮಾಲಿನ್ಯ ನಿಯಂತ್ರಣ ಮಂಡಳಿಗೆ ಒಂದು ವರ್ಷದಿಂದ ಹಲವು ಪತ್ರ ಬರೆದಿದ್ದಾರೆ.

'ಇದಕ್ಕೆ ಸ್ಪಂದಿಸಿದ್ದ ಬಿಬಿಎಂಪಿ ಇಂತಹ ತ್ಯಾಜ್ಯ ಕೆರೆಗೆ ಹೋಗದಂತೆ ಕ್ರಮ ಕೈಗೊಳ್ಳಲು ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗೆ ಸೂಚಿಸಿತ್ತು. ಆದರೆ ಅವರಿಂದ ಯಾವುದೇ ಕ್ರಮವಾಗಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿ ತಪಾಸಣೆ ನಡೆಸಿದ್ದರೂ ಕ್ರಮ ಕೈಗೊಂಡಿಲ್ಲ ಎಂದು ಗೌಡಯ್ಯ ದೂರಿದರು.

ಕೃಷ್ಣಾ ನೀರು ಕರ್ನಾಟಕ ಬಳಸುತ್ತಿಲ್ಲ: ತೆಲಂಗಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: 1976ರಲ್ಲಿ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ–1 ಹಂಚಿಕೆ ಮಾಡಿರುವ 173 ಟಿಎಂಸಿ ಅಡಿ ನೀರನ್ನು ಕರ್ನಾಟಕವು ಬಳಸಿಕೊಂಡಿಲ್ಲ. ಹೀಗಾಗಿ, ನ್ಯಾಯಮಂಡಳಿ–2ಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆ ಹೊರಡಿಸುವ ಅಗತ್ಯ ಇಲ್ಲ ಎಂದು ತೆಲಂಗಾಣವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ಕೃಷ್ಣಾ ಜಲವಿವಾದಕ್ಕೆ ಸಂಬಂಧಿಸಿದಂತೆ ಜಲಾನಯನ ಪ್ರದೇಶದ ರಾಜ್ಯಗಳಾದ ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿ.ರಾಮಸುಬ್ರಮಣಿಯನ್ ಅವರ ಪೀಠವು ನಡೆಸಿತು. ನ್ಯಾಯಮಂಡಳಿಯ 2013ರ ಆದೇಶಕ್ಕೆ ಗೆಜೆಟ್ ಅಧಿಸೂಚನೆ ಹೊರಡಿಸಬೇಕು ಎಂಬುದು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ವಾದ. ಜಲಾನಯನ ಪ್ರದೇಶದ ಎಲ್ಲ ರಾಜ್ಯಗಳಿಗೆ ಹೊಸದಾಗಿ ನೀರಿನ ಹಂಚಿಕೆ ಮಾಡಬೇಕು ಎಂದು ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳು ಅರ್ಜಿ ಸಲ್ಲಿಸಿವೆ.

ತೆಲಂಗಾಣ ರಾಜ್ಯದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಸ್.ವೈದ್ಯನಾಥನ್, 'ತೆಲಂಗಾಣ ರಾಜ್ಯ ಅಸ್ತಿತ್ವಕ್ಕೆ ಬರುವ ಮುನ್ನವೇ ನ್ಯಾಯಮಂಡಳಿ ಆದೇಶ ನೀಡಿತ್ತು. ಹೀಗಾಗಿ, ರಾಜ್ಯಕ್ಕೆ ನ್ಯಾಯಮಂಡಳಿ ಮುಂದೆ ಅಭಿಪ್ರಾಯ ಸಲ್ಲಿಸಲು ಅವಕಾಶವಿರಲಿಲ್ಲ. ನ್ಯಾಯಮಂಡಳಿ 2013ರಲ್ಲಿ ನೀಡಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಮನವಿ ಮಾಡಿದರು. ಕೃಷ್ಣಾ ನದಿಯಲ್ಲಿನ 800 ಟಿಎಂಸಿ ಅಡಿ ನೀರಿನ ಪೈಕಿ ರಾಜ್ಯಕ್ಕೆ 90 ಟಿಎಂಸಿ ಅಡಿಯಷ್ಟೇ ನೀರು ಸಿಕ್ಕಿದೆ ಎಂದು ಗಮನ ಸೆಳೆದರು.

ಕೃಷ್ಣಾ ಜಲವಿವಾದ ಪ್ರಕರಣ ನ್ಯಾಯಾಲಯದಲ್ಲಿದ್ದರೂ ಕರ್ನಾಟಕ ಸರ್ಕಾರವು ಮೂಲಸೌಕರ್ಯ ಕಲ್ಪಿಸಲು ₹13 ಸಾವಿರ ಕೋಟಿ ವೆಚ್ಚ ಮಾಡಿದೆ. ಕರ್ನಾಟಕವು ಅಕ್ರಮವಾಗಿ ರಾಜ್ಯದ ಪಾಲಿನ ಹೆಚ್ಚು ನೀರು ಬಳಸುತ್ತಿದೆ. ಗಡಿ ವಿವಾದ, ಜಲ ವಿವಾದ ಹಾಗೂ ಎಲ್ಲ ಬಗೆಯ ವಿವಾದಗಳಿವೆ' ಎಂದರು.

ಮಹಾರಾಷ್ಟ್ರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಶೇಖರ್ ನಫಡೆ, 'ಕೇಂದ್ರ ಸರ್ಕಾರ ಶೀಘ್ರ ಗೆಜೆಟ್ ಅಧಿಸೂಚನೆ ಹೊರಡಿಸಬೇಕು. ಈ ಸಂಬಂಧ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕು' ಎಂದು ಕೋರಿದರು.



ಸಂಕ್ರಾಂತಿ ತಯಾರಿ

ಮಕರ ಸಂಕ್ರಾಂತಿ ಅಂಗವಾಗಿ ಕೆ.ಆರ್. ಮಾರುಕಟ್ಟೆಯಲ್ಲಿ ಕಬ್ಬಿನ ಜಲ್ಲೆಗಳನ್ನು ಒಟ್ಟು ಮಾಡುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಆಂಬುಲೆನ್ಸ್ ಸುಗಮ ಸಂಚಾರಕ್ಕೆ ಸಹಾಯವಾಣಿ: ಅರ್ಜಿ ವಿಲೇವಾರಿ

ಬೆಂಗಳೂರು: 'ಸಂಚಾರ ದಟ್ಟಣೆಯಲ್ಲಿ, ತುರ್ತು ಸಂದರ್ಭದ ಗೋಲ್ಡನ್ ಅವಧಿಯಲ್ಲಿ ರೋಗಿಗಳು, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ವಿಶೇಷ ತುರ್ತು ಸೇವೆ ಆರಂಭಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ, 'ಭಾರತ ಪುನರುತ್ಥಾನ ಟ್ರಸ್ಟ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲೆ ಪ್ರತಿಮಾ ಹೊನ್ನಾಪುರ, ಕರ್ನಾಟಕ ರಸ್ತೆ ಸುರಕ್ಷತೆ ಪ್ರಾಧಿಕಾರದ ಜಂಟಿ ಆಯುಕ್ತ ಹಾಗೂ ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಉಪ ಕಾರ್ಯದರ್ಶಿಯವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. 'ಇದನ್ನು ದಾಖಲಿಸಿಕೊಂಡು, ಸರ್ಕಾರದ ಕ್ರಮಕ್ಕೆ ಶ್ಲಾಘಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು.

ಸಹಾಯವಾಣಿ: 'ಆಂಬುಲೆನ್ಸ್‌ಗಳು ಸಂಚಾರ ಆರಂಭಿಸಿದಾಗ ಮತ್ತು ರೋಗಿಗಳನ್ನು ತುರ್ತು ಚಿಕಿತ್ಸೆಗೆ ರವಾನಿಸುವಾಗ ಸಂಚಾರ ದಟ್ಟಣೆಯಲ್ಲಿ ಸಿಲುಕಿದರೆ, ವಾಹನ ದಟ್ಟಣೆ ನಿವಾರಿಸಲು ಸಂಚಾರ ಪೊಲೀಸರ ವತಿಯಿಂದ ವಿಶೇಷವಾದ ತುರ್ತು ಸಹಾಯವಾಣಿ ಸೇವೆ ಮತ್ತು ಸ್ಥಿರ ದೂರವಾಣಿ ಸಂಖ್ಯೆಯ ವ್ಯವಸ್ಥೆ ಮಾಡಲಾಗಿದೆ' ಎಂದು ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

'ದಟ್ಟಣೆಯಲ್ಲಿ ಸಿಲುಕಿದಾಗ ಇಆರ್‌ಎಸ್‌ಎಸ್ (ಎಮರ್ಜೆನ್ಸಿ ರೆಸ್ಪಾನ್ಸ್ ಸಪೋರ್ಟ್ ಸಿಸ್ಟಂ–ಇಆರ್‌ಎಸ್‌ಎಸ್) ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬೇಕು. ಈ ಸಂಖ್ಯೆಯನ್ನು ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳ ಆಂಬುಲೆನ್ಸ್‌ಗಳಿಗೆ ನೀಡಲಾಗಿದೆ' ಎಂದು ತಿಳಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ 112 ಅಥವಾ ಸ್ಥಿರ ದೂರವಾಣಿ ಸಂಖ್ಯೆಗಳು 080-22943030, 080-22943131, 080-22943663 ಹಾಗೂ 080-22943684ಕ್ಕೆ ಕರೆ ಮಾಡಿ ಸಂಚಾರ ದಟ್ಟಣೆ ನಿವಾರಿಸುವಂತೆ ಕೋರಬಹುದಾಗಿದೆ.

ಎಲೆಕ್ಟ್ರಾನಿಕ್ ಸಿಟಿ ಎಆರ್‌ಟಿಒ ಅಮಾನತು

ಬೆಂಗಳೂರು: ಒಂದೇ ದಿನ 900ಕ್ಕೂ ಹೆಚ್ಚು ಚಾಲನಾ ಪರವಾನಗಿ ವಿತರಿಸಿದ್ದ ಎಲೆಕ್ಟ್ರಾನಿಕ್ ಸಿಟಿ ಆರ್‌ಟಿಒ ಕಚೇರಿಯ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಿ.ಪಿ.ಕೃಷ್ಣಾನಂದ ಅವರನ್ನು ಅಮಾನತು ಮಾಡಲಾಗಿದೆ.

'ಈ ಕುರಿತು ಜಂಟಿ ಆಯುಕ್ತರು ಪರಿಶೀಲನೆ ನಡೆಸಿದ್ದರು. ಅಕ್ರಮ ವಿತರಣೆ ಸಾಬೀತಾಗಿದ್ದು, ಎಆರ್‌ಟಿಒ ಅಮಾನತು ಮಾಡಲಾಗಿದೆ' ಎಂದು ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಎಸ್.ಎನ್.ಸಿದ್ದರಾಮಪ್ಪ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಕಚೇರಿಯಲ್ಲಿ ಮೂವರು ಬ್ರೇಕ್ ಇನ್‌ಸ್ಪೆಕ್ಟರ್‌ಗಳಿದ್ದಾರೆ. ಕಚೇರಿಯ ಪರೀಕ್ಷಾ ಅಂಕಣದಲ್ಲಿ ಚಾಲನಾ ಸಾಮರ್ಥ್ಯ ಪ್ರದರ್ಶಿಸಲು ಇರುವ ಅವಕಾಶದಂತೆ ಪ್ರತಿಯೊಬ್ಬ ಇನ್‌ಸ್ಪೆಕ್ಟರ್ ಕಾರು ಮತ್ತು ಬೈಕ್ ಸೇರಿ ದಿನಕ್ಕೆ ಗರಿಷ್ಠ 100 ಚಾಲನಾ ಪರವಾನಗಿ ನೀಡಿದರೂ, 300 ದಾಟಲು ಸಾಧ್ಯವಾಗದು. ಹೀಗಿದ್ದರೂ, 900 ಪರವಾನಗಿ ವಿತರಿಸಿದ್ದಾರೆ. ಇದು ಅಸಾಧ್ಯ.

ಬೆಂಗಳೂರಿನ ಇತರ ಕಚೇರಿಗಳಲ್ಲೂ ತಪಾಸಣೆ ನಡೆಸಲಾಗುತ್ತಿದೆ. ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಕೆ.ಆರ್.ಪುರ, ಸೇರಿದಂತೆ ಹಲವು ಕಚೇರಿಗಳಿಗೆ, ಏಳು ಬ್ರೇಕ್ ಇನ್‌ಸ್ಪೆಕ್ಟರ್‌ಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಕೆಲವರು ಸಮಂಜಸ ಉತ್ತರ ನೀಡಿದ್ದಾರೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಪರಿಶೀಲನೆ ನಡೆಸಿದ ವರದಿಯನ್ನು ನೀಡಿದ್ದಾರೆ. ಹಾಗಾಗಿ, ಡಿಎಲ್ ವಿಭಾಗದ ಮುಖ್ಯಸ್ಥರಾಗಿದ್ದ ಕೃಷ್ಣಾನಂದ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ವಿವರ ನೀಡಿದರು.

'ಯುವಜನೋತ್ಸವ ಅಲ್ಲ, ಯುವಜನ ವಿನಾಶೋತ್ಸವ'

ಬೆಂಗಳೂರು: 'ನಿರುದ್ಯೋಗ, ಸರ್ಕಾರಿ ನೇಮಕಾತಿಗಳಲ್ಲಿ ಭ್ರಷ್ಟಾಚಾರ, ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯ ಮತ್ತು ಕೋಮುಗಲಭೆಗಳಿಗೆ ಬಲಿಯಾಗುತ್ತಿರುವ ರಾಜ್ಯದ ಯುವ ಸಮುದಾಯವನ್ನು ಅಣಕಿಸುವಂತೆ ರಾಷ್ಟ್ರೀಯ ಯುವಜನೋತ್ಸವ ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಬರುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

'ರಾಜ್ಯದಲ್ಲಿ ಸದ್ಯ 25ಲಕ್ಷಕ್ಕೂ ಮಿಕ್ಕಿ ನಿರುದ್ಯೋಗಿಗಳಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ 2.52 ಲಕ್ಷ ಹುದ್ದೆಗಳು ಖಾಲಿ ಇವೆ. ಸರ್ಕಾರಿ ಶಾಲೆಗಳು ಮತ್ತು ಪಿಯು ಕಾಲೇಜುಗಳಲ್ಲಿ 53,700 ಹುದ್ದೆಗಳು ಭರ್ತಿಯಾಗಿಲ್ಲ. ಸಣ್ಣ ಕೈಗಾರಿಗಳು ಮುಚ್ಚಿದ್ದರಿಂದ 83,190 ಪುರುಷರು ಮತ್ತು ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ. ಈ ಸ್ಥಿತಿಯಲ್ಲಿ ಯಾವ ಮುಖ ಹೊತ್ತು ಯುವಜನೋತ್ಸವ ಉದ್ಘಾಟಿಸಲು ಪ್ರಧಾನಿ ಬರುತ್ತಿದ್ದಾರೆ? ಅವರು ಉದ್ಘಾಟಿಸುತ್ತಿರುವುದು ಯುವಜನೋತ್ಸವವೇ? ಯುವಜನ ವಿನಾಶೋತ್ಸವವೇ' ಎಂದು ವ್ಯಂಗ್ಯವಾಡಿದ್ದಾರೆ.

'ಪಿಎಸ್ಐ ನೇಮಕಾತಿ ಹಗರಣಕ್ಕೆ 1.29 ಲಕ್ಷ ಯುವಜನರು ಬಲಿಯಾಗಿದ್ದಾರೆ. ಎಇ ಮತ್ತು ಜೆಇ ಪರೀಕ್ಷೆಗಳ ಪ್ರತಿಯೊಬ್ಬ ಅಭ್ಯರ್ಥಿಗಳಿಂದಲೂ ₹ 50ಲಕ್ಷದಿಂದ ₹ 80 ಲಕ್ಷ ಸುಲಿಗೆ ಮಾಡಲಾಗಿದೆ. ರೈಲ್ವೆಯ ಭ್ರಷ್ಟ ಅಧಿಕಾರಿಗಳು ನೇಮಕಾತಿಯ ಸುಳ್ಳು ಭರವಸೆ ನೀಡಿ ₹ 22 ಕೋಟಿ ಲೂಟಿ ಮಾಡಿದ್ದಾರೆ. ನಿರುದ್ಯೋಗದಿಂದ ಬೇಸತ್ತು ರಾಜ್ಯದಲ್ಲಿ 1,129 ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ರೀತಿ ನಿರುದ್ಯೋಗ ಮತ್ತು ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯದ ಮೂಲಕ ಯುವಜನರನ್ನು ವಿನಾಶದ ಅಂಚಿಗೆ ತಳ್ಳಿರುವ ಪ್ರಧಾನಿಗೆ ರಾಷ್ಟ್ರೀಯ ಯುವಜನೋತ್ಸವ ಉದ್ಘಾಟಿಸಲು ಯಾವ ನೈತಿಕತೆ ಇದೆ' ಎಂದೂ ಪ್ರಶ್ನಿಸಿದ್ದಾರೆ.

ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

26ರಂದು ರಾಜ್ಯಮಟ್ಟದ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ 31 ದಿನ ಪೂರೈಸಿದೆ.

ಜ.26ರಂದು ಸಂವಿಧಾನ ರಕ್ಷಣೆಗಾಗಿ ಹಾಗೂ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ರಾಜ್ಯಮಟ್ಟದ ಸಮಾವೇಶ ನಡೆಸಲು ಮಂಗಳವಾರ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಪರಿಶಿಷ್ಟ ಪಟ್ಟಿಯಲ್ಲಿನ 101 ಸಮುದಾಯಗಳಿಗೂ ಅನ್ಯಾಯವಾಗದಂತೆ ಒಳಮೀಸಲಾತಿಯನ್ನು ಜಾರಿ ಮಾಡಬೇಕೆಂದು ಮೂರು ದಶಕದಿಂದ ಹೋರಾಟ ನಡೆಸಲಾಗುತ್ತಿದೆ. ಸದಾಶಿವ ಆಯೋಗದ ವರದಿ ಜಾರಿಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ತೀರ್ಮಾನಿಸಲಾಯಿತು ಎಂದು ಪ್ರತಿಭಟನಕಾರರು ಮಾಹಿತಿ ನೀಡಿದ್ದಾರೆ.

ರಾಜ್ಯ ಸರ್ಕಾರವು ಕಾಟಾಚಾರಕ್ಕೆ ನೇಮಿಸಿರುವ ಉಪ ಸಮಿತಿಯನ್ನು ವಿಸರ್ಜಿಸಬೇಕು. ಸದಾಶಿವ ಆಯೋಗದ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ತೀರ್ಮಾನಿಸಿತು.

ಮುಖಂಡರಾದ ಬಿ.ಗೋಪಾಲ್, ಎನ್.ವೆಂಕಟೇಶ್, ಮಾವಳ್ಳಿ ಶಂಕರ್, ಅಂಬಣ್ಣ ಅರೋಲಿಕರ್, ಹೆಣ್ಣೂರು ಶ್ರೀನಿವಾಸ್, ಬಸವರಾಜ್ ಕೌತಾಳ್, ಮೋಹನ್ ರಾಜ್, ಹೆಣ್ಣೂರು ಲಕ್ಷ್ಮಿನಾರಾಯಣ್, ಡಿ.ಶಿವಶಂಕರ್, ಕನಕಪುರ ಬಿ. ಶಿವಣ್ಣ, ಶಿವರಾಜ ಯಕ್ಕರಕಿ, ಗುರುಮೂರ್ತಿ, ಶಿವಸುಂದರ್, ಗೌರಿ ಜನಶಕ್ತಿ, ನಾಗಮಣಿ ಮುಂತಾದವರು ಅವರು ಪ್ರತಿಭಟನೆ ವೇಳೆ ಹಾಜರಿದ್ದರು.

ಸ್ಯಾಂಟ್ರೊ ರವಿ ಬಂಧನಕ್ಕೆ ಎಎಪಿ ಆಗ್ರಹ

ಬೆಂಗಳೂರು: ಸ್ಯಾಂಟ್ರೊ ರವಿ ಹಾಗೂ ಆತನೊಂದಿಗೆ ಸಂಬಂಧ ಹೊಂದಿರುವ ಜನಪ್ರತಿನಿಧಿಗಳನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ(ಎಎಪಿ) ಮಹಿಳಾ ಘಟಕ ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಎಎಪಿ ನಗರ ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ ಮಾತನಾಡಿ, 'ರಾಜ್ಯವನ್ನು ಲೂಟಿ ಮಾಡುವ ಉದ್ದೇಶದಿಂದ ಮಹಿಳೆಯರನ್ನು ದುರ್ಬಳಕೆ ಮಾಡಿಕೊಂಡು ರಚನೆಯಾದ ಅನೈತಿಕ ಸರ್ಕಾರವಿದು. ಬಾಯಿ ತೆರೆದರೆ ಭಾರತೀಯ ಸಂಸ್ಕೃತಿ ಬಗ್ಗೆ ಮಾತನಾಡುವ ಬಿಜೆಪಿ ನಾಯಕರ ನಿಜ ಬಣ್ಣ ಬೆಳಕಿಗೆ ಬಂದಿದೆ. ಮಹಿಳೆಯರ ಬಗ್ಗೆ ಗೌರವವಿಲ್ಲದ ನಾಯಕರು ರಾಜ್ಯ ಆಳುತ್ತಿರುವುದು ದುರಂತ' ಎಂದರು.

'ಮುಖ್ಯಮಂತ್ರಿ ಹಾಗೂ ಸಚಿವರುಗಳು ಸ್ಯಾಂಟ್ರೊ ರವಿ ಬಗ್ಗೆ ಗೊತ್ತೇ ಇಲ್ಲವೆಂದು ಹೇಳುತ್ತಿದ್ದಾರೆ. ಮತ್ತೊಂಡೆದೆ, ಆತನಿಗೆ ಸರ್ಕಾರವೇ ಬೆಂಬಲವಾಗಿದೆ. ಆತ ನಾಪತ್ತೆಯಾಗಲು ಅವಕಾಶ ನೀಡಿ ಸಾಕ್ಷ್ಯಗಳನ್ನು ನಾಶಪಡಿಸಲಾಗುತ್ತಿದೆ' ಎಂದು ದೂರಿದರು.

ನಗರ ಘಟಕದ ಮಾಧ್ಯಮ ವಕ್ತಾರೆ ಉಷಾ ಮೋಹನ್, 'ಅಧಿಕಾರಕ್ಕಾಗಿ ಬಿಜೆಪಿ ಯಾವ ಮಟ್ಟಕ್ಕಾದರೂ ಇಳಿಯುತ್ತದೆ. ಮುಂದಿನ ಚುನಾವಣೆಯಲ್ಲಿ ಮಹಿಳೆಯರು ಬಿಜೆಪಿಯ ವಿರುದ್ಧ ಮತ ಚಲಾಯಿಸುವ ಮೂಲಕ ತಕ್ಕ ಪಾಠ ಕಲಿಸಬೇಕು' ಎಂದು ಕರೆ ನೀಡಿದರು.



ಸ್ಯಾಂಟ್ರೊ ರವಿ ಬಂಧನಕ್ಕೆ ಆಗ್ರಹಿಸಿ ಎಎಪಿ ಮಹಿಳಾ ಘಟಕದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಲಖಿಂಪುರ ಖೀರಿ ಪ್ರಕರಣ ವಿಚಾರಣೆಗೆ ಬೇಕು 5 ವರ್ಷ'

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ವರು ರೈತರ ಸಾವಿಗೆ ಕಾರಣವಾದ 2021ರ ಲಖಿಂಪುರ ಖೀರಿ ಹಿಂಸಾಚಾರ ಪ್ರಕರಣದ ವಿಚಾರಣೆ ಪೂರ್ಣಗೊಳಿಸಲು ಐದು ವರ್ಷ ಬೇಕಾಗಲಿವೆ ಎಂದು ಸೆಷನ್ಸ್ ನ್ಯಾಯಾಧೀಶರು, ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ.

ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶೀಶ್ ಮಿಶ್ರಾ ಜಾಮೀನು ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿ. ರಾಮಸುಬ್ರಮಣಿಯನ್ ಅವರಿದ್ದ ಪೀಠವು, ಇತರ ಆರೋಪಿಗಳು ಇನ್ನೂ ಬಂಧನದಲ್ಲಿದ್ದಾರೆಯೇ ಎನ್ನುವ ಮಾಹಿತಿ ನೀಡಲು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿ, ವಿಚಾರಣೆಯನ್ನು ಜ.19ಕ್ಕೆ ನಿಗದಿಪಡಿಸಿತು.

ಪ್ರಕರಣದಲ್ಲಿ 208 ಪ್ರಾಸಿಕ್ಯೂಷನ್ ಸಾಕ್ಷಿಗಳು, 171 ದಾಖಲೆಗಳು ಮತ್ತು ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ 27 ವರದಿಗಳಿವೆ ಎಂದು ಸೆಷನ್ಸ್ ನ್ಯಾಯಾಧೀಶರು, ಪತ್ರಮುಖೇನ ನೀಡಿರುವ ಮಾಹಿತಿಯನ್ನು ಪೀಠ ಗಮನಿಸಿತು.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಿಂದ ಸಾರ್ವಜನಿಕ ಸಭೆ

ನನ್ನಪ್ಪ ಒಂಟಿ ಅಲ್ಲ: ಬ್ರಾಹ್ಮಿಣಿ ರೆಡ್ಡಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'ದ(ಕೆಆರ್‌ಪಿಪಿ) ವೇದಿಕೆಯಲ್ಲಿ ಮೊದಲ ಸಲ ಕಾಣಿಸಿಕೊಂಡ ಮಾಜಿ ಸಚಿವ ಜನಾರ್ದನರೆಡ್ಡಿ ಅವರ ಪುತ್ರಿ ಬ್ರಾಹ್ಮಿಣಿ, 'ನನ್ನಪ್ಪ ಒಂಟಿ ಅಲ್ಲ; ನಾವೆಲ್ಲರೂ ಅವರ ಜತೆಗಿದ್ದೇವೆ' ಎಂದು ಘೋಷಿಸಿ ಬಳ್ಳಾರಿ ಜಿಲ್ಲೆಯ ರಾಜಕಾರಣಕ್ಕೆ ರಂಗೇರಿಸುವ ಪ್ರಯತ್ನ ಮಾಡಿದರು.

ಜನಾರ್ದನ ರೆಡ್ಡಿ ಗೈರು ಹಾಜರಿಯಲ್ಲಿ ಅವರ ಪತ್ನಿ ಲಕ್ಷ್ಮಿ ಅರುಣಾ ನೇತೃತ್ವದಲ್ಲಿ ಹವಂಬಾವಿ ಹೆಲಿಪ್ಯಾಡ್‌ನಲ್ಲಿ ಬುಧವಾರ ನಡೆದ ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಜನ್ಮಭೂಮಿ, ಕರ್ಮ ಭೂಮಿ, ಪುಣ್ಯ ಭೂಮಿಯಿಂದ ದೂರ ಆಗಬೇಕಾದ ಪರಿಸ್ಥಿತಿ ಬೇರೆ ಯಾರಿಗೂ ಬಾರದಿರಲಿ. ರೆಡ್ಡಿ ಸಚಿವರಾಗಿ ಮಾಡಿದ ಕೆಲಸ ಸ್ಮರಣೀಯ. ಆನಂತರ ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಆಗಿಲ್ಲ. ಚಾಗನೂರು ವಿಮಾನ ನಿಲ್ದಾಣ ತನ್ನ ತಂದೆ ಕನಸು. ಅದು ನನೆಗುದಿಗೆ ಬಿದ್ದಿದೆ' ಎಂದೂ ಬ್ರಾಹ್ಮಿಣಿ ಹೇಳಿದರು.

ಲಕ್ಷ್ಮಿ ಅರುಣಾ ಅವರು ಮಾತನಾಡಿ, 'ರೆಡ್ಡಿ ಅವರ ಅಭಿವೃದ್ಧಿ ಕೆಲಸಗಳನ್ನು ನೋಡಿ ಅವರನ್ನು ಬಳ್ಳಾರಿಗೆ ಬರದಂತೆ ಜೈಲಿಗೆ ಕಳುಹಿಸಲಾಗಿತ್ತು. ಜಿಲ್ಲೆಯ ಸಮಗ್ರ ಅಭಿವೃದ್ಧಿ ಮಾಡಲು ಮತ್ತೊಮ್ಮೆ ರಾಜಕೀಯಕ್ಕೆ ಬರಬೇಕಿದೆ' ಎಂದು ಹೇಳಿದರು.

ವಿಡಿಯೊ ಮೂಲಕ ಮಾತನಾಡಿದ ಜನಾರ್ದನ ರೆಡ್ಡಿ ಅವರು, ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರಿಸಿದರು. ಬೆಂಗಳೂರು ಮಹಾನಗರದ ನಂತರ ಎರಡನೇ ಮಹಾನಗರವಾಗಿ ಬಳ್ಳಾರಿ ಜಿಲ್ಲೆಯನ್ನು ಅಭಿವೃದ್ಧಿಪಡಿಸುವ ಕನಸು ತಮಗಿದೆ ಎಂದು ತಿಳಿಸಿದರು.

ಕಲ್ಯಾಣ ಸ್ವಾಮೀಜಿ, ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ವೀರೇಶ್ವರ ಸ್ವಾಮೀಜಿ, ಮಹಾಂತ ಸ್ವಾಮೀಜಿ ಮತ್ತಿತರ ವಿವಿಧ ಮಠಾಧೀಶರು ಸಾನ್ನಿಧ್ಯ ವಹಿಸಿದ್ದರು.

ಜನಾರ್ದನ ರೆಡ್ಡಿ ಅವರ 56ನೇ ಹುಟ್ಟುಹಬ್ಬದ ಅಂಗವಾಗಿ 56 ಕಿಲೋ ಗ್ರಾಂ ಕೇಕ್ ಕತ್ತರಿಸಿ ಕಾರ್ಯಕರ್ತರು ಸಂಭ್ರಮಿಸಿದರು. ಇದಕ್ಕೂ ಮೊದಲು ಬೈಕ್ ರ್‍ಯಾಲಿ ನಡೆಯಿತು.



ಬಿಎಂಎಸ್ ಕಾನೂನು ಕಾಲೇಜು ಮತ್ತು ಕರ್ನಾಟಕ ಕಾನೂನು ಸುಧಾರಣಾ ಸಂಸ್ಥೆಯ ಸಹಯೋಗದಲ್ಲಿ ಮಂಗಳವಾರ ನಡೆದ 'ಬೆಂಗಳೂರು ವಲಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ'ಯ ವಿಜೇತರಿಗೆ ಸಚಿವ ಜೆ.ಸಿ. ಮಾಧುಸ್ವಾಮಿ ಪ್ರಶಸ್ತಿ ವಿತರಿಸಿದರು. ದ್ವಾರಕನಾಥ ಬಾಬು, ಪ್ರಾಂಶುಪಾಲರಾದ ಅನಿತಾ ಎಫ್.ಎನ್. ಡಿಸೋಜಾ, ಸಹಾಯಕ ಪ್ರಾಧ್ಯಾಪಕರಾದ ರಾಜೀವ ಗೋಪಿನಾಥ್, ರುದ್ರಗೌಡ ಎಂ.ಎಚ್., ನಮನ್ ವಂಕದಾರಿ, ರಮ್ಯಾ ಕೆ., ವೀಣಾ ಟಿ.ಎನ್. ಗುರ್ವಿಂದರ್ ಕೌರ್ ಇದ್ದರು.

ಉಚಿತ ಯೋಗಾಸನ ತರಬೇತಿ ಇಂದು

ಬೆಂಗಳೂರು: ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ 45 ದಿನಗಳ ಉಚಿತ ಯೋಗಾಸನ, ಪ್ರಾಣಾಯಾಮ ಮತ್ತು ಧ್ಯಾನ ತರಗತಿಳನ್ನು ಹಮ್ಮಿಕೊಳ್ಳಲಾಗಿದೆ.

ಜ. 12ರಂದು ಬೆಂಗಳೂರಿನ ವಿವಿಧ ಶಾಖೆಗಳಲ್ಲಿ ತರಗತಿಗಳು ಪ್ರಾರಂಭವಾಗಲಿವೆ.

ಕೆಂಗೇರಿಯ ರಾಧಾಕೃಷ್ಣ ಶಾಲೆ, ಚುಂಚನಕುಪ್ಪೆಯ ಆರ್‌ಪಿಎಸ್ ಚಿಲ್ಡ್ರನ್ ಸ್ಕೂಲ್, ಭಾರತನಗರದ ಪಂಚಮುಖಿ ದೇವಸ್ಥಾನ, ಹೆಗ್ಗನಹಳ್ಳಿ ಕರೀಂಸಾಬ್ ಲೇಔಟ್‌ನ ದೀಪಶ್ರೀ ಪ್ರೌಢಶಾಲೆ ಸೇರಿದಂತೆ ವಿವಿಧ ಶಾಲೆಗಳಲ್ಲಿ ತರಬೇತಿಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ 9743060580 /9035230633ಗೆ ಸಂಪರ್ಕಿಸಿ.

ಬ್ರಿಟನ್‌ನಲ್ಲಿ ಯುರೇನಿಯಂ ಜಪ್ತಿ ಪಾಕ್‌ನತ್ತ ಶಂಕಾಸ್ಪದ ನೋಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದಲ್ಲಿ ಇತ್ತೀಚೆಗೆ ಪಾಕಿಸ್ತಾನದಿಂದ ಬಂದಿದ್ದ ಯುರೇನಿಯಂ ಒಳಗೊಂಡಿದ್ದ ಪ್ಯಾಕೇಜ್ ಜಪ್ತಿ ಮಾಡಲಾಗಿದ್ದು, ಭಾರತ ನೆರೆಯ ರಾಷ್ಟ್ರವು ಒಳಗೊಂಡು ನಡೆದಿರುವ ಗೋಪ್ಯ ಜಾಲಗಳ ಕಾರ್ಯಶೈಲಿಯತ್ತ ಮತ್ತೆ ಗಮನಸೆಳೆದಿದೆ.

ಈ ಬೆಳವಣಿಗೆ ಕುರಿತು ಬ್ರಿಟನ್ ಅಧಿಕಾರಿಗಳು ಕೈಗೊಂಡಿರುವ ತನಿಖೆಯ ಫಲಿತಾಂಶಕ್ಕಾಗಿ ಭಾರತ ಎದುರು ನೋಡುತ್ತಿದೆ. ಇದು, ಪಾಕ್ ಕಾರ್ಯಶೈಲಿ ಮೇಲೆ ದೀರ್ಘಕಾಲದಿಂದ ಇರುವ ಶಂಕೆಯನ್ನು ದೃಢಪಡಿಸಬಹುದು ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಬ್ರಿಟನ್ ಗಡಿ ಭದ್ರತಾ ಪಡೆ ಸಿಬ್ಬಂದಿ ಡಿಸೆಂಬರ್ 2ರಂದು ನಡೆಸಿದ್ದ ದೈನಿಕ ತಪಾಸಣೆಯಲ್ಲಿ ಒಮನ್‌ನಿಂದ ಹೀಥ್ರೂ ವಿಮಾನ ನಿಲ್ದಾಣಕ್ಕೆ ಬಂದಿದ್ದ ವಿಮಾನದಲ್ಲಿ ಯುರೇನಿಯಂ ಇದ್ದ ಪ್ಯಾಕೇಜ್ ಪತ್ತೆಯಾಗಿತ್ತು. ಈ ಪ್ಯಾಕೇಜ್ ಪಾಕಿಸ್ತಾನ ಮೂಲದಿಂದ ಬಂದಿತ್ತು ಎನ್ನಲಾಗಿದೆ.

ರಹಸ್ಯ ಅಣ್ವಸ್ತ್ರ ಪ್ರಸರಣದಲ್ಲಿ ಪಾಕಿಸ್ತಾನದ ಪಾತ್ರ ಮತ್ತು ಭಾರತದ ಭದ್ರತೆಗೆ ಅದು ಒಡ್ಡಿರುವ ಅಪಾಯದ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮತ್ತು ಇತರ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ಪದೇ ಪದೇ ಗಮನಸೆಳೆಯುತ್ತಿದೆ.

ಉತ್ತರ ಕೊರಿಯಾದಿಂದ ಪಾಕ್‌ಗೆ ಅಣ್ವಸ್ತ್ರ ಮತ್ತು ರಕ್ಷಣಾ ತಂತ್ರಜ್ಞಾನಗಳ ಪೂರೈಕೆ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಗಮನವನ್ನು ಭಾರತ ಅಕ್ಟೋಬರ್ 2022ರಲ್ಲಿ ಸೆಳೆದಿತ್ತು.

ಉತ್ತರ ಕೊರಿಯಾದಲ್ಲಿ ಅಣ್ವಸ್ತ್ರ ಮತ್ತು ಕ್ಷಿಪಣಿ ತಂತ್ರಜ್ಞಾನದ ಕ್ರೋಢೀಕರಣ ಕುರಿತು ಗಮನಹರಿಸುವುದು ಅಗತ್ಯ. ಈ ಬೆಳವಣಿಗೆಯು ಭಾರತ ಸೇರಿದಂತೆ ಈ ವಲಯದಲ್ಲಿ ಶಾಂತಿ ಮತ್ತು ಭದ್ರತೆಗೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ ರುಚಿರಾ ಕಾಂಬೋಜ್ ಭದ್ರತಾ ಮಂಡಳಿಯಲ್ಲಿ ಪ್ರತಿಪಾದಿಸಿದ್ದರು.

ಕಲಾವಿದನ ಒಡನಾಟ, ಜೀವನವನ್ನು ಸ್ಮರಿಸಿದ ರಂಗಕರ್ಮಿಗಳು

'ಕನ್ನಡ ರಂಗಭೂಮಿಯ 'ಕರ್ಣ'ನಾದ ನಾಯರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಯೋಗಶೀಲ ರಂಗ ನಿರ್ದೇಶಕರಾಗಿದ್ದ ಗೋಪಾಲಕೃಷ್ಣ ನಾಯರಿ ಅವರು, ಹೊಸತನಕ್ಕಾಗಿ ಸದಾ ತುಡಿಯುತ್ತಿದ್ದರು. ರಂಗ ಚಟುವಟಿಕೆಗಳಲ್ಲಿ ರಾಜಿ ಮಾಡಿಕೊಳ್ಳದ ಅವರು, ಕನ್ನಡ ರಂಗಭೂಮಿಯ 'ಕರ್ಣ'ನಾದರು' ಎಂದು ಅವರ ಒಡನಾಡಿಗಳು ಹಾಗೂ ಆಪ್ತರು ಸ್ಮರಿಸಿಕೊಂಡರು.

ರಂಗ ಗೆಳೆಯರ ಬಳಗ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗೋಪಾಲಕೃಷ್ಣ ನಾಯರಿ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಕವಿ ಎಚ್.ಎಸ್. ಶಿವಪ್ರಕಾಶ್ ಮಾತನಾಡಿ, 'ಸಮಾಜವಾದಿ ಕಲಾವಿದರಾಗಿದ್ದ ನಾಯರಿ ಅವರು, ಜೀವನದಲ್ಲಿ ರಾಜಿ ಮಾಡಿಕೊಂಡಿರಲಿಲ್ಲ. ರಂಗಭೂಮಿಯಲ್ಲಿ ಅನಿರೀಕ್ಷಿತ ಚಮತ್ಕಾರ ಮಾಡುತ್ತಿದ್ದರೂ ಜನಪ್ರಿಯರಾಗಲಿಲ್ಲ. ನಾಟಕ ಅಕಾಡೆಮಿಯ ಅಧ್ಯಕ್ಷ ಸ್ಥಾನವೂ ಸಿಗಲಿಲ್ಲ. ಅವರು, ಅಕಾಡೆಮಿ ಅಧ್ಯಕ್ಷರಾಗಿದ್ದರೆ ರಂಗಭೂಮಿಗೆ ಹೊಸ ಸ್ವರೂಪ ದೊರೆಯುತ್ತಿತ್ತು. ಅವರ ಕಲಾ ಪ್ರತಿಭೆಗೆ ಪ್ರಶಸ್ತಿಗಳೂ ಬರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.



ಎಚ್.ಎಸ್.ಶಿವಪ್ರಕಾಶ್, ಶಿಕ್ಷಣ ತಜ್ಞ ಪ್ರೊ.ಕೆ.ಈ.ರಾಧಾಕೃಷ್ಣ, ಜೆ.ಶ್ರೀನಿವಾಸಮೂರ್ತಿ, ರಂಗಕರ್ಮಿಗಳಾದ ಬಿ.ವಿ.ರಾಜಾರಾಂ, ಕೆ.ವಿ.ನಾಗರಾಜಮೂರ್ತಿ ಅವರು ಗೋಪಾಲಕೃಷ್ಣ ನಾಯರಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

ಲೇಖಕ ಜೆ.ಶ್ರೀನಿವಾಮೂರ್ತಿ, 'ನಾಯರಿ ಅವರು ನನ್ನ ಬರವಣಿಗೆಗೆ ಪ್ರೇರಣೆ ಆಗಿದ್ದರು. ರಂಗಭೂಮಿಯಲ್ಲಿ ಅವರ ಪ್ರಯೋಗಗಳು ವಿಚಿತ್ರ ಮತ್ತು ವಿಶಿಷ್ಟವಾಗಿದ್ದವು. ರಾಷ್ಟ್ರೀಯ ನಾಟಕ ಶಾಲೆಯಲ್ಲಿ ರಂಗ ಶಿಕ್ಷಣ ಪಡೆದ ಅವರು, ತಮ್ಮ ಜತೆಗಿದ್ದವರನ್ನು ಬೆಳೆಸುವ ಗುಣ ಹೊಂದಿದ್ದರು. ಅವರ ಜೀವನ ಯುವಜನರಿಗೆ ಪಾಠ ಆಗಲಿದೆ. ನಮ್ಮ ಎಲ್ಲ ಕೆಲಸದಲ್ಲಿ ಅವರನ್ನು ಕಾಣಬಹುದು. ನಮ್ಮ ಕಾಲದ ರಂಗಭೂಮಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ನಮ್ಮ ಬಗ್ಗೆ ನಾವು ಹಾಗೂ ಬೇರೆಯವರು ಬರೆಯಬೇಕು' ಎಂದರು.

ಪುಸ್ತಕ ತರಬೇಕು: ರಂಗಕರ್ಮಿ ಸಿ.ಕೆ. ಗುಂಡಣ್ಣ, 'ನಾಯರಿ ಅವರ ಬದುಕಿನ ಹೋರಾಟವನ್ನು ಪುಸ್ತಕ ರೂಪದಲ್ಲಿ ತರಬೇಕು' ಎಂದು ಹೇಳಿದರು.

'ನಾಯರಿ ಅತ್ಯದ್ಭುತ ನಟ. ಅವರ ಜೀವನದ ಕಹಿ ಅನುಭವಗಳು ಅವರನ್ನು ಗಟ್ಟಿಗೊಳಿಸಿತು. ಇದರಿಂದ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಉದ್ಯೋಗ ತೊರೆದು, ನಾಗಪುರದ ಸಾಂಸ್ಕೃತಿಕ ಕೇಂದ್ರದಲ್ಲಿ ಕೆಲವು ಕಾಲ ಅಧಿಕಾರಿ ಆಗಿದ್ದರು. ಬಳಿಕ ಚಿತ್ರದುರ್ಗದ ಮುರುಘಾಮಠದ ನಾಟಕ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದರು. ಅನೇಕ ರಂಗ ತಂಡಗಳಿಗೆ ಅವರು ನೆರವಾಗಿದ್ದರು' ಎಂದು ರಂಗಕರ್ಮಿ ಎಸ್.ರಘುನಂದನ್ ನೆನಪಿಸಿಕೊಂಡರು.

ರಂಗ ನಿರ್ದೇಶಕಿ ದಾಕ್ಷಾಯಿಣಿ ಭಟ್, 'ಗೋಪಾಲಕೃಷ್ಣ ನಾಯರಿ ಅವರು ಹಲವು ಅನ್ಯಾಯಕ್ಕೆ ಒಳಗಾದ ಮತ್ತೊಬ್ಬ ಕರ್ಣನಾಗಿದ್ದಾರೆ. ಅವರ ಹಲವಾರು ನಾಟಕಗಳಿಗೆ ರಂಗ ಸಜ್ಜಿಕೆ ಮಾಡುತ್ತಾ, ರಂಗ ಶಿಕ್ಷಣವನ್ನು ಅವರಿಂದ ಕಲಿತೆ. ನಮ್ಮಲ್ಲಿ ವಿಶ್ವಾಸ ಮೂಡಿಸಿ, ಪ್ರೋತ್ಸಾಹಿಸಿದರು' ಎಂದರು.

ಕಾದಂಬರಿ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನವು 2022ರಲ್ಲಿ ಪ್ರಕಟವಾದ ಕಾದಂಬರಿಗಳನ್ನು 'ಕಾದಂಬರಿ ಪ್ರಶಸ್ತಿ'ಗಾಗಿ ಪ್ರಕಾಶಕರಿಂದ ಆಹ್ವಾನಿಸಿದೆ.

ಪ್ರಶಸ್ತಿ ₹25 ಸಾವಿರ ನಗದು ಬಹುಮಾನ ಒಳಗೊಂಡಿದೆ. ಪುಸ್ತಕದ ಎರಡು ಪ್ರತಿಗಳನ್ನು ಫೆ.15ರೊಳಗೆ ಕಳುಹಿಸಬೇಕೆಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಇ.ಬಸವರಾಜ, ಪ್ರಧಾನ ಕಾರ್ಯದರ್ಶಿ, ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, 118, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು–73. ಮಾಹಿತಿಗೆ 9686073837 ಸಂಪರ್ಕಿಸಿ.

'ಟಿಪ್ಪು ಎಸ್ಟೇಟ್ ಸಮಿತಿಗೆ ವಂಶಸ್ಥರ ನೇಮಕಕ್ಕೆ ಆಗ್ರಹ'

ಬೆಂಗಳೂರು: 'ಶ್ರೀರಂಗಪಟ್ಟಣದ ಗಂಜಾಂನಲ್ಲಿರುವ ಹಜರತ್ ಟಿಪ್ಪು ಸುಲ್ತಾನ್ ವಕ್ಫ್ ಎಸ್ಟೇಟ್ ಸಮಿತಿಗೆ ಅವರ ವಂಶಸ್ಥರೊಬ್ಬರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಬೇಕು' ಎಂದು ಟಿಪ್ಪು ವಂಶಸ್ಥರೆಂದು ಪ್ರತಿಪಾದಿಸುವ ಸಾಹಿಬ್‌ಜಾದ ಮನ್ಸೂರ್ ಅಲಿ ಖಾನ್ ಆಗ್ರಹಿಸಿದರು.

'ಟಿಪ್ಪು ಸುಲ್ತಾನ್ ಸಮಾಧಿಯ ನಿರ್ವಹಣೆಯೂ ಸೇರಿದಂತೆ ಅವರ ಆಳ್ವಿಕೆಯಲ್ಲಿ ನಿರ್ಮಿಸಲಾದ ಸ್ಮಾರಕಗಳು, ಮಸೀದಿಗಳ ಸಂಪೂರ್ಣ ನಿರ್ವಹಣೆ ಮತ್ತು ಜವಾಬ್ದಾರಿಯನ್ನು ಟಿಪ್ಪು ಸುಲ್ತಾನ್ ವಂಶಸ್ಥರಿಗೆ ನೀಡಬೇಕು' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಟಿಪ್ಪು ಸುಲ್ತಾನ್ ಹೆಸರಿನಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ರಾಜಕೀಯ ಮಾಡುತ್ತಿವೆ. ಟಿಪ್ಪು ಆಳ್ವಿಕೆಯಲ್ಲಿ ನಿರ್ಮಾಣವಾದ ಸ್ಮಾರಕ, ಮಸೀದಿ ಮತ್ತು ಐತಿಹಾಸಿಕ ಕಟ್ಟಡಗಳ ದುರ್ಬಳಕೆ ಆಗುತ್ತಿದೆ. ಹೀಗಾಗಿ, ಅವರಿಗೆ ಸಂಬಂಧಿಸಿದ ಆಸ್ತಿಗಳ ನಿರ್ವಹಣೆಯನ್ನು ನಮಗೇ ನೀಡಬೇಕು' ಎಂದು ಆಗ್ರಹಿಸಿದರು.

ಟಿಪ್ಪು ಸುಲ್ತಾನ್ ವಂಶದ 7ನೇ ತಲೆಮಾರಿನ ಸಾಹಿಬ್‌ಜಾದೀ ರಹೀಮುನ್ನಿಸ್ಸಾ ಇದ್ದರು.

ಪ್ರಜಾವಾಣಿ ಗುರುವಾರ, 12 ಜನವರಿ 2023


ಸ್ಪರ್ಧಾ ವಾಣಿ

4

ಕೊಳವೆ ಮಾರ್ಗದ ಮೂಲಕ ನೈಸರ್ಗಿಕ ಅನಿಲ ಪೂರೈಕೆ

ಟಾಪಿ ಪೈಪ್‌ಲೈನ್ ಯೋಜನೆ

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ದೇಶ–ವಿದೇಶಗಳಲ್ಲಿನ ವಿದ್ಯಮಾನಗಳ ಕುರಿತು ಪ್ರಬಂಧ ರಚಿಸುವ ಪ್ರಶ್ನೆಯನ್ನೂ ಕೇಳಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿದ್ಯಮಾನವಾಗಿರುವ 'ಟಾಪಿ (TAPI) ಪೈಪ್‌ಲೈನ್ ಯೋಜನೆ' ಕುರಿತ ಮಾಹಿತಿಯನ್ನು ಇಲ್ಲಿ ಕೊಡಲಾಗಿದೆ.



ಸಾಂದರ್ಭಿಕ ಚಿತ್ರ

ಆರ್.ಬಿ.ಗುರುಬಸವರಾಜ

ಪ್ರಬಂಧ

ದೇಶಗಳ ನಡುವೆ ಕೊಳವೆಗಳ ಮೂಲಕ ನೈಸರ್ಗಿಕ ಅನಿಲವನ್ನು ಸಾಗಿಸುವ ಹೊಸ ಯೋಜನೆಯೊಂದನ್ನು ರೂಪಿಸಲಾಗಿದ್ದು, ಅದಕ್ಕೆ ಟಾಪಿ(TAPI) ಕೊಳವೆ ಮಾರ್ಗ ಯೋಜನೆ ಎಂದು ಹೆಸರಿಸಲಾಗಿದೆ.

ತುರ್ಕಮೆನಿಸ್ತಾನ–ಅಫ್ಗಾನಿಸ್ತಾನ–ಪಾಕಿಸ್ತಾನ ಮತ್ತು ಇಂಡಿಯಾ ದೇಶಗಳ ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಯೋಜನೆಗೊಳಪಡುವ ಪ್ರತಿ ರಾಷ್ಟ್ರದ ಹೆಸರಿನ ಮೊದಲ ಅಕ್ಷರವನ್ನು ಜೋಡಿಸಿ ಯೋಜನೆಗೆ TAPI ಎಂದು ಹೆಸರಿಡಲಾಗಿದೆ. ಸದ್ಯ ಯೋಜನೆ ನಿರ್ಮಾಣ ಹಂತದಲ್ಲಿದೆ.

ಈ ಯೋಜನೆಯಡಿ ನಾಲ್ಕು ದೇಶಗಳ ನಡುವೆ 1814 ಕಿ.ಮೀ ಉದ್ದದ ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಕೆಯಾಗುತ್ತದೆ. ತುರ್ಕಮೆನಿಸ್ತಾನದಲ್ಲಿ ಪ್ರಾರಂಭವಾಗುವ ಪೈಪ್‌ಲೈನ್ ಯೋಜನೆ, ಅಫ್ಗಾನಿಸ್ತಾನದ ಮೂಲಕ ಪಾಕಿಸ್ತಾನ ಮತ್ತು ಭಾರತವನ್ನು ಪ್ರವೇಶಿಸುತ್ತದೆ.

ಯೋಜನೆಯ ಹೆಜ್ಜೆಗಳು

- ನವೆಂಬರ್ 2014ರಲ್ಲಿ ನಾಲ್ಕು ರಾಷ್ಟ್ರಗಳ ಟಾಪಿ ಪೈಪ್‌ಲೈನ್ ಕಂಪನಿ ಲಿಮಿಟೆಡ್(TPCL) ಒಕ್ಕೂಟ ಪ್ರಾರಂಭವಾಯಿತು.
- ಡಿಸೆಂಬರ್ 2015ರಲ್ಲಿ ತುರ್ಕಮೆನಿಸ್ತಾನದ ಗಾಲ್ಕಿನಿಶ್ ಗ್ಯಾಸ್ ಫೀಲ್ಡ್ ಬಳಿ ಮೇರಿಯಲ್ಲಿ ಶಿಲಾನ್ಯಾಸ ಮಾಡಲಾಯಿತು.
- ಈ ಯೋಜನೆಯ ಅಭಿವೃದ್ಧಿಗಾಗಿ ಫೆಬ್ರವರಿ 2016 ರಲ್ಲಿ ನಾಲ್ಕು ದೇಶಗಳು ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿದವು.
- ಫೆಬ್ರವರಿ 2018ರಲ್ಲಿ ಪೈಪ್‌ಲೈನ್‌ನ ಅಫ್ಗಾನಿಸ್ತಾನ -ಪಾಕಿಸ್ತಾನ ವಿಭಾಗದ ನಿರ್ಮಾಣಕಾರ್ಯ ಆರಂಭವಾಯಿತು.
- TPCL ಒಕ್ಕೂಟದಲ್ಲಿ ತುರ್ಕಮನ್ ಗ್ಯಾಸ್ ಶೇ 85, ಅಫ್ಗನ್ ಗ್ಯಾಸ್ ಎಂಟರ್‌ಪ್ರೈಸಸ್ ಶೇ 5, ಇಂಟರ್ ಸ್ಟೇಟ್ ಗ್ಯಾಸ್ ಸಿಸ್ಟಮ್ಸ್ ಶೇ 5 ಮತ್ತು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಶೇ 5 ಪಾಲುದಾರಿಕೆ ಇದೆ. ಬಹುಪಾಲು ಪಾಲುದಾರಿಕೆ ಹೊಂದಿದ ತುರ್ಕಮೆನ್ ಗ್ಯಾಸ್ ಕಂಪನಿ ಈ ಒಕ್ಕೂಟವನ್ನು ಮುನ್ನಡೆಸುತ್ತಿದೆ.

90ರ ದಶಕದಲ್ಲಿ ಪ್ರಸ್ತಾಪ

ಈ ಯೋಜನೆಯ ವಿಚಾರದ ಬಗ್ಗೆ 1990ರಲ್ಲಿ ಮೊದಲ ಬಾರಿಗೆ ಪ್ರಸ್ತಾಪವಾಗಿತ್ತು. ಪಾಕಿಸ್ತಾನ, ಅಫ್ಗಾನಿಸ್ತಾನ ಹಾಗೂ ಭಾರತಕ್ಕೆ ನೈಸರ್ಗಿಕ ಅನಿಲವನ್ನು ರಫ್ತು ಮಾಡುವ ಮೂಲಕ ಆದಾಯಗಳಿಸಬಹುದು ಎಂಬ ಚಿಂತನೆಯು ತುರ್ಕಮೆನಿಸ್ತಾನ ಸರ್ಕಾರದ ಮಟ್ಟದಲ್ಲಿ ಕೇಳಿಬಂತು. ಇದಾದ ನಂತರ, 2010 ರಲ್ಲಿ ನಾಲ್ಕು ಸದಸ್ಯ ರಾಷ್ಟ್ರಗಳ ಮುಖ್ಯಸ್ಥರು ಅಂತರ್ ಸರ್ಕಾರಿ ಒಪ್ಪಂದಕ್ಕೆ ಸಹಿ ಹಾಕಿದರು. ಅದೇ ವರ್ಷದ ಡಿಸೆಂಬರ್‌ನಲ್ಲಿ ನಾಲ್ಕು ದೇಶಗಳ ಪೆಟ್ರೋಲಿಯಂ ಸಚಿವಾಲಯಗಳು ಗ್ಯಾಸ್ ಪೈಪ್‌ಲೈನ್ ಫ್ರೇಮ್‌ವರ್ಕ್ ಒಪ್ಪಂದಕ್ಕೆ (GPFA) ಸಹಿ ಹಾಕಿದವು. ಮೇ 2012ರಲ್ಲಿ ದ್ವಿಪಕ್ಷೀಯ ಅನಿಲ ಮಾರಾಟ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಪೈಪ್‌ಲೈನ್ ಯೋಜನೆ ಉತ್ತೇಜಿಸಲು ಮತ್ತು ಯೋಜನೆಯಲ್ಲಿ ಹೂಡಿಕೆ ಮಾಡಲು ತುರ್ಕಮನ್ ಗ್ಯಾಸ್, ಅಫ್ಗನ್ ಗ್ಯಾಸ್ ಎಂಟರ್‌ಪ್ರೈಸ್, ಇಂಟರ್ ಸ್ಟೇಟ್ ಗ್ಯಾಸ್ ಸಿಸ್ಟಮ್ಸ್ ಮತ್ತು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಕಂಪನಿಗಳನ್ನು 2013ರಲ್ಲಿ ಆಯಾ ದೇಶಗಳು ಷೇರುದಾರರನ್ನಾಗಿ ನಾಮನಿರ್ದೇಶನ ಮಾಡಿದವು.

ಅನಿಲ ಖರೀದಿ ನಿರೀಕ್ಷೆ

ಪಾಕಿಸ್ತಾನ ಮತ್ತು ಭಾರತದ ಸರ್ಕಾರಿ ಸ್ವಾಮ್ಯದ ಕಂಪನಿಗಳು ಒಟ್ಟು ಅನಿಲ ಉತ್ಪಾದನೆಯಲ್ಲಿ ಶೇ 42ರಷ್ಟನ್ನು ಖರೀದಿಸುವ ನಿರೀಕ್ಷೆಯಿದೆ. ಅದೇ ರೀತಿ ಅಫ್ಗಾನಿಸ್ತಾನವು ಶೇ 16 ಭಾಗ ಅನಿಲವನ್ನು ಖರೀದಿಸುವ ನಿರೀಕ್ಷೆ ಇದೆ. ಪೈಪ್‌ಲೈನ್ ಆರಂಭದಲ್ಲಿ ವರ್ಷಕ್ಕೆ 27bcm ನೈಸರ್ಗಿಕ ಅನಿಲವನ್ನು ಸಾಗಿಸುತ್ತದೆ. ಒಂದು ವರ್ಷದ ಕಾರ್ಯಾಚರಣೆಯ ನಂತರ ಇದನ್ನು 33bcmಗೆ (bcm–ಬಿಲಿಯನ್ ಕ್ಯುಬಿಕ್ ಮೀಟರ್) ಹೆಚ್ಚಿಸಲಾಗುತ್ತದೆ. ಪ್ರಸ್ತುತ ಯೋಜನೆಯ ಕಾರ್ಯವು 2022ರಿಂದ ಸ್ಥಗಿತಗೊಂಡಿದೆ.

ಏಪ್ರಿಲ್ 2022ರಲ್ಲಿ ಭಾರತದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ತುರ್ಕಮೆನಿಸ್ತಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಪೈಪ್‌ಲೈನ್ ಯೋಜನೆ ಕುರಿತು ಚರ್ಚಿಸಿದ್ದರು. ಶೈಶವಾವಸ್ಥೆಯಲ್ಲಿ ಉಳಿದಿರುವ ಈ ಯೋಜನೆಯನ್ನು ಪುನರುಜ್ಜೀವನಗೊಳಿಸಲು ಭಾರತವು ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

ಪೈಪ್‌ಲೈನ್ ಮಾರ್ಗ ವಿವರ

TAPI ಗ್ಯಾಸ್ ಪೈಪ್‌ಲೈನ್ ತುರ್ಕಮೆನಿಸ್ತಾನದ ಗಾಲ್ಕಿನಿಶ್ ಅನಿಲ ಕ್ಷೇತ್ರದಿಂದ ಉತ್ಪಾದಿಸಿದ ಅನಿಲವನ್ನು ಅಫ್ಗಾನಿಸ್ತಾನ, ಪಾಕಿಸ್ತಾನ ಮತ್ತು ಭಾರತಕ್ಕೆ ಸಾಗಿಸುತ್ತದೆ. ತುರ್ಕಮೆನಿಸ್ತಾದ ಮೇರಿ ಪ್ರದೇಶದಿಂದ ಪ್ರಾರಂಭವಾಗುವ ಪೈಪ್‌ಲೈನ್ ಅಫ್ಗಾನಿಸ್ತಾನದವರೆಗೆ ಒಟ್ಟು 214 ಕಿ.ಮೀ. ಸಾಗುತ್ತದೆ. ನಂತರ ಅಫ್ಗಾನಿಸ್ತಾನದ ಕಂಧರ್ ಮತ್ತು ಹೆರಾತ್ ಮೂಲಕ 774 ಕಿಮೀ ಉದ್ದದವರೆಗೆ ಹಾದು ಹೋಗುತ್ತದೆ. ಇದು ಪಾಕಿಸ್ತಾನದಲ್ಲಿ ಕ್ವೆಟ್ಟಾ ಮತ್ತು ಮುಲ್ತಾನ್ ನಗರಗಳಾದ್ಯಂತ 826 ಕಿಮೀ ಕ್ರಮಿಸುತ್ತದೆ. ಅಂತಿಮವಾಗಿ ಭಾರತದ ಪಂಜಾಬ್ ನಲ್ಲಿರುವ ಭಾರತ–ಪಾಕಿಸ್ತಾನ ಗಡಿಯಲ್ಲಿ ಫಜಿಲ್ಕಾದಲ್ಲಿ ಕೊನೆಗೊಳ್ಳುತ್ತದೆ.

ಪ್ರಯೋಜನಗಳು

ಪೈಪ್‌ಲೈನ್ ಹಾದು ಹೋಗುವ ನಾಲ್ಕು ದೇಶಗಳಾದ್ಯಂತ ಅನನ್ಯ ಮಟ್ಟದ ವ್ಯಾಪಾರ ಮತ್ತು ಸಹಕಾರವನ್ನು ಸುಗಮಗೊಳಿಸುತ್ತದೆ. ನಾಲ್ಕು ರಾಷ್ಟ್ರಗಳ ನಡುವೆ ಶಾಂತಿ ಮತ್ತು ಭದ್ರತೆಯನ್ನು ಬೆಂಬಲಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಯೋಜನೆಯಿಂದ ಅಫ್ಗಾನಿಸ್ತಾನ, ಪಾಕಿಸ್ತಾನ ಮತ್ತು ಭಾರತದಲ್ಲಿ 1.5 ಶತಕೋಟಿಗೂ ಹೆಚ್ಚು ಜನರು ದೀರ್ಘಾವಧಿಯ ಇಂಧನ ಭದ್ರತೆಯ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ಅನಿಲ ಮಾರಾಟದ ಮೂಲಕ ತುರ್ಕಮೆನಿಸ್ತಾನದ ಆದಾಯವನ್ನು ಹೆಚ್ಚಿಸುವ ನಿರೀಕ್ಷೆಯಿದೆ. ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನಗಳು ಸಾಗಣೆ ಶುಲ್ಕದ(Transit Fee) ಮೂಲಕ ಪ್ರಯೋಜನಗಳನ್ನು ಪಡೆಯುತ್ತವೆ. ಯೋಜನೆಯು ಕಾರ್ಯರೂಪಕ್ಕೆ ಬಂದರೆ ಬಹಳಷ್ಟು ಭಾರತೀಯ ಕೈಗಾರಿಕೆಗಳು ಪ್ರಾರಂಭವಾಗುತ್ತವೆ ಮತ್ತು ಕೆಲವು ಕೈಗಾರಿಕೆಗಳು ಉತ್ತೇಜನಗೊಳ್ಳುತ್ತವೆ ಎಂದು ನಿರೀಕ್ಷಿಸಲಾಗಿದೆ.

ಮಾದರಿ ಪ್ರಶ್ನೋತ್ತರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಸೇರಿದಂತೆ ಮುಂದೆ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಸಾಮಾನ್ಯ ಜ್ಞಾನ

1. ಭಾರತದಲ್ಲಿ ಗೋಧಿ ಉತ್ಪಾದನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ) ಭಾರತವು ಸ್ವಾತಂತ್ರ್ಯದ ಮೊದಲು ಗೋಧಿಯ ಪ್ರಧಾನ ರಫ್ತುದಾರ ದೇಶವಾಗಿತ್ತು.

ಬಿ) ಏರುತ್ತಿರುವ ಜನಸಂಖ್ಯೆ ಮತ್ತು ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳಿಗೆ ಹೆಚ್ಚಿನ ಗೋಧಿ ಬೆಳೆಯುವ ಪ್ರದೇಶಗಳು ಸೇರಿಹೋಗಿರುವುದು ಭಾರತವು ಇಂದು ಗೋಧಿಯನ್ನು ಆಮದು ಮಾಡಿಕೊಳ್ಳಲು ಕಾರಣವಾಗಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 3

2. ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಈ ಯೋಜನೆಯು ಕೇಂದ್ರ ವಲಯದ ಯೋಜನೆಯಾಗಿದೆ.

ಬಿ. ಯೋಜನೆಯ ಸಂಪೂರ್ಣ ಹಣವನ್ನು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ ನೀಡಲಾಗುತ್ತದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

3. ಕೆಳಗಿನ ಹೇಳಿಕೆಯನ್ನು ಪರಿಶೀಲಿಸಿ.

ಎ. ಚೀನಾ ಪಾಕಿಸ್ತಾನ ಎಕನಾಮಿಕ್ ಕಾರಿಡಾರ್ (CPEC)ಯು ಪಾಕಿಸ್ತಾನದ ನೈರುತ್ಯದಲ್ಲಿರುವ ಗ್ವಾದರ್ ನಗರವನ್ನು ಚೀನಾದ ವಾಯವ್ಯ ಪ್ರದೇಶವಾದ ಕ್ಸಿನ್‌ಜಿಯಾಂಗ್‌ಗೆ ಹೆದ್ದಾರಿಗಳು ಮತ್ತು ರೈಲ್ವೆಗಳ ವಿಶಾಲ ಜಾಲದ ಮೂಲಕ ಸಂಪರ್ಕಿಸುವ ಗುರಿಯನ್ನು ಹೊಂದಿದೆ.

ಬಿ. CPEC ಯೋಜನೆಯು ಪಾಕ್ ಆಕ್ರಮಿತ ಕಾಶ್ಮೀರವನ್ನು ಹಾದುಹೋಗುತ್ತದೆ

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

4. ಅಟಲ್ ಪಿಂಚಣಿ ಯೋಜನೆಗೆ(APY) ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಅಟಲ್ ಪಿಂಚಣಿ ಯೋಜನೆಯು (APY) ಎಲ್ಲಾ ಭಾರತೀಯರಿಗೆ, ವಿಶೇಷವಾಗಿ ಬಡವರು, ಹಿಂದುಳಿದವರು ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ರಚಿಸಲು ಬಂದ ಯೋಜನೆಯಾಗಿದೆ.

ಬಿ. ಈ ಯೋಜನೆಯನ್ನು 2015ರಲ್ಲಿ ಪ್ರಾರಂಭಿಸಲಾಗಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ) ಗ್ವಾದರ್ ಬಂದರು ಇರಾನ್‌ನಲ್ಲಿದೆ.

ಬಿ) ಚಾಬಹಾರ್ ಬಂದರು ಪಾಕಿಸ್ತಾನದಲ್ಲಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 3

ಇನ್ನಷ್ಟು ಪ್ರಶ್ನೋತ್ತರಗಳಿಗೆ https://www.prajavani.net/education-career ನೋಡಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನಲ್ಲಿ ಉದ್ಯೋಗ

'ಬ್ರೆಟ್'ನಲ್ಲಿ ಉಚಿತ ನೋಂದಣಿ

ಖಾಸಗಿ ವಲಯದಲ್ಲಿ ವೇಗವಾಗಿ ಬೆಳೆಯುತ್ತಿರುವ ಬ್ಯಾಂಕುಗಳಲ್ಲಿ ಒಂದಾದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್(IDFC First), ಇದೇ ಮಾರ್ಚ್ ತಿಂಗಳೊಳಗೆ ರಾಜ್ಯದಾದ್ಯಂತ ಸುಮಾರು 20 ಹೊಸ ಶಾಖೆಗಳನ್ನು ತೆರೆಯಲು ಯೋಜಿಸಿದೆ. ಇದರಿಂದಾಗಿ ಸುಮಾರು 500 ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಮಾತ್ರವಲ್ಲ, 2024ರ ಒಳಗೆ ರಾಜ್ಯದಲ್ಲಿ ಸುಮಾರು 1500 ರಷ್ಟು ಅಧಿಕಾರಿ ಹಂತದ(Officer cadre) ಸಿಬ್ಬಂದಿಯನ್ನು ಹೊಸದಾಗಿ ನೇಮಕ ಮಾಡಿಕೊಳ್ಳುವ ಸಾಧ್ಯತೆ ಇದೆ.

ದೇಶದಾದ್ಯಂತವಿರುವ ತನ್ನ ಶಾಖೆಗಳಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಬೆಂಗಳೂರಿನ ಬ್ರೆಟ್(BReT) ಸಲ್ಯೂಷನ್ಸ್ ಪ್ರವೈಟ್ ಲಿಮಿಟೆಡ್ ಸಂಸ್ಥೆಯನ್ನು 'ನೇಮಕಾತಿ ಕನ್ಸಲ್ಟೆಂಟ್ ಸಂಸ್ಥೆ'ಯಾಗಿ ನಿಯೋಜಿಸಿದೆ.

ಯಾವುದೇ ವಿಭಾಗದಲ್ಲಿ ಪದವಿ ಪಡೆದಿರುವ, 30 ವರ್ಷ ವಯೋಮಾನದ ಅಭ್ಯರ್ಥಿಗಳು ಬ್ರೆಟ್ ಸಲ್ಯೂಷನ್ಸ್ ಜಾಲತಾಣದ (www.brets.in) ಮೂಲಕ ಉಚಿತವಾಗಿ ಹೆಸರು ನೋಂದಾಯಿಸಿಕೊಂಡು, ಬ್ಯಾಂಕ್ ಉದ್ಯೋಗಕ್ಕೆ ಅರ್ಜಿ ಸಲ್ಲಿಸಬಹುದು. ನೇಮಕಾತಿ ಪ್ರಕ್ರಿಯೆಯು 45 ನಿಮಿಷಗಳ ಆನ್‌ಲೈನ್ ಪರೀಕ್ಷೆ ಹಾಗೂ ಬ್ಯಾಂಕಿನ ಕಚೇರಿಯಲ್ಲಿ ವೈಯಕ್ತಿಕ ಸಂದರ್ಶನವನ್ನು ಹೊಂದಿರುತ್ತದೆ.

ಬ್ರೆಟ್ ಸಲ್ಯೂಷನ್ಸ್, ರೈಲ್ವೆ, ಬ್ಯಾಂಕಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡುತ್ತಿದೆ. ವಿವರಗಳಿಗಾಗಿ jobsadmin@brets.in ಮೇಲ್ ಮಾಡಬಹುದು. ದೂರವಾಣಿ 7259028984 / 7259028983 / 7259028986 / 9686999732 ಮೂಲಕ ಸಂಪರ್ಕಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

33) ಕ್ಸೈಲಂ ಮತ್ತು ಫ್ಲೋಯಂಗಳಲ್ಲಿನ ವಸ್ತು ಸಾಗಾಣಿಕೆಯ ನಡುವಿನ ವ್ಯತ್ಯಾಸಗಳು ಯಾವುವು?

ಉತ್ತರ:

ಕ್ಸೈಲಂ	ಫ್ಲೋಯಂ
*ಬೇರಿನಿಂದ ಸಸ್ಯದ ವಿವಿಧ ಭಾಗಗಳಿಗೆ ನೀರು ಮತ್ತು ಖನಿಜಗಳನ್ನು ಸಾಗಿಸುತ್ತದೆ.	* ದ್ಯುತಿ ಸಂಶ್ಲೇಷಣೆಯ ಉತ್ಪನ್ನವನ್ನು ಎಲೆಗಳಿಂದ ಸಸ್ಯದ ವಿವಿಧ ಭಾಗಗಳಿಗೆ ಸಾಗಿಸುತ್ತದೆ.
* ಸಾಗಾಣಿಕೆಯು ಏಕ.ಮುಖಿಯಾಗಿರುತ್ತದೆ.	ಬಹುಮುಖಿ ಸಾಗಾಣಿಕೆ ಕಂಡು ಬರುತ್ತದೆ


34) ನೀರಿನ ಕೊಯ್ಲು ವಿಧಾನದ ಬಗ್ಗೆ ಬರೆಯಿರಿ

ಉತ್ತರ:- ನೀರಿನ ಕೊಯ್ಲು ವಿಧಾನವು ಭಾರತದಲ್ಲಿ ಒಂದು ಅತ್ಯಂತ ಹಳೆಯ ಪರಿಕಲ್ಪನೆಯಾಗಿದೆ. ರಾಜಸ್ಥಾನದಲ್ಲಿನ ಖಾದಿನ್, ಕೆರೆಗಳು ಮತ್ತು ನಾದಿಸ್‌ಗಳು, ಮಹಾರಾಷ್ಟ್ರದಲ್ಲಿನ ಬಾಂದಾರಗಳು ಮತ್ತು ತಾಲ್‌ಗಳು, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿನ ಬುಂಧೀಸ್‌ಗಳು, ಬಿಹಾರದಲ್ಲಿನ ಆಹರ್‌ಗಳು ಮತ್ತು ಪೈನ್‌ಗಳು, ಹಿಮಾಚಲ ಪ್ರದೇಶದಲ್ಲಿನ ಕುಲ್ಸ್‌ಗಳು, ಜಮ್ಮುವಿನ ಕಂದಿಪಟ್ಟಿಯಲ್ಲಿನ ಕೊಳಗಳು ಮತ್ತು ತಮಿಳುನಾಡಿನಲ್ಲಿರುವ ಎರಿಗಳು (ಕೆರೆಗಳು), ಕೇರಳದಲ್ಲಿನ ಸುರಂಗಗಳು ಮತ್ತು ಕರ್ನಾಟಕದಲ್ಲಿನ ಕಟ್ಟಗಳು ಇವು ಪುರಾತನ ನೀರು ಕೊಯ್ಲು ಮತ್ತು ನೀರೊದಗಿಸುವ ಕೆಲವು ರಚನೆಗಳಾಗಿದ್ದು ಇವತ್ತಿಗೂ ಬಳಕೆಯಲ್ಲಿವೆ. ಜಲಕೊಯ್ಲು ತಂತ್ರಗಳು ಹೆಚ್ಚಾಗಿ ಪ್ರದೇಶ ನಿರ್ದಿಷ್ಟವಾಗಿವೆ ಮತ್ತು ಪ್ರಯೋಜನಗಳೂ ಕೂಡಾ ಸ್ಥಳೀಯವಾಗಿರುತ್ತವೆ. ಜನರಿಗೆ ಅವರ ಸ್ಥಳೀಯ ನೀರಿನ ಸಂಪನ್ಮೂಲಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ನೀಡುವುದರಿಂದ ಈ ಸಂಪನ್ಮೂಲಗಳ ಕೆಟ್ಟ ನಿರ್ವಹಣೆ ಮತ್ತು ಅಧಿಕ ದುರುಪಯೋಗವನ್ನು ಕಡಿಮೆ ಮಾಡುವುದು ಅಥವಾ ನಿವಾರಿಸುವುದನ್ನು ಖಚಿತಪಡಿಸಿಕೊಳ್ಳಬಹುದು. ಜಲಾನಯನ ಪ್ರದೇಶ ಖಾದಿನ್ ಅಥವಾ ಬೆಳೆಬೆಳೆಯುವ ಪ್ರದೇಶ ಖಾದಿನ್ ಒಡ್ಡು ಲವಣಯುಕ್ತ ಪ್ರದೇಶ ಆಳವಿಲ್ಲದ ಬಾವಿ ಇಂಗುವಿಕೆ ಸಾಂಪ್ರದಾಯಿಕ ನೀರು ಕೊಯ್ಲು ವಿಧಾನಗಳಾಗಿವೆ.

– ಒಂದು ಆದರ್ಶಪ್ರಾಯವಾದ ಖಾದಿನ್ ವ್ಯವಸ್ಥೆ ಹೆಚ್ಚು ಸಮತಟ್ಟಾಗಿರುವ ಭೂಭಾಗಗಳಲ್ಲಿನ ಜಲಕೊಯ್ಲು ರಚನೆಗಳು ಮುಖ್ಯವಾಗಿ ಅರ್ಧ ಚಂದ್ರಾಕಾರದ ರೂಪದಲ್ಲಿದ್ದು ಮಣ್ಣಿನಿಂದ ನಿರ್ಮಿತವಾದ ಒಡ್ಡುಗಳು ಕೆಳಮಟ್ಟದಲ್ಲಿರುತ್ತವೆ. ಮಳೆಗಾಲದಲ್ಲಿ ಉಕ್ಕಿ ಹರಿಯುವ ಸಣ್ಣ ತೊರೆಗೆ ಅಡ್ಡಲಾಗಿ ಕಾಂಕ್ರಿಟ್ ಮತ್ತು ಕಟ್ಟಡಗಳ ಅವಶೇಷಗಳಿಂದ ನೇರವಾದ ತಡೆಗೋಡೆಗಳನ್ನು ಕಟ್ಟಲಾಗುತ್ತದೆ. ಈ ರಚನೆಗಳ ಹಿಂದಿರುವ ಹೊಂಡಗಳನ್ನು ಮಾನ್ಸೂನ್ ಮಳೆಗಳು ತುಂಬುತ್ತವೆ. ಕೇವಲ ದೊಡ್ಡ ರಚನೆಗಳು ಮಾತ್ರ ವರ್ಷಪೂರ್ತಿ ನೀರನ್ನು ಹಿಡಿದಿಡುತ್ತವೆ; ಉಳಿದವುಗಳು ಬಹುತೇಕ ಮಳೆಗಾಲ ಮುಗಿದ ಆರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಅವಧಿಯೊಳಗೆ ಒಣಗಿ ಹೋಗುತ್ತವೆ. ಏನೇ ಆದರೂ ಅವುಗಳ ಮುಖ್ಯ ಉದ್ದೇಶ ಮೇಲ್ಮೈ ನೀರನ್ನು ಹಿಡಿದಿಡುವುದಲ್ಲ ಬದಲಾಗಿ ಕೆಳಗಿನ ಅಂತರ್ಜಲವನ್ನು ಮರುಭರ್ತಿ ಮಾಡುವುದಾಗಿದೆ. ನೆಲದೊಳಗೆ ನೀರನ್ನು ಸಂಗ್ರಹಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಇದು ಆವಿಯಾಗುವುದಿಲ್ಲ ಆದರೆ ವಿಸರಣೆಗೊಂಡು ಬಾವಿಗಳನ್ನು ಮರುಪೂರಣಗೊಳಿಸುತ್ತವೆ ಮತ್ತು ವಿಶಾಲವಾದ ಪ್ರದೇಶಗಳಲ್ಲಿರುವ ಸಸ್ಯವರ್ಗಗಳಿಗೆ ತೇವಾಂಶವನ್ನು ಒದಗಿಸುತ್ತದೆ. ಇದರ ಜೊತೆಗೆ ಹೊಂಡಗಳಲ್ಲಿ ನಿಂತ ನೀರು ಅಥವಾ ಕೃತಕ ಕೆರೆಗಳಲ್ಲಾಗುವಂತೆ ಸೊಳ್ಳೆಗಳಿಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡಲು ಬ್ರೀಡಿಂಗ್ ಪ್ರದೇಶಗಳನ್ನು ಒದಗಿಸುವುದಿಲ್ಲ. ಮನುಷ್ಯರು ಮತ್ತು ಪ್ರಾಣಿಗಳ ತ್ಯಾಜ್ಯಗಳಿಂದ ಉಂಟಾಗುವ ಮಾಲಿನ್ಯದಿಂದಲೂ ಅಂತರ್ಜಲವು ರಕ್ಷಿಸಲ್ಪಡುತ್ತದೆ.

35) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ

ಉತ್ತರ:-



36) ಇವುಗಳಿಗೆ ಕಾರಣ ಕೊಡಿ

1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:-

(1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

37) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಯಾವುದಕ್ಕೆ ಶಾಬ್ದನ ((sonorous) ಎನ್ನುವರು?

ಉತ್ತರ: ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ((sonorouss) ಎನ್ನುವರು

2) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ: ಬ್ರೋಮಿನ್

3) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ: ಪಾದರಸ

4) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ: ಅಯೋಡಿನ್

5) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ: ಕಾರ್ಬನ್

38) ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ?

ಉತ್ತರ: ಒಂದು ವೇಳೆ ಅಂಡವು ಫಲಿತಗೊಳ್ಳದಿದ್ದರೆ, ಅದು ಒಂದು ದಿನದವರೆಗೆ ಬದುಕಿರುತ್ತದೆ. ಅಂಡಾಶಯವು ಪ್ರತಿ ತಿಂಗಳೂ ಒಂದು ಅಂಡವನ್ನು ಬಿಡುಗಡೆಗೊಳಿಸುವುದರಿಂದ ಗರ್ಭಕೋಶವೂ ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನು ತಾನೇ ಸಜ್ಜುಗೊಳಿಸಿಕೊಳ್ಳುತ್ತದೆ. ಹೀಗೆ ಅದರ ಒಳಸ್ತರಿಯು ದಪ್ಪವಾಗಿ ಸ್ಪಂಜಿನಂತಾಗುತ್ತದೆ. ಒಂದು ವೇಳೆ ಅಂಡವು ಫಲಿತಗೊಂಡರೆ ಅದರ ಪೋಷಣೆಗಾಗಿ ಇದು ಅಗತ್ಯವಾಗುತ್ತದೆ. ಅಂಡವು ಫಲಿತಗೊಳ್ಳದಿದ್ದರೆ ಈ ಒಳಸ್ತರಿಯ ಅಗತ್ಯವಿರುವುದಿಲ್ಲ. ಆದ್ದರಿಂದ ಈ ಒಳಸ್ತರಿಯು ನಿಧಾನವಾಗಿ ಬಿರುಕು ಬಿಟ್ಟುರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದಹೊರಬರುತ್ತದೆ. ಈ ಚಕ್ರವು ಸರಿ ಸುಮಾರು ಪ್ರತಿ ತಿಂಗಳೂನಡೆಯುತ್ತದೆ ಮತ್ತು ಇದನ್ನು ಋತುಚಕ್ರ ((menstruation)ಎನ್ನುವರು. ಸಾಮಾನ್ಯವಾಗಿ ಇದು ಎರಡರಿಂದ ಎಂಟು ದಿನಗಳವರೆಗೆ ಮುಂದುವರೆಯುತ್ತದೆ.

ಭೌತವಿಜ್ಞಾನ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು


ಪಿಯುಸಿ

ಮಾದರಿ ಪ್ರಶ್ನೋತ್ತರ

40) ಕಾಮನಬಿಲ್ಲು ಹೇಗೆ ಉಂಟಾಗುತ್ತದೆ?

ಉತ್ತರ:- ಚಿತ್ರ((a))ದಲ್ಲಿ ತೋರಿಸಿದಂತೆ ಸೂರ್ಯನ ಬೆಳಕು ಮೊದಲಿಗೆ ನೀರಿನ ಹನಿಯನ್ನು ಹೊಕ್ಕಾಗ ವಕ್ರೀಭವನವನ್ನು ಹೊಂದುತ್ತದೆ. ಇದರಿಂದಾಗಿ ಬೆಳಕಿನ ಬೇರೆ ಬೇರೆ ವರ್ಣ ಘಟಕಗಳು ಬೇರ್ಪಡುತ್ತವೆ. ಅಧಿಕ ತರಂಗಾಂತರದ ಬೆಳಕಿನ ಬಣ್ಣ ಕೆಂಪು, ಅದೇ ಕಡಿಮೆ ವಿಚಲತೆಗೊಂಡು ಕೆಂಪು ಬಣ್ಣವನ್ನು ಉಂಟು ಮಾಡುತ್ತದೆ. ಅದು ಹೆಚ್ಚು ವಿಚಲಿತಗೊಂಡರೆ ಅಥವಾ ತರಂಗಾಂತರ ಕಡಿಮೆಯಾದರೆ ಆಗ ನೇರಳೆ ಬಣ್ಣ ಕಾಣುತ್ತದೆ. ಈ ಘಟಕ ಕಿರಣಗಳು ನೀರಿನ ಹನಿಯ ಒಳಗಡೆ ಆಪಾತಗೊಳ್ಳುತ್ತವೆ. ವಕ್ರೀಭವನ ಕೋನ ಮತ್ತು ಲಂಬರೇಖೆಯೊಂದಿಗೆ ಕೋನ ನಿರ್ಣಾಯಕ ಕೋನ ((48°) ಕ್ಕಿಂತ ಅಧಿಕವಾಗಿದ್ದಲ್ಲಿ ಘಟಕ ಕಿರಣಗಳು ಸಂಪೂರ್ಣ ಆಂತರಿಕ ಪ್ರತಿಫಲನಕ್ಕೆ ಒಳಗಾಗುತ್ತವೆ. ಹೀಗೆ ಪ್ರತಿಫಲನ ಗೊಂಡ ಬೆಳಕು ಪುನಃ ವಕ್ರೀಭವನ ಗೊಂಡು ನೀರಿನ ಹನಿಯ ಮೂಲಕ ಚಿತ್ರದಲ್ಲಿ ತೋರಿಸಿದಂತೆ ಹೊರಗೆ ಬರುತ್ತದೆ. ನೇರಳೆ ಬಣ್ಣವು ಒಳಬರುವ ಬೆಳಕಿಗೆ ಅನುಗುಣವಾಗಿ 40° ಕೋನದಲ್ಲಿ ಹೊರಗಡೆ ಬಂದರೆ ಕೆಂಪು ಬಣ್ಣವು 42 ಕೋನದಲ್ಲಿ ಹೊರ ಹೊಮ್ಮುತ್ತದೆ. ಬೇರೆ ಬಣ್ಣಗಳಿಗೆ ಈ ಕೋನವು ಇವೆರಡರ ನಡುವೆ ಇರುತ್ತದೆ.






ಪ್ರಾಥಮಿಕ ಕಾಮನಬಿಲ್ಲನ್ನು (ಚಿತ್ರ (b) ತೋರಿಸಿರುವಂತೆ). ಒಂದನೇ ಹನಿಯಿಂದ ಕೆಂಪು ಬಣ್ಣ ಮತ್ತು ಎರಡನೇ ಹನಿಯಿಂದ ನೇರಳೆ ಬಣ್ಣವು ವೀಕ್ಷಿಸುವವನ ಕಣ್ಣನ್ನು ತಲುಪುತ್ತದೆ. ಒಂದನೇ ಹನಿಯಿಂದ ನೇರಳೆ ಮತ್ತು ಎರಡನೇ ಹನಿಯಿಂದ ಕೆಂಪು ಬಣ್ಣವು ವೀಕ್ಷಿಸುವವನ ಕಣ್ಣಿನ ಮಟ್ಟದಿಂದ ಮೇಲೆಯೂ ಇರಬಹುದು ಅಥವಾ ಕೆಳಗೂ ಇರಬಹುದು. ಇದರಿಂದ ಕಾಮನಬಿಲ್ಲನ್ನು ವೀಕ್ಷಕ ನೋಡುವಂತೆ ಆಗುತ್ತದೆ. ಅದೇ ರೀತಿ ಕೆಂಪು ಬಣ್ಣ ಮೇಲೆ ಇದ್ದರೆ ನೇರಳೆ ಬಣ್ಣ ಕೆಳಗಡೆ ಇರುತ್ತದೆ. ಈ ರೀತಿ ಪ್ರಾಥಮಿಕ ಕಾಮನಬಿಲ್ಲು 3 ಕ್ರಿಯೆ ಪ್ರತಿಕ್ರಿಯೆಗಳ ಫಲಿತವಾಗಿವೆ. ಅವುಗಳೆಂದರೆ: ವಕ್ರೀಭವನ, ಪ್ರತಿಫಲನ ಮತ್ತು ವರ್ಣ ವಿಭಜನೆ. ಈಗ ಬೆಳಕಿನ ಕಿರಣವು ನೀರಿನ ಹನಿಯ ಒಳಗಡೆ ಎರಡು ಸಲ ಆಂತರಿಕ ಪ್ರತಿಫಲನಕ್ಕೆ ಒಳಗಾದರೆ ಪ್ರಾಥಮಿಕ ಕಾಮನಬಿಲ್ಲಿನಂತಾಗದೆ,

ಎರಡನೆಯ (ಅಧೀನ) ಕಾಮನಬಿಲ್ಲು ಆಗುತ್ತದೆ. (ಚಿತ್ರ(ಸಿ)ರಲ್ಲಿ ತೋರಿಸಿದೆ). ಇದು 4 ಹಂತದ ಪ್ರಕ್ರಿಯೆಯಾಗಿದೆ. ತೀವ್ರತೆಯು ದ್ವಿತೀಯ ಪ್ರತಿಫಲನದಲ್ಲಿ ಕ್ಷೀಣಿಸುತ್ತದೆ. ಇದರಿಂದ ಅಧೀನ ಕಾಮನಬಿಲ್ಲು ಪ್ರಾಥಮಿಕ ಕಾಮನಬಿಲ್ಲಿಗಿಂತ ಕ್ಷೀಣವಾಗಿರುತ್ತದೆ. ಅದೇ ರೀತಿ ಬಣ್ಣಗಳ ಜೋಡಣೆಯು ತದ್ವಿರುದ್ಧವಾಗಿರುತ್ತದೆ. {ಚಿತ್ರ ಸಿ) ಯಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ.}

41) ದ್ಯುತಿ ವಿದ್ಯುತ್ ಕೋಶವು ಹಾಗೂ ಅದರ ಉಪಯೋಗಗಳ ಬಗ್ಗೆ ಬರೆಯಿರಿ

ಉತ್ತರ:- ದ್ಯುತಿ ವಿದ್ಯುತ್ ಕೋಶವು ಒಂದು ಅರೆ ಸಿಲಿಂಡರಾಕಾರದ ದ್ಯುತಿ ಸಂವೇದಿ ತಟ್ಟೆ C (ಉತ್ಸರ್ಜಕ) ಮತ್ತು ಅದಕ್ಕೆ ಬೆಂಬಲವಾಗಿ ವಾಹಕ ಸುರುಳಿ A(ಸಂಗ್ರಾಹಕ) ಇವುಗಳು ನಿರ್ವಾತವಿರುವ ಗಾಜು ಅಥವಾ ಸ್ಫಟಿಕ ಬಲ್ಬನ್ನು ಒಳಗೊಂಡಿರುತ್ತದೆ ಅದು ಅಧಿಕ ಸಾಮರ್ಥ್ಯದ ವಿದ್ಯುತ್‌ಕೋಶ B ಮತ್ತು ಮೈಕ್ರೋ ಅಮೀಟರ್(μA) ಒಳಗೊಂಡಿರುವ ಬಾಹ್ಯ ಮಂಡಲಕ್ಕೆ ಸಂಪರ್ಕಿಸಲಾಗಿದೆ ಕೆಲವೊಮ್ಮೆ ಅ ತಟ್ಟೆಯ ಬದಲಿಗೆ ದ್ಯುತಿ ಸಂವೇದಕ ವಸ್ತುವಿನ ತೆಳುವಾದ ಹಾಳೆಯನ್ನು ಬಲ್ಬಿನ ಒಳಭಾಗದಲ್ಲಿ ಅಂಟಿಸಲಾಗುತ್ತದೆ ಬೆಳಕು ಪ್ರವೇಶಿಸಲು ಅವಕಾಶ ಸಿಗುವಂತೆ ಸ್ವಲ್ಪ ಭಾಗವನ್ನು ಸ್ವಚ್ಛವಾಗಿ ಬಿಡಲಾಗುತ್ತದೆ. ಸೂಕ್ತ ತರಂಗಾಂತರದ ವಿಕಿರಣಗಳು ಉತ್ಸರ್ಜಿತ ತಟ್ಟೆ C ಯ ಮೇಲೆ ಬಿದ್ದು ಪತನಗೊಂಡಾಗ ದ್ಯುತಿ ಎಲೆಕ್ಟ್ರಾನುಗಳು ಹೊರಸೂಸಲ್ಪಡುತ್ತವೆ. ಈ ದ್ಯುತಿ ಎಲೆಕ್ಟ್ರಾನುಗಳು ಸಂಗ್ರಾಹಕ ತಟ್ಟೆಯ ಕಡೆಗೆ ಸೆಳೆಯಲ್ಪಡುತ್ತವೆ. ಸಾಧಾರಣವಾಗಿ ದ್ಯುತಿ ವಿದ್ಯುತ್ ಮೈಕ್ರೋಅಂಪಿಯರ್‌ನ ಕ್ರಮದಲ್ಲಿ ದ್ಯುತಿ ಕೋಶದಲ್ಲಿ ಲಭ್ಯವಾಗುತ್ತದೆ.



ದ್ಯುತಿಕೋಶವು ವಿಕಿರಣ ತೀವ್ರತೆಯನ್ನು ದ್ಯುತಿವಿದ್ಯುತ್ತನ್ನಾಗಿ ಪರಿವರ್ತಿಸುತ್ತದೆ ಈ ವಿದ್ಯುತ್ ನಿಯಂತ್ರಣ ವ್ಯವಸ್ಥೆಗಳನ್ನು ಮತ್ತು ಬೆಳಕಿನ ಅಳತೆಯ ಮಾಪನಗಳಲ್ಲಿ ಕಾರ್ಯನಿರ್ವಹಿಸಲು ಬಳಸುತ್ತಾರೆ ಸೀಸದ ಸಲ್ಫೈಡ್ ದ್ಯುತಿಕೋಶವು ಅವೆಕೆಂಪು ಕಿರಣಗಳಿಗೆ ಸಂವೇದಿಯಾಗಿರುವುದರಿಂದ ಅದನ್ನು ಜ್ವಲನ ಮಂಡಲದಲ್ಲಿ ಬಳಸುತ್ತೇವೆ. ವೈಜ್ಞಾನಿಕ ಕೆಲಸಗಳಲ್ಲಿ ಯಾವುದೇ ವಿಕಿರಣ ತೀವ್ರತೆಯನ್ನು ಅಳತೆಯಲು ದ್ಯುತಿಕೋಶಗಳನ್ನು ಬಳಸುತ್ತೇವೆ ಛಾಯಾಗ್ರಹಣ ಕ್ಯಾಮರಾಗಳಲ್ಲಿ ಬೆಳಕಿನ ಮಾಪಕಗಳು ತೀವ್ರತೆಯನ್ನು ಅಳತೆ ಮಾಡಲು ದ್ಯುತಿಕೋಶಗಳನ್ನು ಬಳಸುತ್ತೇವೆ. ಬಾಗಿಲಬೆಳಕಿನ ವಿದ್ಯುತ್ ಮಂಡಲದಲ್ಲಿ ಅಳವಡಿಸಲಾದ ಈ ದ್ಯುತಿಕೋಶಗಳು ಸ್ವಯಂಚಾಲಿತ ಬಾಗಿಲುಗಳಲ್ಲಿ ಅಳವಡಿಕೆಯಾಗುತ್ತವೆ ಬಾಗಿಲಿಗೆ ಸಮೀಪಿಸುತ್ತಿರುವ ವ್ಯಕ್ತಿಯೊಬ್ಬ ದ್ಯುತಿಕೋಶದ ಮೇಲೆ ಪತನವಾಗುವ ಕಿರಣಕ್ಕೆ ಅಡ್ಡಿಪಡಿಸಬಹುದು.

(ಮುಂದುವರಿಯುವುದು...)

‘ಪ್ರಗತಿಯ ಪ್ರತಿಮೆ’ ಅನಾವರಣಕ್ಕೆ ಬಸ್ ● ಮೌಖಿಕ ಆದೇಶ ನೀಡಿದ್ದ ಸಿಎಂ

ಪಾವತಿಯಾಗದ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಸ್ಥಾಪಿಸಲಾಗಿರುವ ನಾಡಪ್ರಭು ಕೆಂಪೇಗೌಡರ ‘ಪ್ರಗತಿಯ ಪ್ರತಿಮೆ’ ಅನಾವರಣ ಕಾರ್ಯಕ್ರಮಕ್ಕೆ ಬಿಎಂಟಿಸಿ ಒದಗಿಸಿದ್ದ 2,399 ಬಸ್‌ಗಳಿಗೆ ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈವರೆಗೂ ಹಣ ಪಾವತಿಯಾಗಿಲ್ಲ.

ಮುಖ್ಯಾಂಶಗಳು
- ನ.11ರಂದು ನಡೆದಿದ್ದ ಕಾರ್ಯಕ್ರಮ
- 2,399 ಬಿಎಂಟಿಸಿ ಬಸ್ ಬಳಕೆ
- ನಾಲ್ಕೈದು ದಿನದಲ್ಲಿ ಸಂದಾಯ

ನ.11ರಂದು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಿದ್ದರು. ಈ ಕಾರ್ಯಕ್ರಮಕ್ಕೆ ಬಿಎಂಟಿಸಿ ಬಸ್ ಒದಗಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೌಖಿಕವಾಗಿ ಆದೇಶ ನೀಡಿದ್ದರು. ಅದರನ್ವಯ, 2,399 ಬಸ್ ಒದಗಿಸಬೇಕು ಎಂದು ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದರು.

ಹಣ ಪಾವತಿಗೆ ಸಂಬಂಧಿಸಿದಂತೆ ಬಿ.ಮಂಜುನಾಥ ಅವರು, ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಕೇಳಿದ್ದರು. ಇದಕ್ಕೆ ಉತ್ತರ ನೀಡಿರುವ ಬಿಎಂಟಿಸಿ ಸಾರ್ವಜನಿಕ ಮಾಹಿತಿ ಅಧಿಕಾರಿ, ‘ಪ್ರಾಧಿಕಾರದ ಆಯುಕ್ತರ ಪತ್ರದಂತೆ ಬಿಎಂಟಿಸಿ ಬಸ್‌ಗಳನ್ನು ಸಾಂದರ್ಭಿಕ ಒಪ್ಪಂದದಂತೆ ಒದಗಿಸಲಾಗಿತ್ತು. ಈ ಬಸ್‌ಗಳಿಗೆ ಹಣ ಪಾವತಿಸುವಂತೆ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಈವರೆಗೆ ಹಣ ಪಾವತಿ ಆಗಿಲ್ಲ’ ಎಂದು ವಿವರ ಒದಗಿಸಿದ್ದಾರೆ.

‘ಪ್ರಗತಿಯ ಪ್ರತಿಮೆ ಅನಾವರಣ ಕಾರ್ಯಕ್ರಮ ದೊಡ್ಡಮಟ್ಟದಲ್ಲಿತ್ತು. ಅದನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ವಹಿಸಲಾಗಿತ್ತು. ಬಿಎಂಟಿಸಿ ಬಸ್‌ಗಳ ಒಪ್ಪಂದದ ಹಣವನ್ನೂ ಲೋಕೋಪಯೋಗಿ ಇಲಾಖೆ ಪಾವತಿಸಲಿದೆ. ನಾಲ್ಕೈದು ದಿನದಲ್ಲಿ ಸಂದಾಯವಾಗಲಿದೆ’ ಎಂದು ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ವಿನಯ್ ಪ್ರತಿಕ್ರಿಯಿಸಿದರು.

18ರಿಂದ ಸಿಐಟಿಯು ಅಖಿಲ ಭಾರತ ಸಮ್ಮೇಳನ

ಕ್ಯೂಬಾ ಕ್ರಾಂತಿ ನಾಯಕ ಚೆ ಗೆವಾರ ಮಗಳು ಅಲಿಡಾ ಗೆವಾರ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಸಂಘಟನೆಯ 17ನೇ ಅಖಿಲ ಭಾರತ ಸಮ್ಮೇಳನವು ಜ. 18ರಿಂದ 22ರವರೆಗೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯಲಿದೆ.

‘ಕೇಂದ್ರ ಸರ್ಕಾರ ಕಾರ್ಪೊರೇಟ್ ಧಣಿಗಳ ತುಷ್ಟೀಕರಣಕ್ಕಾಗಿ ಕಾರ್ಮಿಕರಿಗೆ ಸಂಬಂಧಿಸಿದ 29 ಕಾಯ್ದೆಗಳಿಗೆ ತಿದ್ದುಪಡಿ ಮಾಡಿದೆ. ಈ ಮೂಲಕ ಕಾರ್ಮಿಕರ ಪ್ರತಿಭಟನೆಯ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಕಾರ್ಮಿಕರಿಗಿದ್ದ ಹಕ್ಕುಗಳನ್ನು ಕಸಿದುಕೊಂಡಿರುವ ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು’ ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.


ವರಲಕ್ಷ್ಮಿ

ಕಾರ್ಯಕ್ರಮದಲ್ಲಿ ಕ್ಯೂಬಾ ಕ್ರಾಂತಿಯ ನಾಯಕ ಚೆಗೆವಾರ ಮಗಳು ಅಲಿಡಾ ಗೆವಾರ, ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್‌ನ ಪ್ರಧಾನ ಕಾರ್ಯದರ್ಶಿ ಪಂಬಿಸ್ ಕೈರಿಟ್ಸಿಸ್ ಭಾಗವಹಿಸಲಿದ್ದಾರೆ. ಜ. 22 ರಂದು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕಾರ್ಮಿಕರ ಬೃಹತ್ ಬಹಿರಂಗ ಸಭೆ ನಡೆಯಲಿದೆ ಎಂದು ತಿಳಿಸಿದರು

‘ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಗಳಿಂದ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಕೃಷಿ ವಿರೋಧಿ ನೀತಿಗಳು, ಡಾಲರ್ ಎದುರು ರೂಪಾಯಿ ಅಪಮೌಲ್ಯಗೊಂಡು ಸಾರ್ವಕಾಲಿಕ ಕನಿಷ್ಠ ಮೌಲ್ಯಕ್ಕೆ ಕುಸಿದಿದೆ. ಆದರೆ, ಜನಪ್ರತಿನಿಧಿಗಳು ರಸ್ತೆ, ಚರಂಡಿ ಅಭಿವೃದ್ಧಿಯ ವಿಚಾರ ಬಿಡಿ, ಲವ್ ಜಿಹಾದ್ ಬಗ್ಗೆ ಮಾತನಾಡಿ ಎಂದು ಕರೆ ನೀಡುತ್ತಿದ್ದಾರೆ’ ಎಂದು ಟೀಕಿಸಿದರು.

‘ಜ. 21ರಂದು ಆಧುನಿಕ ತಯಾರಿಕಾ ವಲಯದ ಕಾರ್ಮಿಕರನ್ನು ಸಂಘಟಿಸುವ ಮಹತ್ವ ಮತ್ತು ಸವಾಲು, ವಲಸೆ ಕಾರ್ಮಿಕರ ಪರಿಸ್ಥಿತಿ ಮತ್ತು ಸಂಘಟನೆಯ ಸವಾಲು, ಬದಲಾಗುತ್ತಿರುವ ಉದ್ಯೋಗದ ಸ್ವರೂಪಗಳು, ಕಾರ್ಮಿಕ ವರ್ಗದ ಐಕ್ಯತೆ ಮತ್ತು ಕೋಮುವಾದದ ಅಪಾಯಗಳು ಕುರಿತಾದ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ’ ಎಂದು ಅವರು ಹೇಳಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಉಪಸ್ಥಿತರಿದ್ದರು.

ತೀರ್ಥಹಳ್ಳಿ: ಶಾರೀಕ್ ಅಜ್ಜಿ ಮನೆಯಲ್ಲಿ ಇ.ಡಿ ಶೋಧ

ಒಂದನೇ ಪುಟದಿಂದ...

ಲೀಸ್ ಅವಧಿ ಇನ್ನೂ ಬಾಕಿ ಇರುವಂತೆಯೇ ಈಚೆಗೆ ಕಟ್ಟಡ ಮಾರಾಟವಾಗಿದೆ. ಅದರ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಸದ್ಯ ಕಟ್ಟಡವನ್ನು ಕಾಂಗ್ರೆಸ್ ಕಾರ್ಯಾಲಯಕ್ಕೆ ಬಳಸಿಕೊಳ್ಳಲಾಗಿದೆ. ಕರಾರು ಪತ್ರವನ್ನು ಕಿಮ್ಮನೆ ರತ್ನಾಕರ ಅವರು ಜಾರಿ ನಿರ್ದೇಶನಾಲಯದ ಅಧಿಕಾರಿಗಳಿಗೆ ನೀಡಿದರು.

ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರ–ಕಿಮ್ಮನೆ ಬೇಸರ:

‘ನನ್ನ ನಿವಾಸದ ಮೇಲೆ ಇ.ಡಿ ದಾಳಿ ನಡೆಸಿದೆ ಎಂದು ಬಿಜೆಪಿ ಸುಳ್ಳು ಪ್ರಚಾರ ಮಾಡಿದೆ. ನಮ್ಮ ಮನೆ ಪರಿಶೀಲನೆ ನಡೆಸಿದರೆ ₹ 10,000 ಸಹ ಸಿಗುವುದಿಲ್ಲ. ಬಿಜೆಪಿಯ ಸುಳ್ಳುಗಳಿಗೆ ದೃಶ್ಯ ಮಾಧ್ಯಮ ಪೂರಕವಾಗಿ ಸುದ್ದಿ ಬಿತ್ತರಿಸಿದೆ. ಕಾಂಗ್ರೆಸ್ ಪಕ್ಷಕ್ಕೂ ಶಾರೀಕ್ ಕುಟುಂಬಕ್ಕೂ ಸಂಬಂಧ ಇಲ್ಲ. ನಮ್ಮ ಮನೆಗೆ ಬಂದ ಅಧಿಕಾರಿಗಳು ಕಚೇರಿ ಬಾಡಿಗೆಯ ಕುರಿತು ಕೇಳಿದ್ದ ಮಾಹಿತಿ ಒದಗಿಸಿದ್ದೇನೆ’ ಎಂದು ಮಾಜಿ ಸಚಿವರೂ ಆದ ಕಿಮ್ಮನೆ ರತ್ನಾಕರ್ ಪ್ರತಿಕ್ರಿಯಿಸಿದ್ದಾರೆ.


ತೀರ್ಥಹಳ್ಳಿ ಪಟ್ಟಣದ ಸೊಪ್ಪುಗುಡ್ಡೆಯಲ್ಲಿರುವ ಶಾರೀಕ್ ಅಜ್ಜಿ ಮನೆ ಮೇಲೆ ಇಡಿ ಅಧಿಕಾರಿಗಳು ಬುಧವಾರ ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಈ ವೇಳೆ ಮನೆಯ ಎದುರು ಪೊಲೀಸ್ ಕಾವಲು ಹಾಕಲಾಗಿತ್ತು.

ಮಂಗಳೂರಿನಲ್ಲೂ ಇ.ಡಿಯಿಂದ ಶೋಧ

ನವದೆಹಲಿ (ಪಿಟಿಐ): ಮಂಗಳೂರಿನಲ್ಲಿ ಕೆಲ ತಿಂಗಳ ಹಿಂದೆ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಹಾಗೂ ಹಣದ ಅಕ್ರಮ ವರ್ಗಾವಣೆ ಸಂಬಂಧ ಜಾರಿ ನಿರ್ದೇಶನಾಲಯವು (ಇಡಿ) ಮಂಗಳೂರಿನ ಕೆಲವು ಪ್ರದೇಶಗಳಲ್ಲಿ ಬುಧವಾರ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ದಾಖಲಿಸಿದ ಎಫ್ಐಆರ್ ಆಧಾರದಲ್ಲಿ ಜಾರಿ ನಿರ್ದೇಶನಾಲಯವು ಹಣದ ಅಕ್ರಮ ವರ್ಗಾವಣೆ ಪ್ರಕರಣದತನಿಖೆನಡೆಸುತ್ತಿದೆ.ಹಣದಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್ಎ) ಕ್ರಿಮಿನಲ್ ಸೆಕ್ಷನ್‌ಗಳಡಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಗಳನ್ನು ಕಲೆ ಹಾಕುವ ಸಲುವಾಗಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕಾಂಗ್ರೆಸ್ ಪಕ್ಷದ ಕಚೇರಿ ಇರುವ ಪ್ರದೇಶವೂ ಸೇರಿದಂತೆ ಅನೇಕ ಕಡೆ ದಾಳಿ ನಡೆಸಿದ್ದಾರೆ.

‘ಕಟ್ಟಡವೊಂದರಲ್ಲಿರುವ ಕಚೇರಿಯಲ್ಲಿ ಕೇವಲ ಶೋಧ ನಡೆಸಲಾಗಿದೆ. ರಾಜಕೀಯ ಪಕ್ಷದ ಕಚೇರಿಯ ಆವರಣದಲ್ಲಿ ಯಾವುದೇ ದಾಳಿಯನ್ನು ಸಂಘಟಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ವೀರಸೌಧದಿಂದ ಕಾಂಗ್ರೆಸ್ ‘ಪ್ರಜಾಧ್ವನಿ’ ಯಾತ್ರೆ ಶುರು

ಒಂದನೇ ಪುಟದಿಂದ...

‘ದೇಶವನ್ನು ಬ್ರಿಟಿಷರ ದಾಸ್ಯದಿಂದ ಮುಕ್ತಗೊಳಿಸಲು ಮಹಾತ್ಮ ಗಾಂಧಿ ಅವರು ಬೆಳಗಾವಿಯಲ್ಲಿ ಅಧಿವೇಶನ ನಡೆಸಿ ಹೋರಾಟದ ರೂಪುರೇಷೆ ಸಿದ್ಧಪಡಿಸಿದ್ದರು. ಈಗ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ನಾವು ತಯಾರಾಗಿದ್ದೇವೆ’ ಎಂದು ಡಿ.ಕೆ. ಶಿವಕುಮಾರ್ ಗುಡುಗಿದರು.

‘ಐತಿಹಾಸಿಕ ಸ್ಥಳದಿಂದ ದೊಡ್ಡ ಸಂಕಲ್ಪದೊಂದಿಗೆ ‘ಪ್ರಜಾಧ್ವನಿ’ ಯಾತ್ರೆ ಪ್ರಾರಂಭ ಮಾಡಿದ್ದೇವೆ. ರಾಜ್ಯ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ, ದ್ವೇಷ ಹಾಗೂ ಜನವಿರೋಧಿ ನಿಲುವುಗಳನ್ನು ಜನರ ಮುಂದೆ ತರುವುದೇ ಇದರ ಉದ್ದೇಶ’ ಎಂದು ಸಿದ್ದರಾಮಯ್ಯ ಹೇಳಿದರು.

ಸಂಕ್ಷಿಪ್ತ ಸುದ್ದಿ

ವಿನಾಯಕ, ಚಾಂದ್ ಪಾಷಗೆ ‘ಈ ಹೊತ್ತಿಗೆ ಪ್ರಶಸ್ತಿ’


ವಿನಾಯಕ ಅರಳಸುರಳಿ


ಚಾಂದ್ ಪಾಷ

ಬೆಂಗಳೂರು: ಈ ಹೊತ್ತಿಗೆ ಟ್ರಸ್ಟ್ ನೀಡುವ ‘ಈ ಹೊತ್ತಿಗೆ ಕಥಾ ಪ್ರಶಸ್ತಿ’ಗೆ ಶಿವಮೊಗ್ಗದ ವಿನಾಯಕ ಅರಳಸುರಳಿ ಅವರ ‘ಮರ ಹತ್ತದ ಮೀನು’ ಕಥಾ ಸಂಕಲನ, ಕಲಬುರಗಿಯ ಚಾಂದ್ ಪಾಷ ಅವರ ‘ಒದ್ದೆಗಣ್ಣಿನ ದೀಪ’ ಕವನ ಸಂಕಲನಆಯ್ಕೆಯಾಗಿವೆ.

ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ. ವಿಮರ್ಶಕ ಎಸ್.ಆರ್. ವಿಜಯಶಂಕರ ಅವರು ಕಥಾ ಪ್ರಶಸ್ತಿ ಹಾಗೂ ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಅವರು ಕಾವ್ಯ ಪ್ರಶಸ್ತಿಯ ತೀರ್ಪುಗಾರರಾಗಿದ್ದರು.

ಮಾರ್ಚ್‌ನಲ್ಲಿ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಕಪ್ಪಣ್ಣ ಅಂಗಳ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಈ ಹೊತ್ತಿಗೆ ಸಂಚಾಲಕಿ ಜಯಲಕ್ಷ್ಮಿ ಪಾಟೀಲ ತಿಳಿಸಿದ್ದಾರೆ.

ಮುರುಘಾಮಠಕ್ಕೆ ಆಡಳಿತಾಧಿಕಾರಿ: ಇಂದು ವಿಚಾರಣೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಗುರುವಾರ (ಜ.12) ಕೈಗೆತ್ತಿಕೊಳ್ಳಲಿದೆ.

ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಬಸವಪ್ರಭು ಸ್ವಾಮೀಜಿ, ಭಕ್ತರು ಸಲ್ಲಿಸಿರುವ ರಿಟ್ ಅರ್ಜಿಯನ್ನು (ಡಬ್ಲ್ಯು.ಪಿ 25316/2022) ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಾಹ್ನ 2.30ಕ್ಕೆ ಹೆಚ್ಚಿನ ವಿಚಾರಣೆ ಮುಂದುವರಿಸಲಿದೆ.



❦ ಸುಭಾಷಿತ ❦

ನಿಮ್ಮ ಚಿಂತನೆ, ನಡತೆ ಮತ್ತು ಆಹಾರಶೈಲಿಯು ನಿಮ್ಮ ಬದುಕಿನ ಮೇಲೆ ಸುದೀರ್ಘವಾದ ಪರಿಣಾಮವನ್ನು ಬೀರುತ್ತವೆ.

-ದೀಪಕ್ ಚೋಪ್ರಾ

ಮೌಲ್ಯ ಶಿಕ್ಷಣ: ಮಠಾಧೀಶರ ಸಲಹೆ ಅವೈಜ್ಞಾನಿಕ, ಅತಾರ್ಕಿಕ

ಸಾತ್ವಿಕ ಆಹಾರ ನೀಡುವುದು ಹಾಗೂ ಧಾರ್ಮಿಕ ಪಠ್ಯಗಳ ಅಳವಡಿಕೆಯ ಮೂಲಕ ಮೌಲ್ಯಯುತ ಶಿಕ್ಷಣ ಪದ್ಧತಿ ಅನುಷ್ಠಾನ ಮಾಡಬಹುದೆಂದು ರಾಜ್ಯ ಸರ್ಕಾರಕ್ಕೆ ಕೆಲವು ಮಠಾಧೀಶರು ನೀಡಿರುವ ಸಲಹೆ ಅವಾಸ್ತವಿಕ ಹಾಗೂ ಅವೈಜ್ಞಾನಿಕ. ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣವನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ದುಂಡುಮೇಜಿನ ಸಮಾಲೋಚನೆ ಸಭೆಯಲ್ಲಿ ವಿವಿಧ ಮಠಾಧೀಶರು ನೀಡಿರುವ ಸಲಹೆಗಳಲ್ಲಿ ಮಕ್ಕಳ ಹಿತಕ್ಕಿಂತಲೂ ಪರೋಕ್ಷ ಉದ್ದೇಶಗಳೇ ಮುಖ್ಯವಾಗಿರುವಂತಿವೆ. ಆಹಾರಕ್ಕೂ ವ್ಯಕ್ತಿತ್ವಕ್ಕೂ ಸಂಬಂಧವಿದೆ ಎಂದು ಅಭಿಪ್ರಾಯಪಟ್ಟಿರುವ ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಭಗವದ್ಗೀತೆಯ ಮುಕ್ತ ಬೋಧನೆ ಹಾಗೂ ಸಾತ್ವಿಕ ಆಹಾರ ನೀಡುವ ಮೂಲಕ ಮಕ್ಕಳಲ್ಲಿ ಮೌಲ್ಯವರ್ಧನೆ ಮಾಡಬಹುದು ಎಂದು ಹೇಳಿದ್ದಾರೆ. ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಅಂಗಡಿಗಳ ಮುಂದೆ ಮಾಂಸ ನೇತು ಹಾಕುವುದನ್ನು ನಿಲ್ಲಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಸವರಾಜ ರಾಜಋಷಿ, ಪುನರ್ಜನ್ಮದ ಬಗ್ಗೆ ತಿಳಿವಳಿಕೆ ನೀಡುವ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ವೈಜ್ಞಾನಿಕ ಆಧಾರ ಹಾಗೂ ವೈಚಾರಿಕ ಸಮರ್ಥನೆಗಳಿಲ್ಲದ ಇಂಥ ಸಲಹೆಗಳಿಂದ ಶಿಕ್ಷಣ ಪದ್ಧತಿಯಲ್ಲಿ ಮೌಲ್ಯವರ್ಧನೆ ಆಗುವುದಕ್ಕಿಂತಲೂ, ಇರುವ ಮೌಲ್ಯ ಮುಕ್ಕಾಗುವ ಸಾಧ್ಯತೆಯೇ ಹೆಚ್ಚು.



ನೈತಿಕತೆಯ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಮಾತನಾಡುವುದು ಸಲ್ಲದು

ಆಹಾರದ ವಿಷಯದಲ್ಲಿ ಸಮುದಾಯಗಳ ನಡುವೆ ಒಡಕನ್ನುಂಟು ಮಾಡುವ ಪ್ರಯತ್ನಗಳು ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿವೆ. ಅಂಥ ಪ್ರಯತ್ನಗಳ ಮುಂದುವರಿದ ಭಾಗವಾಗಿ, 'ಸಾತ್ವಿಕ ಆಹಾರ'ದ ಬಗೆಗಿನ ಸ್ವಾಮೀಜಿಗಳ ಮಾತುಗಳನ್ನು ಗಮನಿಸಬಹುದು. ಆರೋಗ್ಯದ ಮೇಲೆ ಆಹಾರ ಪರಿಣಾಮ ಬೀರುತ್ತದೆಯೇ ಹೊರತು, ವ್ಯಕ್ತಿತ್ವದ ಮೇಲಲ್ಲ. ಒಂದು ಆಹಾರವನ್ನು ಸಾತ್ವಿಕ ಎನ್ನುವುದು, ಮತ್ತೊಂದನ್ನು ತಾಮಸ ಎಂದು ಗುರುತಿಸುವುದು 'ಆಹಾರದ ಶ್ರೇಷ್ಠತೆಯ ವ್ಯಸನ'. ಇಂಥ ವ್ಯಸನ ಸಮಾಜದಲ್ಲಿ ಒಡಕಿಗೆ ಕಾರಣವಾಗುತ್ತದೆ. ಮೇಲು-ಕೀಳುಗಳ ಭೇದಕ್ಕೆ ಅವಕಾಶ ಕಲ್ಪಿಸುತ್ತದೆ. ಮಾಂಸವನ್ನು ನೇತು ಹಾಕುವುದು ಕೆಲವರಿಗೆ ಕಿರಿಕಿರಿ ಹುಟ್ಟಿಸಬಹುದು. ಮತ್ತೆ ಕೆಲವರಿಗೆ ಸಸ್ಯಾಹಾರದ ಉತ್ಪನ್ನಗಳ ಪ್ರದರ್ಶನವೂ ರೇಜಿಗೆ ಹುಟ್ಟಿಸಬಹುದು. ನಮಗೆ ಒಗ್ಗದ ಆಹಾರ ಇರಬಹುದೇ ಹೊರತು, ಕೀಳು ಆಹಾರ ಎನ್ನುವುದಿರುವುದಿಲ್ಲ. ಮಾಂಸಾಹಾರ ಜಗತ್ತಿನ ಬಹುತೇಕರ ಸಹಜ ಆಹಾರ ಎನ್ನುವ ಸತ್ಯವನ್ನು ಒಪ್ಪಿಕೊಂಡರೆ, ಯಾವ ಇರುಸುಮುರುಸಿಗೂ ಅವಕಾಶ ಇರುವುದಿಲ್ಲ. ಸಾತ್ವಿಕ ಆಹಾರದಿಂದ ಮೌಲ್ಯವ್ಯವಸ್ಥೆ ಅಥವಾ ನೈತಿಕತೆ ಸಾಧ್ಯವಾಗುತ್ತದೆ ಎನ್ನುವ ಸ್ವಾಮೀಜಿಗಳ ಅಭಿಪ್ರಾಯವು ಹುಸಿ ಭಾವುಕತೆಯನ್ನು ಆಧರಿಸಿರುವಂತಹದ್ದೇ ವಿನಾ ವಸ್ತುನಿಷ್ಠವಲ್ಲ, ವೈಜ್ಞಾನಿಕವೂ ಅಲ್ಲ. ಆಹಾರಕ್ಕೂ ಒಳ್ಳೆಯ ನಡವಳಿಕೆಗೂ ಸಂಬಂಧವಿದ್ದಲ್ಲಿ ಎಲ್ಲ ಮಠಾಧೀಶರು ಸಾತ್ವಿಕತೆಯ ಸಾಕಾರ ಮೂರ್ತಿಗಳಾಗಿ ಇರಬೇಕಾಗಿತ್ತು. ತೀವ್ರ ಸ್ವರೂಪದ ಅಪರಾಧಗಳನ್ನು ಎಸಗಿರುವ ಆರೋಪ-ಖಟ್ಲೆಗಳನ್ನು ಎದುರಿಸುತ್ತಿರುವ ಸ್ವಾಮೀಜಿಗಳ ಉದಾಹರಣೆಗಳು ಇರುವಾಗ, ಆಹಾರದಿಂದ ಸ್ವಭಾವ ನಿರ್ಧಾರವಾಗುತ್ತದೆನ್ನುವ ಮಾತನ್ನು ವೈನೋದಿಕ ನೆಲೆಗಟ್ಟಿನಲ್ಲಷ್ಟೇ ಪರಿಗಣಿಸಬಹುದು.

ನೀತಿ ಶಿಕ್ಷಣದ ಬಗೆಗಿನ ಮಾತು ಬಂದಾಗಲೆಲ್ಲ ಭಗವದ್ಗೀತೆ, ಕುರಾನ್, ಬೈಬಲ್ ಅನ್ನು ಮುನ್ನೆಲೆಗೆ ತರುವುದು ಕೆಲವರಿಗೆ ಅಭ್ಯಾಸವಾಗಿಬಿಟ್ಟಿದೆ. ಮೌಲ್ಯವ್ಯವಸ್ಥೆಗೆ ಧರ್ಮಗ್ರಂಥಗಳೇ ಆಧಾರ ಎನ್ನುವ ಮನೋಭಾವ ಒಪ್ಪತಕ್ಕದ್ದಲ್ಲ. ಅಂಥ ನಂಬಿಕೆ ಶಿಕ್ಷಣದ ಮೂಲಭೂತ ಉದ್ದೇಶವನ್ನೇ ಅಪಮೌಲ್ಯಗೊಳಿಸುವಂತಹದ್ದು. ಶಿಕ್ಷಣದ ಚೈತನ್ಯ ಆಧರಿಸಿರುವುದು ಮಾನವೀಯತೆಯನ್ನು; ಧಾರ್ಮಿಕ ನಂಬಿಕೆಗಳನ್ನಲ್ಲ. ಮತಧರ್ಮಗಳ ನಂಬಿಕೆಗಳನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೂಲಕ ಸಾರ್ವತ್ರೀಕರಿಸಲು ಪ್ರಯತ್ನಿಸುವುದು ಅನಗತ್ಯ ಗೊಂದಲಗಳಿಗೆ ಆಸ್ಪದ ಕಲ್ಪಿಸುತ್ತದೆ. ಮಕ್ಕಳ ಜೊತೆಗೆ ಶಿಕ್ಷಕರಿಗೆ ಹಾಗೂ ರಾಜಕಾರಣಿಗಳಿಗೂ ಮೌಲ್ಯಶಿಕ್ಷಣ ಅಗತ್ಯವೆಂದು ಕೆಲವು ಸ್ವಾಮೀಜಿಗಳು ಅಭಿಪ್ರಾಯಪಟ್ಟಿದ್ದಾರೆ. ಇದು ಒಪ್ಪಬಹುದಾದ ಮಾತು. ಆದರೆ, ರಾಜಕಾರಣಿಗಳಿಗೆ ನೀತಿಬೋಧನೆ ಮಾಡುವವರು ಯಾರು? ಬೋಧಿಸುವ ಸ್ಥಾನದಲ್ಲಿರುವ ಕೆಲವು ಧಾರ್ಮಿಕ ಮುಖಂಡರು ಅಧಿಕಾರ ರಾಜಕಾರಣದ ಭಾಗವಾಗಿ ಗುರುತಿಸಿಕೊಳ್ಳಲು ಉತ್ಸಾಹ ವ್ಯಕ್ತಪಡಿಸುತ್ತಿರುವಾಗ, ಯಾರು ಯಾರಿಗೆ ಬೋಧಿಸಬೇಕು? ಅಧಿಕಾರಕ್ಕಾಗಿ ತಮ್ಮನ್ನು ತಾವು ಮಾರಾಟದ ಸರಕನ್ನಾಗಿಸಿಕೊಂಡ ರಾಜಕಾರಣಿಗಳೊಂದಿಗೆ ಗುರುತಿಸಿಕೊಳ್ಳಲು ಯಾವುದೇ ಸ್ವಾಮೀಜಿಗೆ ಈವರೆಗೆ ನೈತಿಕ ಸಮಸ್ಯೆ ಎದುರಾಗಿಲ್ಲ. ಕೆಲವು ಸ್ವಾಮೀಜಿಗಳು ಗುರುತರ ಆರೋಪಗಳನ್ನು ಹೊತ್ತಿದ್ದಾರೆ. ಧಾರ್ಮಿಕ ಕ್ಷೇತ್ರ ನೈತಿಕ ಬಿಕ್ಕಟ್ಟು ಎದುರಿಸುತ್ತಿದೆ. ಇದರ ಬಗ್ಗೆ ಸ್ವಾಮೀಜಿಗಳು ಬಹಿರಂಗವಾಗಿ ಕಳವಳ ವ್ಯಕ್ತಪಡಿಸಿರುವ ನಿದರ್ಶನಗಳು ಕಡಿಮೆ. ಧಾರ್ಮಿಕ ಕ್ಷೇತ್ರದಲ್ಲೇ ವೈರುಧ್ಯಗಳು ತುಂಬಿಕೊಂಡಿರುವಾಗ, ಮಕ್ಕಳ ನೈತಿಕ ಶಿಕ್ಷಣದ ಬಗ್ಗೆ ಸಲಹೆಗಳನ್ನು ನೀಡುವುದು ವಿರೋಧಾಭಾಸವೇ ಸರಿ. ಮಕ್ಕಳು ಮೌಲ್ಯಗಳನ್ನು ಕಲಿಯಬೇಕೆನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಮಕ್ಕಳಿಗೆ ನೈತಿಕತೆಯನ್ನು ಬೋಧಿಸುವ ಸ್ವಾತಂತ್ರ್ಯ ಮಠಾಧೀಶರಿಗಿಲ್ಲ ಎಂದೂ ಹೇಳಲಾಗದು. ಆದರೆ, ನೈತಿಕತೆಯ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಮಾತನಾಡುವುದು ಸಲ್ಲದು. ಹಾಗೆಯೇ, ನೈತಿಕತೆಯನ್ನು ಕಲಿಸುವ ಹೊಣೆಗಾರಿಕೆಯನ್ನು ಪೋಷಕರು, ಶಿಕ್ಷಕರು ಹಾಗೂ ಶಿಕ್ಷಣ ತಜ್ಞರು ನಿರ್ವಹಿಸಬೇಕೇ ಹೊರತು, ಅನ್ಯಕ್ಷೇತ್ರದವರಲ್ಲ. ಈ ಸೂಕ್ಷ್ಮವನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು, ಮಠಾಧೀಶರೂ ಅರ್ಥ ಮಾಡಿಕೊಳ್ಳಬೇಕು. ಶಿಕ್ಷಣ ತಜ್ಞರು ಮಠಗಳಲ್ಲಿನ ಕಾರ್ಯನಿರ್ವಹಣೆಯ ಬಗ್ಗೆ ಮೂಗು ತೂರಿಸುವುದು ಎಷ್ಟು ಸರಿಯಲ್ಲವೋ, ಧಾರ್ಮಿಕ ಮುಖಂಡರು ತಮ್ಮದಲ್ಲದ ಕ್ಷೇತ್ರಗಳ ಬಗ್ಗೆ ತಜ್ಞರಂತೆ ಮಾತನಾಡುವುದು ಸರಿಯಲ್ಲ.

ದಿನದ ಟ್ವೀಟ್

ದುರಾಸೆ ಕೊನೆಯಾಗಲಿ



ಜೋನಸ್ ಸಾಲ್ಕ್ ಅವರು ಪೋಲಿಯೊ ಲಸಿಕೆಯನ್ನು ಕಂಡುಹಿಡಿದಾಗ, ಅದಕ್ಕೆ ಹಕ್ಕುಸ್ವಾಮ್ಯ ಪಡೆದುಕೊಳ್ಳಲು ನಿರಾಕರಿಸಿದ್ದರು. ಆ ನಿರ್ಧಾರದಿಂದಾಗಿ ಸುಮಾರು 700 ಕೋಟಿ ಡಾಲರ್‌ನಷ್ಟು ಹಣ ಅವರ ಕೈತಪ್ಪಿತು. ಆದರೆ ಕೋವಿಡ್ ಲಸಿಕೆಗಾಗಿ ಸಾರ್ವಜನಿಕ ತೆರಿಗೆ ಹಣವನ್ನು ಪಡೆದ ಮೊಡೆರ್ನಾ ಸಿಇಒ ಸ್ಟೀಫನ್ ಬಾನ್ಸೆಲ್ ಅವರು ರಾತ್ರೋರಾತ್ರಿ ಭಾರಿ ಶ್ರೀಮಂತರಾದರು ಮತ್ತು ಈಗ ಅವರ ಸಂಪತ್ತಿನ ಮೌಲ್ಯ 620 ಕೋಟಿ ಡಾಲರ್. ಇಂತಹ ದುರಾಸೆ ಕೊನೆಗೊಳ್ಳಲಿ.

ಬರ್ನಿ ಸ್ಯಾಂಡರ್ಸ್, ಅಮೆರಿಕದ ಸಂಸದ

ಕಿಡಿನುಡಿ



ತಾಜಾ ಹಾಲು ಮತ್ತು ಗೋಧಿಗೆ ಪರ್ಯಾಯವಾಗಿ ಬಿಸ್ಕತ್ತನ್ನು ಬಳಸಬಹುದು ಎಂದು ಅಮಿತಾಭ್ ಬಚ್ಚನ್ ಅವರು ಜಾಹೀರಾತೊಂದರಲ್ಲಿ ತಾಯಂದಿರನ್ನು ಉದ್ದೇಶಿಸಿ ಹೇಳುತ್ತಾರೆ. ಅತಿ ಸಂಸ್ಕರಿತ ಜಂಕ್ ಫುಡ್ ಅನ್ನು ಮಕ್ಕಳಿಗೆ ಮಾರಾಟ ಮಾಡುವುದನ್ನು ಹಾಗೂ ಇಂತಹ ಆಹಾರಗಳಿಗೆ ತಾರಾ ವರ್ಚಸ್ಸು ಬಳಸಿಕೊಳ್ಳುವುದನ್ನು ನಿಲ್ಲಿಸಲು ಇದು ಸಕಾಲ.

ಸಯಂತನ್ ಬೇರ

25 ವರ್ಷಗಳ ಹಿಂದೆ

ಸೋಮವಾರ, 12-1-1998

• **ವಿಚ್ಛಿದ್ರ ಶಕ್ತಿಗಳ ನಿಗ್ರಹಕ್ಕೆ ಕರೆ; ಸೋನಿಯಾ ಪ್ರಚಾರ ಆರಂಭ**

ಶ್ರೀಪೆರಂಬುದೂರು, ಜನವರಿ 11– ಜಾತಿ, ಮತ, ಧರ್ಮ, ಪ್ರಾಂತ್ಯದ ಹೆಸರಿನಲ್ಲಿ ಸಮಾಜವನ್ನು ಛಿದ್ರಗೊಳಿಸುತ್ತಿರುವ ಶಕ್ತಿಗಳನ್ನು ನಿಗ್ರಹಿಸುವುದು ಕಾಂಗ್ರೆಸ್ ಪಕ್ಷಕ್ಕೆ ಸವಾಲು ಆಗಿದೆ ಎಂದು ಸೋನಿಯಾ ಗಾಂಧಿಯವರು ಇಂದು ಇಲ್ಲಿ ಪರೋಕ್ಷವಾಗಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ವಿಚ್ಛಿದ್ರಕಾರಿ ಶಕ್ತಿಗಳ ಕೈಗೆ ಅಧಿಕಾರ ಹೋಗದಂತೆ ತಡೆಯಬೇಕು; ಇದು ಕಾಂಗ್ರೆಸ್‌ಗೆ ಮಾತ್ರ ಸಾಧ್ಯ' ಎಂದರು.

ಆರು ವರ್ಷಗಳ ಹಿಂದೆ ತಮ್ಮ ಪತಿ ಹತ್ಯೆಯಾದ ಶ್ರೀಪೆರಂಬುದೂರಿನಲ್ಲಿ ರಾಜೀವ್ ಗಾಂಧಿ ಸ್ಮಾರಕಕ್ಕೆ ಶ್ರದ್ಧಾಂಜಲಿ ಅರ್ಪಿಸಿದ ಅವರು, ಇಲ್ಲಿಂದ ಒಂದು ಕಿ.ಮೀ. ದೂರದಲ್ಲಿ ವಿಶೇಷವಾಗಿ ಸಿದ್ಧಪಡಿಸಿದ್ದ 'ಮಲ್ಲಿಗೆ ಮಂಟಪ'ದ ವೇದಿಕೆಯಿಂದ ಭಾರಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ತಮ್ಮ ಚೊಚ್ಚಲ ರಾಜಕೀಯ ಭಾಷಣ ಮಾಡಿದರು.

• **'ಪಕ್ಷದ ಅಧ್ಯಕ್ಷತೆ ಸದ್ಯಕ್ಕೆ ಬೇಡ'**

ನವದೆಹಲಿ, ಜನವರಿ 11 (ಪಿಟಿಐ)– ಸದ್ಯಕ್ಕೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವುದಿಲ್ಲ ಎಂದು ಸೋನಿಯಾ ಗಾಂಧಿ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 12-1-1973

• **ರಾಜ್ಯ ಮಟ್ಟದ ಅಭಾವ ಪರಿಹಾರ ಸಮಿತಿ: ಅರಸು ಅಧ್ಯಕ್ಷತೆ**

ಬೆಂಗಳೂರು, ಜನವರಿ 11– ಹಣ ಹಾಗೂ ಪದಾರ್ಥಗಳನ್ನು ಸಂಗ್ರಹಿಸಿ, ಅಭಾವ ಪರಿಹಾರ ಕಾರ್ಯದಲ್ಲಿ ಹೊಂದಾಣಿಕೆ ಏರ್ಪಡಿಸುವ ಉದ್ದೇಶದಿಂದ ಸರ್ಕಾರ ಮುಖ್ಯಮಂತ್ರಿ ಅರಸು ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯೊಂದನ್ನು ರಚಿಸಿದೆ.

ಸುಮಾರು 50 ಮಂದಿ ಸದಸ್ಯರಿರುವ ಈ ಸಮಿತಿಯಲ್ಲಿ ಎರಡು ಶಾಸನಸಭೆಗಳ ವಿರೋಧ ಪಕ್ಷದ ನಾಯಕರು, ಎರಡೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಇರುವರು.

ಹಿಮಾಲಯದಲ್ಲಿ ಮೇಘಸ್ಫೋಟ, ಭೂಕುಸಿತದ ಗುದ್ದು; ಬುಲ್‌ಡೋಜರ್, ಡೈನಮೈಟ್ ಸದ್ದು

ದೇವಭೂಮಿಯಲ್ಲಿ ಜೋಡಿ ತಾಂಡವ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಉತ್ತರಾಖಂಡದ ಹಲ್ದ್‌ವಾನಿ ಪಟ್ಟಣದಲ್ಲಿ ಕಳೆದ ವಾರವಷ್ಟೆ ಪತ್ರಕರ್ತರ ಸಂತೆ ನೆರೆದಿತ್ತು. ಭಾರತೀಯ ರೈಲ್ವೆಗೆ ಸೇರಿದ್ದ ಸ್ಥಳದಲ್ಲಿ ಕಟ್ಟಲಾಗಿದ್ದ ನಾಲ್ಕು ಸಾವಿರಕ್ಕೂ ಹೆಚ್ಚು ಕಟ್ಟಡಗಳನ್ನು ಒಂದೇ ವಾರದಲ್ಲಿ ಖಾಲಿ ಮಾಡಬೇಕೆಂದು ಅಲ್ಲಿನ ಉಚ್ಚ ನ್ಯಾಯಾಲಯ ತೀರ್ಪು ನೀಡಿದ್ದು ದೊಡ್ಡ ಸುದ್ದಿಯಾಗಿತ್ತು. ಈಗ ಅಲ್ಲೇ ತುಸು ಉತ್ತರಕ್ಕೆ, ಅದೇ 79.5ನೇ ರೇಖಾಂಶದಲ್ಲಿರುವ ಜೋಶಿಮಠ ಎಂಬ ಪಟ್ಟಣದಲ್ಲಿ ಸುದ್ದಿ ಮಾಧ್ಯಮಗಳು ಬೀಡು ಬಿಟ್ಟಿವೆ. ಅಲ್ಲಿ ಬಿರುಕು ಬಿಟ್ಟ 600ಕ್ಕೂ ಹೆಚ್ಚು ಮನೆಗಳನ್ನು ತೆರವು ಮಾಡಿಸಲಾಗುತ್ತಿದೆ. ಪಟ್ಟಣವನ್ನು ಖಾಲಿ ಮಾಡಿಸಿದರೆ ಸಾಕೆ ಅಥವಾ ಸಮೀಪದ ಅಣೆಕಟ್ಟು ಯೋಜನೆಯನ್ನೂ ಹೆದ್ದಾರಿ ವಿಸ್ತರಣೆಯನ್ನೂ ಕೈಬಿಡಬೇಕೆ ಎಂಬ ಬಗ್ಗೆ ಮೊನ್ನೆ ಸೋಮವಾರ ಪ್ರಧಾನ ಮಂತ್ರಿಯವರ ಕಚೇರಿಯಲ್ಲಿ ಉನ್ನತ ಮಟ್ಟದ ತುರ್ತು ಸಭೆಯನ್ನು ಆಯೋಜಿಸಲಾಗಿತ್ತು. ಅದೇ ದಿನ ಪ್ರಧಾನಿಯವರು 'ಭಾರತೀಯ ಪ್ರವಾಸೀ ದಿವಸ್' ಉದ್ಘಾಟನೆಗೆಂದು ಇಂದೋರ್‌ಗೆ ಹೋಗಿದ್ದರು.

ಹಿಮಪ್ರವಾಸಿಗರ ಪ್ರವೇಶದ್ವಾರ ಎಂದೇ ಹೆಸರಾದ ಜೋಶಿಮಠದ ಮೂಲ ಹೆಸರು ಜ್ಯೋತಿರ್ಮಠ. ಆದಿ ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕಿಗೆ ಸ್ಥಾಪಿಸಿದ ನಾಲ್ಕು ಮಠಗಳಲ್ಲಿ (ಪುರಿ, ಶೃಂಗೇರಿ, ದ್ವಾರಕಾ ಮತ್ತು ಜ್ಯೋತಿರ್ಮಠ) ಇದೂ ಒಂದು. ಅದು ಈಗ ಪುಣ್ಯ ಕ್ಷೇತ್ರವಾಗಿ ಅಷ್ಟೇ ಅಲ್ಲ, ಚಾರ್‌ಧಾಮ್ ಯಾತ್ರಾರ್ಥಿಗಳಿಗೆ, ಪರ್ವತಾರೋಹಣದಂಥ ಸಾಹಸ ಯಾತ್ರಿಗಳಿಗೆ ಮತ್ತು ಹೂಗಳ ಕಣಿವೆಯಂಥ ರಮ್ಯ ಪ್ರವಾಸಕ್ಕೂ ನೂಕುನುಗ್ಗಲ ದ್ವಾರವಾಗಿದೆ. ಆಯಕಟ್ಟಿನ ಮಿಲಿಟರಿ ನೆಲೆಯಿದೆ. ಅಲ್ಲಿಂದ 11 ಕಿ.ಮೀ. ದೂರದಲ್ಲಿರುವ ಔಲಿ ಎಂಬಲ್ಲಿ ಸ್ಕೀಯಿಂಗ್ ಎಂಬ ಜಾರುಕ್ರೀಡೆಯ ಸೌಲಭ್ಯವೂ ಸಜ್ಜಾಗಿದ್ದು ಅಲ್ಲಿಗೆ ಹೋಗಲು ನಿರ್ಮಿಸಿದ ಹಗ್ಗದ ಮಾರ್ಗವು ಏಷ್ಯ ಖಂಡದ ಅತಿ ಉದ್ದನ್ನ ರೋಪ್‌ವೇ ಎನ್ನಿಸಿಕೊಂಡಿದೆ. ಚಾರ್‌ಧಾಮ್ ಯಾತ್ರಿಕರಿಗೆಂದು ನಾಲ್ಕು ಪಥಗಳ ಹೆದ್ದಾರಿ ನಿರ್ಮಾಣ ನಡೆದಿದೆ. ಜೋಶಿಮಠದಿಂದ 10 ಕಿ.ಮೀ. ದೂರದಲ್ಲಿ ತಪೋವನ-ವಿಷ್ಣುಗಢ ಎಂಬಲ್ಲಿ ಜಲವಿದ್ಯುತ್ತಿಗೆಂದು ಸುರಂಗ ಕೊರೆತ ನಡೆದಿದೆ. ಅದಕ್ಕೆಂದು ಧೌಲಿಗಂಗಾ ಮತ್ತು ರಿಷಿಗಂಗಾ ಎಂಬ ಉಪನದಿಗಳಿಗೆ ಅಣೆಕಟ್ಟು ಕಟ್ಟಲಾಗಿದ್ದು ಕಳೆದ ಫೆಬ್ರುವರಿಯಲ್ಲಿ ಅನಿರೀಕ್ಷಿತವಾಗಿ ಮೇಘಸ್ಫೋಟ ಆಗಿದ್ದರಿಂದ ಹಠಾತ್ ಪ್ರವಾಹ ಬಂದು ರಸ್ತೆ, ಸೇತುವೆ, ಅಣೆಕಟ್ಟುಗಳನ್ನು ಧ್ವಂಸ ಮಾಡಿತು. ಆ ದುರಂತದಲ್ಲಿ ಸುರಂಗ ನಿರ್ಮಾಣದ ಭಾರೀ ಯಂತ್ರಗಳ ಸಮೇತ 160ಕ್ಕೂ ಹೆಚ್ಚು ಜನ ಭೂಗತರಾಗಿ ಬರೀ 31 ಜನರ ಶವ ಸಿಕ್ಕಿತ್ತು. ಹತ್ತು ವರ್ಷಗಳ ಹಿಂದೆ 2013ರಲ್ಲಿ ಇಂಥದ್ದೇ ಹಠಾತ್ ಪ್ರವಾಹದಲ್ಲಿ ಕೇದಾರನಾಥ ಆಸುಪಾಸಿನಲ್ಲಿ ಐದು ಸಾವಿರಕ್ಕೂ ಹೆಚ್ಚು ಜನ ಗತಿಸಿದರು.

ಜೋಶಿಮಠದ ಗೋಡೆ, ಸೂರು, ರಸ್ತೆ, ಕಟ್ಟೆಕಾಲುವೆಗಳು ಬಿರುಕು ಬಿಡಲು ಕಾರಣ ಇಷ್ಟೆ: ಲಕ್ಷಾಂತರ ವರ್ಷಗಳ ಹಿಂದೆ ಭಾರೀ ಪರ್ವತವೊಂದು ಜರಿದು ಕ್ರಮೇಣ ಗಟ್ಟಿಗೊಂಡ ಬಂಡೆ-ಪುಡಿಗಲ್ಲುಗಳ ಮೇಲೆ ಇಡೀ ಪಟ್ಟಣ ನಿಂತಿದೆ. ಇಲ್ಲಿ ನಿರ್ಮಾಣ ಚಟುವಟಿಕೆ ಕೂಡದೆಂದು 1976ರಲ್ಲೇ ಎಮ್.ಸಿ. ಮಿಶ್ರಾ ಸಮಿತಿ ಹೇಳಿತ್ತು. ಆದರೆ ಈಚಿನ ಹತ್ತಿಪ್ಪತ್ತು ವರ್ಷಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ. ಅವರಿಗೆ ಸೌಲಭ್ಯ ಕಲ್ಪಿಸಲೆಂದು ಹೊಟೆಲ್, ಅಂಗಡಿ, ಹೋಂ ಸ್ಟೇ, ರಸ್ತೆ, ವಿದ್ಯುತ್ ಜಾಲ ಇತ್ಯಾದಿ ಸೇರಿದಂತೆ ಇಡೀ ಊರೇ ಅಡ್ಡಾದಿಡ್ಡಿ ಬೆಳೆದಿದೆ. ಚರಂಡಿ ನೀರು ಅಲ್ಲಲ್ಲೇ ಇಂಗುತ್ತ ಭೂತಲವನ್ನು ಸಡಿಲಗೊಳಿಸುತ್ತಿದೆ. ಅಂತರ್ಜಲಧಾರೆ ಎಲ್ಲೆಲ್ಲಿಂದಲೋ ಧುಮುಕುತ್ತಿದೆ. ಹಾಗಿದ್ದರೆ ಬಿರುಕು ಬಿಟ್ಟ ಮನೆಗಳನ್ನಷ್ಟೆ ತೆರವುಗೊಳಿಸಿ, ಇನ್ನುಳಿದ ಮನೆಗಳಿಗೆ ಒಳಚರಂಡಿ ವ್ಯವಸ್ಥೆ ಮಾಡಿದರೆ ಸಾಕಲ್ಲವೆ?

ಸಾಕೆ? ಹಿಮಾಲಯವೆಂದರೆ ಕಳೆದ ಸುಮಾರು ನಾಲ್ಕು ಕೋಟಿ ವರ್ಷಗಳಿಂದ ಮೆಲ್ಲಗೆ ಬೆಳೆಯುತ್ತ, ಕಂಪಿಸುತ್ತ, ಕುಸಿಯುತ್ತ, ಮೇಲೇಳುತ್ತಿರುವ ಎಳೇ ಪರ್ವತಮಾಲೆ. ಅದರ ಮೇಲೆ ಈಗ ಎರಡು ಬಗೆಯ ಶಿವತಾಂಡವ ಏಕಕಾಲದಲ್ಲಿ ನಡೆಯುತ್ತಿದೆ. 1. ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳು ಕಾರ್ಬನ್ ಇಂಧನಗಳನ್ನು ಸುಡುತ್ತಿರುವುದರಿಂದ ಹವಾಗುಣ ಏರುಪೇರಾಗಿ ಇಲ್ಲಿ ಅನಿರೀಕ್ಷಿತ ಮೇಘಸ್ಫೋಟ, ಹಠಾತ್ ಹಿಮಕುಸಿತ ಸಂಭವಿಸುತ್ತಿದೆ. 2. ನಾವು ಹೊಸದಾಗಿ ಅಭಿವೃದ್ಧಿಯ ಮಹಾಯಂತ್ರಗಳನ್ನು ಈ ಸೂಕ್ಷ್ಮ ಪರಿಸರದಲ್ಲಿ ನುಗ್ಗಿಸುತ್ತಿದ್ದೇವೆ.

ಹಿಮಾಲಯದ ಧಾರಣಶಕ್ತಿಯನ್ನು ಧಿಕ್ಕರಿಸುವ ದೊಡ್ಡ ಯೋಜನೆಗಳ ವಿರುದ್ಧ ಪ್ರತಿಭಟನೆ, ಸತ್ಯಾಗ್ರಹ, ಆಯೋಗಗಳ ನೇಮಕ, ನ್ಯಾಯಾಲಯದ ತೀರ್ಪು, ಹೊಸ ಯೋಜನೆ, ಅದಕ್ಕೂ ಪ್ರತಿಭಟನೆ ಮತ್ತೆ ಆಮರಣ ಉಪವಾಸ, ಸಂತರ ಜೀವತ್ಯಾಗ, ಯೋಜನೆಗಳ ಪುನಾರಚನೆ ಎಲ್ಲವೂ ಸರಣಿಯಂತೆ ಘಟಿಸಿವೆ. ದುರಂತಗಳೂ ಪದೇ ಪದೇ ಸಂಭವಿಸುತ್ತಿವೆ. ಆದರೂ ಅಭಿವೃದ್ಧಿಯ ಒತ್ತಡ ಅದೆಷ್ಟೆಂದರೆ ಎಲ್ಲ ಸಾತ್ವಿಕ ಅಡೆತಡೆಗಳನ್ನೂ ಕಡೆಗಣಿಸಿ, ಯಂತ್ರಗಳ ಸಂತೆ ನೆರೆದಿದೆ.

ಉದಾಹರಣೆಗೆ: ಗಂಗಾ ಮತ್ತು ಅದರ ಉಪನದಿಗಳುದ್ದಕ್ಕೂ 69 ಅಣೆಕಟ್ಟುಗಳನ್ನು ಕಟ್ಟಿ 9,000 ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಯೋಜನೆಗೆ ಪ್ರತಿರೋಧ ಬಂದಾಗ ಬಿ.ಕೆ. ಅಗರ್ವಾಲ್ ಆಯೋಗ ನೇಮಕವಾಯಿತು. ರೂರ್ಕಿ ಎಂಜಿನಿಯರ್‌ಗಳು ಕೂತಲ್ಲೇ ಭೂಸ್ಖಲನದ ಅಂಕಿ ಅಂಶಗಳನ್ನೇ ತಿದ್ದಿ ಹೊಸ ಪ್ರಸ್ತಾವವನ್ನು ಮಂಡಿಸಿದ್ದರು. 'ಆಯೋಗದ ಸದಸ್ಯೆಯಾಗಿ ನಾನು ಈ ಹುನ್ನಾರವನ್ನು ಎತ್ತಿ ತೋರಿಸಿದೆ; ಆದರೂ ಯೋಜನೆ ಜಾರಿಗೆ ಬಂತು' ಎನ್ನುತ್ತಾರೆ, ದಿಲ್ಲಿಯ ವಿಜ್ಞಾನ ಮತ್ತು ಪರಿಸರ ಕೇಂದ್ರದ ಮುಖ್ಯಸ್ಥೆ ಸುನೀತಾ ನರೇನ್. 'ನಿಸರ್ಗವನ್ನು ಹೇಗೆ ಬೇಕಾದರೂ ತಿದ್ದಬಲ್ಲೆವೆಂಬ ಎಂಜಿನಿಯರ್‌ಗಳ ಧಿಮಾಕು ಇದೆಲ್ಲವನ್ನೂ ಮಾಡಿಸುತ್ತಿದೆ' ಎಂದು ಅವರು ಹೇಳುತ್ತಾರೆ. ಅಲ್ಲಿನ ಎಳೆನದಿಗಳ ಮೇಲೆ ಬಲಾತ್ಕಾರ ಬೇಡವೆಂದು ಒತ್ತಾಯಿಸಿ 86ರ ವೃದ್ಧ ಸಂತ (ಪೂರ್ವಾಶ್ರಮದಲ್ಲಿ ನೀರಾವರಿ ಎಂಜಿನಿಯರ್ ಆಗಿದ್ದ) ಸಾನಂದ ಸ್ವಾಮೀಜಿ 111 ದಿನ ಉಪವಾಸವಿದ್ದು ಜೀವ ಬಿಟ್ಟದ್ದೂ ವ್ಯರ್ಥವಾಗಿದೆ.

ಚಿಕ್ಕಚಿಕ್ಕ ಸುಸ್ಥಿರ ಯೋಜನೆಗಳ ಮೂಲಕ ಈಗಲೂ ಅಲ್ಲಿನ ಸ್ಥಳೀಯರಿಗೆ ನೀರು, ವಿದ್ಯುತ್ ಮತ್ತು ಸಂಪರ್ಕ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಿದೆ. 'ಅದರಲ್ಲಿ ಲೂಟಿಕೋರರಿಗೆ ಏನೂ ಸಿಗುವುದಿಲ್ಲ. ಈಗ ಇಡೀ ಹಿಮಾಲಯವೇ ಪವರ್ ಮಾಫಿಯಾ ಕೈಯಲ್ಲಿ ನಲುಗುತ್ತಿದೆ' ಎಂದು (ಹಿಂದೆ ಇಂಥ ಬೃಹತ್ ಯೋಜನೆಗಳಿಗೆ ಅಡ್ಡಗಾಲು ಹಾಕಿ ಸಚಿವ ಸ್ಥಾನವನ್ನು ಕಳೆದುಕೊಂಡ) ಉಮಾ ಭಾರತಿ ಹೇಳುತ್ತಾರೆ. 'ಭಾರತದ ನಿಸರ್ಗವೇ ಗುತ್ತಿಗೆದಾರರ, ಅಧಿಕಾರಿಗಳ ಮತ್ತು ರಾಜಕಾರಣಿಗಳ ಉಕ್ಕಿನ ತ್ರಿಕೋನದಲ್ಲಿ ಸಿಲುಕಿದೆ' ಎಂದು ಪ್ರೊ. ಮಾಧವ್ ಗಾಡ್ಗೀಳ್ ಹಿಂದೆ ಹೇಳಿದ್ದು ನಮಗಿಲ್ಲಿ ನೆನಪಾಗಬೇಕು. ಈ ಶಕ್ತಿಗಳೇ ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರದಲ್ಲಿ ಗೀರೆಳೆದೆಳೆದು ಹೆದ್ದಾರಿ, ಸುರಂಗ, ಗೋಪುರ, ಕಾಲುವೆ, ರೋಪ್‌ವೇಗಳನ್ನು ನಿರ್ಮಿಸುತ್ತಿವೆ. ಅಭಿವೃದ್ಧಿಯ ಈ ಮಾಯಾಜಾಲದ ನೇಯ್ಗೆಯಲ್ಲಿ ನಮ್ಮ ಪಾಲೂ ಇದೆ. ಹಿಮಾಲಯದ ಬೃಹತ್ ಯೋಜನೆಗೆ ಎಲ್‌ಐಸಿ ಮತ್ತು ಹತ್ತಾರು ರಾಷ್ಟ್ರೀಯ ಬ್ಯಾಂಕ್‌ಗಳು ಹಣ ಹೂಡಿವೆ. ಅಂದರೆ, ನಮ್ಮನಿಮ್ಮ ಉಳಿತಾಯದ ಹಣವೂ ಇದರಲ್ಲಿ ಹೂಡಿಕೆ ಆಗಿರುವುದರಿಂದ ನಾವೂ ವಿಧ್ವಂಸಕ ಎಂಜಿನಿಯರಿಂಗ್ ಸಾಹಸಗಳಲ್ಲಿ ಭಾಗಿಗಳಾಗಿದ್ದೇವೆ.

ಹಿಮಾಲಯವನ್ನು ದೇವಭೂಮಿ ಎಂತಲೇ ಹಿಂದಿನವರು ಪರಿಗಣಿಸಿದ್ದರು. ಸತ್ಯದ ಅನ್ವೇಷಣೆಗೆಂದು ಅಧ್ಯಾತ್ಮ ಚಿಂತಕರು, ಯೋಗಿಗಳು ಮಾತ್ರ ಹೋಗುತ್ತಿದ್ದ ತಾಣ ಅದಾಗಿತ್ತು. ನದಿಮೂಲಗಳ ಪಾವಿತ್ರ್ಯ ರಕ್ಷಣೆಗೆಂದು ದೇಗುಲಗಳನ್ನು, ತಪೋವನಗಳನ್ನು ಅಲ್ಲಲ್ಲಿ ಸ್ಥಾಪಿಸಿದ್ದರು. ಈಗ ದೇಶವಿದೇಶಗಳ ವಿಜ್ಞಾನಿಗಳೂ ಆಚಿನ ಲೋಕದ ಸತ್ಯಾನ್ವೇಷಣೆಗೆಂದು ಅಲ್ಲಿಗೆ ಹೋಗುತ್ತಿದ್ದಾರೆ. ನೈನಿತಾಲ್‌ನಲ್ಲಿ ಅಂತರರಾಷ್ಟ್ರೀಯ ದ್ರವದೂರದರ್ಶಕ ಸ್ಥಾಪನೆಯಾಗಿದೆ. ಲಡಾಖ್‌ನ ಹಾನ್ಲೆ ಎಂಬಲ್ಲಿ ನಕ್ಷತ್ರ ವೀಕ್ಷಣೆಗೆಂದೇ ಅಪರೂಪದ ಸ್ಟಾರ್‌ಪಾರ್ಕ್ ಸೃಷ್ಟಿಯಾಗಿದೆ. ಹಿಮಶಿಖರಗಳಲ್ಲಿ ಅಂಥ ಶೋಧಕ್ಕಷ್ಟೇ ಆಧುನಿಕ ವಿಜ್ಞಾನ ಸೀಮಿತವಾಗಿದ್ದರೆ ಸಾಕಿತ್ತು. ಆದರೆ ಯೋಗಿಗಳ ಬದಲು ಭೋಗಿಗಳು ಧಾವಿಸುತ್ತಾರೆ. ಅವರ ವಾಹನಗಳ ವೇಗ ಹೆಚ್ಚಿಸಲೆಂದು ಹೆದ್ದಾರಿ ವಿಸ್ತರಣೆ ಮಾಡಿ, ಧುಮುಕುವ ಎಳೆನದಿಗಳ ವೇಗ ಕಡಿಮೆ ಮಾಡಿ, ಸುರಂಗಗಳಲ್ಲಿ ನುಗ್ಗಿಸಲಾಗುತ್ತಿದೆ. ನಿಸರ್ಗ ಪ್ರಕೋಪಕ್ಕೆ ತಾಳಮೇಳ ಎಂಬಂತೆ ತಾಂತ್ರಿಕ ತಾಂಡವ ನಡೆದಿದೆ.



ಚುರುಮುರಿ



ಹಾವೇರಿ– ಕಾವೇರಿ

• ನಾರಾಯಣ ರಾಯಚೂರ್

'ಹಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್' ಮೊಮ್ಮಗ ಅಕ್ಷರ, ಹೇಳ್ಕೊತಾಯಿದ್ದ. 'ಹಾವೇರಿಯಿಂದ ಅಲ್ವೋ, ಕಾವೇರಿಯಿಂದ...'

'ಇರಲಿ ಬಿಡ್ರೀ... ಮಗು ಅಷ್ಟಾರೂ ಹೇಳುತ್ತೆ. ಈಗಿನ ಮಕ್ಕಳಂತೆ ಟಸ್ಸು ಪುಸ್ಸು ಅಂತ ಇಂಗ್ಲಿಷಲ್ಲಿ ಲಂಡನ್ ಬ್ರಿಜ್ ಈಸ್ ಫಾಲಿಂಗ್ ಡೌನ್' ಅಂತಲೋ ರೈನ್, ರೈನ್ ಗೋ ಅವೇ ಅಂತಲೋ ಅಪದ್ಧ ಅಪದ್ಧವಾಗಿ ಹೇಳಿಲ್ಲವಲ್ಲ?!' ಮುದ್ದಿನ ಅಜ್ಜಿಯ ವಕಾಲತ್ತು.

'ಅದೇನೊ ಸರಿ, ನಮ್ಮಂತಹ ಹಿರೀಕರು ಎಚ್ಚರ ವಹಿಸಿದ್ದರಿಂದ ಇಷ್ಟಾದರೂ ಕನ್ನಡ ಉಳ್ದು, 86ನೇ ಸಾಹಿತ್ಯ ಸಮ್ಮೇಳನದವರೆಗೂ ಬರೋಕೆ ಆಗಿದೆ. ಇಲ್ಲಾಂದ್ರೆ ನಲವತ್ತೆಂಟೋ ಐವತ್ತಕ್ಕೋ ನಿಂತುಬಿಡುತ್ತಿತ್ತೇನೋ!'

'ಮಧ್ಯದಲ್ಲಿ ನಾಲ್ಕೈದು ಪರ್ಯಾಯ ಸಮ್ಮೇಳನಗಳೂ ಸೇರಿ ತೊಂಬತ್ತೇ ಅಂದುಕೊಳ್ಳಿ'.

'ಹ್ಞಾಂ, ಹೌದು, ಈಗಲೂ ಒಂದು ಆಯ್ತಲ್ವಾ! ಅಲ್ಲಿಗೆ ಅಕ್ಷರ ಹೇಳಿದ್ದು ಸರಿ-ಅದು ಹಾವೇರಿ ಸಮ್ಮೇಳನ, ಇದು ಕಾವೇರಿ ಸಮ್ಮೇಳನ... ಅದು ಜನ-ಜನಿತ ಸಮ್ಮೇಳನ, ಇದು ಜನ-ಸಾಹಿತ್ಯ ಸಮ್ಮೇಳನ'.

'ಆದರೆ ಏನ್ರೀ? ಇಷ್ಟು ವರ್ಷದಿಂದ ಗಡಿ ಸಮಸ್ಯೆ, ಉದ್ಯೋಗ, ಭಾಷಾಭಿವೃದ್ಧಿ-ಸುಗ್ರೀವಾಜ್ಞೆ, ಹಿಂದಿ ಹೇರಿಕೆ ಅಂತ ಎಷ್ಟು ವರ್ಷ ಪೇಚಾಡೋದು?'

'ಸಮ್ಮೇಳನ ಮಾಡಿಬಿಟ್ಟರೆ ಸಮಸ್ಯೆ ಮಾಯ ಅಂತ ಏನಿಲ್ಲಮ್ಮಾ, ಹಾಗಾಗಿದ್ರೆ ಎಂದೋ ಈ ನಾಡು ಪರಮಶಾಂತಿ, ನೆಮ್ಮದಿಯಿಂದ ನಲಿದಾಡಿಬಿಡ್ತಿತ್ತು. ಕಾಲಕಾಲಕ್ಕೆ ಈ ತರಹ ಮೇಳ, ಜಾತ್ರೆ ಮಾಡೋದ್ರಿಂದ ಕನ್ನಡದ ಹೆಮ್ಮೆ, ಪುಸ್ತಕ ಮಾರಾಟ, ಕನ್ನಡಿಗರ ಸಮ್ಮಿಲನ ಹಾಗೇ ಗಡಿ ಪುಂಡಾಟಿಕೆ ಮಾಡೋರಿಗೆ ಒಂದಷ್ಟು ಎಚ್ಚರಿಕೆ-ಇಷ್ಟು ಸಾಕಲ್ಲವೇ?!'

'ಹೋ... ಅದಕ್ಕೇ ಈ ಸಮ್ಮೇಳನಗಳಿಗೆ ಡಿಮ್ಯಾಂಡೋ?! ನಮ್ಮ ಜಿಲ್ಲೆಗೇ ಬೇಕೂಂತ ಚಿನ್ನದ ಕಾಯಿನ್ ಆಮಿಷಾನೂ ಒಡ್ಡಿದ್ರಂತಲ್ಲಾ'.

'ನಿನ್ನ ಗಮನಕ್ಕೂ ಬಂತಾ ಅದು! ಏನ್ಮಾಡ್ತೀಯ ಹೇಳು? ಮೌಲ್ಯಗಳು ಕುಸಿತಾಯಿವೆ, ಬೆಲೆಗಳು ಏರ್ತಾಯಿವೆ'.

'ಅದೇರೀ... ಅದು ಉಲ್ಟಾ ಆಗಬೇಕು, ಆಗ ಮಾತ್ರ ನಾಡು, ದೇಶ ಉದ್ಧಾರ ಆಗೋದು'.

ಸಂಗತ

ವಿವೇಕಾನಂದ: ಕರುಣೆ, ಪ್ರಜ್ಞೆಯ ಮೂರ್ತಿ

ವಿವೇಕಾನಂದರು ಎರಡು ಆಯಾಮಗಳಲ್ಲಿ ನಮ್ಮ ಪರಂಪರೆಯ ರಕ್ಷಕರಾದರು. ಈ ಎರಡು ದಾರಿಗಳೂ ನಮಗೆ ಇಂದು ಬೆಳಕಾಗಿ ಒದಗುತ್ತವೆ

• ಎಸ್. ಸೂರ್ಯಪ್ರಕಾಶ ಪಂಡಿತ್

ಭಾರತೀಯ ಆಧ್ಯಾತ್ಮಿಕ ಪರಂಪರೆಯ ವೈಶಿಷ್ಟ್ಯ ಎಂದರೆ ಪರಿಷ್ಕಾರಬುದ್ಧಿ. ವೇದಗಳ ಕಾಲದಿಂದ ಮೊದಲ್ಗೊಂಡು ಇಲ್ಲಿಯತನಕ ಈ ಪರಿಷ್ಕರಣೆಯ ಸ್ರೋತ ಹರಿದುಬಂದಿದೆ. ಈ ಪರಂಪರೆಯ ಹರಿವಿಗೆ ಕಾರಣವೆಂದರೆ, ಆಯಾ ಕಾಲದಲ್ಲಿ ತೋರಿಕೊಂಡ ಮಹಾವಿಭೂತಿಗಳೇ ಹೌದು. ಭಗವಾನ್ ಬುದ್ಧ, ಶಬರಸ್ವಾಮಿ, ಆಚಾರ್ಯ ಶಂಕರ, ಅಭಿನವಗುಪ್ತ, ಬಸವ, ಅಲ್ಲಮ ಅವರಂತಹ ಪೂರ್ವಸೂರಿಗಳಲ್ಲದೆ, ನಮ್ಮ ಕಾಲಕ್ಕೆ ತುಂಬ ಹತ್ತಿರದವರಾದ ಸಿದ್ಧೇಶ್ವರ ಶ್ರೀಗಳತನಕ ಈ ಪರಿಷ್ಕಾರಪರ್ವ ಕೊನೆಯಿಲ್ಲದೆ ಮುಂದುವರಿದಿದೆ. ಹೀಗೆ ಆಧುನಿಕ ಭಾರತದಲ್ಲಿ ಈ ದಾರಿಯಲ್ಲಿ ಕಾಣಿಸಿಕೊಂಡ ಮಹಾಪುರುಷರು ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಅವರ ಶಿಷ್ಯ ಸ್ವಾಮಿ ವಿವೇಕಾನಂದ. ಗುರುಗಳು ಮೂಲಮೂರ್ತಿಯಾಗಿ ಕಂಗೊಳಿಸಿದರೆ, ಉತ್ಸವಮೂರ್ತಿಯಾಗಿ ಸಂಚರಿಸಿದ ಶಿಷ್ಯ, ಇಡಿಯ ಜಗತ್ತಿಗೆ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಕಾಂತಿಯನ್ನು ಪಸರಿಸಿದರು.

ಸಾವಿರಾರು ವರ್ಷಗಳ ಇತಿಹಾಸವಿರುವ ಭಾರತೀಯ ಆಧ್ಯಾತ್ಮಿಕತೆಗೇ ತಾರುಣ್ಯ ತುಂಬಿ ಹೊಸ ಜೀವಕಳೆಯನ್ನು ಒದಗಿಸಿದವರು ಸ್ವಾಮಿ ವಿವೇಕಾನಂದ. ಯೌವನವೇ ನಮ್ಮ ಜೀವನದ ಅತ್ಯಂತ ಕ್ರಿಯಾಶೀಲ ಹಂತವಲ್ಲವೆ? ವಿವೇಕಾನಂದರ ಜೀವನ–ದರ್ಶನಗಳಿಗೂ ನಮ್ಮ ತಾರುಣ್ಯಕ್ಕೂ ಸಮಾಜದ ಕ್ರಿಯಾಶೀಲತೆಗೂ ನೇರ ಸಂಬಂಧವನ್ನು ಕಾಣಬಹುದು. ಹೀಗಾಗಿ ಅವರು ಪ್ರತಿಪಾದಿಸಿದ ವೇದಾಂತವನ್ನು 'ಅನುಷ್ಠಾನ ವೇದಾಂತ' ಎಂದು ಕರೆಯುವುದೇ ಸರಿ. 'ಸಾಧಾರಣ ಸನ್ಯಾಸಿಯು ಪ್ರಪಂಚದಿಂದ ಬಿಡುಗಡೆ ಬಯಸುತ್ತಾನೆ. ಆದರೆ ನಿಜವಾದ ಸನ್ಯಾಸಿಯು ಪ್ರಪಂಚದಲ್ಲಿಯೇ ಇರುತ್ತಾನೆ, ಆದರೆ ಅದಕ್ಕೆ ಅಂಟಿಕೊಂಡಿರುವುದಿಲ್ಲ. ಮುಕ್ತಿಯನ್ನು ಬಯಸಿ ಕಾಡಿನಲ್ಲಿ ಬದುಕುವುದು ನಿಜವಾದ ಸನ್ಯಾಸ ಅಲ್ಲ. ಜೀವನಸಂಗ್ರಾಮದ ನಡುವೆ ಬದುಕಬೇಕು. ಗುಹೆಯಲ್ಲೋ ನಿದ್ರೆಯಲ್ಲೋ ಯಾರು ಬೇಕಾದರೂ ಪ್ರಶಾಂತವಾಗಿರಬಹುದು. ಆದರೆ ಪ್ರಪಂಚದ ಸುಳಿಯಲ್ಲಿ ಸಿಕ್ಕಿಯೂ ಕೇಂದ್ರವನ್ನು ಮುಟ್ಟುವುದು ನಿಜವಾದ ಸಾಧನೆ' ಎಂದ ವಿವೇಕಾನಂದರು ಸನ್ಯಾಸದ ವ್ಯಾಪ್ತಿಯನ್ನು ಹಿಗ್ಗಿಸಿದರು.

ಎಲ್ಲ ಬಂಧನಗಳನ್ನೂ ಕಳಚಿಕೊಂಡ ಸನ್ಯಾಸಿಗೂ ಅವರು ಕರ್ತವ್ಯಗಳನ್ನು ಸೂಚಿಸಿದ್ದು ಗಮನಾರ್ಹ. ಇದು ಮೇಲ್ನೋಟಕ್ಕೆ ಬಂಡಾಯ ಎಂದು ಕಂಡೀತು. ಆದರೆ ಅವರು ಮಾಡಿದ್ದು ಪರಂಪರೆಯ ಪರಿಷ್ಕರಣೆಯಷ್ಟೆ. ಭಾರತೀಯ ಆಧ್ಯಾತ್ಮಿಕತೆಯಲ್ಲಿ ಜೀವನ್ಮುಕ್ತಿಯ ಕಲ್ಪನೆಯುಂಟು. ಅವರು ಆ ವಿವರವನ್ನೇ ನಮ್ಮ ಕಾಲಕ್ಕೂ ಅನ್ವಯಿಸಿದರಷ್ಟೆ. ಇಲ್ಲಿ ಇನ್ನೂ ಒಂದು ಸ್ವಾರಸ್ಯವುಂಟು. ಅವರಿಗೆ ಈ ವಿಸ್ತರಣಕಾರ್ಯದಲ್ಲಿ ತಮ್ಮ ಗುರುಗಳ ದರ್ಶನಸೂತ್ರವೂ ಒದಗಿ ಬಂದಿರಬಹುದು. 'ಕಣ್ಣನ್ನು ಮುಚ್ಚಿ ಎಲ್ಲರೂ ಧ್ಯಾನ ಮಾಡುತ್ತಾರೆ. ಆದರೆ ಕಣ್ಣುಗಳನ್ನು ತೆರೆದಿಟ್ಟುಕೊಂಡು ಧ್ಯಾನ ಮಾಡುವುದು ವಿಶೇಷ' ಎಂದ ಶ್ರೀ ರಾಮಕೃಷ್ಣ ಪರಮಹಂಸರ ಕಾಣ್ಕೆಯಲ್ಲಿ ವಿವೇಕಾನಂದರು ಲೋಕಕಾರುಣ್ಯದ ಕರ್ತವ್ಯವನ್ನು ಕಂಡರು. 'ಹಸಿದಿರುವವನಿಗೆ ಬೇಕಾಗಿರುವುದು ಅಧ್ಯಾತ್ಮದ ಪಾಠವಲ್ಲ, ಅನ್ನ' ಎಂಬ ಘೋಷಣೆಯಲ್ಲಿ ನಾವು ಕಾಣುವುದು ಅಂದು ಬುದ್ಧನಲ್ಲಿ ಕಾಣಿಸಿದ ಕಾರುಣ್ಯವೇ ಹೌದು.

ಭಾರತೀಯ ಆಧ್ಯಾತ್ಮಿಕತೆಗೆ ಎರಡು ಆಯಾಮಗಳು: ಒಂದು ಕರುಣೆ, ಇನ್ನೊಂದು ಪ್ರಜ್ಞೆ. ನಾವು ವಿಷಯದ ಸ್ಪಷ್ಟತೆಗೆ ಉದಾಹರಣೆಗಳಾಗಿ ಬುದ್ಧನನ್ನು ಕರುಣೆಗೂ ಶಂಕರರನ್ನು ಪ್ರಜ್ಞೆಗೂ ಸಂಕೇತಗಳಾಗಿ ನೋಡಬಹುದು. ವಿವೇಕಾನಂದರು ಕರುಣೆ ಮತ್ತು ಪ್ರಜ್ಞೆ– ಇವೆರಡರ ಮೂರ್ತರೂಪವಾಗಿ ನಮಗೆ ಒದಗುತ್ತಾರೆ. ಅವರ ಕಾರುಣ್ಯಕ್ಕೊಂದು ನಿದರ್ಶನವನ್ನು ನೋಡಿದೆವು. ಅವರ ಪ್ರಜ್ಞೆಗೆ ನಿದರ್ಶನವಾಗಿ ಜೀವನ–ದರ್ಶನಗಳೇ ನಮ್ಮ ಮುಂದಿವೆ. ಪ್ರಜ್ಞೆಯ ಕ್ರಿಯಾರೂಪವೆನಿಸಿರುವ ಜ್ಞಾನವನ್ನು ಅವರು ಶಾಸ್ತ್ರಗಳ ಪರಿಷ್ಕರಣೆಯಲ್ಲಿ ತೊಡಗಿಸಲಿಲ್ಲ. ಆದರೆ ಇಡಿಯ ಜೀವನದ ಪರಿಭಾಷೆಯನ್ನೇ ಪರಿಷ್ಕಾರ ಮಾಡಿ, ನಮ್ಮ ಕಾಲಕ್ಕೆ ಅದನ್ನು ಅನ್ವಯಗೊಳಿಸಿ, 'ಮಾನುಷಕೇಂದ್ರಿತ ಅಧ್ಯಾತ್ಮಶಾಸ್ತ್ರ'ವನ್ನು ಸಿದ್ಧಗೊಳಿಸಿದರು.



ಸ್ವಾಮಿ ವಿವೇಕಾನಂದರು ನಮ್ಮ ಕಾಲಕ್ಕೆ ಹೇಗೆ ಒದಗುತ್ತಾರೆ? ಅವರು ಎರಡು ಆಯಾಮಗಳಲ್ಲಿ ನಮ್ಮ ಪರಂಪರೆಯ ರಕ್ಷಕರಾದರು. ಈ ಎರಡು ದಾರಿಗಳೂ ನಮಗೆ ಇಂದು ಬೆಳಕಾಗಿ ಒದಗುತ್ತವೆ. ಅವರು ಪರಂಪರೆಯ ಒಳಗೇ ನಿಂತು, ಅದರ ಕಳೆಯನ್ನೂ ಕಲ್ಮಶಗಳನ್ನೂ ಸ್ವಚ್ಛಗೊಳಿಸಲು ತೊಡಗಿದರು. ನಮ್ಮ ಪರಂಪರೆಯ ಮೇಲೆ ನಡೆದ ಬಾಲಿಶ ದಾಳಿಗಳ ವಿರುದ್ಧವೂ ದನಿ ಎತ್ತಿದರು. ಈ ಎರಡು ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಡಿಯ ವಿಶ್ವದ ಮೂಲತತ್ವದ ಏಕತ್ವವನ್ನು ಎತ್ತಿಹಿಡಿದರು. ಈ ಏಕತ್ವದ ಸಾಕ್ಷಾತ್ಕಾರಕ್ಕಾಗಿ ಭಕ್ತಿ, ಜ್ಞಾನ, ಕರ್ಮ– ಹೀಗೆ ಹಲವು ದಾರಿಗಳನ್ನು ಕಾಣಿಸಿದರು; ಅಲ್ಲಿ ಎದುರಾಗಬಹುದಾದ ಅಪಾಯಗಳ ಬಗ್ಗೆಯೂ ಎಚ್ಚರಿಸಿದರು. ಇಲ್ಲೊಂದು ಉದಾಹರಣೆಯನ್ನು ನೋಡಬಹುದು. ದೈವತ್ವದ ಸಾಕ್ಷಾತ್ಕಾರಕ್ಕೆ ಭಕ್ತಿ ಅತ್ಯಂತ ಸುಲಭದ ದಾರಿ ಎಂದರು. ಆದರೆ ಈ ಭಕ್ತಿಯೇ 'ನನ್ನ ದೇವರೇ ಶ್ರೇಷ್ಠ, ನಿನ್ನ ದೇವರು ನೀಚ' ಎಂಬ ಉನ್ಮಾದಕ್ಕೆ ಅವಕಾಶ ಒದಗಿಸಿ, ಅದು ಅಸಹ್ಯಕರ ಮತಾಂಧತೆಗೂ ಕಾರಣವಾಗಬಲ್ಲದು. ಎಲ್ಲ ಧರ್ಮಗಳ ಅಪ್ರಬುದ್ಧರಿಂದ ಇಂಥ 'ದ್ವೇಷಭಕ್ತಿ' ಹುಟ್ಟಿಕೊಳ್ಳುತ್ತದೆ ಎಂದು ಎಚ್ಚರಿಸಿದರು. ಇಂಥ ಎಚ್ಚರಿಕೆಯೇ ಸ್ವಾಮಿ ವಿವೇಕಾನಂದರನ್ನು ನಮ್ಮ ಕಾಲಕ್ಕೂ ಪ್ರಸ್ತುತರನ್ನಾಗಿಸುವುದೆನ್ನಿ!

ಸ್ವಾಮಿ ವಿವೇಕಾನಂದರ ಜೀವನವನ್ನು ನಾವು ಸೂಕ್ಷ್ಮವಾಗಿ ಅವಲೋಕನ ಮಾಡಿದರೆ, ಅವರದ್ದು ಅವಧೂತಪ್ರಜ್ಞೆ ಎಂಬುದು ಸ್ಪಷ್ಟವಾಗುತ್ತದೆ. ಅವಧೂತನ ಕಾರುಣ್ಯವನ್ನಾಗಲೀ ಪ್ರಜ್ಞೆಯನ್ನಾಗಲೀ ನಮ್ಮ ಬೌದ್ಧಿಕ ಮಾನದಂಡಗಳಿಂದ ಅಳೆಯಲಾಗದಷ್ಟೆ.

ಇಂದು (ಜ. 12) ವಿವೇಕಾನಂದರ ಜನ್ಮದಿನ.

ವಾಚಕರ ವಾಣಿ

ನೈತಿಕ ಮೌಲ್ಯ ಅಳವಡಿಕೆಗೆ ಸಿದ್ಧರಿದ್ದಾರೆಯೇ?

ಪಠ್ಯಪುಸ್ತಕಗಳ ಮೂಲಕ ಮಕ್ಕಳಿಗೆ ನೈತಿಕ ಶಿಕ್ಷಣ ಬೋಧಿಸಲು ಹೊರಟಿರುವ ಅಧಿಕಾರಸ್ಥರು, ಮೊದಲು ಜನಪ್ರತಿನಿಧಿಗಳು ಮತ್ತು ಸರ್ಕಾರದ ಪಾಲುದಾರರು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಿದ್ಧರಿದ್ದಾರೆಯೇ ಎಂದು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳಬೇಕಿದೆ. ಇಂದಿನ ಜನಪ್ರತಿನಿಧಿಗಳು ದ್ವೇಷ, ಅಸೂಯೆ ಹುಟ್ಟಿಸುವಂತಹ ಮಾತುಗಳನ್ನೇ ಹೆಚ್ಚಾಗಿ ಆಡುತ್ತಾರೆ. ಅಂತಹ ನಾಯಕರಿಗೆ ನೈತಿಕ ಶಿಕ್ಷಣದ ತುರ್ತು ಅಗತ್ಯವಿದೆ. ಎಲ್ಲ ಜನಾಂಗದ ಶಾಂತಿಯ ತೋಟದಂತಿರುವ ಕರ್ನಾಟಕದಲ್ಲಿ ಸರ್ಕಾರ ಮತ್ತು ನಮ್ಮ ನಾಯಕರು ಇನ್ನೇನಾದರೂ ಪರಿವರ್ತನೆ ಬಯಸಿದ್ದರೆ, ತಾವು ಮೊದಲು ದ್ವೇಷಪೂರಿತ ಮಾತು ಆಡುವುದನ್ನು ಬಿಡಬೇಕು. ಪ್ರತಿಯೊಬ್ಬರೂ ಸಮಾಜದಲ್ಲಿ ಪರಸ್ಪರ ಗೌರವಿಸುವುದನ್ನು ಕಲಿತಾಗ ಮಾತ್ರ ನೆಮ್ಮದಿ ಕಾಣಲು ಸಾಧ್ಯ. **ಬಸವರಾಜ ನರಗಟ್ಟಿ,** ಬೆಳಗಾವಿ

ಪ್ರಯೋಜನವಾಗದ 'ಬಾಯಿಲ್ಡ್ ರೈಸ್'!

ಶಾಲೆಗಳಲ್ಲಿ ಮಕ್ಕಳಿಗೆ ಸಾತ್ವಿಕ ಆಹಾರ ನೀಡಬೇಕೆಂದು ಕೆಲವು ಮಠಾಧೀಶರು ಸರ್ಕಾರಕ್ಕೆ ಸಲಹೆ ನೀಡಿರುವುದೇನೋ ಸರಿ. ಆದರೆ ಅದಕ್ಕೆ ಮುನ್ನ ಆಯಾ ಪ್ರದೇಶದ ಆಹಾರಶೈಲಿಯನ್ನು ಗಮನಿಸಿ ಅದಕ್ಕೆ ತಕ್ಕಂತೆ ಆಹಾರ ನೀಡುವುದು ಉತ್ತಮ. ಕರಾವಳಿ ಭಾಗದಲ್ಲಿ ಕುಚಲಕ್ಕಿ (ಬಾಯಿಲ್ಡ್ ರೈಸ್) ತಿನ್ನುವವರೇ ಹೆಚ್ಚು. ಆದರೂ ಅಲ್ಲಿನ ಶಾಲೆಗಳಲ್ಲಿ, ರೇಷನ್ ಅಂಗಡಿಗಳಲ್ಲಿ ಅದರ ಬದಲಾಗಿ ಬಿಳಿಅಕ್ಕಿಯನ್ನು ನೀಡಲಾಗುತ್ತದೆ. ಈ ಕುರಿತು 'ಬಾಯಿಲ್ಡ್ ರೈಸ್' ಎಂಬ ತುಳು ಕಿರುಚಿತ್ರದ ಮೂಲಕ ಸರ್ಕಾರದ ಗಮನಸೆಳೆದಿದ್ದರೂ ಪ್ರಯೋಜನವಾಗದಿರುವುದು ಬೇಸರದ ಸಂಗತಿ. ಸರ್ಕಾರ ಈಗಲಾದರೂ ಈ ಭಾಗದ ಮಕ್ಕಳ ಆಹಾರಶೈಲಿಗೆ ತಕ್ಕಂತೆ ಸ್ಪಂದಿಸಲಿ.

ಪ್ರದೀಪ್ ಶಾಕ್ಯ, ಬೆಳ್ತಂಗಡಿ

ಅರಣ್ಯ ಇಲಾಖೆಗೆ ಬೇಕು ಆಧುನಿಕ ತಂತ್ರಜ್ಞಾನ

ಯಾದಗಿರಿ ಅರಣ್ಯ ಪ್ರದೇಶದಲ್ಲಿ ದಿನಗೂಲಿ ನೌಕರರೊಬ್ಬರು ಬೆಂಕಿಗೆ ಆಹುತಿಯಾಗಿರುವುದು ದುರದೃಷ್ಟಕರ. ತಂತ್ರಜ್ಞಾನ ಅಳವಡಿಕೆಯಲ್ಲಿ ಕೆಲವು ಇಲಾಖೆಗಳು ಚುರುಕಾಗಿವೆ. ಆದರೆ ಅರಣ್ಯ ಸಂರಕ್ಷಣೆಗೆ ತಂತ್ರಜ್ಞಾನ ಬಳಸುವ ವಿಷಯದಲ್ಲಿ ರಾಜ್ಯ ಅರಣ್ಯ ಇಲಾಖೆ ಮಾತ್ರ ಬಹಳ ಹಿಂದಿದೆ. ಈಗಲೂ ಸೊಪ್ಪು ಸದೆಗಳನ್ನು ಬಳಸಿ ಅರಣ್ಯದಲ್ಲಿನ ಬೆಂಕಿ ನಂದಿಸುವ ಸಾಂಪ್ರದಾಯಿಕ ಪದ್ಧತಿಗೆ ಜೋತು ಬೀಳಲಾಗಿದೆ. ಇದರಿಂದ ಅನಾಹುತ ತಪ್ಪಿದ್ದಲ್ಲ.

ಅರಣ್ಯದಲ್ಲಿನ ಅಪಾರ ಸಂಖ್ಯೆಯ ಮರಗಿಡಗಳು, ಪ್ರಾಣಿಪಕ್ಷಿಗಳು, ಹಲವಾರು ಚಿಕ್ಕಪುಟ್ಟ ಜೀವ ಪ್ರಭೇದಗಳು ಕೆಲವೇ ಕ್ಷಣಗಳಲ್ಲಿ ನಾಶವಾಗುವ ಸಂದರ್ಭಗಳಿರುತ್ತವೆ. ಬೆಂಕಿ ಬಿದ್ದಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಿಬ್ಬಂದಿಗೆ ಸೂಕ್ತ ತರಬೇತಿ ಇಲ್ಲದಿದ್ದಾಗಲೂ ದುರ್ಘಟನೆಗಳು ಘಟಿಸುತ್ತವೆ. ಹಿರಿಯ ಅಧಿಕಾರಿಗಳು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಯನ್ನು ನಿಯೋಜಿಸಿ, ಸೂಕ್ತ ನಿರ್ದೇಶನಗಳನ್ನು ಕೊಡಬೇಕು. ಬೆಂಕಿ ನಂದಿಸಲು ಆಧುನಿಕ ಸಲಕರಣೆಗಳನ್ನು ಪೂರೈಸಿ, ಅವುಗಳನ್ನು ಬಳಸುವ ಕೌಶಲ ತರಬೇತಿಯನ್ನು ನೀಡಬೇಕು. ಅಗ್ನಿಶಾಮಕ ಯಂತ್ರಗಳು ಕಾರ್ಯಾಚರಿಸಲಾಗದ ಸ್ಥಳಗಳಲ್ಲಿ ಹೆಲಿಕಾಪ್ಟರ್‌ಗಳನ್ನು ಉಪಯೋಗಿಸುವುದೊಳಿತು. ಹಾಗಾದಾಗ ನಮ್ಮ ಅಮೂಲ್ಯ ಕಾಡಿನ ಸಂಪತ್ತು, ಅದರೊಂದಿಗೆ ಹಸಿರು ಸೈನಿಕರು ಸುರಕ್ಷಿತವಾಗಿರುತ್ತಾರೆ. **ಶಂಕರಲಿಂಗ,** ವಿಜಯಪುರ

ಇದೆಯೇ ಹೇಳುವ ಧೈರ್ಯ?

'ಬಿ.ಎಸ್.ಯಡಿಯೂರಪ್ಪ ಆಗಲೀ ನಳಿನ್ ಕುಮಾರ್ ಕಟೀಲ್ ಆಗಲೀ ಬಿಜೆಪಿಗೆ ಯಾರೂ ಅನಿವಾರ್ಯವಲ್ಲ' ಎಂದು ಹೇಳಿದರು ಕಟೀಲ್. ಎಷ್ಟೊಂದು ಧೈರ್ಯ? ಹಾಗೆಯೇ 'ನರೇಂದ್ರ ಮೋದಿ ಆಗಲೀ ಅಮಿತ್ ಶಾ ಆಗಲೀ ಪಕ್ಷಕ್ಕೆ ಯಾರೂ ಅನಿವಾರ್ಯವಲ್ಲ' ಎಂದು ಹೇಳಲು ಇದೆಯೇ ಧೈರ್ಯ? ಮೇಲೇರುವುದಕ್ಕೆ ಮುಂಚೆ ಏಣಿ ಅನಿವಾರ್ಯ, ಏರಿದ ಮೇಲೇಕೆ ಬೇಕು ಏಣಿ ಅಲ್ಲವೇ ಕಟೀಲ್‌ಜೀ?

ಕೆ.ಎನ್.ಭಗವಾನ್, ಬೆಂಗಳೂರು

ಸಾಹಿತ್ಯ ಕೋಟಾದ ಎಂಎಲ್‌ಸಿ!

ನಾನು ಯಾವ ಪಕ್ಷದ ಎಂಎಲ್‌ಸಿಯೂ ಅಲ್ಲ, ಸಾಹಿತ್ಯ ಕೋಟಾದಲ್ಲಿ ಎಂಎಲ್‌ಸಿ ಆದವನು ಎಂಬ ಎಚ್.ವಿಶ್ವನಾಥ್ ಅವರ ಹೇಳಿಕೆ, ಸಾಹಿತ್ಯ ಮತ್ತು ಸಾಹಿತಿಗಳು ಕೂಡಿಯೇ ನಾಚುವಂತೆ ಇದೆ.

ವೆಂಕಟೇಶ ಮಾಚಕನೂರ, ಧಾರವಾಡ

ಮೆಟ್ರೊ ಪಿಲ್ಲರ್ ದುರಂತ: ಆಕಸ್ಮಿಕವಲ್ಲ, ಅನಾಹುತ

ಬೆಂಗಳೂರಿನಲ್ಲಿ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಅನಾಮತ್ತು ಉರುಳಿ ಎರಡು ಜೀವಗಳನ್ನು ಬಲಿ ತೆಗೆದುಕೊಂಡಿರುವುದು ಕೇವಲ ಆಕಸ್ಮಿಕ ಅಲ್ಲ, ಅನಾಹುತ. ಮೃತರ ಕುಟುಂಬಕ್ಕೆ ಸರ್ಕಾರ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಪರಿಹಾರ ಘೋಷಿಸಿರುವುದು, ಕಾಮಗಾರಿಯ ಉಸ್ತುವಾರಿ ವಹಿಸಿದ್ದ ಎಂಜಿನಿಯರ್‌ಗಳ ವಿರುದ್ಧ ತನಿಖೆಗೆ ಮುಖ್ಯಮಂತ್ರಿ ಆದೇಶಿಸಿರುವುದು ಸರಿಯಾದ ಕ್ರಮವೇನೋ ಹೌದು. ಅಪರಾಧ ಸಾಬೀತಾದವರು ಜೈಲಿಗೂ ಹೋಗಬಹುದು. ಇದರಿಂದ ಸಾರ್ವಜನಿಕರಿಗೆ ಏನು ನೆಮ್ಮದಿ? ನಾಳೆ ಇದರ ಹಿಂದಿನ ಕಂಬವೋ ಬೇರಿನ್ನಾವುದಾದರೂ ಕಡೆ ಇರುವ ನಿರ್ಮಾಣ ಹಂತದ ದೈತ್ಯ ರಚನೆಯೋ ವಾಹನನಿಬಿಡ ರಸ್ತೆಯ ಮೇಲೆ ಬೀಳುವುದಿಲ್ಲ ಎಂಬುದಕ್ಕೆ ಖಾತರಿಯೇನು?

ಅದರಲ್ಲೂ ಈಗಿನ ಪ್ರಕರಣದ ಪ್ರತ್ಯಕ್ಷದರ್ಶಿಗಳ ಮಾತಂತೂ, ಇಡೀ ಕಾಮಗಾರಿಯ ಅಡ್ಡಕಸಬಿತನವನ್ನು ಎತ್ತಿ ತೋರಿಸುವಂತಿದೆ. ಈಗಾಗಲೇ ಚಾಲನೆಯಲ್ಲಿರುವ ಮೆಟ್ರೊ ಮಾರ್ಗಗಳಲ್ಲಿ ಕಿಕ್ಕಿರಿದಿರುವ ಜೋಡಿ-ಜೋಡಿ ರೈಲುಗಳು ಏಕಕಾಲದಲ್ಲಿ ನಿಬಿಡ ರಸ್ತೆಗಳ ಮೇಲೇ ಸಮಾನಾಂತರವಾಗಿ ಹೋಗುತ್ತಿರುತ್ತವೆ. ರೈಲು, ರಸ್ತೆ, ಸೇತುವೆ ಎಂಜಿನಿಯರುಗಳಿಗೆ ಇರಬೇಕಾದಂತೆ, ನಗರ ಯೋಜಕರಿಗೂ ದೂರದೃಷ್ಟಿ ಮತ್ತು ಜನವಸತಿ ಪ್ರದೇಶದ ತಾಳಿಕೆ ಸಾಮರ್ಥ್ಯದ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇರುವುದು ಬೇಡವೇ? ಬೆಂಗಳೂರಿಗೆ ಸಂಬಂಧಪಟ್ಟಂತೆ ಅಂಥದೊಂದು ಜವಾಬ್ದಾರಿಯುತ ವ್ಯವಸ್ಥೆ ಇರುವಂತೆಯೇ ಭಾಸವಾಗುವುದಿಲ್ಲ. ಇಡೀ ರಾಜ್ಯದ ಎಲ್ಲ ಅಭಿವೃದ್ಧಿ ಕಾಮಗಾರಿಗಳೂ, ರಾಷ್ಟ್ರದ ಬಹುತೇಕ ಕಾರ್ಯಯೋಜನೆಗಳೂ ಬೆಂಗಳೂರು ನಗರದಲ್ಲೇ ಸಾಂದ್ರವಾಗಿರಬೇಕೆಂದು ಸರ್ಕಾರ ಭಾವಿಸಿರುವಂತಿದೆ.

ಆರ್.ಕೆ.ದಿವಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಸ್ಕರ್: ಅಕಾಡೆಮಿ ಅವಾರ್ಡ್ಸ್‌ಗೆ ಆಯ್ಕೆ ಹೇಗೆ?

ಭಾರತದ ಹಲವು ಸಿನಿಮಾ ಮತ್ತು ಸಾಕ್ಷ್ಯಚಿತ್ರಗಳು ಆಸ್ಕರ್ ಪ್ರಶಸ್ತಿಯ ಮೊದಲ ಸುತ್ತಿಗೆ ಆಯ್ಕೆಯಾಗಿವೆ. ಆಸ್ಕರ್ ಪ್ರಶಸ್ತಿ ನೀಡುವ ಅಕಾಡೆಮಿ ಅವಾರ್ಡ್ಸ್ ಸಂಸ್ಥೆಯು ಈಗ ಪ್ರಕಟಿಸಿರುವ ಸಿನಿಮಾಗಳ ಪಟ್ಟಿಯ ಬಗ್ಗೆ ಗೊಂದಲಗಳೂ ಮೂಡಿವೆ. ಇದು ಆಸ್ಕರ್ ನಾಮನಿರ್ದೇಶನ ಪಟ್ಟಿ ಎಂದೂ, ಕೆಲವು ಚಿತ್ರಗಳು ಪ್ರಶಸ್ತಿಗೇ ಆಯ್ಕೆಯಾಗಿವೆ ಎಂದೂ ಹಲವು ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆಸ್ಕರ್ ಪ್ರಶಸ್ತಿಗೆ ಸಿನಿಮಾಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ವಿವರ ಇಲ್ಲಿದೆ

ಪ್ರಜಾವಾಣಿ ವಾರ್ತೆ

ಆಸ್ಕರ್ ಪ್ರಶಸ್ತಿ ದೊರೆಯುವುದು ಇರಲಿ, ಪ್ರಶಸ್ತಿಗೆ ನಾಮನಿರ್ದೇಶನವಾಗುವುದು ಯಾವುದೇ ಸಿನಿಮಾ ಮತ್ತು ಸಾಕ್ಷ್ಯಚಿತ್ರಕ್ಕೆ ಅತ್ಯಂತ ದೊಡ್ಡ ವಿಚಾರ. ಆದರೆ, ನಾಮನಿರ್ದೇಶನ ಸುತ್ತಿಗೆ ಆಯ್ಕೆಯಾಗುವುದೂ ಅಷ್ಟೇ ಕಷ್ಟದ ವಿಚಾರವಾಗಿದೆ. ಸಿನಿಮಾ ಮತ್ತು ಸಾಕ್ಷ್ಯಚಿತ್ರಗಳಿಗೆ ಜಾಗತಿಕ ಮಟ್ಟದಲ್ಲಿ ದೊರೆಯುವ ಅತ್ಯುನ್ನತ ಮನ್ನಣೆ ಎಂದು ಪರಿಗಣಿಸಲಾಗುವ ಆಸ್ಕರ್ ಪ್ರಶಸ್ತಿಯನ್ನು 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್' ನೀಡುತ್ತದೆ. ಈ ಸಂಸ್ಥೆಯು 1927ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 1929ರಿಂದ ಪ್ರಶಸ್ತಿಯನ್ನು ನೀಡಲಾರಂಭಿಸಿತು. ಈಗ 95ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.


2022ನೇ ಸಾಲಿನ, ಅಂದರೆ 95ನೇ ಸುತ್ತಿನ ಆಸ್ಕರ್ ಪ್ರಶಸ್ತಿಗೆ ನಾಮನಿರ್ದೇಶನವಾದ ಚಿತ್ರಗಳ ಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ. ವಾಸ್ತವದಲ್ಲಿ ನಾಮನಿರ್ದೇಶನಕ್ಕೆ ಚಿತ್ರಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಇದೇ ಗುರುವಾರವಷ್ಟೇ (ಜನವರಿ 12) ಆರಂಭವಾಗಲಿದೆ. ಈಗ ಪ್ರಕಟವಾಗಿರುವುದು ಆಸ್ಕರ್ ರಿಮೈಂಡರ್ ಲಿಸ್ಟ್ ಮಾತ್ರ. ಇದನ್ನು ಮೊದಲ ಸುತ್ತಿನ ಪಟ್ಟಿ ಎನ್ನಬಹುದು.

ಪ್ರತೀ ವರ್ಷ ಜನವರಿ 1ರಿಂದ ಡಿಸೆಂಬರ್ ಅಂತ್ಯದವರೆಗೆ ಬಿಡುಗಡೆಯಾದ ಸಿನಿಮಾಗಳು, ಸಾಕ್ಷ್ಯ ಚಿತ್ರಗಳು ಮತ್ತು ಅನಿಮೇಟೆಡ್ ಚಿತ್ರಗಳನ್ನು ಆ ವರ್ಷದ ಆಸ್ಕರ್ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಚಿತ್ರದ ನಿರ್ಮಾಪಕರು, ನಿರ್ದೇಶಕರು, ನಟರು, ತಂತ್ರಜ್ಞರು ಮತ್ತು ಆಯಾ ದೇಶದ ಸರ್ಕಾರಿ ಸ್ವಾಮ್ಯದ ಸಿನಿಮಾ ಸಂಸ್ಥೆಗಳು ಆಸ್ಕರ್ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಆನಂತರದ ಹಲವು ಸುತ್ತಿನ ವೀಕ್ಷಣೆ ಮತ್ತು ಮತದಾನದ ನಂತರ ಚಿತ್ರಗಳನ್ನು ಮೊದಲ ಸುತ್ತಿನ ಪಟ್ಟಿಗೆ ಆಯ್ಕೆ ಮಾಡಲಾಗುತ್ತದೆ. ಆನಂತರ ಚಿತ್ರಗಳು ನಾಮನಿರ್ದೇಶನ ಪಟ್ಟಿಗೆ ಬರುತ್ತವೆ. ಈ ಚಿತ್ರಗಳು ಪ್ರಶಸ್ತಿಗೆ ಆಯ್ಕೆಯಾಗುವ ಅವಕಾಶ ಪಡೆಯುತ್ತವೆ.

ಆಯ್ಕೆ ಪ್ರಕ್ರಿಯೆ

ಅರ್ಜಿ ಸಲ್ಲಿಕೆ: 2022ರಲ್ಲಿ ಬಿಡುಗಡೆಯಾದ ಮತ್ತು ಸಿನಿಮಾ ಮಂದಿರಗಳಲ್ಲಿ ಪ್ರದರ್ಶನವಾದ ಸಿನಿಮಾಗಳನ್ನು ಆ ಸಾಲಿನ ಪ್ರಶಸ್ತಿಗೆ ಪರಿಗಣಿಸಿ ಎಂದು ಚಿತ್ರದ ನಿರ್ಮಾಪಕರು, ನಿರ್ದೇಶಕರು, ನಟರು, ತಂತ್ರಜ್ಞರು ಅರ್ಜಿ ಸಲ್ಲಿಸಬಹುದು. ಅಕಾಡೆಮಿ ಅವಾರ್ಡ್ಸ್‌ನ ಅಧಿಕೃತ ಜಾಲತಾಣದಲ್ಲಿ ಇರುವ ಲಿಂಕ್‌ಗಳಲ್ಲಿ ವಿವರಗಳನ್ನು ತುಂಬುವ ಮೂಲಕ ಇಂತಹ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯ ಜತೆಗೆ ಸಿನಿಮಾದ ಡಿಜಿಟಲ್ ಪ್ರತಿ ಅಥವಾ ಭೌತಿಕ ರೀಲ್ ಅನ್ನು ಸಲ್ಲಿಸಬೇಕಾಗುತ್ತದೆ. ಚಿತ್ರವನ್ನು ಯಾವ ಯಾವ ವಿಭಾಗದಲ್ಲಿ ಪ್ರಶಸ್ತಿಗೆ ಪರಿಗಣಿಸಬೇಕು ಮತ್ತು ಯಾವ ಕಲಾವಿದರನ್ನು ಪರಿಗಣಿಸಬೇಕು ಎಂಬುದನ್ನು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

ಪರಿಶೀಲನೆ ಮತ್ತು ರಿಮೈಂಡರ್ ಪಟ್ಟಿ: ಅಕಾಡೆಮಿಯ ಸದಸ್ಯರಲ್ಲಿ ಸಿನಿಮಾಕ್ಕೆ ಸಂಬಂಧಿಸಿದ ಎಲ್ಲಾ ಕ್ಷೇತ್ರಗಳ ಪರಿಣತರು ಇರುತ್ತಾರೆ. ಅಕಾಡೆಮಿಯ ಸದಸ್ಯರು ಚಿತ್ರವನ್ನು ವೀಕ್ಷಿಸುತ್ತಾರೆ. ನಾಮನಿರ್ದೇಶನ ಮಾಡಬಹುದು ಎಂದು ಸದಸ್ಯರು ಭಾವಿಸುವ ಚಿತ್ರವನ್ನು, ಅವರು ಅಕಾಡೆಮಿಗೆ ಶಿಫಾರಸು ಮಾಡುತ್ತಾರೆ. ಶಿಫಾರಸಿನ ಆಧಾರದಲ್ಲಿ ಅಕಾಡೆಮಿಯು ರಿಮೈಂಡರ್ ಪಟ್ಟಿಯನ್ನು ಸಿದ್ಧಪಡಿಸುತ್ತದೆ.




• 2022ನೇ ಸಾಲಿನ ಆಸ್ಕರ್ ರಿಮೈಂಡರ್ ಲಿಸ್ಟ್ ಈಚೆಗಷ್ಟೇ ಬಿಡುಗಡೆಯಾಗಿದೆ. ಇದರಲ್ಲಿ 301 ಚಿತ್ರಗಳಿದ್ದು ಕನ್ನಡದ ಕಾಂತಾರಾ, ವಿಕ್ರಾಂತ್ ರೋಣ, ಹಿಂದಿಯ ದಿ ಕಾಶ್ಮೀರ್ ಫೈಲ್ಸ್ ಸೇರಿ ಭಾರತದ ಹಲವು ಚಿತ್ರಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ನಾಮನಿರ್ದೇಶನ: ರಿಮೈಂಡರ್ ಲಿಸ್ಟ್‌ಗೆ ಆಯ್ಕೆಯಾದ ಚಿತ್ರಗಳನ್ನು ನಾಮನಿರ್ದೇಶನ ಮಾಡಲು ಪರಿಗಣಿಸಲಾಗುತ್ತದೆ. ಚಿತ್ರವನ್ನು ಯಾವ ವಿಭಾಗಕ್ಕೆ ಪರಿಗಣಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿರುತ್ತದೆಯೋ ಅಂತಹ ವಿಭಾಗದ ಪರಿಣತರ ಗುಂಪಿಗೆ ಚಿತ್ರದ ಅರ್ಜಿಯನ್ನು ನೀಡಲಾಗುತ್ತದೆ. ಆ ಪರಿಣತರು ಚಿತ್ರವನ್ನು ವೀಕ್ಷಿಸುತ್ತಾರೆ, ಮತ್ತು ಆಯಾ ವಿಭಾಗದಲ್ಲಿ ಇರುವ ಆದ್ಯತೆಯ ಚಿತ್ರಗಳಿಗೆ ಪರಿಣತರು ಮತ ನೀಡುತ್ತಾರೆ. ಹೆಚ್ಚು ಮತ ಪಡೆಯುವ ಚಿತ್ರವು ಆಯಾ ವಿಭಾಗದಲ್ಲಿ ನಾಮನಿರ್ದೇಶವಾಗುತ್ತದೆ. ಈ ಪ್ರಕ್ರಿಯೆ ಗುರುವಾರವಷ್ಟೇ ಆರಂಭವಾಗಲಿದೆ. ನಾಮನಿರ್ದೇಶನವಾದ ಚಿತ್ರಗಳ ಪಟ್ಟಿಯು ಇದೇ 24ಕ್ಕೆ ಬಿಡುಗಡೆಯಾಗಲಿದೆ.

ಪ್ರಶಸ್ತಿ ಸುತ್ತು: ನಾಮನಿರ್ದೇಶನ ಸುತ್ತಿಗೆ ಆಯ್ಕೆಯಾದ ಚಿತ್ರವನ್ನು ಪರಿಣತರ ಗುಂಪು ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸುತ್ತದೆ. ಇವುಗಳಲ್ಲಿ ಅತ್ಯುತ್ತಮವಾದ ಚಿತ್ರಗಳನ್ನು ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಮತದಾನವೆಲ್ಲವೂ ಗೋಪ್ಯವಾಗಿ ನಡೆಯುತ್ತದೆ. ಚಿತ್ರ ವೀಕ್ಷಣೆ ಮತ್ತು ಮತದಾನಕ್ಕೆ ಒಂದು ತಿಂಗಳಿಗೂ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಮತಗಳ ಪರಿಶೀಲನೆಯ ನಂತರ, ಫಲಿತಾಂಶವನ್ನು ಸಿದ್ಧಪಡಿಸಲಾಗುತ್ತದೆ. ಪ್ರಶಸ್ತಿಗೆ ಆಯ್ಕೆಯಾದ ಚಿತ್ರಗಳ ಪಟ್ಟಿಯನ್ನು ಅಕಾಡೆಮಿಯ ಇಬ್ಬರು ಅಧಿಕಾರಿಗಳು ಸಿದ್ಧಪಡಿಸುತ್ತಾರೆ. ಫಲಿತಾಂಶವು ಆ ಇಬ್ಬರಿಗೆ ಮಾತ್ರವೇ ತಿಳಿದಿರುತ್ತದೆ. ಪ್ರಶಸ್ತಿ ಘೋಷಣಾ ಸಮಾರಂಭದಲ್ಲಿ ಮಾತ್ರ ಫಲಿತಾಂಶದ ಪಟ್ಟಿಯನ್ನು ತೆರೆಯಲಾಗುತ್ತದೆ.

• ಸಾಕ್ಷ್ಯಚಿತ್ರ, ಅನಿಮೇಟೆಡ್ ಚಿತ್ರಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಪ್ರಕ್ರಿಯೆಯೂ ಬಹುತೇಕ ಇದೇ ರೀತಿ ಇರುತ್ತದೆ. ಆದರೆ ರಿಮೈಂಡರ್ ಪಟ್ಟಿ ಹಂತದ ಬದಲಿಗೆ, ಆಯ್ಕೆ ಪಟ್ಟಿ ಎಂಬ ಬೇರೊಂದು ಹಂತವನ್ನು ಇಲ್ಲಿ ಅನುಸರಿಸಲಾಗುತ್ತದೆ. ಸಾಕ್ಷ್ಯಚಿತ್ರ, ಅನಿಮೇಟೆಡ್ ಚಿತ್ರಗಳು, ಕಿರುಚಿತ್ರಗಳು, ಮೂಲ ಸಂಗೀತ, ಮೂಲ ಗೀತೆ, ಪ್ರಸಾದನ ಮತ್ತು ಕೇಶವಿನ್ಯಾಸ ಸೇರಿ 10 ವಿಭಾಗಗಳನ್ನು ಈ ಸ್ವರೂಪದ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ವಿಭಾಗದಲ್ಲಿ ಹಿಂದಿಯ 'ಆಲ್ ದಟ್ ಬ್ರೀಥ್', ತಮಿಳಿನ 'ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರಗಳು ಆಯ್ಕೆಯಾಗಿವೆ.



ಅರ್ಹತೆಗೆ ಹತ್ತಾರು ನಿಯಮ

24 ವಿಭಾಗಗಳಲ್ಲಿ (ಕೆಟಗರಿ) ಆಸ್ಕರ್ ಪ್ರಶಸ್ತಿಯನ್ನು ನೀಡಲಾಗುತ್ತದೆ. ಸಿನಿಮಾ, ಗೀತೆ, ಕಲಾವಿದರು ಮತ್ತು ತಂತ್ರಜ್ಞರನ್ನು ಪರಿಗಣಿಸಲು, ಪ್ರತ್ಯೇಕ ನಿಯಮಗಳನ್ನು ರೂಪಿಸಲಾಗಿದೆ.

ಅಕಾಡೆಮಿಯ ಸಕ್ರಿಯ ಮತ್ತು ಆಜೀವ ಸದಸ್ಯರು ಮತದಾನದ ಮೂಲಕ ತಮ್ಮ ಆಯ್ಕೆಯನ್ನು ತಿಳಿಸಬೇಕು ಎಂದು ನಿಯಮಗಳು ಹೇಳುತ್ತವೆ. ಪ್ರತಿಯೊಂದು ವಿಭಾಗಕ್ಕೂ ಆಯಾ ಕ್ಷೇತ್ರದಲ್ಲಿ ಅನುಭವಿ ಸದಸ್ಯರು ಮತದಾನ ಮಾಡುತ್ತಾರೆ. ಅತ್ಯುತ್ತಮ ಚಿತ್ರ ವಿಭಾಗಕ್ಕೆ ಎಲ್ಲ ಸದಸ್ಯರು ಮತ ಹಾಕುತ್ತಾರೆ.

ಚಿತ್ರವೊಂದರ ಗರಿಷ್ಠ 10 ನಟ ಅಥವಾ ಗರಿಷ್ಠ 10 ನಟಿಯರನ್ನು ಅತ್ಯುತ್ತಮ ನಟ/ನಟಿ ವಿಭಾಗಕ್ಕೆ ನಾಮನಿರ್ದೇಶನ ಮಾಡಲು ಸಮಿತಿ ಸದಸ್ಯರಿಗೆ ಅವಕಾಶವಿದೆ ಎಂದು ನಿಯಮದಲ್ಲಿ ಉಲ್ಲೇಖಿಸಲಾಗಿದೆ. ನಾಯಕ ನಟ, ಪೋಷಕ ನಟ, ನಾಯಕಿ, ಪೋಷಕ ನಟಿ ವಿಭಾಗದಲ್ಲಿ ಸದಸ್ಯರು ಗರಿಷ್ಠ ಐದು ಆದ್ಯತೆಗಳನ್ನು ಸೂಚಿಸಲು ಅವಕಾಶವಿರುತ್ತದೆ. ಆಯ್ಕೆ ಸುತ್ತಿನ ಮತದಾನದ ವೇಳೆ ಈ ವಿಭಾಗಗಳಲ್ಲಿ ಗರಿಷ್ಠ ಮತ ಪಡೆಯುವ ಐವರು ಕಲಾವಿದರು ಪ್ರಶಸ್ತಿ ಸುತ್ತಿಗೆ ಆಯ್ಕೆಯಾಗುತ್ತಾರೆ.

ಒಂದು ವೇಳೆ ನಟ ಅಥವಾ ನಟಿಯ ಪರವಾಗಿ ಅವರ ಧ್ವನಿಯನ್ನು ಬೇರೊಬ್ಬರು ಡಬ್ ಮಾಡಿದ್ದರೆ, ಆ ಕಲಾವಿದರನ್ನು ಅತ್ಯತ್ತಮ ನಟ/ನಟಿ/ಪೋಷಕ ಪಾತ್ರದ ಅಭಿನಯಕ್ಕಾಗಿ ನೀಡುವ ಪ್ರಶಸ್ತಿಗೆ ಪರಿಗಣಿಸುವುದಿಲ್ಲ.

ನಟ ಅಥವಾ ನಟಿಯೊಬ್ಬರು ಎರಡು ವಿಭಾಗಗಳಲ್ಲಿ ಅತಿಹೆಚ್ಚು ಮತಗಳನ್ನು ಪಡೆದಿದ್ದರೆ, ಆ ಎರಡೂ ವಿಭಾಗದ ಪ್ರಶಸ್ತಿಗೆ ಅವರನ್ನು ಪರಿಗಣಿಸಲಾಗುತ್ತದೆ. ಅಭಿನಯಕ್ಕೆ ಸಂಬಂಧಿಸಿದ ಪ್ರಶಸ್ತಿಗಳಿಗೆ ಮತದಾನ ಮಾಡುವ ಹಕ್ಕು ಸಮಿತಿಯ ಸಕ್ರಿಯ ಹಾಗೂ ಆಜೀವ ಸದಸ್ಯರಿಗೆ ಮಾತ್ರ ಇರುತ್ತದೆ.

ಸಿನಿಮಾವು, ಚಿತ್ರಮಂದಿರದಲ್ಲಿ ಪ್ರದರ್ಶನವಾಗುವ ಮುನ್ನ ಸಾರ್ವಜನಿಕವಾಗಿ, ಟಿ.ವಿ ವಾಹಿನಿಯಲ್ಲಿ ಅಥವಾ ಡಿವಿಡಿ/ಸಿಡಿ ಮೂಲಕ ವಿತರಣೆ ಆಗಿರಬಾರದು. ಚಿತ್ರಮಂದಿರದಲ್ಲಿ ಪ್ರದರ್ಶನಗೊಂಡ ಬಳಿಕವಷ್ಟೇ ಅದನ್ನು ಇತರೆ ಮಾಧ್ಯಮಗಳಿಗೆ ನೀಡಿದ್ದರೆ, ಆ ಚಿತ್ರವನ್ನು ಆಯ್ಕೆಸಮಿತಿ ಪರಿಗಣಿಸುತ್ತದೆ ಎಂದು ನಿಯಮಗಳು ಹೇಳುತ್ತವೆ.

ಅಧಿಕೃತ ಪ್ರವೇಶದಲ್ಲಿ ಗುಜರಾತಿ ಸಿನಿಮಾ

ವಿಶ್ವದ ಎಲ್ಲಾ ದೇಶಗಳು ತಮ್ಮಲ್ಲಿ ನಿರ್ಮಾಣವಾದ ಅತ್ಯುತ್ತಮ ಚಿತ್ರವನ್ನು ಆಸ್ಕರ್ ಪ್ರಶಸ್ತಿಗೆ ಪರಿಗಣಿಸುವಂತೆ ಅರ್ಜಿ ಸಲ್ಲಿಸಬಹುದು. ಇದನ್ನು ಅಧಿಕೃತ ಪ್ರವೇಶ (ಅಫಿಷಿಯಲ್ ಎಂಟ್ರಿ) ಎಂದು ಪರಿಗಣಸಲಾಗುತ್ತದೆ. ಒಂದು ದೇಶ ಒಂದು ಚಿತ್ರವನ್ನಷ್ಟೇ ಈ ರೀತಿ ಪ್ರಶಸ್ತಿಗೆ ಸಲ್ಲಿಸಬಹುದು. ಯಾವುದೇ ದೇಶದ ಸರ್ಕಾರಿ ಸಿನಿಮಾ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ಇಂತಹ ಅರ್ಜಿಯನ್ನು ಸಲ್ಲಿಸಬಹುದು. ಈ ಬಾರಿ ಗುಜರಾತಿ ಭಾಷೆಯ 'ಛೆಲ್ಲೋ ಷೋ' (ಇಂಗ್ಲಿಷ್ ಅವತರಣಿಕೆ: ಲಾಸ್ಟ್ ಫಿಲ್ಮ್ ಷೋ) ಸಿನಿಮಾವನ್ನು ಪ್ರಶಸ್ತಿಗೆ ಪರಿಗಣಿಸುವಂತೆ ಕೇಂದ್ರ ಸರ್ಕಾರವು ಅಧಿಕೃತವಾಗಿ ಅರ್ಜಿ ಸಲ್ಲಿಸಿದೆ.

ಚಿತ್ರಮಂದಿರದಲ್ಲಿ ಬಿಡುಗಡೆಯಾಗದೇ, ಕೇವಲ ಚಿತ್ರೋತ್ಸವಗಳಲ್ಲಿ ಸಿನಿಮಾ ಪ್ರದರ್ಶನ ಕಂಡಿದ್ದರೆ, ಅಂತಹ ಸಿನಿಮಾವನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಜನರು ಹಣ ಕೊಟ್ಟು ಸಿನಿಮಾವನ್ನು ಚಿತ್ರಮಂದಿರಗಳಲ್ಲಿ ವೀಕ್ಷಿಸಿರಬೇಕು ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಅಮೆರಿಕದ ಮೆಟ್ರೊ ನಗರಗಳ ಯಾವುದೋ ಒಂದು ಚಿತ್ರಮಂದಿರದಲ್ಲಿ ಸತತ ಏಳು ದಿನ ಪ್ರದರ್ಶನವಾಗುವ ಚಿತ್ರಗಳು ಆಸ್ಕರ್‌ಗೆ ನಾಮನಿರ್ದೇಶನವಾಗುತ್ತದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಅಮೆರಿಕದಲ್ಲಿ ನಿರ್ಮಾಣವಾಗುವ ಸಿನಿಮಾಗಳಿಗೆ ಮಾತ್ರ ಈ ಷರತ್ತು ಅನ್ವಯವಾಗುತ್ತದೆ. ಅಮೆರಿಕ ಅಲ್ಲದೆ ಬೇರೆ ದೇಶ–ಭಾಷೆಗಳಲ್ಲಿ ನಿರ್ಮಾಣವಾದ ಸಿನಿಮಾಗಳನ್ನು ವಿದೇಶಿ ವಿಭಾಗ ಅಥವಾ ಅಂತರ-ರಾಷ್ಟ್ರೀಯ ಸಿನಿಮಾ ವಿಭಾಗಕ್ಕೆ ಪರಿಗಣಿಸಲಾಗುತ್ತದೆ. ಅಂತಹ ಚಿತ್ರಗಳಿಗೆ ಈ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ ಎಂದು ಅಕಾಡೆಮಿ ಅವಾರ್ಡ್ಸ್‌ನ ಷರತ್ತು ಮತ್ತು ನಿಯಮಗಳ 'ರೂಲ್ ನಂಬರ್ ಥರ್ಟೀನ್'ನಲ್ಲಿ ವಿವರಿಸಲಾಗಿದೆ.

ಅರ್ಹತಾ ನಿಯಮಗಳು

- 40 ನಿಮಿಷಕ್ಕೂ ಹೆಚ್ಚು ಕಾಲಾವಧಿ ಹೊಂದಿರಬೇಕು
- 35 ಎಂಎಂ ಅಥವಾ 70 ಎಂಎಂ ಚಿತ್ರವಾಗಿರಬೇಕು
- 2048 ಅಥವಾ 1080 ರೆಸಲ್ಯೂಷನ್ ಚಿತ್ರವಾಗಿರಬೇಕು
- ಧ್ವನಿಯು 5.1 ಚಾನೆಲ್ ಅಥವಾ 7.1 ಚಾನೆಲ್ ಸ್ವರೂಪದಲ್ಲಿರಬೇಕು
- ಇಂಗ್ಲಿಷ್ ಭಾಷೆಯ ಸಬ್‌ಟೈಟಲ್ ಹಾಕುವುದು ಕಡ್ಡಾಯ


'ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದ ಪೋಸ್ಟರ್

ಆಸ್ಕರ್ ಅಂಗಳದಲ್ಲಿ ಭಾರತ


ಆಸ್ಕರ್ ಅಂಗಳ ತಲುಪಿದ ಭಾರತದ ಚಿತ್ರಗಳ ಸಂಖ್ಯೆ ಕಡಿಮೆ. ಮದರ್ ಇಂಡಿಯಾ, ಸಲಾಂ ಬಾಂಬೆ ಹಾಗೂ ಲಗಾನ್ ಸಿನಿಮಾಗಳು ಮಾತ್ರ ಆಸ್ಕರ್‌ನ ಪ್ರಶಸ್ತಿ ಸುತ್ತಿಗೆ ಆಯ್ಕೆಯಾಗಿ ಗಮನ ಸೆಳೆದಿದ್ದವು. ಆದರೆ ಭಾರತದ ಕೆಲವು ಚಿತ್ರಗಳಿಗೆ ಸಂಗೀತ, ಗೀತೆ, ವಸ್ತ್ರವಿನ್ಯಾಸ, ಧ್ವನಿಮಿಶ್ರಣ ವಿಭಾಗಗಳಲ್ಲಿ ಪ್ರಶಸ್ತಿ ಸಂದಿವೆ.

ಗಾಂಧಿ ಸಿನಿಮಾದ ವಸ್ತ್ರ ವಿನ್ಯಾಸಕ್ಕಾಗಿ ಭಾನು ಅಥೈಯಾ, ಜೀವಮಾನ ಸಾಧನೆಗಾಗಿ ಸತ್ಯಜಿತ್ ರೇ, ಸ್ಲಂ ಡಾಗ್ ಮಿಲಿಯನೇರ್ ಚಿತ್ರದ ಧ್ವನಿ ಮಿಶ್ರಣಕ್ಕಾಗಿ ರಸೂಲ್ ಪೂಕುಟ್ಟಿ, ಅದೇ ಚಿತ್ರದ ಜೈ ಹೋ ಗೀತೆಗಾಗಿ ಗುಲ್ಜಾರ್ ಮತ್ತು ಅದೇ ಚಿತ್ರದ ಜೈ ಹೋ ಗೀತೆಯ ಸಂಗೀತಕ್ಕಾಗಿ ಎ.ಆರ್.ರೆಹಮಾನ್ ಅವರು ಆಸ್ಕರ್ ಪ್ರಶಸ್ತಿ ಪಡೆದಿದ್ದಾರೆ.

ಆಧಾರ: 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್, ರಾಯಿಟರ್ಸ್, ಐಎಂಡಿಬಿ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಜೋಶಿಮಠ ಬಿಕ್ಕಟ್ಟಿನಿಂದಾಗಿ ಈಗ ಅಭಿವೃದ್ಧಿ ಮತ್ತು ಪರಿಸರ ರಕ್ಷಣೆ ದೃಷ್ಟಿಯಿಂದ ಕಾಳಜಿ ಅನಿವಾರ್ಯ ಎಂದು ನಿಮಗನಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕೇಂದ್ರ ಸಚಿವ ಸಂಪುಟ ನಿರ್ಧಾರ

ರಾಷ್ಟ್ರಮಟ್ಟದ ಮೂರು ಸಹಕಾರ ಸಂಘ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾವಯವ ಉತ್ಪನ್ನ, ಬಿತ್ತನೆ ಬೀಜ ಹಾಗೂ ರಫ್ತು ಉತ್ತೇಜಿಸುವ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದಲ್ಲಿ ಮೂರು ಸಹಕಾರ ಸಂಘಗಳನ್ನು ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

2002ರ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆಯ ಅಡಿಯಲ್ಲಿ ರಾಷ್ಟ್ರ ಮಟ್ಟದ ಬಹುರಾಜ್ಯ ಸಂಘಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಹಕಾರ ಸಂಘಗಳ ಬಲವರ್ಧನೆ ಹಾಗೂ ಅವುಗಳನ್ನು ಯಶಸ್ವಿ ಉದ್ಯಮಗಳನ್ನಾಗಿ ರೂಪಿಸುವ ನಿಟ್ಟಿನಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಸಹಕಾರ ಕ್ಷೇತ್ರದ ಪ್ರಯೋಜನ ಪಡೆಯಬೇಕಾದರೆ, ಸಹಕಾರ ಸಂಘಗಳು ಜಾಗತಿಕವಾಗಿ ಯೋಚಿಸುವ ಹಾಗೂ ಸ್ಥಳೀಯವಾಗಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು ಎಂದು ಪ್ರಧಾನಿ ಅವರು ಸಭೆಯಲ್ಲಿ ಅಭಿಪ್ರಾಯಪಟ್ಟರು.

ಸಹಕಾರ ವಲಯದಲ್ಲಿ ಉತ್ಪನ್ನಗಳ ರಫ್ತಿಗೆ ಇರುವ ಸಾಧ್ಯತೆಯ ಬಾಗಿಲು ತೆರೆಯಲು ರಾಷ್ಟ್ರೀಯ ಮಟ್ಟದಲ್ಲಿ ಬಹುರಾಜ್ಯ ಸಹಕಾರ ಸಂಘ ಅಸ್ತಿತ್ವಕ್ಕೆ ತರಲಾಗುತ್ತಿದೆ. ಸರ್ಕಾರದ ವಿವಿಧ ನೀತಿಗಳ ಲಾಭ ಪಡೆಯುವ ನಿಟ್ಟಿನಲ್ಲಿ ಈ ಕ್ಷೇತ್ರಕ್ಕೆ ಮಾರ್ಗದರ್ಶನ ನೀಡುವುದು ಈ ಸಂಘದ ಉದ್ದೇಶವಾಗಿದೆ. ರಫ್ತು ಮೇಲೆ ಹೆಚ್ಚು ಒತ್ತು ನೀಡುವ ಇಂತಹ ಸಂಘ ಸ್ಥಾಪನೆಯಿಂದ ದೇಶದ ವಿವಿಧ ಹಂತಗಳಲ್ಲಿ ಉತ್ಪಾದನೆ ಹೆಚ್ಚಳವಾಗಿ, ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಸಹಕಾರ ಸಂಘಗಳ ಮೂಲಕ ರಫ್ತು ಹೆಚ್ಚಿಸುವುದು ಆತ್ಮನಿರ್ಭರವನ್ನು ಸಾಕಾರವಾಗಿಸಲಿದೆ ಎಂದು ಸಂಪುಟ ಸಭೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾವಯವ ಉತ್ಪನ್ನಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸ್ಥಾಪನೆಯಾಗಲಿರುವ ಬಹುರಾಜ್ಯ ಸಂಘವು, ಸಾವಯವ ಉತ್ಪನ್ನಗಳ ಪೂರೈಕೆ ಸರಪಳಿ, ತಾಂತ್ರಿಕ ನೆರವು, ತರಬೇತಿ, ಸಾಮರ್ಥ್ಯ ವೃದ್ಧಿ ಹಾಗೂ ಪ್ರತ್ಯೇಕ ಮಾರುಕಟ್ಟೆ ವ್ಯವಸ್ಥೆ ರೂಪಿಸುವ ಚಟುವಟಿಕೆಗಳನ್ನು ನಿರ್ವಹಣೆ ಮಾಡಲಿದೆ. ವಿದೇಶಗಳಲ್ಲಿ ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವ ನಿಟ್ಟಿನಲ್ಲಿ ರಫ್ತು ಸಂಘದ ಜೊತೆ ಇದು ಕೆಲಸ ಮಾಡಲಿದೆ. ಸಾವಯವ ಉತ್ಪನ್ನಗಳ ಅಧಿಕ ಬೆಲೆಯ ಲಾಭವನ್ನು, ಅವುಗಳನ್ನು ಬೆಳೆಯುವ ರೈತರಿಗೂ ತಲುಪಿಸಲು ಸಂಘ ನೆರವಾಗಲಿದೆ. ಸಾಮಾನ್ಯ ಬೇಸಾಯದ ಪದ್ಧತಿ ಮತ್ತು ಸಾವಯವ ಕೃಷಿ ಪದ್ಧತಿ ನಡುವೆ ಸಮತೋಲನ ಕಾಯ್ದುಕೊಳ್ಳಲಾಗುತ್ತದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಒಂದೇ ಬ್ರ್ಯಾಂಡ್‌ನಲ್ಲಿ ಬಿತ್ತನೆ ಬೀಜ

ಬಿತ್ತನೆ ಬೀಜಕ್ಕೆ ಸಂಬಂಧಪಟ್ಟ ಬಹುರಾಜ್ಯ ಸಹಕಾರ ಸಂಘವು ರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪನೆಯಾಗಲಿದೆ. ಬೀಜಗಳ ಉತ್ಪಾದನೆ, ಪ್ರಮಾಣೀಕರಣ, ಖರೀದಿ, ಸಂಗ್ರಹಣೆ, ಬ್ರ್ಯಾಂಡಿಂಗ್, ಪ್ಯಾಕೇಜಿಂಗ್, ವಿತರಣೆ, ಸಂಶೋಧನೆ ಮತ್ತು ಅಭಿವೃದ್ಧಿ ವಿಚಾರದಲ್ಲಿ ಇದು ಕೇಂದ್ರೀಯ ಸಂಸ್ಥೆಯ ರೀತಿ ಕೆಲಸ ಮಾಡಲಿದೆ. ದೇಸಿ ಬೀಜಗಳನ್ನು ಪ್ರೋತ್ಸಾಹಿಸುವ ಹಾಗೂ ಅವುಗಳನ್ನು ಸಂಗ್ರಹಿಸುವ ವ್ಯವಸ್ಥೆ ಅಭಿವೃದ್ಧಿ ಹೊಣೆಯನ್ನೂ ಈ ಸಂಘ ನಿರ್ವಹಿಸಲಿದೆ. ಸಹಕಾರ ಸಂಘಗಳ ಜಾಲವನ್ನು ಬಳಸಿಕೊಂಡು, ಒಂದೇ ಬ್ರ್ಯಾಂಡ್‌ನ ಅಡಿಯಲ್ಲಿ ಪ್ರಮಾಣೀಕೃತ ಬೀಜಗಳನ್ನು ಬಿತ್ತನೆಗೆ ಪೂರೈಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಳ್ಳನೊಬ್ಬನ ಚಾಕು ಇರಿತದ ಕಾರಣ ದೆಹಲಿ ಪೊಲೀಸ್ ಎಎಸ್‌ಐ ಶಂಭು ದಯಾಳ್ ಎಂಬುವವರು ಮೃತಪಟ್ಟಿದ್ದಾರೆ. 'ಜಿಹಾದಿ ಮೊಹಮ್ಮದ್ ಅನೀಶ್ ಎಂಬುವವನು ಶಂಭು ದಯಾಳ್ ಅವರ ಮೇಲೆ ದಾಳಿ ನಡೆಸಿದ್ದ. ತೀವ್ರವಾಗಿ ಗಾಯಗೊಂಡಿದ್ದ ದಯಾಳ್ ಅವರಿಗೆ ದೆಹಲಿಯ ಬಿಎಲ್‌ಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಜನವರಿ 8ರಂದು ಅವರು ಮೃತಪಟ್ಟಿದ್ದಾರೆ. ಮುಸ್ಲಿಮರು ಹಿಂದೂ ಪೊಲೀಸರ ಮೇಲೆ ದಾಳಿ ನಡೆಸುತ್ತಿದ್ದಾರೆ' ಎಂದು ಹಲವು ಸುದ್ದಿ ಮಾಧ್ಯಮಗಳು ವರದಿ ಪ್ರಕಟಿಸಿವೆ. ಬಿಜೆಪಿ ಮತ್ತು ವಿಎಚ್‌ಪಿ ನಾಯಕರೂ ಈ ಬಗ್ಗೆ ಟ್ವೀಟ್ ಮಾಡಿದ್ದಾರೆ. ಆದರೆ, ಪೊಲೀಸರಿಗೆ ಚಾಕು ಇರಿದ ಆರೋಪಿ ಮುಸ್ಲಿಂ ಎಂಬುದು ತಿರುಚಲಾದ ಮಾಹಿತಿ.

ಇದು ತಿರುಚಿದ ಸುದ್ದಿ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಜನವರಿ 4ರಂದು ದೆಹಲಿಯ ಮಾಯಾಪುರಿಯಲ್ಲಿ ಈ ಘಟನೆ ನಡೆದಿತ್ತು. ಕಳ್ಳತನದ ಆರೋಪಿಯನ್ನು ಎಎಸ್‌ಐ ಶಂಭು ದಯಾಳ್ ಅವರು ವಶಕ್ಕೆ ಪಡೆದು, ಪೊಲೀಸ್ ಠಾಣೆಗೆ ಕರೆದೊಯ್ಯುತ್ತಿದ್ದರು. ಆಗ ಆರೋಪಿಯು ಚಾಕುವಿನಿಂದ ದಯಾಳ್ ಅವರನ್ನು ಹಲವು ಬಾರಿ ಇರಿದಿದ್ದ. ಆರೋಪಿಯ ಹೆಸರು ಅನೀಶ್ ಪ್ರಹ್ಲಾದ್ ರಾಜ್ ಎಂದು ದೆಹಲಿ ಪೊಲೀಸರು ಜನವರಿ 4ರಂದು ನೀಡಿದ್ದ ಪತ್ರಿಕಾ ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದರು. ಆದರೆ, ಆರೋಪಿಯ ಹೆಸರನ್ನು ಬದಲಿಸಿ ಆತ ಮುಸ್ಲಿಂ ಎಂದು ಬಿಂಬಿಸಲಾಗಿದೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಜ್ಞಾನಿಯ ಸಲಗದ ನಡೆ

ನೈರಾಶ್ಯನಿರತಂಗೆ ದೇವತೆಗಳಿಂದೇನು ? |
ವೈರಾಗ್ಯಪಥಿಕಂಗೆ ನಷ್ಟಭಯವೇನು ? ||
ಪಾರಂಗತಂಗಂತರಾಳ ದೂರಗಳೇನು ?
ಸ್ವೈರಪಥವಾತನದು – ಮಂಕುತಿಮ್ಮ || 798 ||

ಪದ-ಅರ್ಥ: ನೈರಾಶ್ಯನಿರತಂಗೆ = ನಿರಾಸೆಯಲ್ಲಿ ನಿಂತವನಿಗೆ, ದೇವತೆಗಳಿಂದೇನು = ದೇವತೆಗಳಿಂದ + ಏನು, ವೈರಾಗ್ಯಪಥಿಕಂಗೆ = ವೈರಾಗ್ಯದ ಹಾದಿಯಲ್ಲಿ ನಡೆದವನಿಗೆ, ಪಾರಂಗತಂಗಂತರಾಳ = ಪಾರಂಗತಂಗೆ(ಪಂಡಿತನಿಗೆ) + ಅಂತರಾಳ(ಹತ್ತಿರ), ಸ್ವೈರಪಥವಾತನದು = ಸ್ವೈರಪಥ(ಇಚ್ಛೆ ಬಂದ ದಾರಿ) + ಆತನದು

ವಾಚ್ಯಾರ್ಥ: ಆಸೆಗಳೇ ಇಲ್ಲದೆ ಹೋದರೆ ಅವನು ದೇವತೆಗಳಿಂದ ಏನು ಅಪೇಕ್ಷಿಸಿಯಾನು? ವೈರಾಗ್ಯದ ದಾರಿಯಲ್ಲಿ ನಡೆದವನಿಗೆ ನಷ್ಟ, ಭಯಗಳ ಯೋಚನೆ ಇದೆಯೆ? ನಿಜವಾದ ಪಂಡಿತನಿಗೆ ಹತ್ತಿರವಾವುದು, ದೂರವಾವುದು? ಅವನದು ಇಚ್ಛೆ ಬಂದ ದಾರಿ.

ವಿವರಣೆ: ಸಂತ ತುಕಾರಾಮ ಪಾಂಡುರಂಗನ ಅಂತರಂಗ ಭಕ್ತ. ಅವನಿಗೆ ಹಗಲು ರಾತ್ರಿ ಪಾಂಡುರಂಗನದೇ ಧ್ಯಾನ.ಅವನನ್ನೂ ಜಗತ್ತಿನ ವ್ಯವಹಾರಕ್ಕೆ ತರಲು ಅದೆಷ್ಟು ಜನ, ಅದೆಷ್ಟು ರೀತಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಸೋದರಮಾವ ಅಂಗಡಿ ಹಾಕಿಕೊಟ್ಟ. ಧ್ಯಾನದಲ್ಲಿ ಮೈಮರೆತ ತುಕಾರಾಮನಿಗೆ ಅಂಗಡಿಯ ಸಾಮಾನುಗಳನ್ನೆಲ್ಲ ಜನರು ತೆಗೆದುಕೊಂಡು ಹೋದದ್ದು ತಿಳಿಯಲಿಲ್ಲ. ತುಕಾರಾಮನ ಭಕ್ತಿಗೆ ಮೆಚ್ಚಿ ಪಾಂಡುರAಗ ಅವನ ಕನಸಿನಲ್ಲಿ ಬಂದು ನಿನಗೆ ಏನು ಬೇಕು ಕೇಳಿಕೋ ಎಂದನಂತೆ. ಆಗ ತುಕಾರಾಮ, "ವಿಠಲ, ನೀನೇ ನನ್ನವನಾದ ಬಳಿಕ ನನಗೇನು ಬೇಕು? ನಿನ್ನ ಸ್ಮರಣೆಯೊಂದು ಕೊನೆಯವರೆಗಿದ್ದರೆ ಸಾಕು" ಎಂದು ಭಗವಂತನ ವರವನ್ನು ನಿರಾಕರಿಸಿದನಂತೆ.

ನಾವು ದೇವತೆಗಳನ್ನು ಪ್ರಾರ್ಥಿಸುವುದು ನಮ್ಮ ಆಸೆಗಳ ಪೂರ್ತಿಗಾಗಿ. ಅದಕ್ಕೇ ಪೂಜೆ, ಹೋಮ, ಹವನಗಳು. ನಮಗೆ ಆಸೆಗಳೇ ಇಲ್ಲದೇ ಹೋದಾಗ ದೇವತೆಗಳ ಹಂಗೇಕೆ? ಅದಕ್ಕೇ ದಾಸರು, "ನೀನ್ಯಾಕೋ, ನಿನ್ನ ಹಂಗ್ಯಾಕೋ?" ಎಂದು ಕೇಳಿದರು. ಅದೇ ರೀತಿ ಸಂಪೂರ್ಣ ವೈರಾಗ್ಯವನ್ನು ಸಾಧಿಸಿಕೊಂಡವನಿಗೆ ಯಾವುದರ ಅಂಟಿಲ್ಲ. ಅವನಿಗೆ ಯಾವ ವ್ಯವಹಾರವೂ ಇಲ್ಲವೆಂದ ಮೇಲೆ ಲಾಭ-ನಷ್ಟದ ಮಾತೆಲ್ಲಿ ಬಂತು? ಎಲ್ಲವನ್ನು ತೊರೆದು ನಿಂತವನಿಗೆ ಯಾವ ಭಯವೂ ಇರಲಾರದು. ಅವನಿಗೆ ಸಾವಿನ ಭಯವೂ ಇಲ್ಲ. ಅವನೊಬ್ಬ ಸಮರ್ಥ ಈಜುಗಾರನಿದ್ದಂತೆ. ಈಜು ಬರದವರಿಗೆ ನೀರಿನ ಆಳದ ಭಯ. ಚೆನ್ನಾಗಿ ಈಜು ಬಂದವನಿಗೆ ಆಳದ ಚಿಂತೆ ಏಕೆ? ಅವನು ನೀರಮೇಲೆ ಮೀನಿನಂತೆ ತೇಲಿ ಹೋಗುವವನು. ಕಗ್ಗದ ಮೂರನೆಯ ಸಾಲು ಈಶಾವಾಸ್ಯ ಉಪನಿಷತ್ತಿನ ಐದನೆಯ ಮಂತ್ರಕ್ಕೆ ವ್ಯಾಖ್ಯೆಯಂತಿದೆ.

ತದೇಜತಿ ತನ್ನೆಜತಿ ತದ್ದೂರೆ ತದ್ವಂತಿಕೆ |
ತದರಂತಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತ: ||

"ಅದು ಚಲಿಸುತ್ತದೆ, ಅದು ಚಲನ ರಹಿತವಾಗಿದೆ, ಅದು ದೂರದಲ್ಲಿದೆ, ಹತ್ತಿರದಲ್ಲಿದೆ. ಅದು ಎಲ್ಲರ ಒಳಗೂ, ಹೊರಗೂ ಇದೆ" ಬ್ರಹ್ಮವಸ್ತು ಅಜ್ಞಾನಿಗಳಿಂದ ದೂರವಿದೆ ಮತ್ತು ಜ್ಞಾನಿಗಳ ಹತ್ತಿರವೇ ಇದೆ. ನಿಜವಾದ ಜ್ಞಾನಿಗೆ ಕಾಶಿ ಅಂತರದಲ್ಲಿ ದೂರವಿದ್ದರೂ, ಅಂತರ್ಯದಲ್ಲಿ ಹೃದಯಸ್ಥವಾಗಿದೆ. ಅದಕ್ಕೆ ಅಂಥ ಮಹಾಜ್ಞಾನಿಯ ನಡಿಗೆ ಸ್ವಚ್ಛಂದವಾದದ್ದು, ಅನುಕರಣೆ ಮಾಡದ್ದು. ಅದು ಸಲಗದ ದಾರಿ. ಬೇರೆಯವರಿಗೆ ದಾರಿ ಬೇಕು. ಸಲಗಕ್ಕೆ ಹೋದದ್ದೇ ದಾರಿ. ಅದು ತನ್ನದೇ ದಾರಿಯನ್ನು ಸೃಷ್ಟಿಮಾಡಿಕೊಳ್ಳುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 12, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಪಂಚಮಿ ಗಂ. 16-38, ನಕ್ಷತ್ರ: ಪೂರ್ವಫಲ್ಗುನಿ ಗಂ. 14-25 ಯೋಗ: ಸೌಭಾಗ್ಯ ಗಂ. 12-32, ಕರಣ: ತೈತಿಲ ಗಂ. 16-38, ಧನುರ್ ಮಾಸದ 27 ನೇ ದಿನ.
ರಾಹುಕಾಲ: ಮಧ್ಯಾಹ್ನ 01-30-03-00
ಸೂರ್ಯೋದಯ: 07-00 ಸೂರ್ಯಾಸ್ತ: 06-17
ಮುಸ್ಲಿಂ ದಿನಾಂಕ: 19 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 5, 10

ಮೇಷ: ಸಂಘ ಸಂಸ್ಥೆಯಲ್ಲಿ ನಡೆದ ಸಣ್ಣಪುಟ್ಟ ತಪ್ಪುಗಳನ್ನು ಸರಿಪಡಿಸಿ ಕಿರಿಯರಿಗೆ ಮಾರ್ಗದರ್ಶನ ನೀಡಿ. ಅಧಿಕಾರಿಗಳ ಮೇಲೆ ಗೌರವಾನ್ವಿತ ದೃಷ್ಟಿಕೋನ ಇಟ್ಟುಕೊಳ್ಳುವುದರಿಂದ ಪ್ರಯೋಜನ ಪಡೆಯಲಿದ್ದೀರಿ.

ವೃಷಭ: ಕಾರ್ಯದಲ್ಲಿ ಎಷ್ಟೇ ಮನುಷ್ಯ ಪ್ರಯತ್ನವಿದ್ದರೂ ಯಶಸ್ಸು ಹೊಂದಲು ಮೊದಲೆರಡು ಬಾರಿ ವಿಘ್ನ ಉಂಟಾಗುವುದು. ಆದಾಯದಲ್ಲಿ ಏರಿಳಿತ ನೋಡಬೇಕಾಗುತ್ತದೆ. ಜೀವನದಲ್ಲಿ ಅಧಿಕಾರದ ಹುದ್ದೆ ಹೊಂದುವಿರಿ.

ಮಿಥುನ: ಷರತ್ತುಗಳ ಯಾವುದೇ ರೀತಿಯ ವ್ಯವಹಾರಕ್ಕೂ ಈ ದಿನದಲ್ಲಿ ಕೈ ಹಾಕಬೇಡಿ. ಗಣ್ಯರಿಂದ ಮುಂದಿನ ಬದುಕಿನ ದಾರಿ ಬದಲಾಗುವ ಸಾಧ್ಯತೆ ಇದೆ. ಹೊಸ ವಾತಾವರಣಕ್ಕೆ ಮನೆಯವರೆಲ್ಲರೂ ಹೊಂದಿಕೊಳ್ಳಲು ಯತ್ನಿಸುವರು.

ಕರ್ಕಾಟಕ: ದಾಂಪತ್ಯ ಜೀವನ ಸುಖಮಯವಾಗಿರುವುದು ಅಥವಾ ವಿವಾಹ ಅಪೇಕ್ಷಿಗಳಿಗೆ ಶುಭವಿದೆ. ಸಾಮಾಜಿಕ ಕಾರ್ಯಕ್ರಮಗಳಿಂದ ಖ್ಯಾತಿ ಪಡೆಯಲಿದ್ದೀರಿ. ಈಶ್ವರನ ಕೃಪೆಯಿಂದ ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳಲಿದೆ.

ಸಿಂಹ: ಕೆಲಸ ಕಾರ್ಯಗಳು ವಿಳಂಬ ಗತಿಯಲ್ಲಿ ನಡೆದರೂ ಪೂರ್ಣಗೊಳ್ಳಲಿವೆ. ಮನೋಭಿಲಾಷೆಗಳು ಈಡೇರಿ ಮನಸ್ಸಿಗೆ ಸಂತೋಷವಾಗುವುದು. ದಿನ ನಿತ್ಯದ ವ್ಯವಹಾರಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಿರುವುದಿಲ್ಲ.

ಕನ್ಯಾ: ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂತಹ ಕಾಲವನ್ನು ನಿರೀಕ್ಷಿಸಬಹುದು. ಧನಾಗಮನ ಹೆಚ್ಚಿದ್ದರೂ ಬಹುಪಾಲು ಖರ್ಚಿನ ಪಟ್ಟಿಯಲ್ಲಿ ಇರಲಿದೆ. ಹಿತಶತ್ರುಗಳ, ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು.

ತುಲಾ: ಔಷಧಿ ಹಾಗೂ ರಾಸಾಯನಿಕ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಈ ದಿನ ಹರ್ಷದಾಯಕವಾಗಿರುತ್ತದೆ. ಕೃಷಿ ಉತ್ಪನ್ನಗಳ ಬೆಲೆ ಏರಲಿದೆ.

ವೃಶ್ಚಿಕ: ವಾಹನ ಅಥವಾ ಮನೆ ಖರೀದಿಯ ಯೋಗವಿದೆ. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ. ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನ. ಶುಭ ಫಲಗಳಿಗೆ ವಿಷ್ಣುಸಹಸ್ರ ನಾಮ ಸ್ತೋತ್ರ ಪಠಿಸಿ.

ಧನು: ವಿಮಾ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ತೋರಿದ್ದಕ್ಕೆ ಸಂಸ್ಥೆಯವರಿಂದ ವಿಶೇಷ ಪುರಸ್ಕಾರಗಳು ದೊರೆಯಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಗಮನ ತೋರಿಸಬೇಕಾಗುವುದು. ಮದುವೆಯ ಕೆಲಸ ಮುಗಿಸಿಕೊಳ್ಳಲು ಓಡಾಟ ಹೆಚ್ಚುವುದು.

ಮಕರ: ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಇಂದು ನಿಮ್ಮಲ್ಲಿನ ಸೃಜನಶೀಲತೆಗೆ ಉತ್ತಮ ವೇದಿಕೆ ಲಭಿಸಲಿದೆ. ಬಡಗಿ ಕೆಲಸ ಮಾಡುವವರಿಗೆ ಇಂದು ಸುಯೋಗವಿದೆ.


ಕುಂಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ದಲ್ಲಾಳಿಗಳಿಗೆ ಮತ್ತು ವೃತ್ತಿವ್ಯಾಪಾರಗಳಲ್ಲಿ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿದೆ.

ಮೀನ: ರಸ್ತೆ ಗುತ್ತಿಗೆದಾರರಿಗೆ, ಮರ-ಮುಟ್ಟುಗಳ ಮತ್ತು ಕಲ್ಲಿನ ವ್ಯಾಪಾರ ಮಾಡುವವರು ತಮ್ಮ ಶ್ರಮದ ದುಪ್ಪಟ್ಟು ಸಂಪಾದನೆ ಅಪೇಕ್ಷಿಸಬಹುದು. ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ ಕಾಣುತ್ತದೆ.

ಪದಬಂಧ 5197 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ತಕ್ಕಡಿಯನ್ನು ಹಿಡಿದಿರುವ ಮಂಕ! (5)
4. ಕೊನೆಗೆ ಬೆಲೆಯಿಟ್ಟರೆ ಸಲುಗೆಯೇ? (3)
5. ಜಿಪುಣ ಇಲ್ಲಿದ್ದಾನೆ (3)
7. ಗುಗ್ಗರಿ ತಿನ್ನುವತ್ತಲೇ ಲಕ್ಷ್ಯ (2)
10. ನಕಾಸೆಯಲ್ಲಿ ಸೊಂಟಕ್ಕೆ ಸುತ್ತಿದ ವಸ್ತ್ರ ಕಾಣುವುದೇ? (2)
11. ಕೊನೆಗೆ ಲವನಿದ್ದರೆ ಮಸುಕಾದುದು ಕಾಣುತ್ತದೆ (3)
12. ಕಂಬಿಯ ಕಡೆ ತಿರುಗಿ ತೋರಿದ ಡೌಲು (2)
13. ನಗರದಲ್ಲಿ ಖರೀದಿಸಿರುವ ಆಭರಣ (2)
15. ಸೊಂಟದಿಂದ ಪ್ರಾರಂಭವಾದ ಕಂಪನ (3)
18. ಪರಿಶುದ್ಧತೆಯಿಂದಾದ ನಿರಿಗೆ! (3)
19. ಶ್ರಾದ್ಧದ ಊಟ (5)

ಮೇಲಿಂದ ಕೆಳಕ್ಕೆ
1. ಆತಂಕವನ್ನುಂಟುಮಾಡಿದ ಕೊಲೆಗಾರ (3)
2. ಮಡಿವಂತೆಯ ಆಶ್ರಯವಿದು (3)
3. ಆಶ್ಚರ್ಯ ಅಥವಾ ವಿಸ್ಮಯ (3)
4. ಒಂದೇ ಕಾಲದಲ್ಲಿದ್ದವನು (5)
6. ಕಿವಿಯಿಂದ ಕಿವಿಗೆ ಹರಡುವ ಮಾತು (5)
8. ದುರಸ್ತಿಯನ್ನು ಹೀಗೆ ಹೇಳಿ (3)
9. ವನದ ಕೊನೆಗಿರುವ ಮನೆ (3)
14. ಮನಸ್ಸು ಕೊಡುವುದು (3)
16. ಕಪಿಯ ಹತ್ತಿರವಿರುವ ಬೇಲದ ಹಣ್ಣು (3)
17. ಭೋಗವಿರುವ ಆಡಂಬರ (3)



5196ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುಂಗು 3.ಒನಕೆ
6.ರಿಕಾಪು 8.ರುಗ್ಣಾಲಯ
10.ಅರಣ್ಯ 11.ಬಹಳ
12.ಯಮದೂತ
15.ಕಪಟ 17.ರಸಿಕ
18.ರುಜು

ಮೇಲಿಂದ ಕೆಳಕ್ಕೆ:
2.ಗುಜರಿ 3.ಒನಪು
4.ಕೆಸರು 5.ಕುಟಿಲ
7.ಕಾರುಣ್ಯ 9.ಯಮಳ
10.ಅಳಿಯ 11.ಬಳಪ
13.ಮಹಲು 14.ತಸ್ಕರ
15.ಕಣಕ 16.ಟಗರು

ಸುಡೊಕು 5583

				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5582 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ವೆಂಕಟೇಶ್ವರ ರಾವ್, ಕನ್ಯಾಕುಮಾರಿಗೆ ಪ್ರಶಸ್ತಿ



ಕನ್ಯಾಕುಮಾರಿ



ವೆಂಕಟೇಶ್ವರ ರಾವ್

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ನೀಡುವ 'ಎಸ್.ವಿ. ನಾರಾಯಣಸ್ವಾಮಿ ರಾವ್ ರಾಷ್ಟ್ರೀಯ ಪ್ರಶಸ್ತಿ'ಗೆ ಮೃದಂಗ ವಾದಕ ಯಲ್ಲಾ ವೆಂಕಟೇಶ್ವರ ರಾವ್ ಹಾಗೂ ಪಿಟೀಲು ವಾದಕಿ ಎ. ಕನ್ಯಾಕುಮಾರಿ ಆಯ್ಕೆಯಾಗಿದ್ದಾರೆ. 2022 ಹಾಗೂ 2023ನೇ ಸಾಲಿಗೆ ಈ ಆಯ್ಕೆ ನಡೆದಿದೆ. ಪ್ರಶಸ್ತಿಯು ತಲಾ ₹ 50 ಸಾವಿರ ನಗದು, ಶ್ರೀರಾಮನ ಪಂಚ ಲೋಹದ ಪ್ರತಿಮೆಯನ್ನು ಒಳಗೊಂಡಿದೆ. ಈ ಇಬ್ಬರೂ 'ಪದ್ಮಶ್ರೀ ಪ್ರಶಸ್ತಿ' ಪುರಸ್ಕೃತರಾಗಿದ್ದಾರೆ. ಮಾ.25 ಹಾಗೂ 26ರಂದು ನಗರದ ಗಾಯನ ಸಮಾಜ ಸಭಾಂಗಣದಲ್ಲಿ ನಡೆಯುವ ಸಂಗೀತ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್ ತಿಳಿಸಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆ

'ಮುಸ್ಲಿಮರು ಭಯಪಡಬೇಕಿಲ್ಲ'

ನವದೆಹಲಿ (ಪಿಟಿಐ): 'ಭಾರತದಲ್ಲಿ ಮುಸ್ಲಿಮರು ಭಯಪಡುವ ಅಗತ್ಯ ಇಲ್ಲ, ಆದರೆ ಅವರು ತಮ್ಮ ಶ್ರೇಷ್ಠತೆಯ ಪ್ರತಿಪಾದನೆಯನ್ನು ಕೈಬಿಡಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಆರ್‌ಎಸ್‌ಎಸ್ ಮುಖವಾಣಿಗಳಾದ 'ಆರ್ಗನೈಸರ್' ಮತ್ತು 'ಪಾಂಚಜನ್ಯ'ಕ್ಕೆ ನೀಡಿದ ಸಂದರ್ಶನದಲ್ಲಿ ಅವರು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

'ಸರಳ ಸತ್ಯ ಏನೆಂದರೆ, ಹಿಂದುಸ್ತಾನವು ಹಿಂದುಸ್ತಾನವಾಗಿಯೇ ಉಳಿಯಬೇಕು. ಭಾರತದಲ್ಲಿನ ಮುಸ್ಲಿಮರಿಗೆ ಯಾವುದೇ ತೊಂದರೆ ಇಲ್ಲ. ಇಸ್ಲಾಂ ಧರ್ಮವೂ ಭಯಪಡಬೇಕಿಲ್ಲ' ಎಂದೂ ಹೇಳಿದ್ದಾರೆ.

'ಸಾವಿರಾರು ವರ್ಷಗಳಿಂದ ಹಿಂದೂ ಸಮಾಜ ಸಂಘರ್ಷ ಎದುರಿಸುತ್ತಲೇ ಬಂದಿದೆ. ಸದ್ಯ ಈ ಅಧುನಿಕತೆಯಲ್ಲಿ ಭಾರತ ಸೇರಿದಂತೆ ಇತರ ಕಡೆಗಳಲ್ಲಿ ಹಿಂದೂಗಳಲ್ಲಿ ಆಕ್ರಮಣಶೀಲತೆ ಕಂಡುಬರುತ್ತಿದೆ. ಹಿಂದೂಗಳಲ್ಲಿ ಜಾಗೃತಿ ಮೂಡುತ್ತಿರುವುದು ಇದಕ್ಕೆ ಕಾರಣ' ಎಂದು ಅವರು ವಿಶ್ಲೇಷಿಸಿದ್ದಾರೆ.

'ಹಿಂದೂ ಎಂಬುದು ನಮ್ಮ ಅಸ್ಮಿತೆ, ನಮ್ಮ ರಾಷ್ಟ್ರೀಯತೆ ಹಾಗೂ ನಮ್ಮ ನಾಗರಿಕತೆಯ ಗುಣಲಕ್ಷಣ. ಪ್ರತಿಯೊಬ್ಬರು ನಮ್ಮವರು ಎಂಬ ಪರಿಗಣನೆ, ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕು ಎಂಬುದು ನಮ್ಮ ವೈಶಿಷ್ಟ್ಯ'.

'ನಾನು ಹೇಳುವುದು ಮಾತ್ರ ಸತ್ಯ, ನೀವು ಹೇಳುವುದು ಸುಳ್ಳು ಎಂದು ಹಿಂದೂಗಳು ಎಂದೂ ಹೇಳುವುದಿಲ್ಲ. ನಿಮ್ಮ ಪ್ರಕಾರ ನಿಮ್ಮ ನಿಲುವು ಸರಿ, ನನ್ನ ನಂಬಿಕೆಯಂತೆ ನನ್ನದು ಸರಿ ಎನ್ನುವವರು ನಾವು. ಹೀಗಾಗಿ, ನಮ್ಮ ನಡುವೆ ಸಂಘರ್ಷ ಏಕೆ? ಎಲ್ಲರೂ ಒಟ್ಟಿಗೆ ಸಾಗಬೇಕು. ಇದೇ ಹಿಂದುತ್ವ' ಎಂದು ಭಾಗವತ್ ಹೇಳಿದ್ದಾರೆ.

ಭಾಗವತ್ ಅಭಿಪ್ರಾಯಕ್ಕೆ ನಕ್ವಿ ಶ್ಲಾಘನೆ: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಮುಸ್ಲಿಮರ ಕುರಿತ ಹೇಳಿಕೆಗೆ ಬಿಜೆಪಿ ನಾಯಕ ಮುಖ್ತರ್ ಅಬ್ಬಾಸ್ ನಕ್ವಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

'ಸಹಭಾಗಿತ್ವ ಮತ್ತು ಪ್ರಾಧಾನ್ಯತೆ ಸಾಧಿಸಲು ಹೋರಾಡದಿರುವ ಮನೋಭಾವವು ದೇಶವನ್ನು ಪ್ರಗತಿಯ ಪಥದತ್ತ ಕೊಂಡೊಯ್ಯುತ್ತದೆ. ಇದರ ಫಲವಾಗಿ ವಿಶ್ವದ 10 ಮುಸ್ಲಿಮರಲ್ಲಿ ಒಬ್ಬರು ಭಾರತದಲ್ಲಿ ವಾಸಿಸುತ್ತಿದ್ದಾರೆ. ಅವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಕ್ಕುಗಳು ಸಂಪೂರ್ಣವಾಗಿ ಸುರಕ್ಷಿತವಾಗಿವೆ' ಎಂದು ಅವರು ಹೇಳಿದರು.

ಮನುಷ್ಯ ಮನುಷ್ಯನಾಗಿಯೇ ಉಳಿಯಬೇಕು: ಸಿಬಲ್


'ಹಿಂದೂಸ್ತಾನವು ಹಿಂದೂಸ್ತಾನವಾಗಿಯೇ ಉಳಿಯಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆಗೆ ತಿರುಗೇಟು ನೀಡಿರುವ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, 'ಭಾಗವತ್ ಅವರ ಮಾತನ್ನು ಒಪ್ಪುತ್ತೇನೆ. ಆದರೆ, ಮನುಷ್ಯ ಮನುಷ್ಯನಾಗಿಯೇ ಉಳಿಯಬೇಕು' ಎಂದು ಬುಧವಾರ ಹೇಳಿದ್ದಾರೆ.

ಇತ್ತೀಚೆಗೆ, ಸಂದರ್ಶನವೊಂದರಲ್ಲಿ ಭಾಗವತ್, 'ಭಾರತದಲ್ಲಿ ಮುಸ್ಲಿಮರು ಭಯಪಡುವ ಅಗತ್ಯ ಇಲ್ಲ, ಆದರೆ ಅವರು ತಮ್ಮ ಶ್ರೇಷ್ಠತೆಯ ಪ್ರತಿಪಾದನೆಯನ್ನು ಕೈಬಿಡಬೇಕು' ಎಂದು ಹೇಳಿದ್ದರು.

ಭಾಗವತ್ ಅವರ ಹೇಳಿಕೆಗೆ ಸಿಬಲ್ ಅವರು ಸರಣಿ ಟ್ವೀಟ್‌ಗಳ ಮೂಲಕ ಪ್ರತಿಕ್ರಿಯಿಸಿದ್ದಾರೆ.

'ಎಲ್‌ಜಿಬಿಟಿ ಸಮುದಾಯಕ್ಕೆ ಬೆಂಬಲ'

ಲೈಂಗಿಕ ಅಲ್ಪಸಂಖ್ಯಾತರಾದ ಎಲ್‌ಜಿಬಿಟಿ ಸಮುದಾಯದವರ ಹಕ್ಕುಗಳಿಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಬೆಂಬಲ ವ್ಯಕ್ತಪಡಿಸಿದ್ದಾರೆ.



ಮೋಹನ್ ಭಾಗವತ್

ಆರ್‌ಎಸ್‌ಎಸ್ ಮುಖವಾಣಿಗಳಾದ 'ಆರ್ಗನೈಸರ್' ಮತ್ತು 'ಪಾಂಚಜನ್ಯ'ಕ್ಕೆ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಮಾತನಾಡಿರುವ ಅವರು, 'ಎಲ್‌ಜಿಬಿಟಿ ಸಮುದಾಯದವರು ಕೂಡ ಸಮಾಜದ ಭಾಗವಾಗಿದ್ದಾರೆ. ಅವರಿಗೂ ಜೀವನವಿದ್ದು, ಅವರ ಜೀವನವನ್ನು ನಾವು ಗೌರವಿಸಬೇಕು' ಎಂದು ಹೇಳಿದ್ದಾರೆ.

ಸಲಿಂಗಿಗಳ ವಿವಾಹವನ್ನು ಕಾನೂನುಬದ್ಧಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ತನ್ನ ಪ್ರತಿಕ್ರಿಯೆ ಸಲ್ಲಿಸಬೇಕಿದೆ. ಈ ಸಂದರ್ಭದಲ್ಲಿಯೇ ಆರ್‌ಎಸ್‌ಎಸ್ ಮುಖ್ಯಸ್ಥರ ಈ ಹೇಳಿಕೆಗೆ ಮಹತ್ವ ಬಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಅವರಿಗೂ ಖಾಸಗಿತನ ಹಾಗೂ ಸಾಮಾಜಿಕ ಬದುಕು ಅಗತ್ಯ. ಅವರು ನಮ್ಮಂತೆಯೇ ಮನುಷ್ಯರು. ಇತರರಂತೆ ಅವರಿಗೂ ಜೀವಿಸುವ ಹಕ್ಕಿದೆ. ಎಲ್‌ಜಿಬಿಟಿ ಸಮುದಾಯಕ್ಕೆ ತಾವು ಬೆಂಬಲಿಸುತ್ತಿರುವುದಕ್ಕೆ ಹಿಂದೂ ಧರ್ಮಗ್ರಂಥಗಳು ಹಾಗೂ ಪುರಾಣಗಳೇ ಆಧಾರ' ಎಂದಿದ್ದಾರೆ.

ಮುಸ್ಲಿಮರಿಗೆ ಅನುಮತಿ ನೀಡಲು ಭಾಗವತ್ ಯಾರು: ಓವೈಸಿ

ಹೈದರಾಬಾದ್: ಮುಸ್ಲಿಮರು ಭಾರತದಲ್ಲಿ ವಾಸಿಸಲು ಅನುಮತಿ ನೀಡಲು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಯಾರು ಮತ್ತು ಮುಸ್ಲಿಮರ ಪೌರತ್ವಕ್ಕೆ ಷರತ್ತು ವಿಧಿಸಲು ಅವರಿಗೆ ಎಷ್ಟು ಧೈರ್ಯ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಕಿಡಿಕಾರಿದ್ದಾರೆ.

ಭಾಗವತ್ ಹೇಳಿಕೆ ಬೆನ್ನಲ್ಲೇ ಸರಣಿ ಟ್ವೀಟ್ ಮಾಡಿರುವ ಒವೈಸಿ, 'ಭಾರತದಲ್ಲಿ ವಾಸಿಸಲು ಅಥವಾ ನಮ್ಮ ನಂಬಿಕೆಯನ್ನು ಅನುಸರಿಸಲು ಅನುಮತಿ ನೀಡಲು ಮೋಹನ್ ಯಾರು? ನಮ್ಮ ನಂಬಿಕೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇರಲು ಇಲ್ಲಿ ವಾಸಿಸುತ್ತಿಲ್ಲ ಎಂದು ಹೇಳಿದ್ದಾರೆ.

'ಹಿಂದೂಗಳ ಪ್ರತಿನಿಧಿಯಾಗಿ ಮೋಹನ್ ಅವರನ್ನು ಆಯ್ಕೆ ಮಾಡಿದ್ದು ಯಾರು? ಅವರು 2024ರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆಯೇ? ಅವರಿಗೆ ಸ್ವಾಗತ' ಎಂದು ಅವರು ಹೇಳಿದ್ದಾರೆ.

ಸುಧಾ, ಮಯೂರ ಓದಿರಿ

50 ಸ್ಥಳಗಳಲ್ಲಿ ಸಿಬಿಐ ಶೋಧ

ನವದೆಹಲಿ (ಪಿಟಿಐ): ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ಸಿಬಿಐ ಬುಧವಾರ 'ಆಪರೇಷನ್ ಕನಕ್' ಆರಂಭಿಸಿದ್ದು, ಚಂಡೀಗಢದ ಡಿಜಿಎಂ ದರ್ಜೆ ಅಧಿಕಾರಿಯನ್ನು ಬಂಧಿಸಿದ ನಂತರ ಪಂಜಾಬ್, ಹರಿಯಾಣ ಮತ್ತು ದೆಹಲಿಯ 50 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಫ್‌ಸಿಐ ಕಾರ್ಯನಿರ್ವಾಹಕ ನಿರ್ದೇಶಕ ಸುದೀಪ್ ಸಿಂಗ್ ಸೇರಿದಂತೆ ಒಟ್ಟು 74 ಆರೋಪಿಗಳ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

'ನಾಟು ನಾಟು' ಗೀತೆಗೆ ಗೋಲ್ಡನ್ ಗ್ಲೋಬ್ ಗರಿ

ಒಂದನೇ ಪುಟದಿಂದ...

ಹಾಲಿವುಡ್ ಫಾರಿನ್ ಪ್ರೆಸ್ ಅಸೋಸಿಯೇಷನ್ ಮಂಗಳವಾರ ರಾತ್ರಿ ಆಯೋಜಿಸಿದ್ದ ವರ್ಣರಂಜಿತ ಸಮಾರಂಭದಲ್ಲಿ ಅಮೆರಿಕದ ನಟಿ ಜೆನ್ನಾ ಒರ್ಟೆಗಾ ಅವರು ಪ್ರಶಸ್ತಿಯನ್ನು ಪ್ರಕಟಿಸುತ್ತಿದ್ದಂತೆ 'ಆರ್‌ಆರ್‌ಆರ್' ಪಾಳಯದಲ್ಲಿ ಸಂತಸದ ಹೊನಲು ಹೊಮ್ಮಿತು. ನಿರ್ದೇಶಕ ರಾಜಮೌಳಿ, ನಟರಾದ ಜೂನಿಯರ್ ಎನ್‌ಟಿಆರ್ ಹಾಗೂ ರಾಮ್‌ಚರಣ್ ಅವರು ಚಪ್ಪಾಳೆ ತಟ್ಟಿ ಖುಷಿಪಟ್ಟರು. ಕೀರವಾಣಿ ಅವರು ವಿಜಯ ವೇದಿಕೆ ಮೇಲೆ ಟ್ರೋಫಿ ಹಿಡಿದು ಸಂಭ್ರಮಿಸಿದರು.

'ಈ ಸಾಧನೆಗೆ ನನ್ನ ತಮ್ಮ ರಾಜಮೌಳಿಯೂ ಕಾರಣೀಕರ್ತ. 'ಆರ್‌ಆರ್‌ಆರ್' ಆತನ ಕಲ್ಪನೆಯ ಕೂಸು. ಆತ ನಿರಂತರವಾಗಿ ನನ್ನ ಕೆಲಸದ ಮೇಲೆ ಇಟ್ಟಿದ್ದ ನಂಬಿಕೆ ಹಾಗೂ ಬೆಂಬಲಕ್ಕೆ ಎಷ್ಟು ಬಾರಿ ಕೃತಜ್ಞತೆ ಹೇಳಿದರೂ ಸಾಲದು' ಎಂದು ಕೀರವಾಣಿ ಭಾವುಕರಾಗಿ ನುಡಿದರು.

'ಮಾತು ಹೊರಡುತ್ತಿಲ್ಲ. ಸಂಗೀತಕ್ಕೆ ಯಾವ ಗಡಿಗಳ ಹಂಗಿಲ್ಲ. ಅದು ಎಲ್ಲದಕ್ಕೂ ಮಿಗಿಲಾದುದು' ಎಂದು ರಾಜಮೌಳಿ ಟ್ವೀಟ್ ಮಾಡಿದ್ದಾರೆ.

ಈ ಗೀತೆಯನ್ನು ಕೀರವಾಣಿ ಅವರ ಪುತ್ರ ಕಾಲ ಭೈರವ ಹಾಗೂ ರಾಹುಲ್ ಸಿಪ್ಲಿಗಂಜ್ ಅವರು ಹಾಡಿದ್ದರು. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಅಧಿಕೃತ ನಿವಾಸದ ಹೊರಭಾಗದಲ್ಲಿ ಈ ಗೀತೆಯ ಚಿತ್ರೀಕರಣ ನಡೆದಿತ್ತು. ನನ್ನ ಪಾಲಿಗೆ ಇದು ಅತ್ಯಂತ ಖುಷಿ ಹಾಗೂ ಭಾವನಾತ್ಮಕವಾದ ಕ್ಷಣ ಎಂದು ಗಾಯಕ ರಾಹುಲ್ ಸಿಪ್ಲಿಗಂಜ್ ಹೇಳಿದ್ದಾರೆ.

ಕೈತಪ್ಪಿದ ಅತ್ಯುತ್ತಮ ಚಿತ್ರ ಪ್ರಶಸ್ತಿ: 'ಆರ್‌ಆರ್‌ಆರ್' ಚಿತ್ರವು 'ಇಂಗ್ಲಿಷೇತರ ಅತ್ಯುತ್ತಮ ಚಿತ್ರ' ಪ್ರಶಸ್ತಿಗೂ ನಾಮನಿರ್ದೇಶನಗೊಂಡಿತ್ತು. ಆದರೆ ಪ್ರಶಸ್ತಿ ಕೈತಪ್ಪಿತು. ಅರ್ಜೆಂಟೀನಾದ 'ಅರ್ಜೆಂಟೀನಾ-1985' ಚಿತ್ರಕ್ಕೆ ಈ ವಿಭಾಗದ ಪ್ರಶಸ್ತಿ ಒಲಿಯಿತು.

ಅಭಿನಂದನೆಗಳ ಮಹಾಪೂರ: ಪ್ರಧಾನಿ ಮೋದಿ ಸೇರಿದಂತೆ ಭಾರತೀಯ ಚಿತ್ರರಂಗದ ಗಣ್ಯರು 'ಆರ್‌ಆರ್‌ಆರ್' ಚಿತ್ರ ತಂಡವನ್ನು ಅಭಿನಂದಿಸಿದ್ದಾರೆ.

ಸಂಗೀತ ನಿರ್ದೇಶಕ, ಗೋಲ್ಡನ್ ಗ್ಲೋಬ್ ಪ್ರಶಸ್ತಿ ಪಡೆದ ಮೊದಲ ಭಾರತೀಯ ಎಂಬ ಹಿರಿಮೆ ಹೊಂದಿರುವ ಎ.ಆರ್.ರಹಮಾನ್, ಬಾಲಿವುಡ್ ನಟರಾದ ಅಮಿತಾಭ್ ಬಚ್ಚನ್, ಶಾರುಖ್ ಖಾನ್, ಅಕ್ಷಯ್ ಕುಮಾರ್, ತೆಲುಗು ನಟರಾದ ಪ್ರಭಾಸ್, ನಾಗಾರ್ಜುನ, ಚಿರಂಜೀವಿ, ಮಹೇಶ್ ಬಾಬು ಅವರೂ ಚಿತ್ರತಂಡದ ಸಾಧನೆಯನ್ನು ಶ್ಲಾಘಿಸಿದ್ದಾರೆ.

ಆದಿಯೋಗಿ ಮೂರ್ತಿ ಪ್ರತಿಷ್ಠಾಪನೆಗೆ ಹೈಕೋರ್ಟ್ ತಡೆ

ಒಂದನೇ ಪುಟದಿಂದ...

ಈ ಸಂಬಂಧ ಚಿಕ್ಕಬಳ್ಳಾಪುರ ತಾಲ್ಲೂಕಿನ ಚಂಬಳ್ಳಿಯ ಕೃಷಿಕ ಎಸ್. ಕ್ಯಾತಪ್ಪ, ಮುಸ್ಟೂರು ಗ್ರಾಮದ ಜಿ.ಎಂ.ಶ್ರೀಧರ ಸೇರಿದಂತೆ ನಾಲ್ವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್ ವಾದ ಮಂಡಿಸಿ, 'ಆವಲಗುರ್ಕಿ ಗ್ರಾಮದ ಸರ್ವೆ ನಂಬರ್ 174 ರಿಂದ 287ರ ವ್ಯಾಪ್ತಿಯಲ್ಲಿರುವ ಸುಳಿಕುಂಟೆ, ಕೇಶವನಹಳ್ಳಿ, ಹನುಮಂತಾಪುರ, ಬೈರೋಜನಹಳ್ಳಿ, ವಡ್ಡರಪಾಳ್ಯ, ಲಿಂಗಶೆಟ್ಟಿಹಳ್ಳಿಯಲ್ಲಿ ಕಂದಾಯ ಜಮೀನುಗಳನ್ನು ಶಾಸನಾತ್ಮಕ ನಿಯಮ ಮೀರಿ ಈಶಾ ಯೋಗ ಕೇಂದ್ರಕ್ಕೆ ನೀಡಿದೆ' ಎಂದು ಆಕ್ಷೇಪಿಸಿದರು.

'ಇಲ್ಲಿ ಐತಿಹಾಸಿಕ ನಂದಿಬೆಟ್ಟ ಪ್ರದೇಶವಿದ್ದು, ಇಲ್ಲಿರುವ ದಿಬ್ಬಗಿರಿ, ಬ್ರಹ್ಮಗಿರಿ, ಚೆನ್ನಗಿರಿ, ನಂದಿಗಿರಿ ಹಾಗೂ ಸ್ಕಂದಗಿರಿ ಬೆಟ್ಟಗಳು ಪೌರಾಣಿಕ ಮಹತ್ವ ಪಡೆದಿವೆ. ಅಂತೆಯೇ ಸುತ್ತಲಿನ ಭೂ ಪ್ರದೇಶವು ಅಮೂಲ್ಯ ವೃಕ್ಷ ಸಂಪತ್ತಿನಿಂದ ಕೂಡಿದೆ. ಆದರೆ, ಈಶಾ ಕೇಂದ್ರವು ಇಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಉದ್ದೇಶ ಹೊಂದಿದ್ದು, ಇದರಿಂದ ಸ್ಥಳೀಯ ಪರಿಸರವೂ ಸೇರಿದಂತೆ ಆವಲಗುರ್ಕಿಯಲ್ಲಿರುವ ಭೂ ಪ್ರದೇಶಕ್ಕೆ ಹಾನಿಯುಂಟಾಗಲಿದೆ. ಹಾಗಾಗಿ, ಇಂತಹ ಯಾವುದೇ ಚಟುವಟಿಕೆಗೆ ಅವಕಾಶ ನೀಡದಂತೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಆಕ್ಷೇಪ ಏನು?: 'ವಿವಿಧ ಸರ್ವೆ ನಂಬರ್‌ಗಳಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಈಶಾ ಯೋಗ ಕೇಂದ್ರಕ್ಕೆ ಮಂಜೂರು ಮಾಡಿರುವ ಕ್ರಮವು, ಪರಿಸರ ಸಂರಕ್ಷಣಾ ಕಾಯ್ದೆ-1986, ಭಾರತೀಯ ಅರಣ್ಯ ಕಾಯ್ದೆ-1927, ಸಂರಕ್ಷಣಾ ನಿಯಮಗಳು-2003, ಕರ್ನಾಟಕ ಭೂ ಕಂದಾಯ ಕಾಯ್ದೆ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ-1987 ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ಕ್ಕೆ ವಿರುದ್ಧವಾಗಿದೆ' ಎಂದು ಆಕ್ಷೇಪಿಸಿದರು.

ಈ ವಾದವನ್ನು ಮಾನ್ಯ ಮಾಡಿದ ನ್ಯಾಯಪೀಠವು, ಪ್ರತಿವಾದಿಗಳಾದ ಕೇಂದ್ರ ಪರಿಸರ ಸಚಿವಾಲಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಈಶಾ ಯೋಗ ಕೇಂದ್ರವೂ ಸೇರಿದಂತೆ ಒಟ್ಟು 16 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಆದೇಶ ತೆರವಿಗೆ ಮನವಿ

ಬೆಳಗಿನ ಕಲಾಪದಲ್ಲಿ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸುತ್ತಿದ್ದಂತೆಯೇ, ಇಶಾ ಯೋಗ ಕೇಂದ್ರದ ಪರವಾಗಿ ಹಿರಿಯ ವಕೀಲ ಉದಯ ಹೊಳ್ಳ ಅವರು ಮಧ್ಯಾಹ್ನ ನ್ಯಾಯಪೀಠದ ಮುಂದೆ ಹಾಜರಾಗಿ, 'ಆದಿಯೋಗಿ ಪ್ರತಿಮೆ ಬಳಿ ಇದೇ 15ರಂದು ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದರೆ, ನ್ಯಾಯಾಲಯದ ಯಥಾಸ್ಥಿತಿ ಆದೇಶದಿಂದ ಕಾರ್ಯಕ್ರಮಕ್ಕೆ ತೊಂದರೆಯಾಗುವ ಸಾಧ್ಯತೆಯಿದ್ದು ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು' ಎಂದು ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು 13ಕ್ಕೆ ನಿಗದಿಪಡಿಸಿತು.

ಗಾಂಜಾ ಮಾರಾಟ, ಸೇವನೆ: ವೈದ್ಯರು, ವೈದ್ಯ ವಿದ್ಯಾರ್ಥಿಗಳು ಸೇರಿ 10 ಮಂದಿ ಸೆರೆ

ಒಂದನೇ ಪುಟದಿಂದ...

'ಹೆಚ್ಚಿನ ವಿಚಾರಣೆ ಸಲುವಾಗಿ ಇವರನ್ನು ಎರಡು ದಿನ ಪೊಲೀಸ್ ಕಸ್ಟಡಿಗೆ ಪಡೆದಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಆರೋಪಿಗಳಿಂದ ಗಾಂಜಾ, ಡ್ರ್ಯಾಗರ್, ಮೊಬೈಲ್, ಡೈರಿ, ಹಾಗೂ ಇತರ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ವಶಕ್ಕೆ ಪಡೆದಿದ್ದೇವೆ. ನೀಲ್‌ಕಿಶೋರ್ ರಾಮ್‌ಜಿಯಿಂದ 2 ಕೆ.ಜಿ.ಗೂ ಅಧಿಕ ಗಾಂಜಾ ವಶಕ್ಕೆ ಪಡೆದಿದ್ದೇವೆ' ಎಂದು ಅವರು ಮಾಹಿತಿ ನೀಡಿದರು.

'ಬಂಧಿತ ಯುವತಿಯರು ಎಂಬಿಬಿಎಸ್ ಮತ್ತು ಬಿಡಿಎಸ್ ಅಂತಿಮ ವರ್ಷದಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದಾರೆ. ಐವರು ಪುರುಷರಲ್ಲಿ ಒಬ್ಬರು ಎಂ.ಡಿ. ಅಧ್ಯಯನ ಮಾಡುತ್ತಿದ್ದಾರೆ. ಇನ್ನಿಬ್ಬರು ಬಿಡಿಎಸ್ ವಿದ್ಯಾರ್ಥಿಗಳು. ಆರೋಪಿಗಳು ಮಾದಕ ದ್ರವ್ಯ ಮಾರಾಟದಲ್ಲಿ ಭಾಗಿಯಾದ ಹಾಗೂ ಸೇವನೆ ಮಾಡಿದ ಬಗ್ಗೆ ಸಾಕಷ್ಟು ಮಾಹಿತಿ ಸಿಕ್ಕಿದೆ. ಪಾರ್ಟಿ ಮಾಡುವ ಸಂದರ್ಭದಲ್ಲಿ ಮಾದಕ ದ್ರವ್ಯ ಬಳಸಿದ್ದಾರೆ. ಈ ಆರೋಪಿಗಳಿಂದ ಕಲೆ ಹಾಕಿದ ಮಾಹಿತಿ ಆಧಾರದಲ್ಲಿ ಇನ್ನಷ್ಟು ಜನರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಿದ್ದೇವೆ' ಎಂದರು.

'ನಗರದ ಬಂಟ್ಸ್ ಹಾಸ್ಟೆಲ್ ರಸ್ತೆ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಮನೆಯಲ್ಲಿ ಗಾಂಜಾ ಮಾರಾಟ ನಡೆಯುತ್ತಿರುವ ಮಾಹಿತಿ ಸಿಕ್ಕಿತ್ತು. ಜ.7ರಂದು ಬಿಡಿಎಸ್ ವಿದ್ಯಾರ್ಥಿ ನೀಲ್‌ಕಿಶೋರ್ ರಾಮ್‌ಜಿ ಷಾ ಎಂಬಾತನನ್ನು ಬಂಧಿಸಿ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದೆವು. ಬ್ರಿಟನ್ ನಿವಾಸಿಯಾಗಿದ್ದ ಆತ ಅನಿವಾಸಿ ಭಾರತೀಯ ಕೋಟಾ ಅಡಿ 15 ವರ್ಷಗಳಿಂದ ನಗರದಲ್ಲಿ ವಾಸವಾಗಿರುವುದು ಹಾಗೂ ನಗರದ ಪ್ರತಿಷ್ಠಿತ ದಂತ ವೈದ್ಯ ಕಾಲೇಜಿನಲ್ಲಿ ನಾಲ್ಕನೇ ವರ್ಷದ ಬಿಡಿಎಸ್ ವಿದ್ಯಾರ್ಥಿಯಾಗಿರುವುದು ಕಂಡು ಬಂದಿತ್ತು. ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ಮಾಡಿದಾಗ, ನಗರ ಪ್ರತಿಷ್ಠಿತ ವೈದ್ಯಕಿಯ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳೂ ಗಾಂಜಾ ಮಾರಾಟ ಮತ್ತು ಸೇವನೆಯಲ್ಲಿ ತೊಡಗಿರುವುದು ಗೊತ್ತಾಯಿತು' ಎಂದರು.

ಸುಪ್ರೀಂಕೋರ್ಟ್ ಇ ಸೇವೆಗೆ ಅಡ್ಡಿ

ನವದೆಹಲಿ (ಪಿಟಿಐ): ದತ್ತಾಂಶ ಕೇಂದ್ರದಲ್ಲಿ ಸರ್ವರ್ ಗಳು ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ ಇ-ಸೇವೆಗಳಿಗೆ ಬುಧವಾರ ಅಡ್ಡಿ ಉಂಟಾಯಿತು.

'ಡೇಟಾ ಕೇಂದ್ರದ ಸರ್ವರ್‌ಗಳಲ್ಲಿ ಅಸಮರ್ಪಕ ಕಾರ್ಯನಿರ್ವಹಣೆಯಿಂದಾಗಿ ಕಂಪ್ಯೂಟರ್ ಅಪ್ಲಿಕೇಶನ್‌ಗಳು, ಐಟಿ ಸೇವೆಗೆ ಅಡಚಣೆ ಉಂಟಾಯಿತು' ಎಂದು ಅಧಿಕಾರಿಯೊಬ್ಬರು ಹೊರಡಿಸಿದ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ತಜ್ಞರ ತಂಡದ ಪರಿಶೀಲನೆ ಬಳಿಕ ಐಟಿ ಸೇವೆ, ಕಂಪ್ಯೂಟರ್ ಅಪ್ಲಿಕೇಶನ್‌ಗಳು ಪುನರಾರಂಭಗೊಂಡಿತು ಎಂದು ಅಧಿಕಾರಿ ತಿಳಿಸಿದರು.

ದಾಭೋಲ್ಕರ್ ಹತ್ಯೆ: ತನಿಖೆಯ ಸ್ಥಿತಿ ತಿಳಿಸಲು ಸೂಚನೆ

ಮುಂಬೈ (ಪಿಟಿಐ): ವಿಚಾರವಾದಿ ಡಾ.ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದ ತನಿಖೆಯ ಪ್ರಗತಿ ವರದಿಯನ್ನು ಜ. 30ರೊಳಗೆ ತಿಳಿಸುವಂತೆ ಬಾಂಬೆ ಹೈಕೋರ್ಟ್ ಬುಧವಾರ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎ. ಎಸ್. ಗಡ್ಕರಿ ಮತ್ತು ಪಿ. ಡಿ. ನಾಯಕ್ ವಿಭಾಗೀಯ ಪೀಠವು ದಾಭೋಲ್ಕರ್ ಅವರ ಪುತ್ರಿ ಮುಕ್ತಾ ದಾಭೋಲ್ಕರ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸುತ್ತಿದ್ದು, ತನಿಖೆಯ ಮೇಲ್ವಿಚಾರಣೆ ಮುಂದುವರಿಸುವಂತೆ ಕೋರಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಕೇತನ್ ತಿರೋಡ್ಕರ್ ಹಾಗೂ ಮುಕ್ತಾ ದಾಭೋಲ್ಕರ್ ಅವರ ಅರ್ಜಿಯ ನಂತರ 2014 ರಲ್ಲಿ ಹೈಕೋರ್ಟ್ ತನಿಖೆಯನ್ನು ಪುಣೆ ಪೊಲೀಸರಿಂದ ಸಿಬಿಐಗೆ ವರ್ಗಾಯಿಸಿತ್ತು. ಅಂದಿನಿಂದ ಹೈಕೋರ್ಟ್ ಪ್ರಕರಣದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುತ್ತಿದೆ.

2013ರ ಆ. 20ರಂದು ಪುಣೆಯಲ್ಲಿ ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿದ್ದ ವಿಚಾರವಾದಿ ದಾಭೋಲ್ಕರ್ (67) ಅವರನ್ನು ಇಬ್ಬರು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದರು.

ದಾಳಿಕೋರರು ಮೂಲಭೂತವಾದಿ ಹಿಂದೂ ಸಂಘಟನೆಯಾದ ಸನಾತನ ಸಂಸ್ಥೆಯೊಂದಿಗೆ ಸಂಪರ್ಕ ಹೊಂದಿದ್ದರು ಎಂದು ಆರೋಪಿಸಲಾಗಿದೆ.

ಸಿಬಿಐ ಇದುವರೆಗೆ ಐದು ಜನರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಿದೆ.

ನಾನು ಬಿಜೆಪಿ ಕಾರ್ಯಕರ್ತ: ಸ್ಯಾಂಟ್ರೊ ರವಿ

ಒಂದನೇ ಪುಟದಿಂದ...

ಬಿಜೆಪಿಯಲ್ಲಿ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡಿದ್ದಾಗ ಈ ಅಧಿಕಾರಿಗಳು ಪರಿಚಯ ಆಗಿದ್ದರು, ನನಗೆ ಗೊತ್ತಿರುವ ರಾಜಕೀಯ ವ್ಯಕ್ತಿಗಳ ಸಹಾಯದಿಂದ ವರ್ಗಾವಣೆ ಮಾಡಿಸಿರುತ್ತೇನೆ. ಅವರಿಂದ ಕಮಿಷನ್ ಪಡೆದಿಲ್ಲ' ಎಂದು ರವಿ ಹೇಳಿದ್ದಾರೆ.

ವರ್ಗಾವಣೆ ಸಂಬಂಧ ಹಲವು ಅಧಿಕಾರಿಗಳಿಗೆ ಹಾಗೂ ಸಚಿವರ ಆಪ್ತರಿಗೆ ಸ್ಯಾಂಟ್ರೊ ರವಿ ಸಂದೇಶಗಳನ್ನು ಕಳುಹಿಸಿರುವ ಮಾಹಿತಿಯನ್ನೂ ಹೇಳಿಕೆಯಲ್ಲಿ ದಾಖಲಿಸಿದ್ದು, 'ಅಶೋಕ ನಗರ ಠಾಣೆಯ ಇನ್‌ಸ್ಪೆಕ್ಟರ್ ವರ್ಗಾವಣೆಗೆ ಸಂಬಂಧಿಸಿದಂತೆ 2022ರ ಜ.19ರಂದು ರಾಜ್ಯ ಗೃಹ ಸಚಿವರ ಕಚೇರಿ ಪಿ.ಎ. ವಿಕ್ರಮ್ ಅವರಿಗೆ ಹಾಗೂ ಜ.21ರಂದು ಶಿವಮೊಗ್ಗದ ಇನ್‌ಸ್ಪೆಕ್ಟರ್ ರಾಜೇಂದ್ರ ಅವರಿಗೆ ಸಂದೇಶ ಕಳುಹಿಸಿದ್ದೆ. ಬಿ.ಬಿ. ಗಿರೀಶ್ ಅವರನ್ನು ಅಶೋಕನಗರ ಠಾಣೆಗೆ ವರ್ಗಾವಣೆ ಮಾಡಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಜ.13 ಹಾಗೂ 15ರಂದು ಗೃಹ ಸಚಿವರ ಆತ್ಮೀಯ ಸ್ನೇಹಿತರಾದ ಶಿವಮೊಗ್ಗದ ಬಿಜೆಪಿ ಮುಖಂಡ ಬಸವರಾಜ ಒಡ್ಡಾಳ, ಶ್ರೀನಾಥ ಅವರಿಗೆ ಸಂದೇಶ ಕಳುಹಿಸಿದ್ದೇನೆ' ಎಂದು ಹೇಳಿದ್ದಾರೆ.

'ಇನ್‌ಸ್ಪೆಕ್ಟರ್ ಹುದ್ದೆಗಳು ಖಾಲಿ ಇರುವ ಠಾಣೆಯ ಮಾಹಿತಿ ಸಂಗ್ರಹಿಸಲು ಡಿ.ಜಿ ಹಾಗೂ ಐಜಿಪಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಣ್ ಅವರಿಗೆ, ಬಿಡಿಎನಲ್ಲಿದ್ದ ಕೆಎಎಸ್ ಅಧಿಕಾರಿ ಆನಂದ ಅವರನ್ನು ಮುಡಾಗೆ ವರ್ಗಾವಣೆ ಮಾಡಿಸಲು ಸಂದೇಶ, ಮೈಸೂರು ಐಜಿಪಿ ಕಚೇರಿಯಲ್ಲಿ ಪಿಎಸ್ ಆಗಿರುವ ಮಹೇಶ್ ಅವರಿಗೆ ಹಲಗೂರು ಠಾಣೆಗೆ ವರ್ಗಾವಣೆ ಮಾಡಿಸುವ ಸಂಬಂಧ ಸಂದೇಶ ಕಳುಹಿಸಿದ್ದೇನೆ' ಎಂದು ರವಿ ತಿಳಿಸಿದ್ದಾರೆ.

'ಮುಂದೆ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಹಣಕಾಸಿನ ವ್ಯವಹಾರ ಹಾಗೂ ರಾಜಕೀಯ ವ್ಯಕ್ತಿಗಳಿಗೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲ' ಎಂಬ ಮುಚ್ಚಳಿಕೆ ಪತ್ರವನ್ನು 2022ರ ಜ.22ರಂದು ಬರೆದುಕೊಟ್ಟು ಸಹಿ ಹಾಕಿದ್ದಾರೆ.

ದೂರಿನಲ್ಲೇನಿತ್ತು?

ಕೆಂಗೇರಿ ಉಪ ವಿಭಾಗದ ಎಸಿಪಿ ಹಾಗೂ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಗೆ ಜಗದೀಶ್ ದೂರು ನೀಡಿದ್ದರು.

'ಮಂಜುನಾಥ್ ಎಂಬುವನು ತೋರಿಕೆಗಾಗಿ ಮೂರ್ನಾಲ್ಕು ಕಾರು ಇಟ್ಟುಕೊಂಡು, ನನ್ನ ಹೆಂಡತಿ ವಕೀಲೆ ಎಂದು ಹೇಳಿಕೊಂಡು ರಾಜಕೀಯ ಮುಖಂಡರ ಜೊತೆ ಇರುವ ಫೋಟೊ ತೋರಿಸಿ ವರ್ಗಾವಣೆ ಮಾಡಿಸಿಕೊಡುತ್ತೇನೆ ಎಂದು ನಂಬಿಸಿ ಹಣ ಪಡೆದು ಮೋಸ ಮಾಡುತ್ತಿದ್ದಾನೆ. 2000-05ರಲ್ಲಿ ಮಂಡ್ಯ ಹಾಗೂ ಮೈಸೂರಿನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸಿದ ಸಂಬಂಧ ಪ್ರಕರಣಗಳು ದಾಖಲಾಗಿವೆ. ಅಕ್ರಮವಾಗಿ ₹ 60 ಕೋಟಿ ಆಸ್ತಿಯನ್ನು ಮಾಡಿದ್ದಾನೆ. ಆತನ ವಿರುದ್ಧ ಕ್ರಮ ವಹಿಸಬೇಕು' ಎಂದು ದೂರಿನಲ್ಲಿ ಹೇಳಿದ್ದರು.

ತನಿಖಾಧಿಕಾರಿಗೆ ದಾಖಲೆ ಸಲ್ಲಿಕೆ

ಮೈಸೂರು: 'ಸ್ಯಾಂಟ್ರೊ ರವಿ ಪ್ರಕರಣದ ವಿಚಾರಣೆ ನಡೆಸುತ್ತಿರುವ ತನಿಖಾಧಿಕಾರಿ ಎಸಿಪಿ ಅವರಿಗೆ ಮುಚ್ಚಿದ ಲಕೋಟೆಯಲ್ಲಿ ಸಂಬಂಧಿಸಿದ ದಾಖಲೆಯನ್ನು ಸಲ್ಲಿಸಲಾಗಿದೆ' ಎಂದು 'ಒಡನಾಡಿ' ಸಂಸ್ಥಾಪಕ ಸ್ಟ್ಯಾನ್ಲಿ ಬುಧವಾರ ಹೇಳಿದರು.

'ಮಹಜರು ಸಲುವಾಗಿ ಸಂತ್ರಸ್ತೆಯನ್ನು ಕರೆದೊಯ್ದಿದ್ದಾರೆ. ಆಕೆಯ ಸಹೋದರಿಯ ಹೇಳಿಕೆಯನ್ನು ಸಿಆರ್‌ಪಿಸಿ 164 ಅಡಿ ನ್ಯಾಯಾಲಯವು ದಾಖಲಿಸಿಕೊಂಡಿದೆ' ಎಂದರು.

ಸಂತ್ರಸ್ತೆಯೊಂದಿಗೆ ತೆರಳಿದ ಪೊಲೀಸರು ಮದುವೆಯಾದ ಜಾಗ, ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ ವಕೀಲರ ಮನೆ, ಸ್ಯಾಂಟ್ರೊ ರವಿ ಮನೆ ಮತ್ತು ವಾಸವಿದ್ದ ಬಾಡಿಗೆ ಮನೆ ಪರಿಶೀಲಿಸಿದರು. ರವಿ ಜೊತೆ ಸಂಬಂಧ ಹೊಂದಿರುವ ಪ್ರಮುಖರೊಬ್ಬರನ್ನು ಬೆಂಗಳೂರಿನಿಂದ ಮೈಸೂರಿಗೆ ಕರೆ ತರಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣ ಸಿಸಿಬಿಗೆ ವರ್ಗ

ಬೆಂಗಳೂರು: ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಮಹಿಳೆಯೊಬ್ಬರ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಗೆ ನೀಡಿದ್ದ ಸುಳ್ಳು ದೂರಿನ ಪ್ರಕರಣದ ತನಿಖೆಯನ್ನು ನಗರ ಪೊಲೀಸ್ ಕಮಿಷನರ್ ಆಯುಕ್ತ ಪ್ರತಾಪ್ ರೆಡ್ಡಿ ಸಿಸಿಬಿಗೆ ವರ್ಗಾಯಿಸಿ ಬುಧವಾರ ಆದೇಶಿಸಿದ್ದಾರೆ.

ಸುಳ್ಳು ದೂರನ್ನೇ ಆಧರಿಸಿ ಕಾಟನ್‌ಪೇಟ್ ಪೊಲೀಸರು ಆ ಸಂತ್ರಸ್ತ ಮಹಿಳೆಯನ್ನು ಬಂಧಿಸಿದ್ದರು. ರವಿ ಸಂಚಿನಲ್ಲಿ ಭಾಗಿಯಾಗಿ ಕರ್ತವ್ಯಲೋಪ ಎಸಗಿದ್ದ ಆರೋಪದ ಅಡಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದ ಪ್ರವೀಣ್ ಅವರನ್ನು ಅಮಾನತು ಮಾಡಲಾಗಿತ್ತು. ಈ ಪ್ರಕರಣದ ಸಂಪೂರ್ಣ ತನಿಖೆ ನಡೆಸುವಂತೆ ಕಮಿಷನರ್ ಆದೇಶಿಸಿದ್ದಾರೆ.

ಸ್ಯಾಂಟ್ರೊ ರವಿ ಎಲ್ಲೇ ಇದ್ದರೂ ಬಂಧಿಸುತ್ತೇವೆ– ಆರಗ


ಬೆಂಗಳೂರು: 'ಮೈಸೂರು ಪೊಲೀಸರು ಸ್ಯಾಂಟ್ರೊ ರವಿಯನ್ನು ಹುಡುಕುತ್ತಿದ್ದಾರೆ. ಆತ ಉಳಿದುಕೊಂಡಿದ್ದ ವಸತಿಗೃಹ ಸಹಿತ ಎಲ್ಲ ಕಡೆ ಶೋಧ ನಡೆಸುತ್ತಿದ್ದಾರೆ. ಆದರೆ, ಆತ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಹೀಗಾಗಿ ಹುಡುಕುವುದು ಕಷ್ಟವಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಆತ ಎಲ್ಲೇ ಇದ್ದರೂ ನಮ್ಮ ಪೊಲೀಸರು ಹುಡುಕಿ ಎಳೆದು ತರುತ್ತಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಯಾಂಟ್ರೊ ರವಿ ಬಿಜೆಪಿಯ ಕಾರ್ಯಕರ್ತ ಎಂದು ಪೊಲೀಸರಿಗೆ ಮುಚ್ಚಳಿಕೆ ಬರೆದು ಕೊಟ್ಟಿದ್ದ. ನೈತಿಕತೆ ಬಗ್ಗೆ ಯಾವ ಮುಖ ಇರಿಸಿಕೊಂಡು ಬಿಜೆಪಿ ಜನರಿಗೆ ಬೋಧನೆ ಮಾಡುತ್ತದೆ

ಎಚ್.ಡಿ. ಕುಮಾರಸ್ವಾಮಿ,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,914
ಇಂದಿನ ಅಂತ್ಯ	17,896
▼	18
ದಿನದ ಕನಿಷ್ಠ	17,824

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹575
12 ಮೊಟ್ಟೆಗೆ	₹75

ಮೈಸೂರು

100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹1235 (1245)
ಸೂರ್ಯಕಾಂತಿ (ರಿಫೈನ್ಡ್)	₹1300 (1300)
ಪಾಮೋಲಿನ್	₹930 (940)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1700
ಮಧ್ಯಮ	₹1000-1200
ಸಣ್ಣ	₹500-700

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹525-681
ದ್ವಿತಳಿ (ಬಿ.ವಿ)	₹489-827

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹135
ಆರ್‌ಎಸ್‌ಎಸ್-5	₹129
ಗುಡ್ ಲಾಟ್	₹122

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

'ಇಂದೋರ್‌ನತ್ತ ಐ.ಟಿ. ಹೂಡಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಮಾಹಿತಿ ತಂತ್ರಜ್ಞಾನ ವಲಯದ ಉದ್ಯಮಗಳು ಮುಂದಿನ ದಿನಗಳಲ್ಲಿ ಇಂದೋರ್‌ನತ್ತ ಮುಖ ಮಾಡಲಿವೆ ಎಂದು ಮಧ್ಯ ಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂದೋರ್‌ನಲ್ಲಿ ಬುಧವಾರ ಆರಂಭವಾದ ಹೂಡಿಕೆದಾರರ ಸಮಾವೇಶದ ಸಂದರ್ಭದಲ್ಲಿ ಅವರು ಕೈಗಾರಿಕೋದ್ಯಮಿಗಳು ಮತ್ತು ಹೂಡಿಕೆದಾರರ ಜೊತೆಗಿನ ಮಾತುಕತೆಯಲ್ಲಿ ಈ ಮಾತು ಹೇಳಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಸ್ವಚ್ಛತೆ ಹಾಗೂ ಹೆಚ್ಚು ಉತ್ತಮವಾದ ಕೆಲಸದ ವಾತಾವರಣವನ್ನು ನಾವು ಒಂದು ಬ್ರ್ಯಾಂಡ್ ರೀತಿಯಲ್ಲಿ ಬೆಳೆಸಿದ್ದೇವೆ. ಕೈಗಾರಿಕೆಗಳಿಗೆ ಮತ್ತು ಹೂಡಿಕೆಗಳಿಗೆ ಸುಲಭವಾದ ಪ್ರಕ್ರಿಯೆಗಳು, ಪ್ರೋತ್ಸಾಹದಾಯಕ ಧೋರಣೆ ಮತ್ತು ಉತ್ತಮ ಸಂಪರ್ಕ ಸೌಲಭ್ಯವು ನಮ್ಮ ರಾಜ್ಯವನ್ನು ಎಲ್ಲ ವಲಯಗಳಲ್ಲಿ ಹೂಡಿಕೆಗೆ ಸೂಕ್ತವಾದ ತಾಣವನ್ನಾಗಿಸಿವೆ' ಎಂದು ಹೇಳಿದ್ದಾರೆ.



ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಇಂದೋರ್‌ನಲ್ಲಿ ಜಾಗತಿಕ ಹೂಡಿಕೆದಾರರ ಶೃಂಗ ಉದ್ಘಾಟಿಸಿದರು

ಕೊಬ್ಬರಿ ಖರೀದಿಗೆ ಶೀಘ್ರ ನಾಫೆಡ್ ಕೇಂದ್ರ

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): ಕೊಬ್ಬರಿ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಲು ರಾಜ್ಯ ಸರ್ಕಾರ ಶೀಘ್ರ 'ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ' (ಎನ್‌ಎಎಫ್‌ಇಡಿ–ನಾಫೆಡ್) ಕೇಂದ್ರ ಆರಂಭಿಸಲಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಬೆಂಬಲ ಬೆಲೆಯ ಜೊತೆಗೆ ರಾಜ್ಯ ಸರ್ಕಾರದ ಪ್ರೋತ್ಸಾಹಧನ ಯೋಜನೆ ಅಡಿ ನಾಫೆಡ್, ಬೆಳೆಗಾರರಿಂದ ಕೊಬ್ಬರಿ ಖರೀದಿಸಲಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೆಲವು ವರ್ಷಗಳಿಂದ ಕ್ವಿಂಟಲ್‌ಗೆ ₹ 15 ಸಾವಿರ ಅಸುಪಾಸಿನಲ್ಲಿದ್ದ ಕೊಬ್ಬರಿ ದರ ಮೂರು ತಿಂಗಳಿನಿಂದ ಕುಸಿದಿದೆ. ಇದರಿಂದ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಎರಡು ವರ್ಷದಿಂದ ಕೊಬ್ಬರಿ ಸರಿಯಾದ ಸಮಯಕ್ಕೆ ಬಾರದೇ ಹಸಿ ಅಂಶ ಉಳಿದುಕೊಂಡು ಬೆಳೆಗಾರರಿಗೆ ನಷ್ಟವಾಗುತ್ತಿದೆ' ಎಂದರು.

ಆರ್ಥಿಕ ತಜ್ಞರೊಂದಿಗೆ ಅಧಿಕಾರಿಗಳು ಸಮಾಲೋಚನೆ ನಡೆಸಿದ ನಂತರ ಉಂಡೆ ಕೊಬ್ಬರಿ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ₹ 11,750ಕ್ಕೆ ನಿಗದಿಪಡಿಸಿದ್ದಾರೆ. ಇದರ ಜೊತೆಗೆ ರಾಜ್ಯ ಸರ್ಕಾರದ ಪ್ರೋತ್ಸಾಹಧನ ನೀಡಲಾಗುವುದು ಎಂದು ಸಚಿವರು ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹಳತು	48000-54500
ಕಾರ್ಕಳ	
ಹೊಸತು	30000-39000
ಹಳತು	40000-54500
ಕುಮಟ	
ಚಿಪ್ಪು	26869-32889
ಕೋಕ	16869-29999
ಫ್ಯಾಕ್ಟರಿ	11510-19829
ಹಳೆಚಾಲಿ	37899-42299
ಹೊಸಚಾಲಿ	33699-36299
ಸಾಗರ	
ಬಿಳಿಗೋಟು	28799-31253
ಚಾಲಿ	35009-39409
ಕೋಕ	18989-29499
ಕೆಂಪುಗೋಟು	33599-36799
ರಾಶಿ	39009-46009
ಸಿಪ್ಪೆಗೋಟು	10811-21699
ಶಿವಮೊಗ್ಗ	
ಬೆಟ್ಟೆ	47099-53982
ಗೊರಬಲು	17006-35649
ರಾಶಿ	40699-46860
ಸರಕು	45099-80020
ಸಿದ್ದಾಪುರ	
ಬಿಳಿಗೋಟು	29899-33999
ಚಾಲಿ	39409-42499
ಕೋಕ	26699-31189
ಕೆಂಪುಗೋಟು	29999-37889
ರಾಶಿ	43699-46399
ತಟ್ಟಿಬೆಟ್ಟೆ	38409-43099
ಶಿರಸಿ	
ಬೆಟ್ಟೆ	29218-44113
ಬಿಳಿಗೋಟು	24099-37119
ಚಾಲಿ	32699-44500
ಕೆಂಪುಗೋಟು	22596-34909
ರಾಶಿ	40399-46899
ತಿಪಟೂರು ಕೊಬ್ಬರಿ	
ಕನಿಷ್ಠ	10100
ಗರಿಷ್ಠ	11250
ಮಾದರಿ	11000
ಒಟ್ಟು ಆವಕ (ಚೀಲ)	5563

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13700	13700	13700	158.05 ಸೆಂಟ್ಸ್
ಎಸಿ	6720	6800	6000	
ಆರ್‌ಪಿ	8000	8400	7925	ಲಂಡನ್
ಆರ್‌ಸಿ	4530	160 on OT	4200	1863 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

11-1-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	1160 (1170)
ಪಾಮ್ ವಾರದ ಡೆಲಿವರಿ	928 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	1160 (1170)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

55,900 (55,750)

ಬೆಳ್ಳಿ ಕೆ.ಜಿ 68,350 (67,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೊದಲ ದಿನ ಮೇಳೈಸಿದ ವಿದ್ಯುತ್ ಚಾಲಿತ ವಾಹನಗಳು • ಕಂಪನಿಗಳಿಂದ ಹೂಡಿಕೆ ಘೋಷಣೆ

ಸುಜುಕಿ 'ಇವಿಎಕ್ಸ್' ಅನಾವರಣ

ಗ್ರೇಟರ್ ನೊಯಿಡಾ (ಪಿಟಿಐ): ಸುಜುಕಿ ಮೋಟರ್ ಕಾರ್ಪೊರೇಷನ್‌ನ (ಎಸ್‌ಎಂಸಿ) ಕಾನ್ಸೆಪ್ಟ್ ಎಲೆಕ್ಟ್ರಿಕ್ ಎಸ್‌ಯುವಿ 'ಇವಿಎಕ್ಸ್' ಅನಾವರಣದ ಮೂಲಕ ದೇಶದ ಅತಿದೊಡ್ಡ ವಾಹನ ಪ್ರದರ್ಶನ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಮಧ್ಯಮ ಗಾತ್ರದ ಎಲೆಕ್ಟ್ರಿಕ್ ಎಸ್‌ಯುವಿ 60 ಕಿಲೋ ವಾಟ್ ಬ್ಯಾಟರಿ ಪ್ಯಾಕ್ ಹೊಂದಿದ್ದು, ಒಮ್ಮೆ ಪೂರ್ತಿಯಾಗಿ ಚಾರ್ಜ್ ಮಾಡಿದರೆ 550 ಕಿಲೋ ಮೀಟರ್ ಚಲಿಸಬಲ್ಲದು ಎಂದು ಕಂಪನಿ ತಿಳಿಸಿದೆ.

ಈ ಎಲೆಕ್ಟ್ರಿಕ್ ಎಸ್‌ಯುವಿಯನ್ನು 2025ರ ವೇಳೆಗೆ ಮಾರುಕಟ್ಟೆಗೆ ತರುವ ಯೋಜನೆ ಹೊಂದಲಾಗಿದೆ ಎಂದು ಕಂಪನಿಯ ಅಧ್ಯಕ್ಷ ತೊಶಿಹಿರೊ ಸುಜುಕಿ ತಿಳಿಸಿದ್ದಾರೆ. ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯ ಮಟ್ಟಕ್ಕೆ ತರುವ ಗುರಿ ಸಾಧನೆಗೆ ವಿದ್ಯುತ್ ಚಾಲಿತ ವಾಹನಗಳು ಮಾತ್ರವೇ ಪರಿಹಾರ ಆಗಲಾರವು. ಫ್ಲೆಕ್ಸ್ ಫ್ಯೂಯೆಲ್, ಹೈಬ್ರಿಡ್ ಮತ್ತು ಸಿಎನ್‌ಜಿ ತಂತ್ರಜ್ಞಾನಗಳ ಕಡೆಗೂ ಕಂಪನಿ ಗಮನ ಹರಿಸುತ್ತಿದೆ ಎಂದು ಹೇಳಿದ್ದಾರೆ.

ಮಾರುತಿ ಸುಜುಕಿ ಕಂಪನಿಯ ವ್ಯಾಗನ್‌ಆರ್ ಫ್ಲೆಕ್ಸ್ ಫ್ಯೂಯೆಲ್ ಪ್ರೊಟೊಟೈಪ್, ಬ್ರೆಜಾ ಎಸ್–ಸಿಎನ್‌ಜಿ ಮತ್ತು ಗ್ರ್ಯಾಂಡ್ ವಿಟಾರಾ ಇಂಟೆಲಿಜೆಂಟ್ ಎಲೆಕ್ಟ್ರಿಕ್ ಹೈಬ್ರಿಡ್ ವಾಹನಗಳು ಪ್ರದರ್ಶನಗೊಳ್ಳಲಿವೆ.

ಟಾಟಾ ಮೋಟರ್ಸ್: ಟಾಟಾ ಮೋಟರ್ಸ್ ಕಂಪನಿಯು ವಿದ್ಯುತ್ ಚಾಲಿತ ವಾಹನಗಳನ್ನೂ ಒಳಗೊಂಡು ಒಟ್ಟು 12 ಕಾರುಗಳನ್ನು ಪ್ರದರ್ಶಿಸಿದೆ.


ಸುಜುಕಿ ಇವಿಎಕ್ಸ್ ಎಸ್‌ಯುವಿ ಅನಾವರಣ –ಪಿಟಿಐ ಚಿತ್ರ

ಪ್ರಮುಖ ಅಂಶಗಳು

- ಎಂಜಿ4, ಎಂಜಿ ಇಎಚ್‌ಎಸ್, ಪ್ಲಗ್–ಇನ್ ಹೈಬ್ರಿಡ್ ಎಸ್‌ಯುವಿ ಅನಾವರಣ. ಎಂಜಿ ಮೋಟರ್ ಕಂಪನಿಯ ಹೊಸ ಪೀಳಿಗೆಯ ಹೆಕ್ಟರ್‌ನ ಎಕ್ಸ್ ಷೋರೂಂ ಬೆಲೆ ₹14.72 ಲಕ್ಷ
- ಗ್ರೀವ್ಸ್ ಕಾಟನ್ ಕಂಪನಿಯಿಂದ ಆ್ಯಂಪೇರ್ ಪ್ರೈಮಸ್, ಎನ್‌ಎಕ್ಸ್‌ಜಿ ಮತ್ತು ಮಲ್ಟಿ ಯುಟಲಿಟಿ ಸ್ಕೂಟರ್ ಆ್ಯಂಪೇರ್ ಎನ್‌ಎಕ್ಸ್‌ಯು ಅನಾವರಣ
- ಎಲೆಕ್ಟ್ರಿಕ್ ವಾಹನಗಳ ತಯಾರಿಕೆಗೆ ಮುಂದಿನ ನಾಲ್ಕು ವರ್ಷಗಳಲ್ಲಿ ₹ 2 ಸಾವಿರ ಕೋಟಿ ಹೂಡಿಕೆಗೆ ಕಿಯಾ ಇಂಡಿಯಾ ಯೋಜನೆ
- ಅಶೋಕ್ ಲೇಲ್ಯಾಂಡ್ ಕಂಪನಿಯು ಎಲ್‌ಎನ್‌ಜಿ, ಸಿಎನ್‌ಜಿ, ಎಲೆಕ್ಟ್ರಿಕ್ ಮಾದರಿಗಳ ಒಟ್ಟು ಏಳು ವಾಹನಗಳನ್ನು ಅನಾವರಣ ಮಾಡಿದೆ
- ಲೆಕ್ಸಸ್‌ನಿಂದ 5ನೇ ಪೀಳಿಗೆಯ ಆರ್‌ಎಕ್ಸ್ ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್ ಅನಾವರಣ

ವಾಹನ ಮೇಳ


ಟಾಟಾ ಸಿಯಾರಾ ಇವಿ –ಪಿಟಿಐ


ಟೊಯೋಟ ಬಿಜೆಡ್4ಎಕ್ಸ್ ಪಿಟಿಐ ಚಿತ್ರ

ಹುಂಡೈ ಅಯಾನಿಕ್ 5


ವಾಹನ ಮೇಳದಲ್ಲಿ ಹುಂಡೈ ಅಯಾನಿಕ್ 5 ಬಿಡುಗಡೆ ವೇಳೆ ಬಾಲಿವುಡ್ ನಟ ಶಾರುಖ್ ಖಾನ್ ಮಾತನಾಡಿದರು –ಎಎಫ್‌ಪಿ ಚಿತ್ರ

ಹುಂಡೈ ಮೋಟರ್ ಇಂಡಿಯಾ ಕಂಪನಿಯು ತನ್ನ ವಿದ್ಯುತ್ ಚಾಲಿತ ಅಯಾನಿಕ್ 5 ಮಾದರಿಯನ್ನು ಬಿಡುಗಡೆ ಮಾಡಿದೆ.

ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 631 ಕಿಲೋ ಮೀಟರ್ ಚಲಾಯಿಸಬಹುದು. ಮೊದಲ 500 ಗ್ರಾಹಕರಿಗೆ ಪರಿಚಯಾತ್ಮಕ ಬೆಲೆ ₹44.95 ಲಕ್ಷ ಇರಲಿದೆ ಎಂದು ಕಂಪನಿ ತಿಳಿಸಿದೆ.

500 ಕಿ.ಮೀ ಚಲಿಸುವ ಇ–ಬಸ್: ವಿಇ ಕಮರ್ಷಿಯಲ್ ವೆಹಿಕಲ್ (ವಿಇಸಿವಿ) ಕಂಪನಿಯು 500 ಕಿಲೋ ಮೀಟರ್ ಸಾಗಬಲ್ಲ ಎಲೆಕ್ಟ್ರಿಕ್ ಬಸ್ 'ಐಷರ್ ಪ್ರೊ 2049' ಅನಾವರಣ ಮಾಡಿದೆ. ಇದು 13.5 ಮೀಟರ್ ಉದ್ದ ಇದೆ.

ಡಿಪೊದಲ್ಲಿ ಒಮ್ಮೆಗೆ 6 ಗಂಟೆ ಚಾರ್ಜ್ ಮಾಡಿದರೆ 300 ರಿಂದ 350 ಕಿಲೋ ಮೀಟರ್ ಚಲಾಯಿಸಬಹುದು. ಬಳಿಕ ಪ್ರಯಾಣದ ವೇಳೆ 30–40 ನಿಮಿಷ ಚಾರ್ಜ್ ಮಾಡಿದರೆ ಮತ್ತೆ 150 ರಿಂದ 200 ಕಿಲೋ ಮೀಟರ್ ಚಲಾಯಿಸಬಹುದು ಎಂದು ಕಂಪನಿಯ ಬಸ್ ವಿಭಾಗದ ಅಧ್ಯಕ್ಷ ಆಕಾಶ್ ಪಸ್ಸೆ ತಿಳಿಸಿದ್ದಾರೆ.

ಎಲ್‌ಎನ್‌ಜಿ ಮತ್ತು ಸಿಎನ್‌ಜಿ ವ್ಯವಸ್ಥೆ ಹೊಂದಿರುವ ಐಷರ್ ಪ್ರೊ 8055 ಟ್ರಕ್ ಅನಾವರಣ ಮಾಡಲಾಗಿದೆ. ಟ್ರಕ್‌ನಲ್ಲಿ ನೀಡಿರುವ ಸ್ವಿಚ್ ಮೂಲಕ ಇಂಧನ ಬಳಕೆಯನ್ನು ಬದಲಾಯಿಸಬಹುದು.

ನವೋದ್ಯಮ: ಬಂಡವಾಳ ಸಂಗ್ರಹ ಇಳಿಕೆ

ನವದೆಹಲಿ (ಪಿಟಿಐ): 2022ರಲ್ಲಿ ದೇಶದ ನವೋದ್ಯಮಗಳು ಸಂಗ್ರಹಿಸಿರುವ ಬಂಡವಾಳವು 2021ಕ್ಕೆ ಹೋಲಿಕೆ ಮಾಡಿದರೆ ಶೇಕಡ 33ರಷ್ಟು ಕಡಿಮೆ ಆಗಿದೆ ಎಂದು ಪಿಡಬ್ಲ್ಯುಸಿ ವರದಿ ಹೇಳಿದೆ. 2022ರಲ್ಲಿ ₹ 1.96 ಲಕ್ಷ ಕೋಟಿ ಬಂಡವಾಳವನ್ನು ನವೋದ್ಯಮಗಳು ಸಂಗ್ರಹಿಸಿದ್ದವು.

ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಎದುರಾಗುವ ಸಾಧ್ಯತೆ ಇದ್ದರೂ, ಜಾಗತಿಕ ಹೂಡಿಕೆದಾರರು ಭಾರತದ ನವೋದ್ಯಮಗಳ ವಿಚಾರವಾಗಿ ಆಶಾವಾದ ಹೊಂದಿದ್ದಾರೆ ಎಂದು ವರದಿ ಹೇಳಿದೆ. 2021ರಲ್ಲಿ ದೇಶದ ನವೋದ್ಯಮಗಳು ಒಟ್ಟು ₹ 2.87 ಲಕ್ಷ ಕೋಟಿ ಬಂಡವಾಳ ಆಕರ್ಷಿಸಿದ್ದವು.

ಇನ್ನು ಎರಡರಿಂದ ಮೂರು ತ್ರೈಮಾಸಿಕಗಳಲ್ಲಿ ನವೋದ್ಯಮಗಳ ಬಂಡವಾಳ ಸಂಗ್ರಹ ಪ್ರಮಾಣವು ಸಹಜ ಸ್ಥಿತಿಗೆ ಮರಳುವ ಸಾಧ್ಯತೆ ಇದೆ ಎಂದು ಪಿಡಬ್ಲ್ಯುಸಿ ಇಂಡಿಯಾ ಸಂಸ್ಥೆಯ ಪಾಲುದಾರ ಅಮಿತ್ ನಾವ್ಕಾ ಹೇಳಿದ್ದಾರೆ.

ರುಪೇ, ಯುಪಿಐ ಉತ್ತೇಜನಕ್ಕೆ ₹ 2,600 ಕೋಟಿ

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

'ಇಂದಿನ ತೀರ್ಮಾನದ ಪರಿಣಾಮವಾಗಿ ಡಿಜಿಟಲ್ ಪಾವತಿಗಳಲ್ಲಿ ಭಾರತ ಹೆಜ್ಜೆಗಳು ಇನ್ನಷ್ಟು ಗಟ್ಟಿಯಾಗಲಿವೆ' ಎಂದು ಮೋದಿ ಅವರು ಟ್ವೀಟ್ ಮಾಡಿದ್ದಾರೆ. ಡಿಸೆಂಬರ್‌ನಲ್ಲಿ ಯುಪಿಐ ವ್ಯವಸ್ಥೆಯ ಮೂಲಕ ಒಟ್ಟು ₹ 12.82 ಲಕ್ಷ ಕೋಟಿ ಮೌಲ್ಯದ 782.9 ಕೋಟಿ ವಹಿವಾಟು ನಡೆದಿವೆ.

ಎನ್‌ಆರ್‌ಐಗಳಿಗೂ ಯುಪಿಐ: ಅಮೆರಿಕ, ಕೆನಡಾ, ಯುಎಇ ಸೇರಿದಂತೆ ಒಟ್ಟು 10 ದೇಶಗಳ ಅನಿವಾಸಿ ಭಾರತೀಯರು ಯುಪಿಐ ಬಳಸಿ ತಮ್ಮ ಎನ್‌ಆರ್‌ಇ/ಎನ್‌ಆರ್‌ಒ ಖಾತೆಯಿಂದ ಹಣ ವರ್ಗಾವಣೆ ಮಾಡಲು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಅವಕಾಶ ಕಲ್ಪಿಸಿದೆ.



ಅನಿವಾಸಿ ಭಾರತೀಯರು ಯುಪಿಐ ಬಳಸಿ ಹಣ ವರ್ಗಾವಣೆ ಮಾಡಲು ಅಗತ್ಯವಿರುವ ಸೌಲಭ್ಯವನ್ನು ಏಪ್ರಿಲ್ 30ರೊಳಗೆ ಕಲ್ಪಿಸಬೇಕು ಎಂದು ಎನ್‌ಪಿಸಿಐ ಸುತ್ತೋಲೆ ಹೇಳಿದೆ. ಸಿಂಗಪುರ, ಆಸ್ಟ್ರೇಲಿಯಾ, ಹಾಂಗ್‌ಕಾಂಗ್, ಒಮಾನ್, ಕತಾರ್, ಸೌದಿ ಅರೇಬಿಯಾ ಮತ್ತು ಬ್ರಿಟನ್‌ನಲ್ಲಿ ಇರುವವರಿಗೂ ಇದು ಲಭ್ಯವಾಗಲಿದೆ.

ರಣಜಿ ಕ್ರಿಕೆಟ್: ಗಾಯದ ನೋವಿನಲ್ಲೂ ಮಿಂಚಿದ ಮನೀಷ್; ಆತಿಥೇಯರ ಪಾರಮ್ಯ

ಕರ್ನಾಟಕಕ್ಕೆ ಮುನ್ನಡೆಯ 'ಶ್ರೇಯ'

• ಗಿರೀಶ ದೊಡ್ಡಮನಿ



ಕರ್ನಾಟಕ ತಂಡದ ಬ್ಯಾಟರ್ ಶ್ರೇಯಸ್ ಗೋಪಾಲ್ ರನ್ ಗಳಿಸಲು ವೇಗವಾಗಿ ಕ್ರೀಸ್‌ನತ್ತ ಧಾವಿಸಿದರು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಆಲೂರು (ಬೆಂಗಳೂರು): ಕರ್ನಾಟಕದ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಬುಧವಾರ ರಾಜಸ್ಥಾನ ಎದುರಿನ ರಣಜಿ ಪಂದ್ಯದಲ್ಲಿ ಕೇವಲ ಐದು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಅನುಭವಿ ಮನೀಷ್ ಪಾಂಡೆ ತಮ್ಮ ಗಾಯದ ನೋವಿನಲ್ಲಿಯೂ ಬೀಸಾಟವಾಡಿದರು.

ಅವರಿಬ್ಬರ ಛಲದ ಆಟದಿಂದಾಗಿ ಕರ್ನಾಟಕ ತಂಡವು ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದಲ್ಲಿ ರಾಜಸ್ಥಾನದ ಎದುರು ಮೊದಲ ಇನಿಂಗ್ಸ್‌ನಲ್ಲಿ 251 ರನ್‌ಗಳ ಮುನ್ನಡೆ ಗಳಿಸಿತು.

ಶ್ರೇಯಸ್ (95; 165ಎ, 4X13) ಮತ್ತು ಮನೀಷ್ (ಬ್ಯಾಟಿಂಗ್ 75; 108ಎ) ಮಹತ್ವದ ಕಾಣಿಕೆ ನೀಡಿದರು. ಇದರಿಂದಾಗಿ ಎರಡನೇ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 118 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 380 ರನ್ ಗಳಿಸಿದೆ. ಮನೀಷ್ ಜೊತೆಗೆ ವಿದ್ವತ್ ಕಾವೇರಪ್ಪ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೂ 2 ದಿನಗಳ ಆಟ ಬಾಕಿಯಿದೆ. ಆತಿಥೇಯರಿಗೆ ಗೆಲುವಿನ ಅವಕಾಶ ಹೆಚ್ಚಿದೆ. ಸೋಲು ತಪ್ಪಿಸಿಕೊಳ್ಳುವ ಸವಾಲು ಪ್ರವಾಸಿ ಬಳಗದ ಮುಂದಿದೆ.

ಶ್ರೇಯಸ್ ಬ್ಯಾಟಿಂಗ್ ಮಿಂಚು: ಹತ್ತು ವರ್ಷಗಳ ಹಿಂದೆ ಲೆಗ್‌ಸ್ಪಿನ್ನರ್ ಆಗಿ ತಂಡಕ್ಕೆ ಪದಾರ್ಪಣೆ ಮಾಡಿದ್ದ ಶ್ರೇಯಸ್ ಹಂತಹಂತವಾಗಿ ಆಲ್ ರೌಂಡರ್ ಆಗಿ ಬೆಳೆದಿದ್ದಾರೆ. ಈ ಟೂರ್ನಿಯಲ್ಲಿ ತಂಡದ ವೇಗಿಗಳು ಪಾರಮ್ಯ ಮೆರೆಯುತ್ತಿದ್ದು ಸ್ಪಿನ್ನರ್ ಗಳಿಗೆ ಹೆಚ್ಚು ಅವಕಾಶ ಸಿಕ್ಕಿಲ್ಲ. ಈ ಟೂರ್ನಿಯ 6 ಇನಿಂಗ್ಸ್‌ಗಳಲ್ಲಿ ಅವರು ಒಟ್ಟು 48 ಓವರ್‌ಗಳನ್ನು ಮಾತ್ರ ಬೌಲಿಂಗ್ ಮಾಡಿದ್ದಾರೆ. ಆದರೆ ಶ್ರೇಯಸ್ ಇದರಿಂದ ವಿಚಲಿತರಾಗಿಲ್ಲ. ತಮ್ಮ ಬ್ಯಾಟಿಂಗ್ ಮೂಲಕ ತಂಡಕ್ಕೆ ನೆರವಾದರು.

ರಾಜಸ್ಥಾನ ಎದುರು ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅವರು ಎರಡು ಮಹತ್ವದ ಜೊತೆಯಾಟಗಳಲ್ಲಿ ಪಾಲ್ಗೊಂಡರು. ಐದನೇ ವಿಕೆಟ್ ಜತೆಯಾಟದಲ್ಲಿ ಅವರು ಶರತ್ ಶ್ರೀನಿವಾಸ್ ಅವರೊಂದಿಗೆ 109 ರನ್ ಸೇರಿಸಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ ಮನೀಷ್ ಅವರೊಂದಿಗೆ 63 ರನ್ ಗಳಿಸಿದರು. ಇದರಲ್ಲಿ ಇಬ್ಬರೂ ತಲಾ 28 ರನ್ ಗಳಿಸಿದರು. ಏಳು ಇತರೆ ರನ್‌ಗಳಿದ್ದವು.

ಇದರಿಂದಾಗಿ ತಂಡದ ಮೊತ್ತವು ಮುನ್ನೂರರ ಗಡಿ ದಾಟಿತು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ಐದನೇ ಶತಕ ದಾಖಲಿಸುವತ್ತ ದಾಪುಗಾಲಿಟ್ಟಿದ್ದ ಶ್ರೇಯಸ್‌ಗೆ ರಾಜಸ್ಥಾನದ ವೇಗಿ ಅನಿಕೇತ್ ಚೌಧರಿ ತಡೆಯೊಡ್ಡಿದರು.

ಗಾಯದಲ್ಲಿ ಮಿಂಚಿದ ಪಾಂಡೆ: ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಮನೀಷ್ ಪಾಂಡೆ 10 ರನ್ ಗಳಿಸಿದ್ದ ಸಂದರ್ಭದಲ್ಲಿ ಸ್ಲಿಪ್ ಫೀಲ್ಡರ್ ಕೋಠಾರಿ ಕ್ಯಾಚ್ ಕೈಚೆಲ್ಲಿದ್ದರು. ಇದರಿಂದಾಗಿ ರನ್ ಗಳಿಕೆಯತ್ತ ವೇಗವಾಗಿ ಹೆಜ್ಜೆಹಾಕಿದರು. ಆದರೆ 47ನೇ ಓವರ್‌ನಲ್ಲಿ ಅರಾಫತ್ ಖಾನ್ ಎಸೆತವನ್ನು ಆಡಲು ಯತ್ನಿಸಿದರು. ಆದರೆ ಚೆಂಡು ಅವರ ಹೆಬ್ಬೆರಳಿಗೆ ಅಪ್ಪಳಿಸಿತು. ನೋವಿನಿಂದ ನರಳಿದ ಪಾಂಡೆ 'ನಿವೃತ್ತಿ' ಪಡೆದು ಚಿಕಿತ್ಸೆಗೆ ತೆರಳಿದರು. ಈ ಸಂದರ್ಭದಲ್ಲಿ ಶ್ರೇಯಸ್ ಮತ್ತು ಶರತ್ ಇನಿಂಗ್ಸ್ ಕಟ್ಟಿದರು. 91ನೇ ಓವರ್‌ನಲ್ಲಿ ಶರತ್ (42) ಔಟಾದಾಗ ಮನೀಷ್ ಮತ್ತೆ ಕ್ರೀಸ್‌ಗೆ ಮರಳಿದರು. ರಾಜಸ್ಥಾನ ಬೌಲರ್‌ಗಳ ಎಸೆತಗಳನ್ನು ದಂಡಿಸಿದರು. 3 ಸಿಕ್ಸರ್ ಸಿಡಿಸಿದ ಅವರು ತಂಡದ ಮುನ್ನಡೆಯನ್ನು ಹಿಗ್ಗಿಸಿದರು.

ಮಯಂಕ್ ಅರ್ಧಶತಕ: ಮಂಗಳವಾರ ಸಂಜೆ 49 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಮಯಂಕ್ ಬೆಳಿಗ್ಗೆ ಅರ್ಧಶತಕ ಪೂರೈಸಿ, ಅರಾಫತ್ ಬೌಲಿಂಗ್‌ನಲ್ಲಿ ಔಟಾದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ರಾಜಸ್ಥಾನ 129 (45.3 ಓವರ್‌ಗಳಲ್ಲಿ)
ಕರ್ನಾಟಕ: 8ಕ್ಕೆ380 (118 ಓವರ್) (ಮಂಗಳವಾರ 30 ಓವರ್‌ಗಳಲ್ಲಿ 2ಕ್ಕೆ 106)
ಮಯಂಕ್ ಸಿ ಯಶ್ ಬಿ ಅರಾಫತ್ 52 (118ಎ, 4X8), ನಿಕಿನ್ ಸಿ ಮನೇರಿಯಾ ಬಿ ಮಾನವ್ 39 (100ಎ, 4X6), ಮನೀಷ್ ಬ್ಯಾಟಿಂಗ್ 75 (108ಎ, 4X7, 6X3) ಶ್ರೇಯಸ್ ಸಿ ಯಶ್ ಬಿ ಅನಿಕೇತ್ 95 (165ಎ, 4X13), ಶರತ್ ಬಿ ಮಾನವ್ 42 (120ಎ, 4X5), ಗೌತಮ್ ಸಿ ಸಂಪ್ರೀತ್ ಬಿ ಅನಿಕೇತ್ 7 (13ಎ, 4X1), ವೈಶಾಖ ಎಲ್‌ಬಿಡಬ್ಲ್ಯು ಬಿ ಮಾನವ್ 1 (11ಎ), ವಿದ್ವತ್ ಬ್ಯಾಟಿಂಗ್ 3 (15ಎ)
ಇತರೆ: 26 (ಬೈ 9, ಲೆಗ್‌ಬೈ 13, ನೋಬಾಲ್ 4)
ವಿಕೆಟ್ ಪತನ: 1–14 (ಸಮರ್ಥ್; 4.3), 2–88 (ದೇವದತ್ತ ಪಡಿಕ್ಕಲ್; 23.4), 3–111 (ಮಯಂಕ್ ಅಗರವಾಲ್; 38.3), 4–171 (ನಿಕಿನ್ ಜೋಸ್; 53.3), 5–280 (ಶ್ರೀನಿವಾಸ್ ಶರತ್; 90.5), 6–343 (ಶ್ರೇಯಸ್ ಗೋಪಾಲ್; 106.1), 7–351 (ಕೃಷ್ಣಪ್ಪ ಗೌತಮ್; 108.5), 8–354 (ವೈಶಾಖ ವಿಜಯಕುಮಾರ್; 111.3)
ಬೌಲಿಂಗ್: ಅನಿಕೇತ್ ಚೌಧರಿ 29–7–81–4, ಋತುರಾಜ್ ಸಿಂಗ್ 23–7–53–0, ಅರಾಫತ್ ಖಾನ್ 23–1–84–1, ಮಾನವ್ ಸುತಾರ್ 35–4–110–3, ಮಹಿಪಾಲ್ ಲೊಮ್ರೊರ್ 8–0–30–0 ಮಾನವ್ ಸುತಾರ್ 1–0–2–0

ಪೃಥ್ವಿ ಶಾ ತ್ರಿಶತಕ ದಾಖಲೆ



ಗುವಾಹಟಿ: ಮುಂಬೈ ತಂಡದ ಆರಂಭಿಕ ಬ್ಯಾಟರ್ ಪೃಥ್ವಿ ಶಾ ರಣಜಿ ಕ್ರಿಕೆಟ್‌ನಲ್ಲಿ ಎರಡನೇ ಅತಿ ದೊಡ್ಡ ವೈಯಕ್ತಿಕ ಸ್ಕೋರ್ ಗಳಿಸಿದ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಅಮಿನ್‌ಗಾಂವ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಬಿ ಗುಂಪಿನ ಪಂದ್ಯದಲ್ಲಿ ಅಸ್ಸಾಂ ಎದುರು ಪೃಥ್ವಿ ತ್ರಿಶತಕ (379; 383ಎ, 4X49, 6X4) ಗಳಿಸಿದರು.

'1948–49ರಲ್ಲಿ ಮಹಾರಾಷ್ಟ್ರದ ಬಾವುಸಾಹೇಬ್ ಬಾಬಾಸಾಹೇಬ್ ನಿಂಬಾಳ್ಕರ್ ಅವರು ಪುಣೆಯಲ್ಲಿ ನಡೆದಿದ್ದ ಕಾಥಿಯಾವಾಡ್ ತಂಡದ ಎದುರು ಅಜೇಯ 443 ರನ್ ಗಳಿಸಿದ್ದರು. ಅದು ಇಂದಿಗೂ ವೈಯಕ್ತಿಕ ಶ್ರೇಷ್ಠ ಸ್ಕೋರ್ ಆಗಿದೆ' ಎಂದು ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಪೃಥ್ವಿ ತ್ರಿಶತಕ ಹಾಗೂ ಅಜಿಂಕ್ಯ ರಹಾನೆ (191; 302ಎ) ಶತಕದ ಬಲದಿಂದ ಮುಂಬೈ ತಂಡವು ಮೊದಲ ಇನಿಂಗ್ಸ್‌ನಲ್ಲಿ 138.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 687 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು ದಿನದಾಟದ ಕೊನೆಗೆ 39 ಓವರ್‌ಗಳಲ್ಲಿ 1 ವಿಕೆಟ್‌ಗೆ 129 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಬಿ ಗುಂಪು: ಗುವಾಹಟಿ: ಮುಂಬೈ: 138.4 ಓವರ್‌ಗಳಲ್ಲಿ 4ಕ್ಕೆ 687 (ಪೃಥ್ವಿ ಶಾ 379, ಅಜಿಂಕ್ಯ ರಹಾನೆ 191, ಸರ್ಫರಾಜ್ ಖಾನ್ ಔಟಾಗದೆ 28, ರಿಯಾನ್ ಪರಾಗ್ 167ಕ್ಕೆ2) ಅಸ್ಸಾಂ: 39 ಓವರ್‌ಗಳಲ್ಲಿ 1 ವಿಕೆಟ್‌ಗೆ 129 (ಶುಭಂ ಮಂಡಲ್ 40, ರಾಹುಲ್ ಹಜಾರಿಕಾ ಬ್ಯಾಟಿಂಗ್ 60, ರಿಷವ್ ದಾಸ್ ಬ್ಯಾಟಿಂಗ್ 26).

ಹೈದರಾಬಾದ್: 30.5 ಓವರ್‌ಗಳಲ್ಲಿ 79, ಸೌರಾಷ್ಟ್ರ: 68.3 ಓವರ್‌ಗಳಲ್ಲಿ 327 (ಹರ್ವಿಕ್ ದೇಸಾಯಿ 81, ಚಿರಾಗ್ ಜಾನಿ 68, ಧರ್ಮೇಂದ್ರಸಿಂಹ ಜಡೇಜ 40, ಚೇತನ್ ಸಕಾರಿಯಾ 20, ಅನಿಕೇತ್ ರೆಡ್ಡಿ 95ಕ್ಕೆ7, ರೋಹಿತ್ ರಾಯುಡು 41ಕ್ಕೆ2) ಎರಡನೇ ಇನಿಂಗ್ಸ್: ಹೈದರಾಬಾದ್: 46.4 ಓವರ್‌ಗಳಲ್ಲಿ 191 (ತೋಕಂಟಿ ಸಂತೋಷ್ ಗೌಡ 58, ಚಂದನ್ ಸಹಾನಿ 49, ಭಾವೇಶ್ ಸೇಠ್ 30, ಜೈದೇವ್ ಉನದ್ಕತ್ 62ಕ್ಕೆ3, ಧರ್ಮೇಂದ್ರಸಿಂಹ ಜಡೇಜ 34ಕ್ಕೆ4, ಯುವರಾಜ್ ಸಿಂಹ ದೊಡಿಯಾ 76ಕ್ಕೆ2) ಫಲಿತಾಂಶ: ಸೌರಾಷ್ಟ್ರಕ್ಕೆ ಇನಿಂಗ್ಸ್ –57 ರನ್ ಜಯ.



ಉದ್ಘಾಟನಾ ಸಮಾರಂಭದಲ್ಲಿ ಸುಡುಮದ್ದುಗಳು ಸಿಡಿದಾಗ ಮೂಡಿದ ಚಿತ್ತಾರ– ಪಿಟಿಐ ಚಿತ್ರ

13ರಂದು ಮೊದಲ ಪಂದ್ಯದಲ್ಲಿ ಭಾರತಕ್ಕೆ ಸ್ಪೇನ್ ಸವಾಲು

ಹಾಕಿ ವಿಶ್ವಕಪ್‌ಗೆ ಅದ್ದೂರಿ ಚಾಲನೆ



ನಟ ರಣವೀರ್ ಸಿಂಗ್ ನೃತ್ಯ ಪ್ರದರ್ಶನ



ಕಟಕ್, ಒಡಿಶಾ (ಪಿಟಿಐ): ಪುರುಷರ ಹಾಕಿ ವಿಶ್ವಕಪ್ ಟೂರ್ನಿಗೆ ಇಲ್ಲಿಯ ಬಾರಾಬತಿಯ ಸುಂದರ ಕ್ರೀಡಾಂಗಣದಲ್ಲಿ ಬುಧವಾರ ಅದ್ದೂರಿ ಚಾಲನೆ ಸಿಕ್ಕಿತು. ದೇಶ, ವಿದೇಶಗಳಿಂದ ಸಾವಿರಾರು ಅಭಿಮಾನಿಗಳು ಈ ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾದರು.

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್, ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ಅಧ್ಯಕ್ಷ ತಯ್ಯಬ್ ಇಕ್ರಂ, ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಸಮಾರಂಭದಲ್ಲಿ ಹಾಜರಿದ್ದು, 16 ತಂಡಗಳನ್ನು ಬರಮಾಡಿಕೊಂಡರು.

ಒಂದು ತಾಸಿಗಿಂತ ಹೆಚ್ಚು ಕಾಲ ನಡೆದ ಸಮಾರಂಭದಲ್ಲಿ ಬಾಲಿವುಡ್ ನಟ ರಣವೀರ್ ಸಿಂಗ್ ಸೇರಿದಂತೆ ನೃತ್ಯಪಟುಗಳು, ಗಾಯಕರು ಸುಂದರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ದೊಡ್ಡ ಪರದೆಗಳ ಮೂಲಕ ಸಮಾರಂಭ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು.

ಟೂರ್ನಿಯ ಪಂದ್ಯಗಳು ಶುಕ್ರವಾರ ಆರಂಭವಾಗಲಿವೆ. 13ರಂದು ಮೊದಲ ಪಂದ್ಯದಲ್ಲಿ ಅರ್ಜೆಂಟೀನಾ– ದಕ್ಷಿಣ ಆಫ್ರಿಕಾ ಸೆಣಸಲಿವೆ. ಅದೇ ದಿನ ಭಾರತ ತನ್ನ ಮೊದಲ ಪಂದ್ಯದಲ್ಲಿ ಸ್ಪೇನ್ ಎದುರು ಆಡಲಿದೆ. ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ಪಂದ್ಯಗಳು ನಡೆಯಲಿವೆ.

ಭಾರತ ತಂಡವು ಏಕೈಕ ವಿಶ್ವಕಪ್ ಟ್ರೋಫಿ ಜಯಿಸಿದ್ದು 1975ರಲ್ಲಿ. ಮಲೇಷ್ಯಾದ ಕ್ವಾಲಾಲಂಪುರದಲ್ಲಿ ನಡೆದಿದ್ದ ಆ ಟೂರ್ನಿಯ ಫೈನಲ್‌ನಲ್ಲಿ ಭಾರತ ಪಾಕಿಸ್ತಾನವನ್ನು ಸೋಲಿಸಿತ್ತು.

20ರಿಂದ ವಾಲಿಬಾಲ್

ಬೆಂಗಳೂರು: ಸೇಫ್ ಫೌಂಡೇಷನ್‌ನಿಂದ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಜನವರಿ 20ರಿಂದ 22ರವರೆಗೆ ರಾಜ್ಯಮಟ್ಟದ ವಾಲಿಬಾಲ್ ಟೂರ್ನಿ ನಡೆಯಲಿದೆ.

ಜಯನಗರದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿದ್ದು, ಕಂದಾಯ ಸಚಿವ ಆರ್. ಅಶೋಕ್, ಸಂಸದ ತೇಜಸ್ವಿ ಸೂರ್ಯ ಉದ್ಘಾಟನೆಗೆ ಆಗಮಿಸಲಿದ್ದಾರೆ. ಮಾಹಿತಿಗಾಗಿ ಜಿ.ಎಸ್. ಜೆ ನವೀನ್ (ಮೊ. ಸಂ. 9448483250) ಅಥವಾ ಕೆ.ಎ. ಚೇತನ್ (8951897306) ಅವರನ್ನು ಸಂಪರ್ಕಿಸಬಹುದು.

ಸಿಟ್ಟಿಂಗ್ ವಾಲಿಬಾಲ್ ಟ್ರಯಲ್ಸ್ 15ರಿಂದ

ಉಡುಪಿ: ತಮಿಳುನಾಡಿನ ತಂಜಾವೂರಿನಲ್ಲಿ ಫೆಬ್ರುವರಿ 3ರಿಂದ 5ರವರೆಗೆ ನಡೆಯಲಿರುವ ರಾಷ್ಟ್ರೀಯ ಸಿಟ್ಟಿಂಗ್ ವಾಲಿಬಾಲ್ ಚಾಂಪಿಯನ್‌ಷಿಪ್‌ಗೆ ಆಟಗಾರರ ಆಯ್ಕೆ ಪ್ರಕ್ರಿಯೆ ಇದೇ 15ರಿಂದ ಬೆಂಗಳೂರಿನ ಸರ್.ಎಂ.ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ ಬಳಿಯ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆಯಲಿದೆ.

ಮಾಹಿತಿಗೆ ಎಂ.ಆರ್.ಮಹೇಶ್ (9535566606) ಅಥವಾ ಎಚ್. ಚಂದ್ರಶೇಖರ್ (9448706475) ಅವರನ್ನು ಸಂಪರ್ಕಿಸಬಹುದು.

ಸರಣಿ ಗೆಲುವಿನತ್ತ ಭಾರತದ ಒಲವು

ಎರಡನೇ ಏಕದಿನ ಕ್ರಿಕೆಟ್ ಪಂದ್ಯ ಇಂದು: ವಿರಾಟ್, ರೋಹಿತ್ ಮೇಲೆ ಕಣ್ಣು

ಕೋಲ್ಕತ್ತ (ಪಿಟಿಐ): ನಾಯಕ ರೋಹಿತ್ ಶರ್ಮಾ ಸೇರಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಮರಳಿರುವುದು ಭಾರತ ತಂಡದಲ್ಲಿ ಆತ್ಮವಿಶ್ವಾಸವನ್ನು ಇಮ್ಮಡಿಸಿದೆ.

ಗುರುವಾರ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಶ್ರೀಲಂಕಾ ಎದುರಿನ ಎರಡನೇ ಪಂದ್ಯದಲ್ಲಿ ಗೆದ್ದು ಸರಣಿ ಕೈವಶ ಮಾಡಿಕೊಳ್ಳುವತ್ತ ರೋಹಿತ್ ಬಳಗ ಚಿತ್ತ ನೆಟ್ಟಿದೆ.

ಮಂಗಳವಾರ ಗುವಾಹಟಿಯಲ್ಲಿ ನಡೆದಿದ್ದ ಮೊದಲ ಏಕದಿನ ಪಂದ್ಯದಲ್ಲಿ ಆರಂಭಿಕ ಜೋಡಿ ರೋಹಿತ್ ಮತ್ತು ಗಿಲ್ ಶತಕದ ಜೊತೆಯಾಟವಾಡಿದ್ದರು. ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್ ಮಾದರಿಯಲ್ಲಿ 45ನೇ ಶತಕ ದಾಖಲಿಸಿದರು. ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಲಂಕಾ ತಂಡದ ಎದುರು ಆತಿಥೇಯ ಬೌಲರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿದರು.

ಮೊದಲ ಪಂದ್ಯದ ತಂಡವನ್ನೇ ಉಳಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಲಯಕ್ಕ ಮರಳಿದರೆ ಇನ್ನಷ್ಟು ದೊಡ್ಡ ಮೊತ್ತ ಪೇರಿಸುವ ಅವಕಾಶ ಸಿಗಲಿದೆ. ವಿಕೆಟ್‌ಕೀಪಿಂಗ್ ಮತ್ತು ನಾಲ್ಕನೇ ಕ್ರಮಾಂಕದ ಬ್ಯಾಟಿಂಗ್ ಹೊಣೆಯನ್ನು ನಿಭಾಯಿಸುತ್ತಿರುವ ಕೆ.ಎಲ್. ರಾಹುಲ್ ಅವರಿಗೆ ತಮ್ಮ ಸಾಮರ್ಥ್ಯ ತೋರಲು ಮತ್ತೊಂದು ಅವಕಾಶ ಸಿಗುವುದು ಖಚಿತ.

ಆದರೆ, ಲಂಕಾ ತಂಡವು ತನ್ನ ಲೋಪಗಳನ್ನು ಸರಿಪಡಿಸಿಕೊಂಡು ತಿರುಗೇಟು ನೀಡುವ ಛಲದಲ್ಲಿದೆ. ಗುವಾಹಟಿ ಪಂದ್ಯದಲ್ಲಿ ಲಂಕಾ ತಂಡದ ಫೀಲ್ಡಿಂಗ್ ಲೋಪಗಳಿದ್ದವು. ವಿರಾಟ್ ಕೊಹ್ಲಿಯ ಎರಡು ಕ್ಯಾಚ್ ನೆಲಕ್ಕೆ ಚೆಲ್ಲಿದ್ದರು. ಆದರೆ ಬ್ಯಾಟಿಂಗ್‌ನಲ್ಲಿ ನಾಯಕ ದಸುನ್ ಶನಕಾ ಚೆಂದದ ಶತಕ ದಾಖಲಿಸಿದ್ದರು. ಆದರೆ ಬೌಲರ್‌ಗಳು ಶಿಸ್ತುಬದ್ಧ ದಾಳಿ ನಡೆಸಿದರೆ ಮಾತ್ರ ಭಾರತದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಭಾರತ ತಂಡದ ರೋಹಿತ್ ಶರ್ಮಾ, ಉಮ್ರಾನ್ ಮಲಿಕ್ ಮತ್ತು ರಾಹುಲ್

ಕಮಿನ್ಸ್ ಬಳಗಕ್ಕೆ ಟಾಡ್ ಸೇರ್ಪಡೆ

ಮೆಲ್ಬರ್ನ್ (ಪಿಟಿಐ): ಆಫ್‌ಸ್ಪಿನ್ನರ್ ಟಾಡ್ ಮರ್ಫಿ ಭಾರತದಲ್ಲಿ ಟೆಸ್ಟ್ ಸರಣಿ ಆಡಲಿರುವ ಆಸ್ಟ್ರೇಲಿಯಾ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಕ್ರಿಕೆಟ್ ಆಸ್ಟ್ರೇಲಿಯಾ ಬುಧವಾರ ಪ್ರಕಟಿಸಿರುವ ತಂಡದಲ್ಲಿ ಸ್ಪಿನ್ನರ್‌ಗಳಿಗೆ ಮಣೆ ಹಾಕಿದೆ. ಈ ಪೈಕಿ ಟಾಡ್ ಮರ್ಫಿ ತಂಡಕ್ಕೆ ಪದಾರ್ಪಣೆ ಮಾಡುವರು. ಇವರೊಂದಿಗೆ ಅನುಭವಿಗಳಾದ ನೇಥನ್ ಲಯನ್, ಆ್ಯಷ್ಟನ್ ಆಗರ್ ಮತ್ತು ಮಿಚೆಲ್ ಸ್ವೆಪ್ಸನ್ ಅವರು ಕೂಡ ಇದ್ದಾರೆ.

ಫೆ 9ರಿಂದ ಮಾರ್ಚ್ 13ರವರೆಗೆ ಭಾರತದಲ್ಲಿ ಟೆಸ್ಟ್ ಸರಣಿ ನಡೆಯಲಿದೆ.

ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಆ್ಯಷ್ಟನ್ ಆಗರ್, ಸ್ಕಾಟ್ ಬೊಲಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮೆರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಪೀಟರ್ ಹ್ಯಾಂಡ್ಸ್‌ಕಂಬ್, ಟ್ರಾವಿಸ್ ಹೆಡ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಲ್ಯಾನ್ಸ್ ಮಾರಿಸ್, ಟಾಡ್ ಮರ್ಫಿ, ಮ್ಯಾಥ್ಯೂ ರೆನ್‌ಷಾ, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಿಚೆಲ್ ಸ್ವೆಪ್ಸನ್, ಡೇವಿಡ್ ವಾರ್ನರ್.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಣಯ್‌ಗೆ ಜಯ: ಸಿಂಧುಗೆ ಸೋಲು



ಎಚ್. ಎಸ್. ಪ್ರಣಯ್ ಆಟದ ವೈಖರಿ– ಪಿಟಿಐ ಚಿತ್ರ

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಅವರಿಗೆ ಗೆಲುವು ಒಲಿಯಲಿಲ್ಲ. ಲಕ್ಷ್ಯಸೇನ್ ಎದುರು ಗೆದ್ದ ಎಚ್.ಎಸ್. ಪ್ರಣಯ್ ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸಿಂಧು 12–21, 21–10, 15–21ರಿಂದ ರಿಯೊ ಒಲಿಂಪಿಕ್ಸ್ ಚಾಂಪಿಯನ್ ಸ್ಪೇನ್‌ನ ಕರೋಲಿನಾ ಮರಿನ್ ಎದುರು ಎಡವಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ ಪ್ರಣಯ್, ತಮ್ಮ ಸ್ಥಾನಕ್ಕೆ ತಕ್ಕ ಆಟವಾಡಿದರು. ಮೊದಲ ಗೇಮ್‌ನಲ್ಲಿ ಸೋತರೂ 22–24, 21–12, 21–18ರಿಂದ ಭಾರತದವರೇ ಆದ ಲಕ್ಷ್ಯ ಸೇನ್ ಅವರನ್ನು ಪರಾಭವಗೊಳಿಸುವಲ್ಲಿ ಯಶಸ್ವಿಯಾದರು. ಒಂದು ತಾಸಿಗಿಂತ ಅಧಿಕ ಅವಧಿಗೆ ನಡೆದ ಪಂದ್ಯದಲ್ಲಿ 10ನೇ ಕ್ರಮಾಂಕದ ಆಟಗಾರನ ಎದುರು ಪ್ರಣಯ್‌ಗೆ ಗೆಲುವು ಒಲಿಯಿತು.

ಪ್ರಣಯ್ ಅವರು ಮುಂದಿನ ಪಂದ್ಯದಲ್ಲಿ ಇಂಡೊನೇಷ್ಯಾದ ಚಿಕೊ ಔರಾ ದ್ವಿ ವರ್ದೊಯೊ ಎದುರು ಆಡಲಿದ್ದಾರೆ.

ಸಾತ್ವಿಕ್– ಚಿರಾಗ್ ಮುನ್ನಡೆ: ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ 16ರ ಘಟ್ಟಕ್ಕೆ ಮುನ್ನಡೆದರು. ಮೊದಲ ಸುತ್ತಿನ ಪಂದ್ಯದಲ್ಲಿ ಸಾತ್ವಿಕ್–ಚಿರಾಗ್ 21-16, 21-13ರಿಂದ ಕೊರಿಯಾದ ಚೊಯಿ ಸೊಲ್ ಗು ಮತ್ತು ಕಿಮ್ ವೊನ್ ಹೊ ಅವರನ್ನು ಮಣಿಸಿದರು.

ಭಾರತದ ಆಟಗಾರರಿಗೆ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಇಂಡೊನೇಷ್ಯಾದ ಮುಹಮ್ಮದ್ ಶೊಹಿಬುಲ್ ಫಿಕ್ರಿ– ಬಾಗಸ್ ಮೌಲಾನ ಎದುರು ಆಡುವರು.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಮಾಳವಿಕಾ ಬನ್ಸೋಡ್ ಅವರು 9-21, 13-21ರಿಂದ ಕೊರಿಯಾದ ಆ್ಯನ್ ಸೆ ಯೂಂಗ್ ಎದುರು ಮಣಿದರು. ಡಬಲ್ಸ್‌ನಲ್ಲಿ ಅಶ್ವಿನಿ ಭಟ್– ಶಿಖಾ ಗೌತಮ್ 10-21, 12-21ರಿಂದ ಥಾಯ್ಲೆಂಡ್‌ನ ಸುಪಿಸ್ಸರಾ ಪಾಸಂಪ್ರನ್– ಪುಟ್ಟಿಟಾ ಸುಪಜಿರಾಕುಲ್ ಎದುರು ಸೋತರು.

ಸೆಮಿಗೆ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ತಲುಪಿತು. ಚಂದ್ರಾಪುರದ ಕ್ರಿಕ್‌ಬಜ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ ತನ್ನ 3ನೇ ಪಂದ್ಯದಲ್ಲಿ ಕರ್ನಾಟಕ 10 ವಿಕೆಟ್‌ಗಳಿಂದ ಗುಜರಾತ್‌ಗೆ ಸೋಲುಣಿಸಿತು.

ಸಂಕ್ಷಿಪ್ತ ಸ್ಕೋರ್: ಗುಜರಾತ್: 17 ಓವರ್‌ಗಳಲ್ಲಿ 6 ವಿಕೆಟ್‌ಗೆ 132 (ಚೇತ್ನಬೇನ್ 30, ಪ್ರೀತಿ ದೇಸಾಯಿ 28; ದೀಪಿಕಾ 16ಕ್ಕೆ 1). ಕರ್ನಾಟಕ: 15.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 133 (ಗಂಗಾ ಅಜೇಯ 77, ದೀಪಿಕಾ ಅಜೇಯ 44). ಫಲಿತಾಂಶ: ಕರ್ನಾಟಕಕ್ಕೆ 10 ವಿಕೆಟ್‌ಗಳ ಜಯ

ಟಿಟಿ: ಶ್ರೀಜಾ, ಶರತ್‌ಗೆ ಅರ್ಹತೆ

ಲುಸೈಲ್, ಕತಾರ್ (ಪಿಟಿಐ): ಭಾರತದ ಶ್ರೀಜಾ ಅಕುಲಾ, ಅಚಂತ ಶರತ್ ಕಮಲ್ ಮತ್ತು ಮಣಿಕಾ ಬಾತ್ರಾ ಅವರು ಡರ್ಬನ್‌ನಲ್ಲಿ ಮೇ 20ರಿಂದ ನಡೆಯಲಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ಸ್ (ಡಬ್ಲ್ಯುಟಿಟಿಸಿ) ಫೈನಲ್ಸ್‌ನ ಆಡಲು ಅರ್ಹತೆ ಗಳಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಏಷ್ಯನ್ ಡಬ್ಲ್ಯುಟಿಟಿಸಿ ಕಾಂಟಿನೆಂಟಲ್ ಟೂರ್ನಿಯ 16ರ ಘಟ್ಟದ ಪಂದ್ಯಗಳಲ್ಲಿ ಗೆದ್ದು ಸಿಂಗಲ್ಸ್ ವಿಭಾಗಗಳಲ್ಲಿ ವಿಶ್ವ ಟೂರ್ನಿಗೆ ಟಿಕೆಟ್ ಗಿಟ್ಟಿಸಿದರು.

ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಶ್ರೀಜಾ 11-2, 5-11, 2-11, 5-11, 13-11, 11-9, 11-8ರಿಂದ ಚೀನಾ ತೈಪೆಯ ಚೆನ್ ಜು ಯು ಅವರನ್ನು ಸೋಲಿಸಿದರೆ, ಶರತ್ 13-11, 11-3, 10-12, 11-7, 11-6ರಿಂದ ಇರಾನ್‌ನ ಅಹಮದಿಯನ್ ಅಮಿನ್ ಸವಾಲು ಮೀರಿದರು. ವಿಶ್ವ ಕ್ರಮಾಂಕದಲ್ಲಿ 35ನೇ ಸ್ಥಾನದಲ್ಲಿರುವ ಮಣಿಕಾ ಬಾತ್ರಾ 13-11, 11-9, 11-6, 11-8ರಿಂದ ಹಾಂಗ್‌ಕಾಂಗ್‌ನ ಝು ಚೆಂಗ್‌ಜು ಅವರನ್ನು ಪರಾಭವಗೊಳಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಮಣಿಕಾ ಮತ್ತು ಜಿ. ಸತ್ಯನ್ ಕೂಡ ಅರ್ಹತೆ ಗಳಿಸಿದರು. ಮಹಿಳಾ ಡಬಲ್ಸ್‌ನಲ್ಲಿ ರೀತ್ ರಿಷ್ಯಾ–ಶ್ರೀಜಾ ಕೂಡ ಅರ್ಹತೆ ಪಡೆದಿದ್ದಾರೆ. ಇನ್ನೊಂದು ಜೋಡಿ ಮಣಿಕಾ ಮತ್ತು ಕರ್ನಾಟಕದ ಅರ್ಚನಾ ಕಾಮತ್ ಅವರು ಉತ್ತಮ ರ್‍ಯಾಂಕಿಂಗ್ ಆಧಾರದಲ್ಲಿ ಸ್ಥಾನ ಪಡೆಯುವ ಅವಕಾಶವಿದೆ.